# ಚೈತನ್ಯ

30
SMSSS
Towards life with dignity











*With Best Complements From*

# CORREA CONSTRUCTIONS



**Proprietor : Mr Maxim Correa**



**Madanthyar Post**

**Belthangady Taluk - 574 224**

**Mobile: 9845085019**

# ಚೈತನ್ಯ

SMSSS

Towards life with dignity




**CHAITANYA**

**Alkola Circle, Sagar Road, Gopala Post**

**Shivamogga - 577 205 Karnataka, INDIA**

**Phone: 8762137914 (Office), 8762137941 (ICDP)**

**Email: smsss.chaitanya@gmail.com; Website: www.smsss.org**

# ಒಳಪುಟಗಳಲ್ಲಿ

**Messages**

ಸಂಪಾದಕೀಯ/ ನಿರ್ದೇಶಕರ ನುಡಿ

ಶಿವಮೊಗ್ಗ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರು ಹಾಗೂ ಸಂಸ್ಥೆಯ ಅಧ್ಯಕ್ಷರು

ಸಂಸ್ಥೆಯ ನಿರ್ದೇಶಕರು

**Governing Board & General Body Members**

ಸಂಸ್ಥೆ ಹಾಗೂ ಸ್ತ್ರೀಬಂಧು ಸಿಬ್ಬಂದಿ

ಎಸ್.ಎಮ್.ಎಸ್.ಎಸ್.ಎಸ್. – ಕಿರುನೋಟ

ಸಂಸ್ಥೆ ಸಾಗಿದ ಹಾದಿ

ಸಂಸ್ಥೆಯ 30ರ ಸಂಭ್ರಮದ ಮಧುರ ಕ್ಷಣಗಳು

'ಭರವಸೆಯ ಜೀವನದ ಆಶಯ' ಮಹಿಳಾ ಅಭ್ಯುದಯ 1

**Family Development through Save A Family Plan** 16

**Integral Development through Education** 20

ನಿಸರ್ಗದಾನದತ್ತ ಸಂಪನ್ಮೂಲ ನಿರ್ವಹಣೆ 26

ಸಮರ್ಥ ಸಮುದಾಯದಿಂದ ಉತ್ತಮ ಆಡಳಿತ 31

**Development Through Healthcare** 36

ಸಾಮರ್ಥ್ಯ ವರ್ಧನೆ ಮೂಲಕ ಸಶಕ್ತೀಕರಣ 39

ಮಹಿಳೆಯರಲ್ಲಿ ಚೈತನ್ಯ 42

ಸರ್ಕಾರಿ ಸೌಲಭ್ಯಗಳು ಮತ್ತು ನಿಯಮಗಳು 43

ಬಾಳಿಗೆ ಬೆಳಕು ನೀಡಿದ ಸ್ತ್ರೀಬಂಧು 44

ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯ ಯಶಸ್ಸಿಗೆ ಕೆಲಸಗಾರರ ಸಂಘಗಳ ಪಾತ್ರ 47

ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ, ಶಿವಮೊಗ್ಗ 49

ಸ್ವ-ಉದ್ಯೋಗಕ್ಕಾಗಿ ಯುವಜನರಿಗೆ ಕೌಶಲ್ಯ ಅಭಿವೃದ್ಧಿ 52

ನಡೆದು ಬಂದ ದಾರಿ 57

ಸೋತು ಗೆದ್ದವರು... ಆದರೆ ನಾವು 58

ಜೀವನದಲ್ಲಿ ಸಾಧನೆ ಮಾಡಬೇಕೇ?... 59

ಲೋಕದಲ್ಲಿ ಸ್ನೇಹ ಚಿರಂಜೀವಿ 60

| | |
|---|---|
| ಸಂಸ್ಥೆಯ ಮೂಲಕ ಬಾಳಿನಲ್ಲಿ ಬದಲಾವಣೆ | 61 |
| ಸೇವೆಯ ಮೂಲಕ ನಾಯಕತ್ವ | 63 |
| ಭಾರತೀಯ ನಾರಿ | 65 |
| ಶಾಲೆ ಬಿಟ್ಟು | 65 |
| ಮುಗ್ಧ ಮನಗಳ ಬದುಕು ರೂಪಿಸುವ ಶಿಲ್ಪಿಗಳು ನೀವು... | 66 |
| ಪರಿಸರದ ಕಣ್ಣು ಮುಚ್ಚಾಲೆ | 69 |
| ಅಪ್ಪು ಮತ್ತು ಅಪ್ಪುವಿನ ತಪ್ಪು | 71 |
| ಚುಟುಕು | 72 |
| ಬೆತ್ತಲೆ ಜಗತ್ತಿನ ಕತ್ತಲೆ ಪ್ರೀತಿಗೆ ನನ್ನಯ ಯಕ್ಷ ಪ್ರಶ್ನೆ | 73 |
| ಅನ್ನದ ಬೆಲೆ | 73 |
| ಅಪ್‌ಡೇಟ್ ಹೆಸರಿನಲ್ಲಿ ಮುಂದಿನ ಪೀಳಿಗೆಯ ನಾಶ | 74 |
| ಮಹಿಳೆಯರು ನಾವು ಮಹಿಳೆಯರು | 75 |
| ನೀರಿಗಾಗಿ ನಾರಿ ಹಿಡಿದಳು ಹೋರಾಟದ ದಾರಿ | 76 |
| ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ | 78 |
| ಸಂಸ್ಥೆಯಿಂದ ಯಶಸ್ಸಿನ ಬದುಕು | 82 |
| ಸಂಸ್ಥೆಯ ಚಿತ್ತ ಯಶಸ್ಸಿನತ್ತ | 83 |
| ಸಾಧನೆಯ ಮೆಟ್ಟಿಲನ್ನೇರುತ್ತಾ | 84 |
| ಸಿಹಿ ಕನ್ನಡ | 85 |
| ಎಲ್ಲವೂ ನಿಮ್ಮ ಹೆಸರಿನಲ್ಲಾದರೆ | 85 |
| ವಿದ್ಯೆಯ ಬೆಲೆ | 85 |
| ಭರವಸೆಯೇ ಸಾಧನೆಯ ಮೆಟ್ಟಿಲು ಆದಾಗ, ಬಾಳಿನಲ್ಲಿ ಯಶಸ್ಸು ದೊರಕುವುದು ಆವಾಗ | 86 |
| ಉಡುಗೊರೆಯ ಬೆಲೆ | 87 |
| ಮಹಿಳೆಯರ ಸಬಲೀಕರಣ ಅಥವಾ ಪುರುಷರ ಮನೋಧರ್ಮ | 88 |
| Journey Towards Actualizing My Dream | 90 |
| ಸಂಸ್ಥೆಯಿಂದ ಯಶಸ್ವಿ ಜೀವನ | 91 |
| ಶುಭಾಶಯಗಳು | 92 |
| ಜಾಹೀರಾತುಗಳು | |

# Message



APOSTOLIC NUNCIATURE
IN INDIA

50-C, NITI MARG, CHANAKYAPURI
NEW DELHI - 110 021

8 November 2018

Your Lordship,

With your kind communication dated 20 October 2018, I was informed that this year, the Shimoga Multipurpose Social Service Society (SMSSS) is completing 30 years of its joyful service to the poor and the marginalized sections of society and at the same time, the Streebandhu Multipurpose Souharda Cooperative Ltd, is completing 5 years of service to poor women, their families and their children.

It is heartening to know that the Shimoga Multipurpose Social Service Society caters to the needs of the poor and marginalized women, children, small and marginal farmers, unemployed youth and unorganized labourers of the three civil districts of Shivamogga, Chitradurga and Davanagere. Pope Francis in *Evangelii Gaudium* instructs us "The kerygma has a clear social content: at the very heart of the Gospel is life in community and engagement with others. The content of the first proclamation has an immediate moral implication centred on charity" (no. 177). "The service of charity is also a constituent element of the Church's mission and an indispensable expression of her very being. By her very nature the Church is missionary; she abounds in effective charity and a compassion which understands, assists and promotes" (no. 179).

With sentiments of joy, I assure you that I am in union of prayer with you and with the People of God who are celebrating 30 years of the Shimoga Multipurpose Social Service Society, commemorating the marvellous deeds accomplished by the grace of the Lord during these years.

I convey the Apostolic Blessing of His Holiness Pope Francis, along with my personal wishes.

Cordially yours in the Lord,

+ Giambattista Diquattro

Archbishop Giambattista Diquattro
Apostolic Nuncio

His Lordship
Rt. Rev. Francis Serrao
Bishop of Shimoga
Bishop's House
Shimoga 577 205, Karnataka

# ARCHDIOCESE OF BANGALORE

Archbishop's House
75 Miller's Road
Benson Town, Bengaluru - 560 046
Karnataka, INDIA
✆ +91 +080-2333 0438
Fax : +91 +080-2353 1600
E-mail : archbishop@bangalorearchdiocese.com
Website : www.bangalorearchdiocese.com

**Most Rev. Peter Machado**
*Archbishop of Bangalore*

## Message



I am happy to hear that The Shimoga Multipurpose Social Service Society (SMSSS) is having twin-celebrations this year; the completion of 30 years of SMSSS and completion of 5 years of the Streebandhu Multipurpose Souharda Co-operative Ltd (Women's Bank).

Service to the poor in any form is definitely giving honour to God. I am sure many poor have found great help and support over the years and have been helped to make a living.

His Holiness Pope Francis in his message for the 'Second World Day of the poor' quotes the Psalmist's words "This poor man cried, and the Lord heard him" (*Ps* 34:6). The Pope explains that the words of the Psalmist become our own whenever we are called to encounter the different conditions of suffering and marginalization experienced by so many of our brothers and sisters whom we are accustomed to label generically as "the poor".

While wishing your celebrations every success, I accord my Blessings upon your Society.

Date: 26.10.2018
Place: Bangalore

**+ Peter Machado**
Archbishop of Bangalore

*Most Rev. Dr Francis Serrao SJ*
*Bishop of Shimoga*

Bishop's House
Malligenahalli, Sagar Road
Shimoga - 577 205
Karnataka - INDIA
Cell: +91 9448355813
Email: bpfrancisserraosj@gmail.com

# Message



Although 30 is not such a big period of time for an institution, still, it is an important mile stone in its relatively brief history. In theological terms it is a *Kairos* moment. It is a moment to look back with gratitude and look ahead with hope. For Shimoga Multi-purpose Social Service Society (SMSSS), just completing its 30 years in existence, this is indeed a moment of grace and of untold opportunities.

On such eventful occasions Pope Francis advises us to look back on the past with gratitude and praise, look at the present with joy and satisfaction, and look forward to the future with confidence and enthusiasm. I am sure that all the stake holders of SMSSS will certainly do this. And, while they are at it, they will surely marvel at the unfailing providence of God who has never ceased to accompany them along this arduous but exhilarating journey every step of the way, really holding them by hand and guiding them along the way like the Good Shepherd with His crook and the staff always there for us even in the valley of darkness.

Therefore, a song of praise and thanks to the good Lord for His immense generosity and kindness, manifested in so many different ways, sometime mysterious, during these 30 years, will surely rise up from the hearts of everyone who has been closely associated with the institution.

Next to God, it is those human beings who let themselves be used as fitting instruments in God's hands for the steady growth of SMSSS, who need to be gratefully remembered. Just to mention a few names, Archbishop Emeritus Ignatius Pinto, the first Bishop of this fledgling diocese who had the foresight and apostolic zeal and social sensitivity to put the SMSSS on a strong and sturdy foundation. If SMSSS is such a widely acclaimed and universally appreciated institution today, it is because of the firm and solid foundations he laid as our first Bishop. “If you want to see monuments look around” sings the Latin poet. Chaitanya is indeed a memorial to the strong, steady and sturdy leadership of Archbishop Pinto. But more than the structure made of stone and cement, it is the thousands of beneficiaries, poor men, women and children, who are the living memorials of the tremendous good work done by SMSSS down these three decades. To Archbishop Pinto go our words of affectionate appreciation and gratitude.

Then comes Bishop Gerald Isaac Lobo. He came to this diocese as its second Bishop with tremendous experience in the field of social apostolate which he put to good use in and through SMSSS. With his proverbial love for the poor, his far sighted plans for the education of children, his great dreams of seeing our Catholic youth occupy positions of leadership in civil services, and his dynamic leadership he has brought SMSSS to this stage of growth and fruitfulness. To Bishop Lobo too our heartiest thanks.

Then come a series of very remarkable, highly successful and truly far-sighted Directors. I can mention here Frs Mark Patrick D'Silva, Clement D'Souza, Gilbert Lobo, Veeresh Moras, Richard Pais and now Clifford Roshan Pinto. Each of them has left his imprint on the institution. To all of them, on behalf of the entire Diocese, I extend sincere and deep gratitude.

One particular matter of great satisfaction for all of us is the very successful and highly effective venture called "Stree Bandhu". The amount of good that this creative initiative has been able to do during the few years of its existence is truly astounding. Let me take this opportunity to thank all those who are the architects as well as the foot soldiers of this powerful instrument of empowerment of women.

As we, therefore, look back with gratitude the journey the SMSSS has travelled during these 30 years, we clearly see how the good Lord has accompanied us unfailingly, giving us courage to face challenges, strength to overcome weaknesses, and zeal to spread His message of hope and empowerment, liberation, and compassion to the poor. The successive Directors have been given the vision to make ambitious plans, desire to dream impossible dreams and to make the Church a beacon of hope to all those who feel excluded, lost, abandoned, cheated, exploited, disadvantaged, disempowered, damaged and deprived. We also recognize with immense appreciation and thankfulness, the unstinted cooperation of the dedicated and committed staff in making SMSSS what it is today.

Let me conclude with an earnest and deeply felt prayer that our motto: SERVICE OF FAITH AND FULLNESS OF LIFE, may always be the guiding light of SMSSS as it continues to serve the last, the least and the lost in this diocese, bringing our people to find a safe shelter and ready refuge in the heart of a God who is infinitely loving and compassionate; merciful and forgiving, so that this powerful personal experience makes them come alive in all dimensions of their personality – physical, emotional, psychological, spiritual, intellectual and social, which, in fact, is the fullness of life, which Jesus promised us when He said: "I have come that you may have life, life in all its fullness". Whatever we do in this diocese, whether in parishes or educational institutions or social work centres is to bring every man, woman and a child to have this fullness of life in Jesus Christ. It is the Lord's work. We are only His servants. That, in a nutshell, is indeed the mission of SMSSS.

Therefore, on this occasion, let us first of all raise our hearts and minds to the good Lord, the giver of all good things, in a hymn of praise and thanksgiving for all that has been accomplished in and through SMSSS during the past 30 years. Let us look at the past with gratitude. Let us look at the present with joy and let us look to the future with hope. Let us also re-dedicate ourselves, as one, united diocesan family to the service of faith that brings fullness of life to all.

Yours in the Lord's Mission,

+ Francis Serrao


✠ Francis Serrao SJ
Diocese of Shimoga

Date : 24 November 2018
Place : Shimoga

# DIOCESE OF UDUPI

Bishop's House, Udupi P.O. – 576 101, Karnataka, India

## ಸಂದೇಶ



ಸಮಾಜದ ದೀನದಲಿತರ, ಬಡಬಗ್ಗರ, ಅಶಕ್ತರ ಹಾಗೂ ಅನಾಥರ ಸೇವೆಯಲ್ಲಿ ಮೂರು ದಶಕಗಳ ಪೂರೈಸಿ ಭಗವಂತನ ಕೃಪಾಧಾರೆಯಲ್ಲಿ ಮಿಂದು ಪುನೀತವಾದ ಶಿವಮೊಗ್ಗ ಮಲ್ಟಿಪರ್ಪಸ್ ಸೋಷಿಯಲ್ ಸರ್ವಿಸ್ ಸೊಸೈಟಿಯು ಇದೀಗ ಮೂರನೇ ದಶಮಾನೋತ್ಸವಕ್ಕೆ ಸಿದ್ಧವಾಗಿರುವಾಗ ಸಂಸ್ಥೆಯ ಅಧ್ಯಕ್ಷರು, ನಿರ್ದೇಶಕರು ಹಾಗು ಎಲ್ಲಾ ಶಿಬಂಧಿಗೆ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.

1988 ರಲ್ಲಿ ಶಿವಮೊಗ್ಗ ಧರ್ಮಕ್ಷೇತ್ರದೊಂದಿಗೆ ಸ್ಥಾಪಿತಗೊಂಡ ಈ ಸಮಾಜ ಸೇವಾ ಸಂಸ್ಥೆಯು ಆರಂಭದಿಂದಲೂ ವಿಶಿಷ್ಟವಾದ ರೀತಿಯಲ್ಲಿ ತನ್ನ ಅಸ್ತಿತ್ವವನ್ನು ಸಾರಿ ಹೇಳಿದೆ. ಹಸಿರಿನಿಂದ ಸಮೃದ್ಧವಾದ ಮಲೆನಾಡಿನ ಮಡಿಲಲ್ಲಿರುವ ಶಿವಮೊಗ್ಗ ಹಾಗೂ ಆಸುಪಾಸಿನ ಜಿಲ್ಲೆಗಳಲ್ಲಿ ವಿವಿಧ ರೀತಿಯ ಸಮಾಜಸೇವಾ ಕಾರ್ಯಗಳನ್ನು ಕೈಗೆತ್ತಿಕೊಂಡು, ಬಹಳಷ್ಟು ಸಾಧನೆಯನ್ನು ಮಾಡಿದ ಹೆಗ್ಗಳಿಕೆ ಈ ಸಂಸ್ಥೆಯದು. ಇಂತಹ ವಿಶಿಷ್ಟ ಗುಣಗಳ ಸಂಸ್ಥೆಯು ಕಳೆದ ಮೂವತ್ತು ವರ್ಷಗಳಲ್ಲಿ ಬಹಳ ಅಭಿವೃದ್ಧಿಯನ್ನು ಕಂಡಿದೆ. ನಿರ್ದೇಶಕರು, ಸಮಾಜಸೇವಕರು ಹಾಗು ಇತರ ಸಿಬಂಧಿಯ ಪರಿಶ್ರಮದಿಂದಾಗಿ ಇಂದು ಶಿವಮೊಗ್ಗ ಮಲ್ಟಿಪರ್ಪಸ್ ಸೋಷಿಯಲ್ ಸರ್ವಿಸ್ ಸೊಸೈಟಿಯು ಇಡೀ ಕರ್ನಾಟಕದಲ್ಲಿಯೇ ಮುಂಚೂಣಿಯಲ್ಲಿರುವ ಸೇವಾ ಸಂಸ್ಥೆಗಳಲ್ಲಿ ಒಂದಾಗಿದೆ ಎನ್ನಬಹುದು.

'ಸಾಧಿಸಿದ್ದು ಬಹಳಷ್ಟು, ಸಾಧಿಸಲಿರುವುದು ಇನ್ನೂ ಬಹಳಷ್ಟು' ಎಂಬಂತೆ ಸಮಾಜದ ಅಶಕ್ತರ ಭವಿಷ್ಯವನ್ನು ಕಟ್ಟಿ ಬಲಪಡಿಸುವ ಕೆಲಸವು ನಿರಂತರವಾಗಿ ನಡೆಯಬೇಕು. ಮಹಿಳೆಯರ ಅಭಿವೃದ್ಧಿಗೆ ವಿಶೇಷವಾದ ಆದ್ಯತೆಯನ್ನು ನೀಡುತ್ತಿರುವ ಸಂಸ್ಥೆಯು ಮಹಿಳೆಯು ಸಮಾಜದಲ್ಲಿ ಆರ್ಥಿಕವಾಗಿ ಹಾಗೂ ರಾಜಕೀಯವಾಗಿ ಬಲಿಷ್ಠಳಾಗಲು ಇನ್ನೂ ಹಲವಾರು ಪ್ರಯತ್ನಗಳನ್ನು ಕೈಗೊಳ್ಳಬೇಕು. ಮಕ್ಕಳಿಗೆ ಮೌಲ್ಯಧಾರಿತ ಶಿಕ್ಷಣ, ಯುವಜನರಿಗೆ ಸೂಕ್ತ ಮಾರ್ಗದರ್ಶನ, ಕುಟುಂಬಗಳನ್ನು ಕಟ್ಟಲು ಆಧಾರ, ಸಮಾಜದ ಎಲ್ಲಾ ವರ್ಗದ ಜನರಿಗೂ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು..ಈ ಪಟ್ಟಿ ಅಂತ್ಯವಿಲ್ಲದ್ದು, ಯಾವುದೇ ಸಮಾಜ ಸೇವಾ ಸಂಸ್ಥೆಗೆ ಇವೆಲ್ಲ ಪ್ರಮುಖ ಆದ್ಯತೆಗಳಾಗಿವೆ.

ಮೂವತ್ತನೇ ವರ್ಷದ ವಾರ್ಷಿಕೋತ್ಸವವನ್ನು ಆಚರಿಸುವ ಈ ಸುಸಂದರ್ಭದಲ್ಲಿ ಭಗವಂತನಿಗೆ ಕೃತಜ್ಞತೆಗಳನ್ನು ಸಲ್ಲಿಸುವುದರೊಂದಿಗೆ, ಸಂಸ್ಥೆಯು ದೀನದಲಿತರ ಕಣ್ಣೀರೊರೆಸಿ ಅವರ ಮೊಗದಲ್ಲಿ ಹೂನಗೆಯನ್ನು ಅರಳಿಸುವ ಸಾಧನವಾಗಿಸಲು, ಅವರು ದೇವರ ಮಕ್ಕಳ ಸ್ವಾತಂತ್ರ್ಯದಿಂದ ಪ್ರಗತಿ ಪಥದಲ್ಲಿ ಮುನ್ನಡೆಯುವಂತಾಗಲು ಪಣತೊಡೋಣ.

ವಾರ್ಷಿಕೋತ್ಸವ ಸಮಾರಂಭಕ್ಕೆ ಸಕಲ ಯಶಸ್ಸನ್ನು ಕೋರುತ್ತಾ, ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಆಶೀರ್ವಾದಗಳೊಂದಿಗೆ,

✠ ಜೆರಾಲ್ಡ್ ಲೋಬೊ
ಉಡುಪಿಯ ಧರ್ಮಾಧ್ಯಕ್ಷರು

ಹೆಚ್.ಡಿ. ಕುಮಾರಸ್ವಾಮಿ

ಮುಖ್ಯ ಮಂತ್ರಿ

ಸಿಎಂ/ಪಿಎಸ್/129/2018

ವಿಧಾನ ಸೌಧ

ಬೆಂಗಳೂರು - 560 001

ದಿನಾಂಕ 27-11-2018

# ಸಂದೇಶ



ದಿ ಶಿವಮೊಗ್ಗ ಮಲ್ಟಿಪರ್ಪಸ್ ಸೋಷಿಯಲ್ ಸರ್ವಿಸ್ ಸೊಸೈಟಿ ಕಳೆದ ಮೂರು ದಶಕಗಳಿಂದ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳ 600 ಕ್ಕೂ ಹೆಚ್ಚು ಹಳ್ಳಿಗಳಲ್ಲಿ ದೀನದಲಿತ ಹಾಗೂ ಅವಕಾಶವಂಚಿತ ಸಮುದಾಯಗಳ ದಾರಿದೀಪವಾಗಿರುವುದು ಶ್ಲಾಘನೀಯ.

ಸ್ವಸಹಾಯ ಸಂಘಗಳು ಅಸ್ತಿತ್ವಕ್ಕೆ ಬಂದ ಕಾರಣ ಗ್ರಾಮೀಣ ಭಾಗದ ಮಹಿಳೆಯರ ಸಬಲೀಕರಣ ಪರಿಣಾಮಕಾರಿ ರೀತಿಯಲ್ಲಿ ಸಾಧ್ಯವಾಗುತ್ತಿದೆ. ಮಹಿಳೆಯರು ಆರ್ಥಿಕವಾಗಿ ಸಬಲರಾದರೆ ಮಾತ್ರ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯ. ತಳಸಮುದಾಯದ ಮಹಿಳೆಯರಲ್ಲಿ ಆರ್ಥಿಕ ಸಬಲತೆ ನೀಡುವ ಮಹತ್ವದ ಕೆಲಸವನ್ನು ಸಂಸ್ಥೆ ಮಾಡುತ್ತಿದೆ.

ಮಹಿಳಾ ಬ್ಯಾಂಕ್ 5 ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಹೊರತರುತ್ತಿರುವ ಸ್ಮರಣ ಸಂಚಿಕೆಯು ಆರ್ಥಿಕ ಚಟುವಟಿಕೆಗಳ ಮೇಲೆ ಬೆಳಕು ಚೆಲ್ಲುವ ಉತ್ತಮ ಲೇಖನಗಳಿಂದ ಕೂಡಿರಲಿ ಹಾಗೂ ಸಂಸ್ಥೆ ಜನಪರ ಕಾರ್ಯಕ್ರಮಗಳನ್ನು ಮುಂದುವರೆಸಲಿ ಎಂದು ಹಾರೈಸುತ್ತೇನೆ.

(ಹೆಚ್.ಡಿ.ಕುಮಾರಸ್ವಾಮಿ)

# ನಿರ್ದೇಶಕರ ನುಡಿ



## ಸಂಪಾದಕೀಯ




ಪ್ರಧಾನ ಸಂಪಾದಕರು
ವಂ. ಫಾದರ್ ಕ್ಲಿಫರ್ಡ್ ರೋಶನ್ ಪಿಂಟೊ

ಸಂಪಾದಕೀಯ ಮಂಡಳಿ
ಜಗದೀಶ ಕೆ. ಹೆಚ್.
ವಿನ್ಸೆಂಟ್ ಡಿ'ಮೆಲ್ಲೊ
ಷಣ್ಮುಖನಾಯ್ಕ
ಗ್ಲೋರಿಯಾ ಜ್ಯೋತಿ ಫುರ್ಟಾಡೊ
ಆ್ಯನಿ ಫಿಯಾಲೊ
ಸಿಸ್ಟರ್ ಪ್ರೇಮಲತಾ ಸಿ. ಯು.ಎಫ್.ಎಸ್.
ಬ್ರದರ್ ನಿಶಾಂತ್ ಅಂತೋಣಿ ಡಿ'ಕಾಸ್ಟ

***"Not all of us can do great things, but we can do small things with great love" - Mother Teresa***

11 ಆಗಸ್ಟ್ 1989ರಂದು ಅಸ್ತಿತ್ವಕ್ಕೆ ಬಂದ ದಿ ಶಿವಮೊಗ್ಗ ಮಲ್ಟಿಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ (ಎಸ್.ಎಮ್.ಎಸ್.ಎಸ್.ಎಸ್.) ಎಷ್ಟೇ ಬಲಿಷ್ಠವಾಗಿ ನಿರ್ಮಿಸಿದರೂ ಒಂದು ದಿನ ಶಿಥಿಲಗೊಳ್ಳುವ ಬೃಹತ್ ಕಟ್ಟಡಗಳನ್ನು ನಿರ್ಮಿಸದೆ ಕಳೆದ ಮೂವತ್ತು ವರ್ಷಗಳಿಂದ ಅವಕಾಶ ವಂಚಿತ ಮಹಿಳೆಯರು, ಸಣ್ಣ ಮತ್ತು ಅವಕಾಶ ವಂಚಿತ ರೈತರು, ಅವಕಾಶ ವಂಚಿತ ಮಕ್ಕಳು ಮತ್ತು ಅವರ ಪೋಷಕರು, ನಿರುದ್ಯೋಗಿ ಯುವಜನತೆ, ಅಸಂಘಟಿತ ಕಾರ್ಮಿಕರು, ಹೀಗೆ ಹಲವು ವರ್ಗದ ಜನರನ್ನು ಸಂಘಟಿಸಿ, ಅವರೆಲ್ಲರನ್ನು ಸಮಾಜದಲ್ಲಿ ಬದಲಾವಣೆಯನ್ನು ತರಲು ಶಕ್ತರಾಗುವಂತಹ ಬಲಿಷ್ಠ ಮಾನವ ಕಟ್ಟಡಗಳನ್ನಾಗಿ ಪರಿವರ್ತಿಸಿದೆ. "ಮೀನು ಕೊಡುವ ಬದಲು ಮೀನು ಹಿಡಿಯುವ ಕಲೆಯನ್ನು ಕಲಿಸು"ವ ಕಾರ್ಯದಲ್ಲಿ ಸಂಸ್ಥೆ ತನ್ನನ್ನೇ ತೊಡಗಿಸಿಕೊಂಡಿದೆಯಾದರೂ ಎಲ್ಲಿಯೂ ಮೀನು ಸಿಗದೆ ಅತೀವ ಸಂಕಟಕ್ಕೆ ಸಿಲುಕಿದವರಿಗೆ ತಾತ್ಕಾಲಿಕ ಪರಿಹಾರವಾಗಿ ಮೀನನ್ನು ನೀಡಿ ಅವರೂ ಮೀನು ಹಿಡಿಯುವ ಕಲೆಯನ್ನು ಕಲಿಯುವಂತೆ ಪ್ರೇರೇಪಿಸಲಾಗಿದೆ. ಜನಪರ ಕಾಳಜಿ ಹಾಗೂ ನಿಸ್ವಾರ್ಥ ಸೇವೆಯ ಸಂಕೇತವಾಗಿರುವ ಈ ಸಂಸ್ಥೆ ಕರ್ನಾಟಕದ ಹೃದಯಭಾಗದಲ್ಲಿರುವ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ.

"There is no tool for development more effective than the empowerment of women."- *Kofi Annan*. ಸಮಾಜದಲ್ಲಿ, ಕುಟುಂಬದಲ್ಲಿ ಬದಲಾವಣೆಯಾಗಬೇಕಾದರೆ ಮಹಿಳೆಯರು ಸಬಲರಾಗಬೇಕು. ಮಹಿಳೆಯರ ಸಬಲೀಕರಣಕ್ಕೆ ಆದ್ಯತೆಯನ್ನು ನೀಡಿ ಸಂಸ್ಥೆ ತನ್ನ ಅಸ್ತಿತ್ವದ ದಿನದಿಂದ ಮಹಿಳೆಯರ ಸಮಗ್ರ ಅಭಿವೃದ್ಧಿಗಾಗಿ ಹಲವು ಯೋಜನೆಗಳನ್ನು ರೂಪಿಸಿ, ಸ್ವ-ಸಹಾಯ ಸಂಘಗಳ ಮುಖಾಂತರ ಅವರೆಲ್ಲರನ್ನು ಸಂಘಟಿಸಿ ಇಂದು ತಮ್ಮ ಶ್ರಮದ ಹಾಗೂ ನಿರಂತರ ಉಳಿತಾಯದ ಫಲವಾಗಿ ಸಾವಿರಾರು ಕುಟುಂಬಗಳು ಅಭಿವೃದ್ಧಿಯನ್ನು ಸಾಧಿಸುವಂತೆ ಮಾಡಿರುವುದು ಸಂಸ್ಥೆಯ ನಿರಂತರ ಶ್ರಮಕ್ಕೆ ಸಿಕ್ಕಿರುವ ಯಶಸ್ಸು. ಕುಟುಂಬಗಳನ್ನು ಬದಲಾಯಿಸಲು ಶಕ್ತರಾಗಿರುವಂತಹ ಮಹಿಳೆಯರು ಸಂಸ್ಥೆಯ ಪ್ರೇರಣೆಯಿಂದ ಇಂದು ಸಮಾಜದಲ್ಲೂ ಬದಲಾವಣೆಯನ್ನು ತರುವಂತಹ ಸಾಧನಗಳಾಗಿ ರೂಪುಗೊಳ್ಳುತ್ತಿದ್ದಾರೆ. ಹಲವು ವರ್ಷಗಳ ಉಳಿತಾಯ ಹಾಗೂ ಸಂಘಟನೆಯ ಫಲವಾಗಿ 07 ಡಿಸೆಂಬರ್ 2013ರಂದು ಸಂಸ್ಥೆಯ ಪ್ರೇರಣೆಯಲ್ಲಿ ತಮ್ಮದೇ ಆದ "ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ"ವನ್ನು ಸ್ಥಾಪಿಸಿ ಇಂದು 10,011 ಮಹಿಳೆಯರು ಷೇರುದಾರರಾಗಿ ರೂ.7.50 ಕೋಟಿಗಿಂತಲೂ ಹೆಚ್ಚಿನ ಬಂಡವಾಳವನ್ನು ಕ್ರೋಢೀಕರಿಸಿ ಸಹಕಾರಿಯನ್ನು ಲಾಭದಾಯಕವಾಗಿ ಮುನ್ನಡೆಸುತ್ತಿರುವುದು ಮಹಿಳೆಯರ ಸಂಘಟಿತ ಶ್ರಮ, ನಿರಂತರ ಉಳಿತಾಯ ಹಾಗೂ ಕುಟುಂಬ ಮತ್ತು ಸಮಾಜದಲ್ಲಿ ಬದಲಾವಣೆಯನ್ನು ತರಬೇಕೆಂಬ ಛಲದ ಸಂಕೇತವಾಗಿದೆ.

“Education, work, and access to health care for all are key elements for development and the just distribution of goods, for the

attainment of social justice, for membership in society, and for free and responsible participation in political life"- Pope Francis. ಶೈಕ್ಷಣಿಕ ಕ್ಷೇತ್ರದಲ್ಲೂ ಸಂಸ್ಥೆ ತನ್ನದೇ ಆದ ರೀತಿಯಲ್ಲಿ ಶಾಲೆಗಳ, ವಸತಿ ನಿಲಯಗಳ ಮೂಲಕ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಅವಿರತ ಸೇವೆಯನ್ನು ನೀಡುತ್ತಾ ಸಹಸ್ರಾರು ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸಿದೆ. ಸಣ್ಣ ಮತ್ತು ಅಸಂಘಟಿತ ರೈತರ ಬಾಳಿಗೆ ಈ ಸಂಸ್ಥೆ ಆಶಾಕಿರಣವಾಗಿ ರೂಪುಗೊಂಡಿದೆ. ಸಾಮರ್ಥ್ಯ ವರ್ಧನೆ, ಜಾಲಬಂಧ, ಹಕ್ಕು ಆಧಾರಿತ ಕ್ರಿಯೆಗಳ ಮುಖಾಂತರ ಸಮಾಜದ ಎಲ್ಲಾ ವರ್ಗದ ಜನರು ಅಭಿವೃದ್ಧಿಯತ್ತ ದಾಪುಗಾಲು ಇಡುವಂತೆ ಮಾಡುವುದಕ್ಕೆ ಸಂಸ್ಥೆ ಪ್ರಾಮುಖ್ಯತೆಯನ್ನು ನೀಡುತ್ತಿದೆ.

ಎಸ್.ಎಮ್.ಎಸ್.ಎಸ್.ಸಂಸ್ಥೆ ಸಾಧಿಸಿದ್ದು ಅತ್ಯಲ್ಪ. ಸಾಧಿಸಬೇಕಾದುದು ಬಹಳಷ್ಟಿದೆ. ಸಾಗಬೇಕಾದ ದಾರಿ ಇನ್ನೂ ಉದ್ದವಿದೆ. ಆದರೆ ಸಾಗಿದ ಹಾದಿಯನ್ನೊಮ್ಮೆ ಹಿಂದಿರುಗಿ ನೋಡಿದಾಗ ಸಂತೃಪ್ತಿಯ ಭಾವನೆ ಮೂಡುತ್ತದೆ. ಈ ಸಾಧನೆಯ ಹಿಂದೆ ಶ್ರಮಿಸಿದ ಕಾಣುವ ಕೈಗಳು ಹಲವು, ಕಾಣದ ಕೈಗಳಾದರೋ ಹಲವಾರು. ಈ ಸಂಸ್ಥೆಗೆ ಭದ್ರ ಬುನಾದಿಯನ್ನು ಹಾಕಿದ ಶಿವಮೊಗ್ಗ ಧರ್ಮಕ್ಷೇತ್ರದ ಪ್ರಥಮ ಧರ್ಮಾಧ್ಯಕ್ಷರೂ, ಸಂಸ್ಥೆಯ ಪ್ರಥಮ ಅಧ್ಯಕ್ಷರೂ ಆಗಿರುವ ಪರಮ ಪೂಜ್ಯ ಡಾ. ಇಗ್ನೇಷಿಯಸ್ ಪಿಂಟೊ ಹಾಗೂ ಇವರ ನಂತರ ಸಂಸ್ಥೆಯ ಅಧ್ಯಕ್ಷರಾಗಿದ್ದ ಪರಮ ಪೂಜ್ಯ ಡಾ. ಜೆರಾಲ್ಡ್ ಐಸಾಕ್ ಲೋಬೊ ಹಾಗೂ ಪ್ರಸ್ತುತ ಪರಮ ಪೂಜ್ಯ ಡಾ. ಫ್ರಾನ್ಸಿಸ್ ಸೆರಾವೊ ಎಸ್.ಜೆ. ಇವರೆಲ್ಲರ ಸೂಕ್ತ ಮಾರ್ಗದರ್ಶನ, ಬೆಂಬಲ ಹಾಗೂ ಬಡವರ, ನಿರಾಶ್ರಿತರ ಮೇಲಿನ ಕಾಳಜಿ ಸಂಸ್ಥೆಯು ಈ ಮಟ್ಟಕ್ಕೆ ಬೆಳೆದು ನಿಲ್ಲವಂತೆ ಮಾಡಿದೆ. ಇವರೊಂದಿಗೆ ಸಂಸ್ಥೆಯ ನಿರ್ದೇಶಕರುಗಳಾಗಿ ಶ್ರಮಿಸಿದ ವಂ. ಫಾದರ್ ಮಾರ್ಕ್ ಪ್ಯಾಟ್ರಿಕ್ ಡಿ'ಸಿಲ್ವಾ, ವಂ. ಫಾದರ್ ಕ್ಲೆಮೆಂಟ್ ಡಿ'ಸೋಜ, ವಂ. ಫಾದರ್ ಗಿಲ್ಬರ್ಟ್ ಲೋಬೊ, ವಂ. ಫಾದರ್ ವೀರೇಶ್ ವಿ. ಮೊರಾಸ್ ಹಾಗೂ ವಂ. ಫಾದರ್ ರಿಚರ್ಡ್ ಪಾಯ್ಸ್ ಇವರೆಲ್ಲರ ಅವಿರತ ಶ್ರಮದ ಫಲದಿಂದ ಈ ಸಂಸ್ಥೆ ಸಮಾಜ ಸೇವೆಯ ಮೂಲಕ ಸಮಾಜದಲ್ಲಿ ಮಹತ್ತರ ಬದಲಾವಣೆಯನ್ನು ತರಲು ಶಕ್ತವಾಗಿದೆ. ಇವರೆಲ್ಲರ ಪರಿಶ್ರಮಕ್ಕಾಗಿ ಮನದಾಳದಿಂದ ಧನ್ಯವಾದಗಳನ್ನು ಸಮರ್ಪಿಸುವಾಗ ದೇವರು ಇವರೆಲ್ಲರನ್ನೂ ನೂರ್ಮಡಿಯಾಗಿ ಹರಸಿ ಆಶೀರ್ವದಿಸಲಿ ಎಂದು ಪ್ರಾರ್ಥಿಸುತ್ತೇನೆ. ಈ ಮಹಾನ್ ಸಾಧಕರಿಗೆ ಬೆನ್ನೆಲುಬಾಗಿ ನಿಂತಿರುವ ದಾನಿ ಸಂಸ್ಥೆಗಳು ಹಾಗೂ ವೈಯುಕ್ತಿಕ ದಾನಿಗಳು ನೀಡಿದ ಉದಾರ ಮನದ ಧನಸಹಾಯದಿಂದ ಸಂಸ್ಥೆ ಸಹಸ್ರಾರು ಬಡವರ, ನಿರ್ಗತಿಕರ ಕಣ್ಣೀರನ್ನು ಒರೆಸಲು ಶಕ್ತವಾಗಿದೆ, ಅಬಲರನ್ನು ಸಬಲರನ್ನಾಗಿ ಮಾಡಿ ಕುಟುಂಬ ಹಾಗೂ ಸಮಾಜದ ಅಭಿವೃದ್ಧಿಗೆ ಕಾರಣಕರ್ತರಾಗುವ ಮಾನವ ಕಟ್ಟಡಗಳನ್ನು ರೂಪಿಸಲು ಯಶಸ್ವಿಯಾಗಿದೆ. ಈ ಕಾಣುವ ಹಾಗೂ ದಾನಿ ಸಂಸ್ಥೆಗಳಿಗೆ ಉದಾರಮನದಿಂದ ತಮ್ಮ ತ್ಯಾಗದ ಕಾಣಿಕೆಯನ್ನು ನೀಡುತ್ತಿರುವ ಸಹಸ್ರಾರು ಕಾಣದ ಕೈಗಳನ್ನೂ ಭಗವಂತ ಹೇರಳವಾಗಿ ಆಶೀರ್ವದಿಸಲಿ.

ಎಸ್.ಎಮ್.ಎಸ್.ಎಸ್.ಸಂಸ್ಥೆಯ ಬೆಳವಣಿಗೆಯಲ್ಲಿ ಸಂಸ್ಥೆಯ ಸಿಬ್ಬಂದಿಯವರ ಪಾತ್ರ ಮಹತ್ತರವಾಗಿದೆ. ಸಂಭಾವನೆಯನ್ನು ಲೆಕ್ಕಿಸದೆ, ಸೇವೆಯನ್ನೇ ಬದುಕಾಗಿಸಿಕೊಂಡು ಅವಿರತವಾಗಿ ಶ್ರಮಿಸುತ್ತಿರುವ ಸಂಸ್ಥೆಯ ಸಿಬ್ಬಂದಿಯವರ ಬೆವರು ಫಲ ನೀಡುವ ಸಸಿಗಳನ್ನು, ಮರಗಳನ್ನು ರೂಪಿಸುವಲ್ಲಿ, ಬದಲಾವಣೆಯನ್ನು ತರಬಲ್ಲ ಸಾಧನಗಳನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿದೆ. ನಿರ್ದೇಶಕರೊಂದಿಗೆ ಕೈಜೋಡಿಸಿದ ಸಿಬ್ಬಂದಿ ಸಂಸ್ಥೆ 627ಕ್ಕೂ ಹೆಚ್ಚು ಹಳ್ಳಿಗಳಲ್ಲಿ ತನ್ನ ಸೇವೆಯ ಕಂಪನ್ನು ಪಸರಿಸುವಂತೆ ಮಾಡಿದೆ. ಸಮಾಜದ ಎಲ್ಲಾ ವರ್ಗದ ಜನರ ಬಾಳಿಗೆ ಚೈತನ್ಯ ತುಂಬುವ ಕಾರ್ಯವನ್ನು ಮಾಡುತ್ತಾ ಮೂವತ್ತರ ಗೆರೆ ದಾಟಿರುವ ಸಂಸ್ಥೆಯ ಈ ಸ್ಮರಣ ಸಂಚಿಕೆ **'ಚೈತನ್ಯ'**ವನ್ನು ಸಂಸ್ಥೆಯ ಬೆಳವಣಿಗೆಗೆ ಒಂದಲ್ಲ ಒಂದು ರೀತಿಯಲ್ಲಿ ನೆರವು ನೀಡಿದ ಸರ್ವರಿಗೆ ಹಾಗೂ ಸಂಸ್ಥೆಯ ಎಲ್ಲಾ ಫಲಾನುಭವಿಗಳಿಗೆ ಸಮರ್ಪಿಸುತ್ತೇವೆ. ದೇವರು ಎಲ್ಲರನ್ನೂ ಯತೇಚ್ಛವಾಗಿ ಹರಸಿ ಆಶಿರ್ವದಿಸಲಿ.

ಈ ಸ್ಮರಣ ಸಂಚಿಕೆಯನ್ನು ಹೊರತರಲು ಶ್ರಮಿಸಿದ ಸರ್ವರಿಗೆ, ವಿಶೇಷವಾಗಿ ಸಂಪಾದಕೀಯ ಮಂಡಳಿ ಹಾಗೂ ಲೇಖನಗಳನ್ನು ನೀಡಿದ ಬರಹಗಾರರಿಗೆ ಅಭಿನಂದನೆಗಳು. ಜಾಹೀರಾತುಗಳನ್ನು ನೀಡಿ ಪ್ರೋತ್ಸಾಹಿಸಿದ ದಾನಿಗಳಿಗೆ, ಸ್ವ-ಸಹಾಯ ಸಂಘಗಳ ಮಹಿಳೆಯರಿಗೆ ಮತ್ತು ಸ್ಮರಣ ಸಂಚಿಕೆಯಲ್ಲಿರುವ ತಪ್ಪುಗಳನ್ನು ಸರಿಪಡಿಸಲು ನೆರವು ನೀಡಿದ ವಂ. ಫಾದರ್ ರಿಚರ್ಡ್ ಸಿಕ್ವೇರಾ ಎಸ್.ಜೆ. ಇವರಿಗೆ ವಿಶೇಷ ಧನ್ಯವಾದಗಳು. **'ಚೈತನ್ಯ'**ದ ಪುಟಗಳನ್ನು ವಿನ್ಯಾಸಗೊಳಿಸಿ ಮುದ್ರಿಸಿಕೊಟ್ಟ ಮಂಗಳೂರಿನ ಪ್ರಸಾದ್ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಪ್ರವೀಣ್ ಪತ್ರಾವೊ ಇವರಿಗೂ ಹಾಗೂ ಎಲ್ಲಾ ಸಿಬ್ಬಂದಿಯವರಿಗೂ ವಂದನೆಗಳು. ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ನೆರವು ನೀಡಿದ ಎಲ್ಲರನ್ನೂ ವಂದಿಸುತ್ತಾ ಚೈತನ್ಯ ತುಂಬುವ ಕಾರ್ಯದಲ್ಲೇ ಮಗ್ನವಾಗಿರುವ ಈ ಸಂಸ್ಥೆಯು ಇನ್ನೂ ಹಲವಾರು ಜನರ ಬಾಳಿನಲ್ಲಿ **ಚೈತನ್ಯ** ತುಂಬುವ ಕಾರ್ಯವನ್ನು ಸದಾ ಮುಂದುವರಿಸುವಂತಾಗಲಿ.


ವಂದನೆಗಳು, ಅಭಿನಂದನೆಗಳು ಹಾಗೂ ದೇವರ ಆಶೀರ್ವಾದಗಳು!

**ವಂ. ಫಾದರ್ ಕ್ಲಿಫರ್ಡ್ ರೋಶನ್ ಪಿಂಟೊ**

# ಶಿವಮೊಗ್ಗ ಧರ್ಮಕ್ಷೇತ್ರದ ಧರ್ಮಾಧ್ಯಕ್ಷರು ಹಾಗೂ ಸಂಸ್ಥೆಯ ಅಧ್ಯಕ್ಷರು



ಪರಮ ಪೂಜ್ಯ ಡಾ. ಇಗ್ನೇಶಿಯಸ್ ಪಿಂಟೊ
1988–1998



ಪರಮ ಪೂಜ್ಯ ಡಾ. ಜೆರಾಲ್ಡ್ ಐಸಾಕ್ ಲೋಬೊ
2000–2012



ಪರಮ ಪೂಜ್ಯ ಡಾ. ಫ್ರಾನ್ಸಿಸ್ ಸೆರಾವೊ ಎಸ್.ಜೆ.
2014–

# ಸಂಸ್ಥೆಯ ನಿರ್ದೇಶಕರು



ಫಾ. ಮಾರ್ಕ್ ಪ್ಯಾಟ್ರಿಕ್ ಡಿ'ಸಿಲ್ವಾ
1989–1994



ಫಾ. ಕ್ಲೆಮೆಂಟ್ ಡಿ'ಸೋಜ
1994–2001



ಫಾ. ಗಿಲ್ಬರ್ಟ್ ಲೋಬೊ
2001–2006



ಫಾ. ವಿರೇಶ್ ವಿ. ಮೊರಾಸ್
2006–2017



ಫಾ. ರಿಚರ್ಡ್ ಪಾಯ್ಸ್
2017–2018



ಫಾ. ಕ್ಲಿಫರ್ಡ್ ರೋಶನ್ ಪಿಂಟೊ
2018–

# Governing Board
# &
# General Body Members

| | |
|---|---|
| Most Rev. Dr Francis Serrao SJ | President |
| Rev. Msgr Felix Joseph Noronha | Vice President |
| Rev. Fr Clifford Roshan Pinto | Secretary |
| Rev. Fr Stany D'Souza | Member |
| Rev. Fr Denis Mathias | Member |
| Rev. Fr Gilbert Lobo | Member |
| Rev. Fr Robert D'Mello | Member |
| Rev. Fr Richard Pais | Member |
| Rev. Fr Veeresh V. Moras | Member |
| Rev. Fr Francis Fernandes | Member |
| Sr Levenis D'Souza | Member |
| Sr Winnifred BS | Member |
| Mr James Martis | Member |
| Mrs Vidya Joseph | Member |
| Miss Mary Victoria | Member |
| Miss Elsie D'Souza | Member |

# ಸಂಸ್ಥೆಯ ಸಿಬ್ಬಂದಿ



# ಸ್ತ್ರೀಬಂಧು ಸಿಬ್ಬಂದಿ



# ದಿ ಶಿವಮೊಗ್ಗ ಮಲ್ಟಿಪರ್ಪಸ್ ಸೋಶಿಯಲ್ ಸರ್ವಿಸ್ ಸೊಸೈಟಿ (ರಿ)
## (ಎಸ್.ಎಮ್.ಎಸ್.ಎಸ್.ಎಸ್.)

**ಕಿರುನೋಟ**

ದಿ ಶಿವಮೊಗ್ಗ ಮಲ್ಟಿಪರ್ಪಸ್ ಸೋಶಿಯಸ್ ಸರ್ವಿಸ್ ಸೊಸೈಟಿ (ಎಸ್.ಎವಮ್.ಎಸ್.ಎಸ್.ಎಸ್.) ಕರ್ನಾಟಕ ರಾಜ್ಯದ ಹೃದಯಭಾಗದಲ್ಲಿರುವ ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಗಳನ್ನೊಳಗೊಂಡ ಶಿವಮೊಗ್ಗ ಧರ್ಮಕ್ಷೇತ್ರದ ಅಧಿಕೃತ ಅಭಿವೃದ್ಧಿ ಸಂಸ್ಥೆಯಾಗಿದೆ. ಎಸ್.ಎಮ್.ಎಸ್.ಎಸ್.ಎಸ್. ಒಂದು ಜಾತ್ಯಾತೀತ, ಸ್ವಯಂಪ್ರೇರಿತ, ಲಾಭಾಪೇಕ್ಷೆಗಳಿಲ್ಲದ ಸಂಸ್ಥೆಯಾಗಿದ್ದು, ಕರ್ನಾಟಕ ಸಂಘಸಂಸ್ಥೆಗಳ ನೋಂದಣಿ ಅಧಿನಿಯಮ 1960, ವಿದೇಶಿ ದೇಣಿಗೆ (ನಿಯಂತ್ರಣ) ಅಧಿನಿಯಮ 1976 ಮತ್ತು 2010 ಹಾಗೂ ಆದಾಯ ತೆರಿಗೆ ನಿಯಮ – ವಿಭಾಗ 12ಎ ಮತ್ತು 80ಜಿ ಇವುಗಳ ಮೇರೆಗೆ ನೊಂದಾಯಿತವಾಗಿರುತ್ತದೆ.

11 ಆಗಸ್ಟ್ 1989 ರಂದು ಕರ್ನಾಟಕ ಸಂಘಸಂಸ್ಥೆಗಳ ನೋಂದಣಿ ಅಧಿನಿಯಮ 1960 ಇದರ ಮೇರೆಗೆ ನೋಂದಣಿ ಸಂಖ್ಯೆ 56/SOR/SMG/89–90 ಯೊಂದಿಗೆ ನೋಂದಣಿಗೊಂಡು ಆರಂಭಗೊಂಡ ಈ ಸಂಸ್ಥೆಯು ಶಿವಮೊಗ್ಗ ಧರ್ಮಕ್ಷೇತ್ರದ ಸರ್ವ




ಜನರ ಸರ್ವಾಂಗೀಣ ಅಭಿವೃದ್ಧಿಗೆ ತನ್ನನ್ನೇ ಸಮರ್ಪಿಸಿಕೊಂಡಿದೆ. ಮೂರು ಜಿಲ್ಲೆಗಳಲ್ಲಿರುವ ಸುಮಾರು 187 ಗ್ರಾಮ ಪಂಚಾಯತಿಗಳ 627 ಹಳ್ಳಿಗಳಲ್ಲಿ ಯಾವುದೇ ಜಾತಿ, ಮತ, ಕುಲ, ಲಿಂಗ ಭೇದವಿಲ್ಲದೆ ವಿವಿಧ ಕಾರ್ಯಕ್ರಮಗಳ ಮೂಲಕ ಜನರ ಅಭಿವೃದ್ಧಿ ಅಗತ್ಯಗಳಿಗಾಗಿ ಶ್ರಮಿಸುತ್ತಿದೆ.

**ಮುನ್ನೋಟ:** ನ್ಯಾಯ, ಶಾಂತಿ ಹಾಗೂ ಪ್ರೀತಿ ತುಂಬಿದ ನವ ಸಮಾಜದ ನಿರ್ಮಾಣ

**ನಿಯೋಗ:** ಸಾಮರ್ಥ್ಯ ವರ್ಧನೆ ಹಾಗೂ ಹಕ್ಕು ಆಧಾರಿತ ಕ್ರಿಯೆಗಳ ಮೂಲಕ ಬಡ ಹಾಗೂ ಅವಕಾಶ ವಂಚಿತ ಸಮುದಾಯಗಳ ಸಶಕ್ತೀಕರಣ

**ಗುರಿ:** ಅವಕಾಶ ವಂಚಿತ ಸಮುದಾಯಗಳು ಜ್ಞಾನ, ಸಂಪನ್ಮೂಲ ಹಾಗೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಗಳ ಮೇಲೆ ಹಿಡಿತವನ್ನು ಹೊಂದಿ ಸಮಗ್ರ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸುತ್ತವೆ.

**ಸಂಸ್ಥೆಯ ಆದ್ಯತಾ ಸಮುದಾಯಗಳು:** ಅವಕಾಶ ವಂಚಿತ ಮಹಿಳೆಯರು, ಸಣ್ಣ ಮತ್ತು ಅವಕಾಶ ವಂಚಿತ ರೈತರು, ಅವಕಾಶ ವಂಚಿತ ಮಕ್ಕಳು ಮತ್ತು ಅವರ ಪೋಷಕರು, ಹೆಚ್.ಐ.ವಿ./ಏಡ್ಸ್ ಬಾಧಿತರು, ನಿರುದ್ಯೋಗಿ ಯುವಜನತೆ, ಅಸಂಘಟಿತ ಕಾರ್ಮಿಕರು, ಇತ್ಯಾದಿ.

**ಕಾರ್ಯಕ್ರಮ ಅನುಷ್ಠಾನ ವಿಧಾನ:** ಕಾರ್ಯಯೋಜನೆಗಳ ಅನುಷ್ಠಾನ, ಸಾಮರ್ಥ್ಯ ವರ್ಧನೆ, ಜಾಲಬಂಧ ಮತ್ತು ಹಕ್ಕು ಆಧಾರಿತ ಕ್ರಿಯೆಗಳು.

ಸಂಸ್ಥೆಯು ಆರು ಪ್ರಮುಖ ವಿಭಾಗಗಳ ಮೂಲಕ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ.

- ✦ ಮಹಿಳಾಭಿವೃದ್ಧಿ
- ✦ ಶಿಕ್ಷಣ ಮತ್ತು ಅಭಿವೃದ್ಧಿ
- ✦ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ
- ✦ ಉತ್ತಮ ಆಡಳಿತ
- ✦ ಆರೋಗ್ಯ ಮತ್ತು ಅಭಿವೃದ್ಧಿ
- ✦ ಸಾಮರ್ಥ್ಯ ವರ್ಧನೆ

### 1. ಮಹಿಳಾಭಿವೃದ್ಧಿ

**ಗುರಿ:** ಮಹಿಳೆಯರು ಜ್ಞಾನ, ಸಂಪನ್ಮೂಲ ಹಾಗೂ ತಮ್ಮ ಕುಟುಂಬ ಮತ್ತು ಸಮುದಾಯಗಳಲ್ಲಿ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಇತ್ಯಾದಿಗಳಲ್ಲಿ ಎಲ್ಲರಿಗೂ ಸರಿ ಸಮಾನವಾದ ಹಿಡಿತವನ್ನು ಸಾಧಿಸುತ್ತಾರೆ.









**ಯೋಜನೆಗಳು**

- ✦ ಮಹಿಳಾಭಿವೃದ್ಧಿ ಯೋಜನೆ
- ✦ ಕಿರು ಉದ್ದಿಮೆಯಲ್ಲಿ ಮಹಿಳೆಯರು
- ✦ ಮಹಿಳಾ ಹಕ್ಕುಗಳು
- ✦ ಕುಟುಂಬಾಭಿವೃದ್ಧಿ ಯೋಜನೆ
- ✦ ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ

**2. ಶಿಕ್ಷಣ ಮತ್ತು ಅಭಿವೃದ್ಧಿ**

**ಗುರಿ:** ಸಮುದಾಯದ ಜನರು, ವಿಶೇಷವಾಗಿ ಅವಕಾಶ ವಂಚಿತ ಮಕ್ಕಳು ತಮ್ಮ ಹಾಗೂ ಸಮಾಜದ ಸಮಗ್ರ ಅಭಿವೃದ್ಧಿಗೆ









ಪೂರಕವಾಗುವಂತೆ ಉತ್ತಮ ಹಾಗೂ ಮೌಲ್ಯಾಧಾರಿತ ಶಿಕ್ಷಣವನ್ನು ಪಡೆಯುತ್ತಾರೆ.

**ಯೋಜನೆಗಳು**

- ✦ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆ
- ✦ ಮಕ್ಕಳ ಹಕ್ಕುಗಳು
- ✦ "ಉನ್ನತಿ" – ಉನ್ನತ ಶಿಕ್ಷಣ ವೇತನ
- ✦ "ದಿಶಾ" – ವೃತ್ತಿ ಮಾರ್ಗದರ್ಶನ ಕಾರ್ಯಕ್ರಮ
- ✦ ಕರ್ನಾಟಕ ಮುಕ್ತ ವಿದ್ಯಾಲಯ
- ✦ ರಾಷ್ಟ್ರೀಯ ಮುಕ್ತ ವಿದ್ಯಾಲಯ
- ✦ ಅವಕಾಶ ವಂಚಿತರಿಗೆ ಶಾಲೆ, ವಸತಿ ನಿಲಯಗಳ ಮೂಲಕ ಶಿಕ್ಷಣ

**3. ನೈಸರ್ಗಿಕ ಸಂಪನ್ಮೂಲ ನಿರ್ವಹಣೆ**

**ಗುರಿ:** ಸಮುದಾಯದ ಜನರು ಲಭ್ಯವಿರುವ ನೈಸರ್ಗಿಕ ಸಂಪನ್ಮೂಲಗಳನ್ನು (ನೆಲ, ಜಲ, ಕಾಡು) ತಮ್ಮ ಮತ್ತು ಸಮುದಾಯದ ಅಗತ್ಯಗಳು ಹಾಗೂ ಅಭಿವೃದ್ಧಿಗೆ ಪೂರಕವಾಗುವಂತೆ ಸುಸ್ಥಿರವಾಗಿ ಬಳಸುತ್ತಾರೆ.









**ಯೋಜನೆಗಳು:**

- ಸಣ್ಣ ರೈತರ ಸಂಘಟನೆ ಹಾಗೂ ಜೀವನೋಪಾಯ ಕಾರ್ಯಕ್ರಮಗಳು
- ರೈತರ ಹಕ್ಕುಗಳು
- ಮಣ್ಣು ಹಾಗೂ ನೀರಿನ ಸಂರಕ್ಷಣೆ
- ಸಾವಯವ ಕೃಷಿ
- ಪರ್ಯಾಯ ಇಂಧನ ಮೂಲಗಳ ಸಮರ್ಥ ಹಾಗೂ ಸುಸ್ಥಿರ ಬಳಕೆ

### 4. ಉತ್ತಮ ಆಡಳಿತ

**ಗುರಿ:** ಸಮುದಾಯದ ಅವಕಾಶ ವಂಚಿತ ಜನರು ಸ್ಥಳೀಯ ಆಡಳಿತ ಪ್ರಕ್ರಿಯೆಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವುದರ ಮೂಲಕ ಆಡಳಿತದಲ್ಲಿ ಉತ್ತಮ ಆಡಳಿತವನ್ನು ತರುತ್ತಾರೆ ಹಾಗೂ ಸ್ಥಳೀಯ ನಾಯಕರು ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಂಡು ಆಡಳಿತದಲ್ಲಿ ಪಾರದರ್ಶಕತೆ ಹಾಗೂ ಉತ್ತಮ ನಾಯಕತ್ವವನ್ನು ತೋರಿಸುತ್ತಾರೆ.










**ಯೋಜನೆಗಳು:**

- ✦ ಉತ್ತಮ ಆಡಳಿತ ತರುವತ್ತ ಸಮುದಾಯಗಳ ಸಶಕ್ತೀಕರಣ
- ✦ ಮೌಲ್ಯಾಧಾರಿತ ಹಾಗೂ ಸಮರ್ಥ ನಾಯಕ/ನಾಯಕಿಯರ ರೂಪಿಸುವಿಕೆ
- ✦ ಮಾದರಿ ಗ್ರಾಮ ಪಂಚಾಯತಿಗಳ ರಚನೆ
- ✦ ಪಂಚಾಯತ್ ರಾಜ್, ಮಾಹಿತಿ ಹಕ್ಕು, ಉದ್ಯೋಗ ಖಾತ್ರಿ ಹಾಗೂ ಪಡಿತರ ವ್ಯವಸ್ಥೆಯ ಕುರಿತು ಅರಿವು ಕಾರ್ಯಕ್ರಮ

## 5. ಆರೋಗ್ಯ ಮತ್ತು ಅಭಿವೃದ್ಧಿ

**ಗುರಿ:** ಸಮುದಾಯದ ಜನರು ಸಾಂಕ್ರಾಮಿಕ ರೋಗಗಳಿಂದ ಮುಕ್ತರಾಗಿರಲು ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಾರೆ ಹಾಗೂ ಹೆಚ್.ಐ.ವಿ./ಏಡ್ಸ್ ಬಾಧಿತರು ಸಮಾಜದಲ್ಲಿ ಗೌರವಯುತ ಜೀವನವನ್ನು ನಡೆಸುತ್ತಾರೆ.

**ಯೋಜನೆಗಳು:**

- ✦ ಹೆಚ್.ಐ.ವಿ. ಮತ್ತು ಏಡ್ಸ್ ಹರಡುವಿಕೆಯ ನಿಯಂತ್ರಣ ಹಾಗೂ ಕಳಂಕ ನಿರ್ಮೂಲನೆ
- ✦ ಹೆಚ್.ಐ.ವಿ. ಮತ್ತು ಏಡ್ಸ್ ಬಾಧಿತರಿಗೆ ಬೆಂಬಲ



- ✦ ಪರಿಸರ ಶುಚಿತ್ವ ಮತ್ತು ಸಾಂಕ್ರಾಮಿಕ ರೋಗಗಳ ಕುರಿತು ಅರಿವು ಹಾಗೂ ನಿಯಂತ್ರಣ
- ✦ ಸಮುದಾಯ ಆರೋಗ್ಯ ಶಿಬಿರಗಳು

## 6. ಸಾಮರ್ಥ್ಯ ವರ್ಧನೆ

**ಗುರಿ:** ಹೊಣೆಗಾರರು ಸುಸ್ಥಿರ ಅಭಿವೃದ್ಧಿಯ ಕುರಿತು ಚಿಂತನೆ ನಡೆಸಿ ಸೂಕ್ತ ನಿರ್ಧಾರಗಳನ್ನು ಕೈಗೊಳ್ಳಲು ಹಾಗೂ ಅವುಗಳನ್ನು ತಮ್ಮ ಕಾರ್ಯಕ್ಷೇತ್ರದಲ್ಲಿ ಅಳವಡಿಸಲು ಸಶಕ್ತರಾಗಿದ್ದಾರೆ.















**ಯೋಜನೆಗಳು:**

- ✦ ಸರ್ಕಾರಿ, ಸರ್ಕಾರೇತರ ಹಾಗೂ ಸಮುದಾಯ ಸಂಸ್ಥೆಗಳ ಸಾಮರ್ಥ್ಯ ವರ್ಧನೆ
- ✦ ವಿಚಾರ ಸಂಕಿರಣ ಮತ್ತು ಕಾರ್ಯಾಗಾರಗಳು
- ✦ ಪ್ರಸ್ತುತ ಹಾಗೂ ನವೀನ ತರಬೇತಿಗಳು
- ✦ ಪ್ರಕಾಶನ

**ಸಂಸ್ಥೆಯ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳು:**

ಸಂಸ್ಥೆಯು ಆರು ಪ್ರಮುಖ ವಿಭಾಗಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಜೊತೆಗೆ ಸಮುದಾಯದ ಎಲ್ಲಾ ವರ್ಗಗಳ ಅಭಿವೃದ್ಧಿಯನ್ನೂ ಗಮನದಲ್ಲಿಟ್ಟುಕೊಂಡು ಹಲವು ಅಭಿವೃದ್ಧಿ ಕಾರ್ಯಗಳನ್ನು ದಾನಿಗಳ ಉದಾರ ಮನದ ಆರ್ಥಿಕ ನೆರವಿನಿಂದ ಕಾಲಕಾಲಕ್ಕೆ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿದೆ.



ಈ ಕಾರ್ಯಕ್ರಮದಡಿಯಲ್ಲಿ ಅತೀ ಬಡವರನ್ನು ಗುರುತಿಸಿ 1,800 ಶೌಚಾಲಯಗಳನ್ನು ನಿರ್ಮಿಸಿಕೊಡಲಾಗಿದೆ. ವಸತಿರಹಿತರಿಗೆ 750 ಮನೆಗಳನ್ನು ನಿರ್ಮಿಸಿಕೊಡಲಾಗಿದೆ.

2009 ಸೆಪ್ಟೆಂಬರ್ 29 ರಿಂದ ಅಕ್ಟೋಬರ್ 3ರ ವರೆಗೆ ಉತ್ತರ ಕರ್ನಾಟಕದಲ್ಲಿ ಅಕಾಲಿಕವಾಗಿ ಸುರಿದ ಕುಂಭದ್ರೋಣ ಮಳೆಗೆ ಸಾವಿರಾರು ಜನರು ಮನೆ, ಮಠ, ಬೆಳೆ ಕಳೆದುಕೊಂಡ ಸಂತ್ರಸ್ತರ ನೆರವಿಗೆ ಸಂಸ್ಥೆ ಧಾವಿಸಿತು. ದಾವಣಗೆರೆ, ಹರಿಹರ ಮತ್ತು ಹರಪ್ಪನಹಳ್ಳಿ ತಾಲ್ಲೂಕುಗಳಲ್ಲಿ, ಅತೀವ ಹಾನಿಗೊಳಗಾದ ಮನೆಗಳನ್ನು ಗುರುತಿಸಿ 530 ಕುಟುಂಬಗಳಿಗೆ ತಾತ್ಕಾಲಿಕ ಪರಿಹಾರವಾಗಿ 15 ದಿನಗಳಿಗೆ ಬೇಕಾಗುವಷ್ಟು ಆಹಾರ ಪದಾರ್ಥ ಮತ್ತು ಅವಶ್ಯಕ ವಸ್ತುಗಳನ್ನು ಪೂರೈಸಲಾಗಿದೆ. ಇದಕ್ಕಾಗಿ ರೂ. 5,62,500/–ಗಳನ್ನು ವೆಚ್ಚ ಮಾಡಲಾಗಿದೆ. ಈ ತಾತ್ಕಾಲಿಕ ಪರಿಹಾರ ಮಾತ್ರವಲ್ಲದೆ ಸಂಪೂರ್ಣವಾಗಿ ಮನೆ ಕಳೆದುಕೊಂಡ



ಅತೀ ಬಡವರಾದ 50 ಕುಟುಂಬಗಳನ್ನು ಗುರುತಿಸಿ ಅವರಿಗೆ ಸುಭದ್ರವಾದ ಪುಟ್ಟ ಮನೆಗಳನ್ನು ಕಟ್ಟಿಕೊಡುವ ಯೋಜನೆಯನ್ನು ರೂಪಿಸಿತು. ಸಂಸ್ಥೆಯ ಎಲ್ಲಾ ಮಹಿಳಾ ಸ್ವ–ಸಹಾಯ ಸಂಘಗಳ ಮಹಿಳೆಯರು, ದೆಹಲಿಯ ಕಾರಿತಾಸ್ ಇಂಡಿಯಾ ಸಂಸ್ಥೆ ಮತ್ತು ಇತರೆ ದಾನಿಗಳು ಈ ಯೋಜನೆಗೆ ತಮ್ಮ ಸಹಾಯಹಸ್ತ ಚಾಚಿದರು ಹಾಗೂ ಕರ್ನಾಟಕ ಸರ್ಕಾರದ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಬಸವ ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಪ್ರತಿ ಮನೆಗೆ ರೂ. 60,000/– ಸಹಾಯಧನ ಪಡೆಯಲಾಯಿತು. ಹೀಗೆ ಎಲ್ಲರ ಸಹಕಾರದಿಂದ 12.5 ಅಡಿ ಅಗಲ ಮತ್ತು 21 ಅಡಿ ಉದ್ದದ 262.5 ಚದರ ಅಡಿ ಅರ್.ಸಿ.ಸಿ. ಮನೆಗಳನ್ನು ಪ್ರತಿಯೊಂದು ಮನೆಗೆ ರೂ. 1,90,000/– ವೆಚ್ಚದಂತೆ ನಿರ್ಮಿಸಿ ಕೊಡಲಾಗಿದೆ.

ಸಂಸ್ಥೆಯು ತನ್ನ ಬೆಳ್ಳಿ ಮಹೋತ್ಸವವನ್ನು ಆಚರಿಸಿದ ಸಂದರ್ಭದಲ್ಲಿ ಬೆಳ್ಳಿ ಮಹೋತ್ಸವದ ಸವಿನೆನಪಿಗಾಗಿ 100 ಬಡ ಕುಟುಂಬಗಳನ್ನು ಗುರುತಿಸಿ ಅವರಿಗೆ ಮನೆ ನಿರ್ಮಿಸಿಕೊಳ್ಳಲು ತಲಾ ರೂ. 50,000/– ಸಹಾಯಧನ ಹಾಗೂ ರೂ. 50,000/– ಬಡ್ಡಿರಹಿತ ಸಾಲ ನೀಡಲಾಗಿದೆ. ಈ ಯೋಜನೆಗೆ ಉದಾರ ಮನದಿಂದ ದಾನ ನೀಡಿದ ದಾನಿ ಸಂಸ್ಥೆಗಳಿಗೆ ವಂದನೆಗಳು.



ಇತ್ತೀಚೆಗೆ ಕೇರಳ ಹಾಗೂ ಕೊಡಗಿನಲ್ಲಿ ಸುರಿದ ಕುಂಭದ್ರೋಣ ಮಳೆಗೆ ಸಂತ್ರಸ್ತರಾದ ಕುಟುಂಬಗಳ ಸಹಾಯಕ್ಕೆ ಸಂಸ್ಥೆ ಧಾವಿಸಿದೆ. ಸಂಪೂರ್ಣವಾಗಿ ಕೊಚ್ಚಿ ಹೋದ ಕೊಡಗಿನ ಹಟ್ಟಿಹೊಳೆ ಗ್ರಾಮಕ್ಕೆ 26 ಆಗಸ್ಟ್ 2018ರಂದು ಸಂಸ್ಥೆಯ ನಿರ್ದೇಶಕರು, ಕೆಲವು ಸಿಬ್ಬಂದಿ ಹಾಗೂ ಧರ್ಮಕ್ಷೇತ್ರದ ಕೆಲವು ಪ್ರತಿನಿಧಿಗಳೊಂದಿಗೆ ಭೇಟಿ ನೀಡಿ ಅಲ್ಲಿಯ 67 ಕುಟುಂಬಗಳಿಗೆ ಸುಮಾರು ರೂ. 1,50,000/–ಕ್ಕೂ ಹೆಚ್ಚು ಮೌಲ್ಯದ ಅಹಾರ ಧಾನ್ಯ, ಬಟ್ಟೆ, ದಿನಸಿ ಮುಂತಾದ ಅವಶ್ಯಕ ವಸ್ತುಗಳನ್ನು ನೀಡಲಾಗಿದೆ



ಮಾತ್ರವಲ್ಲ ಸಂಸ್ಥೆಯ ಸಿಬ್ಬಂದಿಯವರ ಶ್ರಮದ ಫಲವಾಗಿ ಸ್ವ-ಸಹಾಯ ಸಂಘಗಳ ಮಹಿಳೆಯರಿಂದ ಹಾಗೂ ಇತರ ದಾನಿಗಳಿಂದ ನೆರೆಪರಿಹಾರ ನಿಧಿಗಾಗಿ ರೂ. 6,25,000/-ಗಳನ್ನು ಸಂಗ್ರಹಿಸಿ ಕಳುಹಿಸಿಕೊಡಲಾಗಿದೆ.



ಈ ರೀತಿ ಇನ್ನು ಮುಂದೆಯೂ ವಿವಿಧ ರೀತಿಯ ಸಮುದಾಯ ಅಭಿವೃದ್ಧಿ ಕಾರ್ಯಗಳನ್ನು ಮಾಡಲು ಯೋಜನೆ ಹಮ್ಮಿಕೊಳ್ಳಲಾಗಿದೆ.

## 'ಚೈತನ್ಯ ಶ್ರೀ' ಪ್ರಶಸ್ತಿ

ಎಸ್.ಎಮ್.ಎಸ್.ಎಸ್.ಸಂಸ್ಥೆಯು 2014ರಲ್ಲಿ ತನ್ನ ಸಾರ್ಥಕ ಸೇವೆಯ 25 ವರ್ಷಗಳನ್ನು ಪೂರೈಸಿತು. ಬೆಳ್ಳಿ ಮಹೋತ್ಸವದ ಸವಿ ನೆನಪಿಗಾಗಿ ಸಂಸ್ಥೆಯು ರಾಷ್ಟ್ರ ಮಟ್ಟದ 'ಚೈತನ್ಯ ಶ್ರೀ' ಪ್ರಶಸ್ತಿಯನ್ನು ಸ್ಥಾಪಿಸಿತು. ಸಮಾಜದಲ್ಲಿ ಮಾನವ ಹಕ್ಕುಗಳಿಗಾಗಿ, ಸಾಮಾಜಿಕ ನ್ಯಾಯಕ್ಕಾಗಿ, ಕೋಮು ಸೌಹಾರ್ದತೆಗಾಗಿ, ತುಳಿತಕ್ಕೆ ಒಳಗಾದ ಯಾವುದೇ ಸಮುದಾಯದ ಅಭಿವೃದ್ಧಿಗಾಗಿ ಹಾಗೂ ಸಮಾಜ ಸೇವೆಯಲ್ಲಿ ಗಣನೀಯ ಸೇವೆ ಸಲ್ಲಿಸಿ ವಿಶೇಷ ಸಾಧನೆಗೈದ ಸಾಧಕರನ್ನು ಗುರುತಿಸಿ, ಸನ್ಮಾನಿಸಿ ಪ್ರೋತ್ಸಾಹಿಸುವುದು ಈ ಪ್ರಶಸ್ತಿಯ ಪ್ರಮುಖ ಉದ್ದೇಶ.

2014ರ ವರ್ಷದಲ್ಲಿ 'ನಾನು ಪ್ರಾಣ ಇರುವವರೆಗೆ ಜಗದ್ಗುರು ಎಂದು ಕರೆಸಿಕೊಳ್ಳುವದಿಲ್ಲ, ಪಲ್ಲಕ್ಕಿ ಹತ್ತುವುದಿಲ್ಲ ಹಾಗೂ ಕಿರೀಟ ಧರಿಸುವುದಿಲ್ಲ' ಎಂದು ಪ್ರತಿಜ್ಞೆ ಮಾಡಿ ಅದರಂತೆ ನಡೆಯುತ್ತಾ,



'ಒಂದೇ ಒಂದು ಜಾತಿ ಮಾನವ ಜಾತಿ, ಒಂದೇ ಒಂದು ಧರ್ಮ ಮಾನವ ಧರ್ಮ' ಎಂಬ ತತ್ವವನ್ನು ಪಾಲಿಸಿಕೊಂಡು ಬಂದಿರುವ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕಿನಲ್ಲಿರುವ ಶ್ರೀ ನಿಡುಮಾಮಿಡಿ ಮಹಾಸಂಸ್ಥಾನ ಮಠದ 40ನೇ ಪೀಠಾಧಿಪತಿಗಳಾಗಿರುವ ಶ್ರೀ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರ ಸಮಾನತೆ, ಸಾಮಾಜಿಕ ನ್ಯಾಯ, ಕೋಮು ಸೌಹಾರ್ದತೆ ಹಾಗೂ ಮಾನವೀಯ ಮೌಲ್ಯಗಳ ಸೇವೆಗಳನ್ನು ಪರಿಗಣಿಸಿ ಅವರಿಗೆ ಮೊದಲನೆಯ 'ಚೈತನ್ಯ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

2015ರಲ್ಲಿ 'ನರ್ಮದಾ ಬಚಾವೋ ಆಂದೋಲನ'ದ ಪ್ರಮುಖ ರೂವಾರಿ ಹಾಗೂ ಜಗತ್ತು ಕಂಡ ಖ್ಯಾತ ಪರಿಸರವಾದಿ ಮೇಧಾ ಪಾಟ್ಕರ್‌ರವರ ಸ್ವಾರ್ಥರಹಿತ ಹೋರಾಟವನ್ನು ಪರಿಗಣಿಸಿ 'ಚೈತನ್ಯ ಶ್ರೀ' ಪ್ರಶಸ್ತಿಯಿಂದ ಪುರಸ್ಕರಿಸಲಾಯಿತು. ಮುಂಬೈ



ನಗರದ ಟಾಟಾ ಸಮಾಜ ವಿಜ್ಞಾನ ಸಂಸ್ಥೆಯಿಂದ ಸಮಾಜ ಸೇವಾಕಾರ್ಯ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದು ಸಂಶೋಧಕಿಯಾಗಿ, ಪ್ರಾಧ್ಯಾಪಕಿಯಾಗಿ ಸೇವೆ ಸಲ್ಲಿಸಿ ಸಮಾಜದ ಏಳಿಗೆಗಾಗಿ ತಮ್ಮ ಬದುಕನ್ನೇ ಮುಡಿಪಾಗಿಟ್ಟವರು. ಸರ್ದಾರ್ ಸರೋವರ ಯೋಜನೆಯಲ್ಲಿ ನರ್ಮದಾ ನದಿಗೆ ಆಣೆಕಟ್ಟು ಕಟ್ಟಿ ಅಲ್ಲಿಯ ಆದಿವಾಸಿಗಳು, ರೈತರು, ಬುಡಕಟ್ಟು ಜನರು ಹಾಗೂ ಪರಿಸರಕ್ಕೆ ಅನ್ಯಾಯವಾದಾಗ ಅವರ ರಕ್ಷಣೆಗಾಗಿ ಹಾಗೂ ಹಕ್ಕುಗಳಿಗಾಗಿ ನರ್ಮದಾ ಬಚಾವೋ ಆಂದೋಲನವನ್ನು ಹುಟ್ಟು ಹಾಕಿ ಇಂದಿಗೂ ಹೋರಾಟ ಮಾಡುತ್ತಿರುವ ಅವರ ಅಮೋಘ ಸೇವೆಗೆ 'ಚೈತನ್ಯ ಶ್ರೀ' ಗರಿ ದೊರೆತಾಗ ಪ್ರಶಸ್ತಿಗೂ ಕೂಡ ಸಾರ್ಥಕತೆಯ ಭಾವನೆ ಮೂಡಿದ್ದು ನಿಜ.

2018ರ 'ಚೈತನ್ಯ ಶ್ರೀ' ಪ್ರಶಸ್ತಿಯನ್ನು ಸಮಾಜಪ್ರೇಮಿ, ಮಾನವ ಧರ್ಮ ಪ್ರತಿಪಾದಕ, ಬಡವರ ಬಂಧು, ಅಸಂಖ್ಯಾತ



ಉದ್ಯಮಿ ಶ್ರೀ ರೊನಾಲ್ಡ್ ಕೊಲಾಸೊ ಇವರಿಗೆ ಪ್ರದಾನ ಮಾಡಿ ಗೌರವಿಸಲಾಯಿತು. ಪ್ರಶಸ್ತಿಯನ್ನು ಪಡೆದ ಶ್ರೀ ರೊನಾಲ್ಡ್ ಕೊಲಾಸೊರವರು ಸಂಸ್ಥೆಯ 30 ಸಂವತ್ಸರಗಳ ಸಂಭ್ರಮಾಚರಣೆಯಲ್ಲಿ ತಮ್ಮ ಜೀವನವನ್ನೇ ಉದಾಹರಣೆಯಾಗಿಟ್ಟುಕೊಂಡು ತಮ್ಮ ಅನಿಸಿಕೆಗಳನ್ನು ಫಲಾನುಭವಿಗಳೊಂದಿಗೆ ಹಂಚಿಕೊಳ್ಳುವಾಗ ದೇವರು ನಮಗೆ ನೀಡಿದ ಸಂಪತ್ತಿನಲ್ಲಿ ಸ್ವಲ್ಪ ಭಾಗ ಪರರಿಗೂ ಸೇರಿದ್ದಾಗಿದೆ, ನಾವು ಪರರಿಗೆ ಸೇರಿದ್ದನ್ನು ಉದಾರ ಮನಸ್ಸಿನಿಂದ ಪರರಿಗೆ ನೀಡಲು ಮುಂದಾದಾಗ ದೇವರು ನಮಗೆ ಧಾರಾಳವಾಗಿ ನೀಡುತ್ತಾರೆ ಎಂದು ನುಡಿದರು.

# ಸಂಸ್ಥೆ ಸಾಗಿದ ಹಾದಿ





ಸೋಶಿಯಲ್ ಸರ್ವಿಸ್
UJJIVANA

# ಸಂಸ್ಥೆಯ 30ರ ಸಂಭ್ರಮದ ಮಧುರ ಕ್ಷಣಗಳು



# ‘ಭರವಸೆಯ ಜೀವನದ ಆಶಯ’ ಮಹಿಳಾ ಅಭ್ಯುದಯ



✍ ಜಗದೀಶ ಕೆ.ಹೆಚ್
ಸಂಯೋಜಕರು

ಮಲೆನಾಡಿನ ಸಿರಿಯ ಮಧ್ಯದಲ್ಲಿ ಕಂಗೊಳಿಸುತ್ತಿರುವ ಎಸ್.ಎಮ್.ಎಸ್.ಎಸ್. ಸಂಸ್ಥೆಯು ಸಮಾಜದಲ್ಲಿ ನ್ಯಾಯ, ಶಾಂತಿ ಹಾಗೂ ಪ್ರೀತಿ ತುಂಬಿದ ನವ ಸಮಾಜದ ‘ದರ್ಶನ’ ಹೊಂದಿ, ಗ್ರಾಮೀಣ ಹಾಗೂ ನಗರ ಕೊಳಚೆ ಪ್ರದೇಶಗಳಲ್ಲಿನ ಹಿಂದುಳಿದ ಅಲ್ಪಸಂಖ್ಯಾತ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಕೃಷಿ ಕೂಲಿ ಕಾರ್ಮಿಕರ, ವಿಕಲಚೇತನರ, ಶೋಷಿತ ಬಡವರ್ಗದ ಜನರ ಶ್ರೇಯೋಭಿವೃದ್ಧಿಗಾಗಿ ಮಹಿಳಾ ಅಭಿವೃದ್ಧಿ ಯೋಜನೆಯನ್ನು ರೂಪಿಸಿತು. ಸಂಸ್ಥೆಯು ಮಹಿಳಾ ಸಂಘಟನೆಯ ಆರಂಭದಲ್ಲಿ ಹಳ್ಳಿಗಳ ಸಮೀಕ್ಷೆ ನಡೆಸಿ ಮಹಿಳೆಯರು ಎದುರಿಸುತ್ತಿರುವ ಸಾಮಾಜಿಕ ಸಮಸ್ಯೆಗಳಾದ ಬಾಲ್ಯವಿವಾಹ, ಲಿಂಗ ತಾರತಮ್ಯ, ಮದ್ಯಪಾನ, ಬಾಲಕಾರ್ಮಿಕತೆ, ಜಾತೀಯತೆ, ಕೂಲಿಯಲ್ಲಿ ತಾರತಮ್ಯ ಮುಂತಾದ ಸಮಸ್ಯೆಗಳನ್ನು ಗುರುತಿಸಿತು. ಹಾಗೆಯೇ ಗ್ರಾಮದಲ್ಲಿ ಸ್ಥಳೀಯ ಸಮಸ್ಯೆಗಳಾದ ಕುಡಿಯುವ ನೀರು, ರಸ್ತೆ, ಸಾರಿಗೆ, ಅಂಗನವಾಡಿ, ಶಾಲೆ, ಆಸ್ಪತ್ರೆ, ಬೀದಿದೀಪ, ಚರಂಡಿ, ಮುಂತಾದ ಸಮಸ್ಯೆಗಳು ಇದ್ದವು. ಮಹಿಳೆಯರು ಕುಟುಂಬ ಮತ್ತು ಸಮಾಜದಲ್ಲಿ ಹಲವಾರು ರೀತಿಯ ಶೋಷಣೆಗಳಿಗೆ ಒಳಗಾಗಿದ್ದರು. ಆಕೆಗೆ ಸಮಾಜದಲ್ಲಿ ಗೌರವ, ಮನ್ನಣೆ, ಸ್ಥಾನಮಾನ ಲಭಿಸುತ್ತಿರಲಿಲ್ಲ. ಸಮಾಜದಲ್ಲಿನ ಹಾನಿಕಾರಕ ಆಚರಣೆ, ಸಂಪ್ರದಾಯ, ಕಟ್ಟುಪಾಡು ಆಕೆಯ ಸರ್ವತೋಮುಖ ಅಭಿವೃದ್ಧಿಗೆ ಅಡಚಣೆಗಳಾಗಿದ್ದವು.

1989ನೇ ಇಸವಿಯಲ್ಲಿ ಆರಂಭಗೊಂಡ ಈ ಸಂಸ್ಥೆಯು ದೀನ ದಲಿತರ, ಶೋಷಿತರ ಅಲ್ಪಸಂಖ್ಯಾತರ, ಹಿಂದುಳಿದವರ, ವಿಕಲಚೇತನರ ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಸರ್ವ ಜನರ ಸರ್ವಾಂಗೀಣ ಅಭಿವೃದ್ಧಿಗೆ ತನ್ನನ್ನೇ ಸಮರ್ಪಿಸಿಕೊಂಡಿದೆ. ಮೂರು ಜಿಲ್ಲೆಗಳಲ್ಲಿರುವ ಸುಮಾರು 193 ಗ್ರಾಮ ಪಂಚಾಯತ್‌ಗಳ 667 ಹಳ್ಳಿಗಳಲ್ಲಿ ಯಾವುದೇ ಜಾತಿ, ಮತ, ಕುಲ, ಲಿಂಗ ಭೇದವಿಲ್ಲದೆ ವಿವಿಧ ಕಾರ್ಯಕ್ರಮಗಳ ಮೂಲಕ ಜನರ ಅಭಿವೃದ್ಧಿ, ಅಗತ್ಯಗಳಿಗಾಗಿ ಶ್ರಮಿಸುತ್ತಿದೆ. ಸಂಸ್ಥೆಯು ಈ ವರ್ಗದ ಏಳಿಗೆಗಾಗಿ ಸಾಮಾಜಿಕ ಹಾಗೂ ಆರ್ಥಿಕ ಸಬಲೀಕರಣದ ಕಾರ್ಯಕ್ರಮಗಳನ್ನು ಮಹಿಳಾ ಸಂಘಗಳ ಮೂಲಕ ರೂಪಿಸಿ ಅರಿವು ಮತ್ತು ಮಾಹಿತಿಗಳ ಮುಖಾಂತರ ಮಹಿಳೆಯರನ್ನು ಸಶಕ್ತರನ್ನಾಗಿಸುತ್ತಿದೆ.

**ಸಂಸ್ಥೆಯ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು**

**1. ಮಹಿಳಾ ಸಂಘಟನೆ**

ಎಸ್.ಎಮ್.ಎಸ್.ಎಸ್.ಸಂಸ್ಥೆಯು ಕಳೆದ 30 ವರ್ಷಗಳಿಂದ ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವ ಹಿಂದುಳಿದ ವರ್ಗ, ಅಲ್ಪ ಸಂಖ್ಯಾತ, ಪರಿಶಿಷ್ಟ ಜಾತಿ/ಪಂಗಡಕ್ಕೆ ಸೇರಿದ, ಕೃಷಿ ಕೂಲಿ ಕಾರ್ಮಿಕ, ಶೋಷಿತ, ವಿಕಲಚೇತನ ಮಹಿಳೆಯರನ್ನು ಸಂಘಟಿಸಿ 1,080 ಸ್ವ–ಸಹಾಯ ಸಂಘಗಳನ್ನು ರಚಿಸಿದೆ. ಈ ಸ್ವ–ಸಹಾಯ ಸಂಘಗಳಲ್ಲಿ 18,160 ಮಹಿಳೆಯರು ಸಂಘಟಿತರಾಗಿದ್ದಾರೆ. 193



ಗ್ರಾಮ ಪಂಚಾಯತಿಗಳ 667 ಗ್ರಾಮಗಳಲ್ಲಿ ಮಹಿಳೆಯರ, ಅವರ ಕುಟುಂಬಗಳ ಹಾಗೂ ಸಮುದಾಯದ ಸಮಸ್ಯೆಗಳನ್ನು ಸ್ವ–ಸಹಾಯ ಸಂಘಗಳ ಮೂಲಕ ಗುರುತಿಸಿ ಆದ್ಯತಾನುಸಾರವಾಗಿ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಪರಿಹಾರವನ್ನು ಕಂಡುಕೊಳ್ಳಲಾಗಿದೆ. ಮಹಿಳೆಯರು ಸ್ವ–ಸಹಾಯ ಸಂಘಗಳಲ್ಲಿ ಅರಿವು ಮಾಹಿತಿ ಹೊಂದಿ ಅಕ್ಷರ ಜ್ಞಾನ ಹೊಂದಿದ್ದಾರೆ ಹಾಗೂ ಓದಲು ಬರೆಯಲು ಕಲಿತಿದ್ದಾರೆ. ಈಗಾಗಲೇ ರೂ. 8,60,00,000/–ಗಳ ಉಳಿತಾಯ ಸಂಗ್ರಹಿಸಿದ್ದಾರೆ. ಮಹಿಳೆಯರು ಸಂಘಗಳಿಂದ ಆಂತರಿಕ ಸಾಲ, ಬ್ಯಾಂಕ್ ಸಾಲ, ಸಹಕಾರಿ ಸಾಲ, ಕಿರು ಸಾಲ ಯೋಜನೆಯ ಮೂಲಕ ಸಾಲ ಸೌಲಭ್ಯ ಪಡೆದು ವಿವಿಧ ಆದಾಯ ಗಳಿಕೆಯ ಚಟುವಟಿಕೆಗಳನ್ನು ಕೈಗೊಂಡಿದ್ದಾರೆ.

**2. ಹಿಂದುಳಿದ ಮತ್ತು ಅಲ್ಪ ಸಂಖ್ಯಾತ ಮಹಿಳೆಯರಿಗೆ ಸಂಸ್ಥೆಯ ಕಾರ್ಯಕ್ರಮಗಳು ಹಾಗೂ ಸಾಧನೆಗಳು**

i. **ಆರ್ಥಿಕ ಸಬಲೀಕರಣಕ್ಕಾಗಿ ಕೈಗೊಂಡ ಕಾರ್ಯಕ್ರಮಗಳು**

- ಸರ್ಕಾರಿ ಮತ್ತು ಸರ್ಕಾರೇತರ ಇಲಾಖಾ ಸೌಲಭ್ಯಗಳ ಬಗ್ಗೆ ಕಾರ್ಯಕ್ಷೇತ್ರದಲ್ಲಿ ತರಬೇತಿ, ಮಾಹಿತಿ ಕಾರ್ಯಾಗಾರಗಳನ್ನು ನಡೆಸಲಾಗಿದೆ.
- 46 ಗ್ರಾಮ ಪಂಚಾಯತಿ ಮಟ್ಟದಲ್ಲಿ ಸರ್ಕಾರಿ ಅಧಿಕಾರಿಗಳೊಂದಿಗೆ ಕುಂದುಕೊರತೆಗಳ ಸಮಾಲೋಚನೆ ಸಭೆ ನಡೆಸಲಾಗಿದೆ.

- ಮಹಿಳೆಯರಿಗೆ ಆರ್ಥಿಕ ನೆರವಿಗಾಗಿ/ಸುಧೃಡತೆಗಾಗಿ ಮಹಿಳೆಯರ ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತವನ್ನು (ಮಹಿಳಾ ಬ್ಯಾಂಕ್) ಸ್ಥಾಪಿಸಲಾಗಿದೆ.
- 560 ಸ್ವ–ಸಹಾಯ ಸಂಘಗಳ 4,380 ಮಹಿಳೆಯರು ಉದ್ಯಮ ಶೀಲತಾ ಜಾಗೃತಿ ಮತ್ತು ಉದ್ಯಮ ಶೀಲತಾ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಕಿರು ಉದ್ದಿಮೆಗಳನ್ನು ಕೈಗೊಳ್ಳುವಂತೆ ಪ್ರೇರೇಪಿಸಿದೆ.
- ಉದ್ದಿಮೆಯಲ್ಲಿ ನಿರತರಾಗಿರುವ 2,530 ಮಹಿಳೆಯರಿಗೆ ಕೌಶಲ್ಯಾಧಾರಿತ ತರಬೇತಿಯನ್ನು ನೀಡಲಾಗಿದೆ.
- ಮಹಿಳೆಯರಿಗೆ ಸ್ಥಳೀಯ ಸಂಪನ್ಮೂಲಗಳ ಸದ್ಬಳಕೆಯ ಕುರಿತು ಮಾಹಿತಿ ನೀಡಲಾಗಿದೆ.
- 13,800 ಮಹಿಳೆಯರಿಗೆ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಮಾಹಿತಿ ನೀಡಲಾಗಿದೆ ಮತ್ತು 24 ಹಳ್ಳಿಗಳನ್ನು ಮಾದರಿ ಗ್ರಾಮಗಳನ್ನಾಗಿ ಪರಿವರ್ತಿಸುವ ಕಾರ್ಯ ಪ್ರಗತಿಯಲ್ಲಿದೆ.
- ಮಹಿಳೆಯರು ತಮ್ಮ ಕುಟುಂಬದ ಮೂಲಭೂತ ಅವಶ್ಯಕತೆಗಳಾದ ಆಹಾರ, ಬಟ್ಟೆ, ವಸತಿ ಪೂರೈಸಿಕೊಳ್ಳಲು



ಬೇಕಾದ ಆದಾಯ ಮತ್ತು ಉದ್ಯೋಗಕ್ಕಾಗಿ ಅಗತ್ಯ ಮಾಹಿತಿ ನೀಡಲಾಗಿದೆ.
- ಜಿಲ್ಲಾ ಪಂಚಾಯತಿ/ತಾಲ್ಲೂಕು ಪಂಚಾಯತಿ ಸಹಯೋಗದಲ್ಲಿ 1,630 ಮಹಿಳೆಯರಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನಡೆಸಲಾಗಿದೆ.
- ಹಿಂದುಳಿದ ವರ್ಗದ ಮತ್ತು ಅಲ್ಪಸಂಖ್ಯಾತರ ನಿಗಮದಿಂದ ರಬ್ಬರ್ ಸ್ಟ್ಯಾಪಿಂಗ್ ತರಬೇತಿಯನ್ನು 33 ಸಂಘಗಳ ಸದಸ್ಯರಿಗೆ ನೀಡಲಾಗಿದೆ.
- 260 ಸಂಘಗಳ 1,380 ಸದಸ್ಯರಿಗೆ ಸಂಘಗಳ ಪುನಶ್ಚೇತನಾ ಕಾರ್ಯಾಗಾರ ನಡೆಸಲಾಗಿದೆ.

ii. **ಸಾಧನೆಗಳು**

- 8,860 ಮಹಿಳೆಯರು ವಿವಿಧ ಆದಾಯ ಬರುವ ಚಟುವಟಿಕೆಗಳಲ್ಲಿ ತೊಡಗಿ 5,500 ಮಹಿಳೆಯರು ತಮ್ಮ ತಿಂಗಳ ಆದಾಯವನ್ನು ರೂ. 5,000/–ಗಳಿಂದ ರೂ. 8,000/–ಗಳಿಗೆ ಹೆಚ್ಚಿಸಿಕೊಂಡಿದ್ದಾರೆ.
- 4,200 ಮಹಿಳೆಯರು ಉದ್ಯಮ ಶೀಲತಾ ಜಾಗೃತಿ ಕಾರ್ಯಕ್ರಮದ ಬಗ್ಗೆ ಅರಿವು ಹೊಂದಿ ಕಿರು ಉದ್ದಿಮೆಯಲ್ಲಿ ಕೌಶಲ್ಯ ಹೊಂದಿದ್ದಾರೆ.
- 3,800 ಮಹಿಳೆಯರು ಸ್ಥಳೀಯ ಸಂಪನ್ಮೂಲಗಳ ಕ್ರೋಢೀಕರಣ ಮಾಡುವಲ್ಲಿ ಸಾಮರ್ಥ್ಯ ಹೆಚ್ಚಿಸಿಕೊಂಡಿದ್ದಾರೆ.
- 860 ಸ್ವ–ಸಹಾಯ ಗುಂಪುಗಳು ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದಲ್ಲಿ ಸದಸತ್ವ ಹೊಂದಿ ಸಾಲ ಸೌಲಭ್ಯ ಪಡೆದುಕೊಂಡಿವೆ.



- 82 ಮಹಿಳೆಯರು ಅಂಗನವಾಡಿ ಕಾರ್ಯಕರ್ತರಾಗಿ ಮತ್ತು 36 ಮಹಿಳೆಯರು ಅಂಗನವಾಡಿ ಸಹಾಯಕರಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಆಯ್ಕೆಯಾಗಿದ್ದಾರೆ.
- 7,460 ಮಹಿಳೆಯರು ತಮ್ಮ ಕುಟುಂಬದ ಮೂಲಭೂತ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಬೇಕಾದ ನಿರಂತರ ಆದಾಯ ಹೊಂದಿದ್ದಾರೆ.
- 9,864 ಮಹಿಳೆಯರು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಲ್ಲಿ ಜಾಬ್ ಕಾರ್ಡ್ ಪಡೆದು ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸದಲ್ಲಿ ತೊಡಗಿ ಕನಿಷ್ಠ 60 ದಿನ ಕೆಲಸ ನಿರ್ವಹಿಸಿದ್ದಾರೆ.
- 5,750 ಕುಟುಂಬಗಳು ಸಮತೋಲಿತ ಪೌಷ್ಟಿಕ ಆಹಾರ ಸೇವಿಸುತ್ತಿದ್ದಾರೆ.
- 12,650 ಕುಟುಂಬಗಳು ಬಿ.ಪಿ.ಎಲ್. ಅಂತ್ಯೋದಯ ಕಾರ್ಡು ಹೊಂದಿವೆ.
- 260 ಸಂಘಗಳ ಸದಸ್ಯರಿಗೆ 1380, ಸದಸ್ಯರು ಸಂಘಗಳ ಪುನಶ್ಚೇತನಾ ಅಂಶ ಅರಿತು ಸಂಘಗಳನ್ನು ಸುಸ್ಥಿರಗೊಳಿಸಿದ್ದಾರೆ.

**3. ಸಾಮಾಜಿಕ ಶಿಕ್ಷಣ ಹಾಗೂ ಆರೋಗ್ಯ ಕಾರ್ಯಕ್ರಮಗಳು**

ಸ್ವ–ಸಹಾಯ ಸಂಘಗಳಲ್ಲಿ ಮಹಿಳೆಯರು ಕೇವಲ ಆರ್ಥಿಕ ವಿಷಯಗಳಿಗೆ ಗಮನಕೊಡದೆ ತಮ್ಮ ಹಾಗೂ ತಮ್ಮ

ಸಮುದಾಯದ ಅಭಿವೃದ್ಧಿ ಹಾಗೂ ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದ್ದಾರೆ. ಮಹಿಳೆಯರಿಗೆ ಸಾಮಾಜಿಕ ಶಿಕ್ಷಣ ಹಾಗೂ ಆರೋಗ್ಯ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಹಲವಾರು ಅರಿವು ಮಾಹಿತಿ ತರಬೇತಿಗಳ ಮೂಲಕ ಮಹಿಳೆಯರನ್ನು ಜಾಗೃತರನ್ನಾಗಿಸಿ ಅವರ ಸಾಮರ್ಥ್ಯ ವರ್ಧನೆಗೆ ಪೂರಕವಾದ ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ಹಮ್ಮಿಕೊಳ್ಳಲಾಗಿದೆ.

- ಅಕ್ರಮ ಮದ್ಯ ಮಾರಾಟವನ್ನು ವಿರೋಧಿಸಿ ಪ್ರತಿಭಟನೆ ಮಾಡಿದ್ದಾರೆ.



- 360 ಗ್ರಾಮಗಳಲ್ಲಿ ಶಿಕ್ಷಣದ ಮಹತ್ವದ ಕುರಿತು ಅರಿವು ಕಾರ್ಯಕ್ರಮ ನಡೆಸಲಾಗಿದೆ.
- 10,600 ಮಹಿಳೆಯರಿಗೆ ಸಂಘದ ಸಭೆಗಳಲ್ಲಿ ವಿವಿಧ ವಿಧಾನಗಳ ಮೂಲಕ ಸಹಿ ಮಾಡಲು, ಓದಲು, ಬರೆಯಲು ಕಲಿಸಲಾಗಿದೆ.
- 6,400 ಮಹಿಳೆಯರಿಗೆ ಆರೋಗ್ಯ ರಕ್ಷಣೆಯ ಹಕ್ಕುಗಳ ಬಗ್ಗೆ ತರಬೇತಿ ನೀಡಲಾಗಿದೆ.
- 52 ಪಂಚಾಯತಿ ಮಟ್ಟದ ಒಕ್ಕೂಟಗಳಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಆರೋಗ್ಯ ಅರಿವು ಕಾರ್ಯಕ್ರಮಗಳನ್ನು ನಡೆಸಲಾಗಿದೆ.
- 280 ವಿವಿಧ ಸ್ಥಳಗಳಲ್ಲಿ ಮಹಿಳಾ ಹಕ್ಕುಗಳ ಬಗ್ಗೆ ತರಬೇತಿ ನಡೆಸಲಾಗಿದೆ.
- 630 ಸಂಘಗಳಲ್ಲಿ ಮಹಿಳಾ ದೌರ್ಜನ್ಯ ತಡೆ ಕಾಯ್ದೆ ಬಗ್ಗೆ ತರಬೇತಿ ನೀಡಲಾಗಿದೆ.
- 330 ಸಂಘ ಮತ್ತು ಒಕ್ಕೂಟಗಳ ಮಟ್ಟಗಳಲ್ಲಿ ಮಹಿಳಾ ಸಾಂತ್ವನ ಮತ್ತು ಕೌಟುಂಬಿಕ ಸಲಹಾ ಕೇಂದ್ರಗಳ ಬಗ್ಗೆ ಮಾಹಿತಿ ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲಾಗಿದೆ.
- 620 ಸಂಘಗಳಲ್ಲಿ ಗರ್ಭಿಣಿ ಬಾಣಂತಿಯರಿಗೆ ಆರೋಗ್ಯದ ಮುಂಜಾಗೃತಾ ಕ್ರಮ ಮತ್ತು ಲಸಿಕೆಗಳ ಬಗ್ಗೆ ಮಾಹಿತಿ ನೀಡಲಾಗಿದೆ.
- 1,080 ಸಂಘಗಳ ಮಹಿಳೆಯರಿಗೆ ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಸಂಬಂಧಿಸಿದ ಸಾಮರ್ಥ್ಯ ವರ್ಧನಾ ತರಬೇತಿ ನಡೆಸಲಾಗಿದೆ
- 860 ಸಂಘಗಳ 7,200 ಮಹಿಳೆಯರಿಗೆ ನಾಯಕತ್ವ ಹಾಗೂ ಸಂವಹನ ಕಲೆಗಳ ಬಗ್ಗೆ ತರಬೇತಿ ನಡೆಸಲಾಗಿದೆ.
- 80 ಗ್ರಾಮ ಪಂಚಾಯತಿ ಮತ್ತು 28 ವಾರ್ಡ್ ಮಟ್ಟದಲ್ಲಿ ಆರೋಗ್ಯ ತಪಾಸಣಾ ಶಿಬಿರಗಳನ್ನು ನಡೆಸಲಾಗಿದೆ.
- ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಹಯೋಗದಲ್ಲಿ 2,600 ಮಹಿಳೆಯರಿಗೆ ಮಹಿಳಾ ಹಕ್ಕುಗಳು ಸರ್ಕಾರಿ ಸೌಲಭ್ಯಗಳು, ಮಹಿಳಾ ಸ್ವಾವಲಂಬನೆಯಲ್ಲಿ ಸ್ವ–ಸಹಾಯ ಸಂಘಗಳ ಪಾತ್ರ ಕುರಿತು ವಿಚಾರ ಸಂಕೀರಣ ನಡೆಸಲಾಗಿದೆ.
- ಲಯನ್ಸ್ ಕ್ಲಬ್ ಮತ್ತು ರೋಟರಿ ಕ್ಲಬ್ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣೆ, ದಂತ ಚಿಕಿತ್ಸೆ ಮತ್ತು ತಪಾಸಣೆ, ನೇತ್ರ ತಪಾಸಣೆ ಶಿಬಿರಗಳನ್ನು ನಡೆಸಲಾಗಿದೆ.
- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಮಾನಸಿಕ ಆರೋಗ್ಯ, ಮಧುಮೇಹ ಮತ್ತು ರಕ್ತದೊತ್ತಡ, ಸಾಂಕ್ರಮಿಕ ಮತ್ತು ಅಸಾಂಕ್ರಮಿಕ ರೋಗಗಳ ಕುರಿತು ಜಾಗೃತಿ ಕಾರ್ಯಕ್ರಮದ ಕುರಿತು ತರಬೇತಿ ನೀಡಲಾಗಿದೆ.



- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ವಿಶ್ವ ಕ್ಷಯರೋಗ ದಿನಾಚರಣೆ, ವಿಶ್ವ ಜನಸಂಖ್ಯೆ ದಿನಾಚರಣೆ, ವಿಶ್ವ ಏಡ್ಸ್ ದಿನಾಚರಣೆ, ನಡೆಸಲಾಯಿತು.
- 63 ಗ್ರಾಮ ಪಂಚಾಯತಿ ಮಟ್ಟದಲ್ಲಿ ವಿಶ್ವ ಶೌಚಾಲಯ ದಿನಾಚರಣೆ ನಡೆಸಲಾಗಿದೆ.

**ಸಾಧನೆಗಳು**

- ಸೂಗೂರು, ಕಲ್ಲುಕೊಪ್ಪ, ಚಾಮುಂಡಿಪುರದಲ್ಲಿ ಅಕ್ರಮ ಮದ್ಯ ಮಾರಾಟವನ್ನು ಸಂಪೂರ್ಣ ನಿಷೇಧಿಸಿದ್ದಾರೆ.
- 580 ಮಹಿಳೆಯರು ವಿವಿಧ ವಿಷಯಗಳಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿದ್ದಾರೆ.
- 2,080 ಹಿಂದುಳಿದ ಹಾಗೂ ಶೋಷಿತ ವರ್ಗದವರು ಲಸಿಕಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ 4,600 ಮಕ್ಕಳು ಮತ್ತು 3,630 ಗರ್ಭಿಣಿ ಮಹಿಳೆಯರಿಗೆ ಲಸಿಕೆ ಹಾಕಿಸಲಾಗಿದೆ.

- 4,900 ಮಹಿಳೆಯರು "ಆಶಾ" ಕಾರ್ಯಕ್ರಮದಲ್ಲಿ ಭಾಗವಹಿಸಿ 660 ಮಹಿಳೆಯರು ಆಶಾ ಕಾರ್ಯಕರ್ತೆಯರಾಗಿದ್ದಾರೆ.
- 95% ರಷ್ಟು ಅಂಗವಿಕಲ ಮಕ್ಕಳ ಜನನ ಪ್ರಮಾಣದಲ್ಲಿ ಇಳಿಮುಖವಾಗಿದೆ.
- 95% ರಷ್ಟು ಕುಟುಂಬಗಳಲ್ಲಿ ಗರ್ಭಿಣಿಯರ ಮರಣ ಪ್ರಮಾಣದಲ್ಲಿ ಕಡಿಮೆಯಾಗಿದೆ.
- 6,600 ಮಹಿಳೆಯರು ಪ್ರಾಥಮಿಕ ಆರೋಗ್ಯ ಕೇಂದ್ರದ ಜವಾಬ್ದಾರಿ ಮತ್ತು ಲಭ್ಯ ಸೌಲಭ್ಯಗಳ ಬಗ್ಗೆ ಮಾಹಿತಿ ಹೊಂದಿ ಆರೋಗ್ಯ ಸೇವೆ ಮತ್ತು ಆರೋಗ್ಯ ಹಕ್ಕುಗಳನ್ನು ಪಡೆಯುತ್ತಿದ್ದಾರೆ.
- 565 ಹಿಂದುಳಿದ ಮತ್ತು ದಲಿತ ಕುಟುಂಬಗಳ ಜನರು ಗ್ರಾಮ ಆರೋಗ್ಯ ಸಮಿತಿ ಮತ್ತು ಗ್ರಾಮ ಆರೋಗ್ಯ ಮತ್ತು ನೈರ್ಮಲ್ಯ ಸಮಿತಿಗಳಲ್ಲಿ ಸದಸ್ಯರಾಗಿದ್ದಾರೆ.
- 60% ರಷ್ಟು ಮಹಿಳೆಯರು ತಮ್ಮ ಆರೋಗ್ಯ ಮಟ್ಟದಲ್ಲಿ ಸುದಾರಣೆಯನ್ನು ಕಂಡುಕೊಂಡಿದ್ದಾರೆ.
- 7,280 ಮಹಿಳೆಯರು ಹೆಚ್.ಐ.ವಿ/ಏಡ್ಸ್ ಹರಡುವ ಬಗ್ಗೆ ಮತ್ತು ಅದರಿಂದ ರಕ್ಷಿಸಿಕೊಳ್ಳುವ ವಿಧಾನಗಳ ಬಗ್ಗೆ ತಿಳಿದಿದ್ದಾರೆ.
- 60% ರಷ್ಟು ಮಹಿಳೆಯರು ತಮ್ಮ ಕುಟುಂಬದ ಹಾಗೂ ಸಮುದಾಯದ ಮೇಲೆ ಪ್ರಭಾವ ಬೀರುವ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ಗಳಿಸಿದ್ದಾರೆ.
- ನಮ್ಮ ಎಲ್ಲಾ ಕ್ಷೇತ್ರಗಳಲ್ಲಿ ಹೆಣ್ಣು ಮಕ್ಕಳು ಉನ್ನತ ಶಿಕ್ಷಣದ ಬಗ್ಗೆ ಮಾಹಿತಿ ಹೊಂದಿ 3,080 ಹೆಣ್ಣು ಮಕ್ಕಳು ವೃತ್ತಿಪರ ಮತ್ತು ತಾಂತ್ರಿಕ ಶಿಕ್ಷಣ ಪಡೆದಿದ್ದಾರೆ.
- 2,030 ಶಾಲೆ ಬಿಟ್ಟ ಮಕ್ಕಳನ್ನು ಗುರುತಿಸಿ, ಮತ್ತು 1,560 ಅರ್ಧದಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಸೇರಿಸಲಾಗಿದೆ.
- 780 ಮಹಿಳೆಯರು ಶಾಲಾ ಮಧ್ಯಾಹ್ನದ ಬಿಸಿ ಊಟದ ಕಾರ್ಯಕ್ರಮದಲ್ಲಿ ಕಾರ್ಯಕರ್ತೆಯರಾಗಿ ಕೆಲಸ ಮಾಡುತ್ತಿದ್ದಾರೆ.
- 670 ಮಕ್ಕಳು ಬಾಲಕಾರ್ಮಿಕತೆಯಿಂದ ಮುಕ್ತರಾಗಿದ್ದಾರೆ.
- 1,340 ಮಹಿಳೆಯರು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಲ್ಲಿ ಸದಸ್ಯರಾಗಿ ಉತ್ತಮ ಗುಣಮಟ್ಟದ ಶಿಕ್ಷಣದಲ್ಲಿ ತೊಡಗಿದ್ದಾರೆ.
- 460 ಮಹಿಳೆಯರು ನ್ಯಾಯ ಬೆಲೆ ಅಂಗಡಿಯ ಆಹಾರ ಜಾಗೃತಿ ಸಮಿತಿಯ ಸದಸ್ಯರಾಗಿ ನ್ಯಾಯ ಬೆಲೆಯ ಲೋಪದೋಷಗಳನ್ನು ಸರಿಪಡಿಸಿಕೊಂಡಿದ್ದಾರೆ.
- ಶಿವಮೊಗ್ಗ ಜಿಲ್ಲೆಯ 30 ಹಳ್ಳಿಗಳಲ್ಲಿ 271 ಹೆಚ್.ಐ.ವಿ./ಏಡ್ಸ್ ಬಾಧಿತ ಮಹಿಳೆಯರನ್ನು ಹಾಗೂ 72 ಹೆಚ್.ಐ.ವಿ./ಏಡ್ಸ್ ಬಾಧಿತ ಮಕ್ಕಳನ್ನು ಗುರುತಿಸಿ ಅವರಿಗೆ ಬೆಂಬಲ ಮತ್ತು ಆರೈಕೆ ಹಾಗೂ ವಿವಿಧ ಸಮಾನ ಮನಸ್ಕ ಸ್ವಯಂ ಸೇವಾ ಸಂಸ್ಥೆಗಳಿಗೆ ಶಿಫಾರಸ್ಸು ಮಾಡಲಾಗಿದೆ.
- ಹೆಚ್.ಐ.ವಿ./ಏಡ್ಸ್ ಬಾಧಿತರಿಗೆ ಸಂಸ್ಥೆಯ ವತಿಯಿಂದ ಪೌಷ್ಠಿಕ ಆಹಾರ, ಔಷಧಿ ಮತ್ತು ಚಿಕಿತ್ಸಾ ವೆಚ್ಚವನ್ನು ಭರಿಸುವುದು, ರಕ್ತ ಪರೀಕ್ಷೆ ಮಾಡಿಸುವುದು, ಜಿಲ್ಲಾ ಮಟ್ಟದ ಬಾಧಿತ ಗುಂಪಿನ ಸಭೆಗಳನ್ನು ನಡೆಸಿ ಬಾಧಿತರ ಸಮಸ್ಯೆಗಳನ್ನು ಚರ್ಚಿಸಲಾಗಿದೆ.
- ಹೆಚ್.ಐ.ವಿ./ಏಡ್ಸ್ ಬಾಧಿತ ಮಕ್ಕಳ ಶಿಕ್ಷಣಕ್ಕೆ ಪ್ರೋತ್ಸಾಹ ಮತ್ತು ಕಲಿಕಾ ಸಾಮಾಗ್ರಿಗಳನ್ನು ನೀಡಲಾಗಿದೆ ಹಾಗೂ ಪೋಷಕರಿಗೆ ಆದಾಯ ಬರುವ ಚಟುವಟಿಕೆಗಳಿಗೆ ನೆರವು ನೀಡಲಾಗಿದೆ.
- 82 ಗ್ರಾಮ ಪಂಚಾಯತಿ ಮಟ್ಟದಲ್ಲಿ ಮಹಿಳಾ ಸಂಘಗಳು ಸಮುದಾಯದೊಡನೆ ವಿಶ್ವ ಏಡ್ಸ್ ನಿಯಂತ್ರಣಾ ಅರಿವು ದಿನಾಚರಣೆಯನ್ನು ಆಚರಿಸಿದ್ದಾರೆ.
- ಗ್ರಾಮ ಪಂಚಾಯತಿ/ವಲಯ ಹಾಗೂ ತಾಲ್ಲೂಕು ಮಟ್ಟದಲ್ಲಿ ಮಹಿಳಾ ದಿನಾಚರಣೆಗಳನ್ನು ಆಚರಿಸಿ ತಮ್ಮ ಹಕ್ಕುಗಳ ಬಗ್ಗೆ ಜಾಗೃತರಾಗಿದ್ದಾರೆ.

**4. ರಾಜಕೀಯ ಸಬಲೀಕರಣಕ್ಕಾಗಿ ಕೈಗೊಂಡ ಕಾರ್ಯಕ್ರಮಗಳು**

ಮಹಿಳೆಯರಿಗೆ ಸ್ವ-ಸಹಾಯ ಸಂಘ ಹಾಗೂ ಒಕ್ಕೂಟ ಮಟ್ಟದಲ್ಲಿ ನೀಡುತ್ತಿರುವ ವಿವಿಧ ತರಬೇತಿಗಳ ಫಲವಾಗಿ ಮಹಿಳೆಯರು ಗ್ರಾಮ ಸಭೆ/ ವಾರ್ಡ್ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ. ತಮಗೆ ಸಲ್ಲಬೇಕಾಗಿರುವ ಸರ್ಕಾರಿ ಸೌಲಭ್ಯಗಳಿಗಾಗಿ ಧ್ವನಿಯೆತ್ತುತ್ತಿದ್ದಾರೆ ಹಾಗೂ ಸೌಲಭ್ಯಗಳನ್ನು ತಮ್ಮ ಹಕ್ಕಾಗಿ ಪಡೆಯುತ್ತಿದ್ದಾರೆ. ಅನೇಕ ಮಹಿಳೆಯರು ತಮ್ಮ ನಾಯಕತ್ವ ಗುಣಗಳಿಂದ ಇಂದು ಸ್ಥಳೀಯ ಸಮಿತಿಗಳಲ್ಲಿ ಸದಸ್ಯರುಗಳಾಗಿದ್ದಾರೆ. ಪಂಚಾಯತಿ ಚುನಾವಣೆಯಲ್ಲಿ ಅನೇಕ ಮಹಿಳೆಯರು ಸ್ಪರ್ಧಿಸಿ, ಆಯ್ಕೆಯಾಗಿ, ಗ್ರಾಮ ಪಂಚಾಯತಿ ಸದಸ್ಯರುಗಳಾಗಿ ಹಾಗೂ 2 ಸದಸ್ಯರು ತಾಲ್ಲೂಕು ಪಂಚಾಯತಿ ಸದಸ್ಯರುಗಳಾಗಿ ಚುನಾಯಿತರಾಗಿದ್ದಾರೆ. ಆಯ್ಕೆಗೊಂಡ ಸದಸ್ಯರುಗಳು ತಮ್ಮ ಮಹಿಳೆಯರಿಗೆ ಸೌಲಭ್ಯ ದೊರಕಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸುತ್ತಿದ್ದಾರೆ. ಸಂಘದಿಂದ ಆಯ್ಕೆಯಾದ 630ಕ್ಕೂ ಹೆಚ್ಚು ಮಹಿಳೆಯರಿಗೆ ಗ್ರಾಮ ಪಂಚಾಯತಿ ಚುನಾವಣೆಯ ಪೂರ್ವಭಾವಿ ಸಿದ್ಧತೆ ಮಾಡಲಾಗಿದೆ.

- 630ಕ್ಕೂ ಹೆಚ್ಚು ಮಹಿಳೆಯರಿಗೆ ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಗೆಲ್ಲುವ ವಿವಿಧ ಕಾರ್ಯತಂತ್ರಗಳ ಬಗ್ಗೆ ತರಬೇತಿ ನೀಡಲಾಗಿದೆ.
- ಚುನಾವಣೆಯಲ್ಲಿ ವಿಜೇತರಾದ 250 ಮಹಿಳೆಯರಿಗೆ 2 ಹಂತಗಳಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ಹಾಗೂ ಗ್ರಾಮ ಸಭೆ/ ವಾರ್ಡ್ ಸಭೆ/ ಜಮಾಬಂಧಿಯ ಮಹತ್ವದ ಬಗ್ಗೆ ತರಬೇತಿ ನೀಡಲಾಗಿದೆ.

- ಆಯ್ಕೆಯಾದ ಸದಸ್ಯರಿಗೆ ಜಿಲ್ಲಾ ಪಂಚಾಯತಿ ಸಹಯೋಗದಲ್ಲಿ ಸಾಮರ್ಥ್ಯ ವರ್ಧನಾ ತರಬೇತಿ ನಡೆಸಲಾಗಿದೆ.
- 25 ಗ್ರಾಮ ಪಂಚಾಯತಿ ಪ್ರತಿನಿಧಿಗಳಿಗೆ ಬಳಕೆದಾರರ ವೇದಿಕೆಯಿಂದ ಗ್ರಾಹಕರ ಹಿತರಕ್ಷಣಾ ತರಬೇತಿ ಶಿಬಿರ ನಡೆಸಲಾಗಿದೆ.
- 9,800 ಮಹಿಳೆಯರಿಗೆ ವಾರ್ಡ್ ಸಭೆ/ಗ್ರಾಮ ಸಭೆ/ ಜಮಾಬಂಧಿಯ ಬಗ್ಗೆ ತರಬೇತಿ ನೀಡಲಾಗಿದೆ.



- 3,460 ಮಹಿಳೆಯರಿಗೆ ಸ್ಥಳೀಯ ಸಮಿತಿಗಳ ಪಾತ್ರ ಮತ್ತು ಜವಾಬ್ದಾರಿಗಳ ಅರಿವು ಕುರಿತು ತರಬೇತಿ ನೀಡಲಾಗಿದೆ.

**ಸಾಧನೆಗಳು**

- 2,620 ಮಹಿಳೆಯರು ಉತ್ತಮ ನಾಯಕರಾಗಿ ಸ್ಥಳೀಯ ಸಮಸ್ಯೆಗಳ ಪರಿಹಾರದಲ್ಲಿ ತೊಡಗಿದ್ದಾರೆ.
- 3,680 ಮಹಿಳೆಯರು ತಮ್ಮ ಮೂಲಭೂತ ಹಕ್ಕುಗಳನ್ನು ತಿಳಿದುಕೊಂಡು ಪಂಚಾಯತಿಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದಾರೆ.
- 8,550 ಮಹಿಳೆಯರು ಕುಟುಂಬದಲ್ಲಿ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಭಾಗವಹಿಸುತ್ತಿದ್ದಾರೆ.
- 1,870 ಮಹಿಳೆಯರು ಗ್ರಾಮದ ವಿವಿಧ ಸ್ಥಳೀಯ ಸಮಿತಿಗಳಲ್ಲಿ ಸದಸ್ಯರಾಗಿದ್ದಾರೆ.
- ವಾರ್ಡ್/ಗ್ರಾಮ ಸಭೆಗಳಲ್ಲಿ ಹಿಂದುಳಿದ ವರ್ಗದವರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಪರಿಹರಿಸಿದ್ದಾರೆ.
- ಗ್ರಾಮ ಸಭೆಗಳಲ್ಲಿ ಹಿಂದುಳಿದ ವರ್ಗದವರ ಅಭಿವೃದ್ಧಿಗಾಗಿ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಸಮಸ್ಯೆಗಳಿಗೆ ಪರಿಹಾರ ಕಂಡುಕೊಂಡಿದ್ದಾರೆ.
- 385 ಮಹಿಳೆಯರು ಗ್ರಾಮ ಪಂಚಾಯತಿ ಸದಸ್ಯರಾಗಿದ್ದಾರೆ.
- 3,340 ಮಹಿಳೆಯರು ಒಕ್ಕೂಟಗಳಲ್ಲಿ ನಾಯಕರಾಗಿ ರೂಪುಗೊಂಡಿದ್ದಾರೆ.
- 2,760 ಮಹಿಳೆಯರು ಮೌಲ್ಯಾಧಾರಿತ ನಿರ್ಧಾರಗಳನ್ನು ಕೈಗೊಳ್ಳಲು ಶಕ್ತರಾಗಿದ್ದಾರೆ.
- 680 ಮಹಿಳೆಯರು ಸಂಘಗಳನ್ನು ರಚಿಸಿ ಹೊಸಬರಿಗೆ ತರಬೇತಿ ನೀಡಲು ಶಕ್ತರಾಗಿದ್ದಾರೆ.
- 1,620 ಮಹಿಳೆಯರು ಉತ್ತಮ ಆಡಳಿತದ ಮೌಲ್ಯಗಳನ್ನು ತಿಳಿದುಕೊಂಡು ಎಲ್ಲಾ ಹಂತಗಳಲ್ಲಿ ಅವುಗಳನ್ನು ಬಳಸುತ್ತಿದ್ದಾರೆ.
- 865 ಹಿಂದುಳಿದ ವರ್ಗಗಳಿಗೆ ಸೇರಿದ ಕುಟುಂಬದ ಸದಸ್ಯರು ಕೌಟುಂಬಿಕ ದೌರ್ಜನ್ಯ ಕಾಯಿದೆ ಬಗ್ಗೆ ಮಾಹಿತಿ ಹೊಂದಿದ್ದಾರೆ.
- 60 ಸಂಘದ 795 ಮಹಿಳೆಯರು ಕೌಟುಂಬಿಕ ದೌರ್ಜನ್ಯಗಳಿಂದ ಮುಕ್ತರಾಗಿ ಶಾಂತಿ ಸಾಮರಸ್ಯಗಳಿಂದ ಬದುಕುತ್ತಿದ್ದಾರೆ.
- 3,650 ಕುಟುಂಬಗಳು ಎಲ್ಲಾ ರೀತಿಯ ಹಿಂಸೆ ದೌರ್ಜನ್ಯ ಕಿರುಕುಳದಿಂದ ಮುಕ್ತರಾಗಿದ್ದಾರೆ.
- 8,485 ಸಂಘದ ಸದಸ್ಯರ ಕುಟುಂಬಗಳಲ್ಲಿ ಮನೆ ಕೆಲಸಗಳನ್ನು ಗಂಡು ಹೆಣ್ಣಿನ ಮಧ್ಯೆ ಸಮಾನವಾಗಿ ಹಂಚಿಕೊಳ್ಳುತ್ತಿದ್ದಾರೆ.
- 6,600 ಸದಸ್ಯರು ಸಭೆ ಸಮಾರಂಭ ಮತ್ತು ತರಬೇತಿಗಳಲ್ಲಿ ತಮ್ಮ ಮನೆಯಿಂದ ಹೊರಗಡೆ ಭಾಗವಹಿಸಲು ಅವಕಾಶ ಹೊಂದಿದ್ದಾರೆ.
- 9,240 ಸಂಘದ ಸದಸ್ಯರು ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುತ್ತಿದ್ದಾರೆ.
- 5,300 ಮಹಿಳೆಯರು ಬಾಲ್ಯವಿವಾಹದ ದುಷ್ಪರಿಣಾಮಗಳು ಮತ್ತು ಬಾಲ್ಯವಿವಾಹ ನಿಷೇಧ ಕಾನೂನನ್ನು ತಿಳಿದುಕೊಂಡಿದ್ದಾರೆ.

**5. ಪರಿಸರ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳು**

- ಅರಣ್ಯ ಇಲಾಖೆಯ ಸಹಯೋಗದಲ್ಲಿ ಪರಿಸರ ಸಂರಕ್ಷಣೆ ಜಾಗೃತ ಕಾರ್ಯಕ್ರಮ ನಡೆಸಲಾಗಿದೆ.
- 7,395 ಮಹಿಳೆಯರಿಗೆ ಕೈ ತೋಟ ನಿರ್ಮಾಣದ ಬಗ್ಗೆ ಮಾಹಿತಿ ನೀಡಲಾಗಿದೆ.
- 5,825 ಮಹಿಳೆಯರಿಗೆ ಕೃಷಿ ಇಲಾಖಾ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಗಿದೆ.
- 26 ಒಕ್ಕೂಟಗಳ ವ್ಯಾಪ್ತಿಯಲ್ಲಿ ರೈತ ಸಂಪರ್ಕ ಕೇಂದ್ರದ ಸಹಯೋಗದಲ್ಲಿ ಕೃಷಿ ಉತ್ಪನ್ನಗಳ ಬಗ್ಗೆ ಮಾಹಿತಿ ನೀಡಲಾಗಿದೆ.
- ಜಿಲ್ಲಾ ಜಲಸಂವರ್ಧನಾ ಯೋಜನಾ ಇಲಾಖೆಯ ಸಹಯೋಗದಲ್ಲಿ ಒಕ್ಕೂಟದ ಮೂಲಕ ಜಲಾನಯನ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಲಾಗಿದೆ.



- 360 ಸಂಘಗಳ 4,550 ಮಹಿಳೆಯರಿಗೆ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಮತ್ತು ಸದ್ಬಳಕೆಯ ಬಗ್ಗೆ ತರಬೇತಿ ನೀಡಲಾಗಿದೆ.
- 2,800 ಮಹಿಳೆಯರಿಗೆ ಸಾವಯವ ಕೃಷಿ ಪದ್ಧತಿಯ ಮಹತ್ವದ ಬಗ್ಗೆ ತರಬೇತಿ ನೀಡಲಾಗಿದೆ.
- 1,060 ಮಹಿಳೆಯರಿಗೆ ಎರೆಹುಳು ಗೊಬ್ಬರ ತಯಾರಿಕೆಯ ಬಗ್ಗೆ ಪ್ರತ್ಯಕ್ಷಿಕೆ ನೀಡಲಾಗಿದೆ.

**ಸಾಧನೆಗಳು**

- 6,860 ಕುಟುಂಬಗಳು ಪರಿಸರ ರಕ್ಷಣೆ ಮಹತ್ವ ಅರಿತು ಪರಿಸರ ಸಂರಕ್ಷಣೆಯಲ್ಲಿ ತೊಡಗಿದ್ದಾರೆ.
- 4,050 ಮಹಿಳೆಯರು ವಿವಿಧ ಗ್ರಾಮಗಳಲ್ಲಿ ಸಸಿ ನೆಟ್ಟು ಪೋಷಿಸುತ್ತಿದ್ದಾರೆ.
- 12,500 ಕುಟುಂಬಗಳಲ್ಲಿ ಶೌಚಾಲಯ ನಿರ್ಮಿಸಿ ಶೌಚಾಲಯ ಬಳಸುತ್ತಿದ್ದಾರೆ.
- 6,630 ಕುಟುಂಬಗಳು ತಮ್ಮ ಮನೆಗಳಲ್ಲಿ ಕೈತೋಟ ನಿರ್ಮಿಸಿದ್ದಾರೆ.
- 18 ಹಳ್ಳಿಗಳಲ್ಲಿ ಹೊಣೆಗಾರರನ್ನು ಗುರುತಿಸಿ ಹೊಣೆಗಾರರೊಂದಿಗೆ ಮಾದರಿ ಗ್ರಾಮ ನಿರ್ಮಾಣಕ್ಕೆ ಕಿರು ಕ್ರಿಯಾ ಯೋಜನೆ ತಯಾರಿಸಲಾಗಿದೆ.



- 21 ಹಳ್ಳಿಗಳಲ್ಲಿ ನಮ್ಮೂರ ನಾಗರಿಕ ಸಮಿತಿ ರಚಿಸಿ ಸದಸ್ಯರ ಸಹಭಾಗಿತ್ವದಲ್ಲಿ ಸಮುದಾಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
- 980 ಮಹಿಳೆಯರು ಸಾವಯವ ಕೃಷಿ ಪದ್ಧತಿಯ ಬಗ್ಗೆ ತರಬೇತಿ ಹೊಂದಿ ಎರೆಹುಳು ಗೊಬ್ಬರ, ಕೊಟ್ಟಿಗೆ ಗೊಬ್ಬರದ ಮಹತ್ವವನ್ನು ಅರಿತಿದ್ದಾರೆ.
- 12 ಸಂಘಗಳ ಮಹಿಳೆಯರು ಗುಂಪು ಚಟುವಟಿಕೆಯನ್ನು ನಡೆಸಿ ಉತ್ತಮ ಆದಾಯ ಬರುವ ಚಟುವಟಿಕೆಗಳನ್ನು (ಕುರಿ ಸಾಕಾಣಿಕೆ, ಮೀನು ಸಾಕಾಣಿಕೆ, ಚಿಪ್ಸ್ ತಯಾರಿಕೆ, ಇಟ್ಟಿಗೆ ತಯಾರಿಕೆ, ಶಾಮಿಯಾನ ಟೈಲರಿಂಗ್, ಇತ್ಯಾದಿ) ನಡೆಸುತ್ತಿದ್ದಾರೆ.
- 680 ಸಂಘಗಳ ಸುಮಾರು 10,220 ಮಹಿಳೆಯರು ಗ್ರಾಮದ ಶಾಲಾ ಕಾಲೇಜುಗಳ ರಾಷ್ಟ್ರೀಯ ಹಬ್ಬಗಳಲ್ಲಿ ಭಾಗವಹಿಸಿ ಮಕ್ಕಳಿಗೆ ಪುರಸ್ಕಾರ ಹಾಗೂ ಸಿಹಿ ಹಂಚಿಕೆ ಮಾಡಿದ್ದಾರೆ.

**6. ಮಹಿಳೆಯರ ಹಾಗೂ ಅವರ ಕುಟುಂಬಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಇಲಾಖೆಗಳ ಪರಿಚಯ ಮತ್ತು ಬಾಂಧವ್ಯ ಹೊಂದಿ ವಿವಿಧ ಯೋಜನೆಗಳನ್ನು ಪಡೆದ ವಿವರ**

ಮಹಿಳೆಯರು ತಮ್ಮ ಸೌಲಭ್ಯಗಳನ್ನು ತಮ್ಮ ಹಕ್ಕುಗಳನ್ನಾಗಿ ಪಡೆಯಬೇಕು ಎಂಬುದು ಸಂಸ್ಥೆಯ ಮುಖ್ಯ ಉದ್ದೇಶ. ಅಂತೆಯೇ ಮಹಿಳೆಯರಿಗೆ ಸಿಗಬೇಕಾದ ವಿವಿಧ ಸೌಲಭ್ಯಗಳ ಬಗೆಗಿನ ತರಬೇತಿಯ ಫಲಿತಾಂಶವಾಗಿ ಇಂದು ಮಹಿಳೆಯರು ನೇರವಾಗಿ ಸರ್ಕಾರಿ ಇಲಾಖೆಗಳಿಗೆ ಭೇಟಿ ನೀಡಿ ತಮಗೆ



ಸಿಗಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಅಲ್ಪ ಸಂಖ್ಯಾತರ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಇತ್ಯಾದಿ ಇಲಾಖೆಗಳ ಮೂಲಕ ರೂ. 40,03,17,000 ಮೌಲ್ಯದ ಸೌಲಭ್ಯಗಳನ್ನು ಪಡೆದುಕೊಂಡಿದ್ದಾರೆ. ಸಂಸ್ಥೆಯಿಂದ ಪಡೆದ "ಮಾಹಿತಿ ಹಕ್ಕು ಕಾಯ್ದೆ" ತರಬೇತಿಯನ್ನು ಅನುಸರಿಸಿ 285 ಮಹಿಳೆಯರು ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ ತಮಗೆ ಸಿಗಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಸಫಲರಾಗಿದ್ದಾರೆ. ತರಬೇತಿ ಪಡೆದ ನಂತರ 500ಕ್ಕೂ ಅಧಿಕ ಮಹಿಳೆಯರು ಉದ್ಯೋಗ ಖಾತ್ರಿ ಯೋಜನೆಯ ಗುರುತಿನ ಚೀಟಿಯನ್ನು ಪಡೆದಿದ್ದಾರೆ ಹಾಗೂ ಉದ್ಯೋಗ ಖಾತ್ರಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿ ಉದ್ಯೋಗಗಳನ್ನು ಪಡೆಯುತ್ತಿದ್ದಾರೆ. ಸ್ವಾವಲಂಬನ, ಕಟ್ಟಡ ಕಾರ್ಮಿಕರ ಗುರುತಿನ ಚೀಟಿ, ಜನಧನ, ಹೀಗೆ ಎಲ್ಲಾ ಸೌಲಭ್ಯಗಳನ್ನು ಪಡೆಯುವಲ್ಲಿ ಮಹಿಳೆಯರು ಮುಂಚೂಣಿಯಲ್ಲಿದ್ದಾರೆ.

| ಕ್ರ.ಸಂ. | ಯೋಜನೆಯ ಹೆಸರು | ಇಲಾಖೆ | ಫಲಾನುಭವಿಗಳ ಸಂಖ್ಯೆ | ಮೊತ್ತ ರೂ.ಗಳಲ್ಲಿ |
|---|---|---|---|---|
| 1. | ವಿಧವಾ ವೇತನ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 820 | ಮಾಹೆ 500 |
| 2. | ಉದ್ಯೋಗಿನಿ ಯೋಜನೆ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 18 | 1,80,000 |
| 3. | ಸಂಧ್ಯಾ ಸುರಕ್ಷಾ ಯೋಜನೆ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 730 | ಮಾಹೆ 500 |
| 4. | ವಿಕಲಚೇತನರ ಮಾಶಾಸನ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 55 | ಮಾಹೆ 1,000 |
| 5. | ಭಾಗ್ಯ ಲಕ್ಷ್ಮಿ | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 1,050 | 12,60,00,000 |
| 6. | ಜನನಿ ಸುರಕ್ಷಾ | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 280 | 1,96,000 |
| 7. | ಪ್ರಸೂತಿ ಆರೈಕೆ | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 383 | 7,66,000 |
| 8. | ಮಡಿಲು | ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ | 390 | 7,80,000 |
| 9. | ಶವ ಸಂಸ್ಕಾರ ನಿಧಿ | ಗ್ರಾಮ ಪಂಚಾಯತಿ | 110 | 5,50,000 |
| 10. | ಆಶ್ರಯ ಮನೆ | ಗ್ರಾಮ ಪಂಚಾಯತಿ | 1,782 | 21,38,40,000 |
| 11. | ಸುತ್ತು ನಿಧಿ | ಗ್ರಾಮ ಪಂಚಾಯತಿ | 220 ಸಂಘಗಳು | 22,00,000 |
| 12. | ಶೌಚಾಲಯ | ಗ್ರಾಮ ಪಂಚಾಯತಿ | 2,647 | 3,17,64,000 |
| 13. | ತೋಟಗಾರಿಕಾ ಬೆಳೆಗಳಿಗೆ ಅನುದಾನ | ತೋಟಗಾರಿಕಾ ಇಲಾಖೆ | 125 | 6,25,000 |
| 14. | ಹೊಲಿಗೆ ಯಂತ್ರ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನಿಗಮ | 45 | 22,25,000 |
| 15. | ಚೈತನ್ಯ ಸಬ್ಸಿಡಿ ಕಂ. ಸಾಫ್ಟ್ ಲೋನ್ | ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 16 | 1,35,000 |
| 16. | ಗಂಗಾ ಕಲ್ಯಾಣ ಯೋಜನೆ | ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 12 | 12,00,000 |
| 17. | ವೈಯಕ್ತಿಕ ನೀರಾವರಿ ಯೋಜನೆ | ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 34 | 20,40,000 |
| 18. | ಶ್ರಮ ಶಕ್ತಿ ಯೋಜನೆ | ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 23 | 1,38,000 |
| 19. | ಅರಿವು ಯೋಜನೆ | ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 38 | 3,80,000 |
| 20. | ನ್ಯೂ ಸ್ವರ್ಣಿಮಾ ಯೋಜನೆ | ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 6 | 1,20,000 |
| 21. | ವಿದ್ಯಾಭಿವೃದ್ಧಿ ಮತ್ತು ಶೈಕ್ಷಣಿಕ ಸಾಲ | ಡಿ. ದೇವರಾಜ್ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ | 126 | 12,60,000 |
| 22. | ಸ್ವಯಂ ಉದ್ಯೋಗ ಯೋಜನೆ | ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | 86 | 4,30,000 |

| | | | | |
|---|---|---|---|---|
| 23. | ನೇರ ಸಾಲ | ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ | 52 | 2,60,000 |
| 24. | ಎಸ್.ಜಿ.ಎಸ್.ಆರ್.ವೈ | ಗ್ರಾಮ ಪಂಚಾಯತಿ | 52 ಸಂಘಗಳು | 65,00,000 |
| 25. | ಹಿಟ್ಟಿನ ಗಿರಣಿ | ಕೃಷಿ ಇಲಾಖೆ | 36 | 4,32,000 |
| 26. | ಸಿಲಿಂಡರ್ ಗ್ಯಾಸ್ | ಕೃಷಿ ಇಲಾಖೆ | 220 | 11,00,000 |
| 27. | ಬೀಜೋತ್ಪಾದನೆಗೆ ಅನುದಾನ | ಕೃಷಿ ಇಲಾಖೆ | 381 | 7,62,000 |
| 28. | ಕೃಷಿ ಸಲಕರಣೆಗಳು | ಕೃಷಿ ಇಲಾಖೆ | 134 | 5,36,000 |
| 29. | ಅಂಗನವಾಡಿ | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | 26 ಹಳ್ಳಿಗಳು | – |
| 30. | ಸಮುದಾಯ ಭವನ | ತಾಲ್ಲೂಕು ಪಂಚಾಯತಿ | 36 ಹಳ್ಳಿಗಳು | – |
| 31. | ಜಲಾನಯನ ಅಭಿವೃದ್ಧಿ ಕಾರ್ಯಕ್ರಮಗಳು | ಜಿಲ್ಲಾ ಜಲಾನಯನ ಇಲಾಖೆ | 92 ಹಳ್ಳಿಗಳು | – |
| 32. | ಆತ್ಮ ಯೋಜನೆ | ಪಶು ಸಂಗೋಪನಾ ಇಲಾಖೆ | 163 | 16,30,000 |
| 33. | ಎರೆ ಹುಳು ಗೊಬ್ಬರ | ಕೃಷಿ ಇಲಾಖೆ | 97 | 4,85,000 |
| 34 | ಶಾದಿ ಭಾಗ್ಯ | ಅಲ್ಪ ಸಂಖ್ಯಾತರ ಇಲಾಖೆ | 23 | 23,00,000 |
| 35 | ಸ್ವ ಉದ್ಯೋಗ ಸಹಾಯ | ಅಲ್ಪ ಸಂಖ್ಯಾತರ ಇಲಾಖೆ | 565 | 28,25,000 |
| 36 | ಮನಸ್ವಿನಿ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | 16 | 500 ಮಾಹೆ |
| | **ಒಟ್ಟು ಗಳಿಸಿದ ಸರಕಾರಿ ಅನುದಾನ** | | | **40,03,17,000** |

### 7. ಉತ್ತಮ ಆಡಳಿತ ತರುವತ್ತ ಸಂಸ್ಥೆಯ ಕಾರ್ಯಕ್ರಮಗಳು

ಸಂಸ್ಥೆಯು ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗಾಗಿ, ವಿಶೇಷವಾಗಿ ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಯಲ್ಲಿ ತೊಡಗಿ ಸಮಾಜದಲ್ಲಿ ಈ ವರ್ಗದ ಮಹಿಳೆಯರು ತಮ್ಮ ಹಕ್ಕುಗಳನ್ನು ಅರಿತು ಅವುಗಳನ್ನು ಚಲಾಯಿಸಲು ಹಾಗೂ ಗ್ರಾಮದ ಇತರೆ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿ ನಿರ್ಧಾರ ಹಾಗೂ



ನಿರ್ಣಯಗಳನ್ನು ತೆಗೆದುಕೊಳ್ಳುವಂತಾಗಲು ಸಂಸ್ಥೆಯು ಅರಿವು, ಮಾಹಿತಿ ಮತ್ತು ತರಬೇತಿ ಕಾರ್ಯಾಗಾರಗಳ ಮೂಲಕ ಮಹಿಳೆಯರನ್ನು ಸದೃಢರನ್ನಾಗಿಸಿ ಸಮಾಜದ ಮುಖ್ಯ ವಾಹಿನಿಗೆ ತರುವ ನಿಟ್ಟಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

**ಗ್ರಾಮ ಪಂಚಾಯತಿಗಳಲ್ಲಿ ಉತ್ತಮ ಆಡಳಿತ ತರುವತ್ತ ಮಹಿಳೆಯರ ಸಶಕ್ತೀಕರಣ**

- 2,500 ಮಹಿಳೆಯರಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ತರಬೇತಿ ನೀಡಲಾಯಿತು.
- 600 ಮಹಿಳೆಯರು ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಪೂರ್ವಸಿದ್ಧತೆ ನಡೆಸಿ ಅವರನ್ನು ಚುನಾವಣೆಗೆ ಸಜ್ಜುಗೊಳಿಸಲಾಯಿತು.
- ಚುನಾವಣೆಯಲ್ಲಿ ಸ್ಪರ್ಧಿಸಿದ ಮಹಿಳೆಯರಿಗೆ ಗೆಲುವು ಸಾಧಿಸುವ ವಿವಿಧ ಕಾರ್ಯತಂತ್ರಗಳ ಬಗ್ಗೆ ಸಾಮರ್ಥ್ಯ ವರ್ಧನಾ ತರಬೇತಿ ನೀಡಲಾಯಿತು.
- 2,460 ಮಹಿಳೆಯರಿಗೆ ಗ್ರಾಮದ ವಿವಿಧ ಸ್ಥಳೀಯ ಸಮಿತಿಗಳ ಬಗ್ಗೆ ಮಾಹಿತಿ ನೀಡಲಾಯಿತು.
- ಚುನಾವಣೆಯಲ್ಲಿ ವಿಜೇತರಾದ 220 ಸದಸ್ಯರಿಗೆ ಎರಡು ಹಂತದಲ್ಲಿ 'ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೌಲ್ಯಾಧಾರಿತ ನಾಯಕತ್ವ' ತರಬೇತಿ ನೀಡಲಾಯಿತು.
- 21 ಗ್ರಾಮಗಳಲ್ಲಿ ಮಾದರಿ ಗ್ರಾಮದ ಪರಿಕಲ್ಪನೆಯ ಬಗ್ಗೆ ತರಬೇತಿ ನೀಡಲಾಯಿತು.
- ಮಾದರಿ ಗ್ರಾಮಗಳಲ್ಲಿ ಗ್ರಾಮದ ಸಮಸ್ಯೆಗಳ ಪರಿಹಾರಕ್ಕೆ ಕಿರು ಕ್ರಿಯಾಯೋಜನೆ ತಯಾರಾಗಿದೆ.
- 3,300 ಮಹಿಳೆಯರಿಗೆ ಹಕ್ಕು ಆಧಾರಿತ ವಿಧಾನಗಳ ಬಗ್ಗೆ ತರಬೇತಿ ನೀಡಲಾಗಿದೆ.

➢ ಸಂಸ್ಥೆಯ ಕಾರ್ಯಕ್ಷೇತ್ರದಲ್ಲಿರುವಂತಹ 320 ನ್ಯಾಯಬೆಲೆ ಅಂಗಡಿಗಳ ಸಮಸ್ಯೆಗಳನ್ನು ಸಂಘದ ಮಹಿಳೆಯರೆ ಗುರುತಿಸಿ, ಇಲಾಖಾ ಭೇಟಿ ಮಾಡಿ ಪರಿಹಾರ ಕಂಡುಕೊಳ್ಳುವಂತೆ ಸಾಮರ್ಥ್ಯ ವೃದ್ಧಿಸಲಾಗಿದೆ.

➢ 12,300 ಮಹಿಳೆಯರಿಗೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಬಗ್ಗೆ ಮಾಹಿತಿ ನೀಡಲಾಗಿದೆ.

➢ 9,200 ಮಹಿಳೆಯರಿಗೆ ವಾರ್ಡ್ ಸಭೆ/ಗ್ರಾಮ ಸಭೆ/ ಜಮಾಬಂಧಿಗಳ ಬಗ್ಗೆ ತರಬೇತಿ ನೀಡಲಾಗಿದೆ.

➢ 9,100 ಮಹಿಳೆಯರಿಗೆ ಸರ್ಕಾರಿ ಯೋಜನೆಗಳ ಬಗ್ಗೆ ಅರಿವು ಮಾಹಿತಿ ನೀಡಲಾಗಿದೆ.

➢ 6,500 ಮಹಿಳೆಯರಿಗೆ ಮಾಹಿತಿ ಹಕ್ಕು ಕಾಯ್ದೆಯ ಬಗ್ಗೆ ತರಬೇತಿ ನೀಡಲಾಗಿದೆ.

➢ 450 ಮಹಿಳೆಯರಿಗೆ ಗ್ರಾಹಕರ ಹಕ್ಕು ಕಾಯಿದೆಯ ಬಗ್ಗೆ ಜಾಗೃತಿ ಮೂಡಿಸಲಾಗಿದೆ.

**ಸಾಧನೆಗಳು**

- 220 ಮಹಿಳೆಯರು ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.
- ಆಯ್ಕೆಯಾದ ಸದಸ್ಯರು ಸಾಮಾನ್ಯ ಸಭೆಗಳಲ್ಲಿ ಹಾಗೂ ವಾರ್ಡ್ ಸಭೆ/ಗ್ರಾಮ ಸಭೆಗಳಲ್ಲಿ ಪ್ರಮುಖ ನಿರ್ಧಾರ ತೆಗೆದುಕೊಳ್ಳುವಲ್ಲಿ ಶಕ್ತರಾಗಿದ್ದಾರೆ.



- 9,500 ಮಹಿಳೆಯರು ವಾರ್ಡ್ ಸಭೆ/ಗ್ರಾಮ ಸಭೆ/ ಜಮಾಬಂಧಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಿಕೊಂಡಿದ್ದಾರೆ.
- 9,050 ಮಹಿಳೆಯರು ಮಾಹಿತಿ ಹಕ್ಕು ಕಾಯಿದೆ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ.
- 2,136 ಮಹಿಳೆಯರು ಮಾಹಿತಿ ಹಕ್ಕು ಕಾಯಿದೆಯಲ್ಲಿ ಅರ್ಜಿ ಸಲ್ಲಿಸಿದ್ದಾರೆ.
- 22 ನ್ಯಾಯಬೆಲೆ ಅಂಗಡಿಗಳಲ್ಲಿ ಇಲಾಖಾ ಸೂಚಿತ ನಿಯಮಗಳನ್ನು ಪಾಲಿಸಿ ಕಾರ್ಡುದಾರರಿಗೆ ಸಮರ್ಪಕವಾಗಿ ಪಡಿತರ ಧಾನ್ಯಗಳನ್ನು ವಿತರಿಸುತ್ತಿದ್ದಾರೆ.
- ಪ್ರತಿ ಗ್ರಾಮ ಪಂಚಾಯತಿಗಳಲ್ಲಿ ಮಾದರಿ ಗ್ರಾಮಕ್ಕೆ ಉತ್ತಮ ಸಹಕಾರ ದೊರಕಿದೆ.
- 1,080 ಮಹಿಳೆಯರು ಗ್ರಾಮದ ವಿವಿಧ ಸಂಘ ಸಂಸ್ಥೆಗಳಲ್ಲಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.
- ವಿವಿಧ ಕಾರ್ಯಕ್ಷೇತ್ರದಲ್ಲಿ ಮಾದರಿ ಗ್ರಾಮಗಳನ್ನು ಪ್ರೇರೇಪಿಸಿ ಗ್ರಾಮದಲ್ಲಿ ನಮ್ಮೂರ ನಾಗರೀಕ ಸಮಿತಿಯ ಮುಖಾಂತರ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಿದ್ದಾರೆ ಹಾಗೂ ಗ್ರಾಮದ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದಾರೆ.

**8. ಕಿರು ಉದ್ದಿಮೆಯ ಮೂಲಕ ಹಿಂದುಳಿದ ನಿರುದ್ಯೋಗಿ ಮಹಿಳೆಯರ ಸ್ವಾವಲಂಬನೆ**

ಎಸ್.ಎಮ್.ಎಸ್.ಎಸ್.ಸಂಸ್ಥೆಯು ಕಳೆದ 30 ವರ್ಷಗಳಿಂದ ಹಿಂದುಳಿದ ವರ್ಗದ ಮಹಿಳೆಯರ ಏಳಿಗೆಗಾಗಿ ಶ್ರಮಿಸಿ ಅವರನ್ನು ಅರ್ಥಿಕವಾಗಿ ಸಶಕ್ತರನ್ನಾಗಿ ಮಾಡಲು ಹಲವು ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತಿದೆ. ಮಹಿಳೆಯರಿಗೆ ಸಮಾಜದಲ್ಲಿ ಉನ್ನತ ಸ್ಥಾನ ಮಾನಗಳು ಲಭಿಸಲು ಹಾಗೂ ಆರ್ಥಿಕ ಸ್ವಾವಲಂಬನೆ ಸಾಧಿಸಲು ಬೇಕಾದ ಹಲವಾರು ಅರಿವು ಮಾಹಿತಿ ತರಬೇತಿ ಕಾರ್ಯಾಗಾರಗಳ



ಮೂಲಕ ಮಹಿಳೆಯರನ್ನು ಆರ್ಥಿಕವಾಗಿ ಸದೃಢವನ್ನಾಗಿಸಿದೆ ಹಾಗೂ ಅವರ ಜೀವನದಲ್ಲಿ ಸುಸ್ತಿರ ಹಾಗೂ ಸುಭದ್ರ ಜೀವನಕ್ಕಾಗಿ ಹಲವಾರು ಮಾರ್ಗೋಪಾಯಗಳನ್ನು ನೀಡಿ ಈ ಕೆಳಕಂಡ ಕಾರ್ಯಕ್ರಮಗಳನ್ನು ರೂಪಿಸಿದೆ.

- 986 ಸ್ವ-ಸಹಾಯ ಸಂಘಗಳಿಂದ 12,076 ಹಿಂದುಳಿದ ವರ್ಗದ ಮಹಿಳೆಯರ ಸಮೀಕ್ಷೆ ನಡೆಸಿ ಕಿರು ಉದ್ದಿಮೆಗೆ ಗುರುತಿಸಲಾಯಿತು.
- ಕಿರು ಉದ್ದಿಮೆಯಲ್ಲಿ ತೊಡಗುವ 12,076 ಮಹಿಳೆಯರಿಗೆ ಕಿರು ಉದ್ದಿಮೆಯ ಮಹತ್ವದ ಬಗ್ಗೆ ಮಾಹಿತಿ ನೀಡಲಾಯಿತು.
- ಕಿರು ಉದ್ದಿಮೆಯಲ್ಲಿ ಆಸಕ್ತಿಯಿರುವ 5,600 ಬಡ ಹಾಗೂ ಹಿಂದುಳಿದ ಮಹಿಳೆಯರನ್ನು ಆಯ್ಕೆ ಮಾಡಲಾಯಿತು.
- 220 ಸ್ಥಳಗಳಲ್ಲಿ 4,800 ಹಿಂದುಳಿದ ಮಹಿಳೆಯರಿಗೆ ಉದ್ದಿಮೆ ಶೀಲತಾ ಜಾಗೃತಿ ಕಾರ್ಯಕ್ರಮದ ಬಗ್ಗೆ ಅರಿವು ತರಬೇತಿ ನೀಡಲಾಯಿತು.

- 134 ಸ್ಥಳಗಳಲ್ಲಿ 4,030 ಹಿಂದುಳಿದ ಮಹಿಳೆಯರಿಗೆ ಉದ್ಯಮ ಶೀಲತಾ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ತರಬೇತಿ ನೀಡಲಾಯಿತು.
- 20 ಕಡೆಗಳಲ್ಲಿ 3,160 ಮಹಿಳೆಯರಿಗೆ ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಉದ್ದಿಮೆಗೆ ಸಂಬಂಧಿಸಿದ ಕೌಶಲ್ಯಾಧಾರಿತ ತರಬೇತಿ ನೀಡಲಾಯಿತು.
- 1,283 ಕಿರು ಉದ್ದಿಮೆ ಕೈಗೊಳ್ಳುವ ಮಹಿಳೆಯರಿಗೆ ಸ್ಥಳೀಯ ಮಾರುಕಟ್ಟೆ ಸಮೀಕ್ಷೆಯನ್ನು ನಡೆಸಿ ಅಗತ್ಯವಿರುವ ಉದ್ದಿಮೆಗಳ ವಿವರ ಪಡೆಯಲಾಯಿತು.
- 1,283 ಮಹಿಳೆಯರಿಗೆ ಕಿರು ಉದ್ದಿಮೆ ಕೈಗೊಳ್ಳುವವರಿಗೆ ಸಂಸ್ಥೆಯು ರೂ. 2,62,10,000/– ಸಹಾಯ ಧನವನ್ನು ನೀಡಿದೆ.
- ಉದ್ದಿಮೆದಾರರಿಗೆ ಸಂಸ್ಥೆಯು ನಿರಂತರ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಾಡುತ್ತಿದೆ.

**ಕಾರ್ಯಕ್ರಮದಿಂದಾದ ಫಲಿತಾಂಶ/ಪರಿಣಾಮಗಳು**

- 3,586 ಅತಿ ಬಡ ಹಾಗೂ ಹಿಂದುಳಿದ ಮಹಿಳೆಯರು ತಮ್ಮದೇ ಆದ ವೈಯಕ್ತಿಕ ಕಿರು ಉದ್ದಿಮೆಯನ್ನು ಸ್ಥಾಪಿಸಿದ್ದಾರೆ.
- 1,920 ಮಹಿಳೆಯರು ತಮ್ಮ ತಿಂಗಳ ಆದಾಯವನ್ನು ರೂ. 4,500/– ಗಳಿಂದ ರೂ. 5,500/–ಗಳಿಗೆ ಹೆಚ್ಚಿಸಿಕೊಂಡಿದ್ದಾರೆ.
- 2,420 ಮಹಿಳೆಯರು ಪೌಷ್ಟಿಕ ಆಹಾರವನ್ನು ಸೇವಿಸುತ್ತಿದ್ದಾರೆ.



- 3,880 ಹಿಂದುಳಿದ ವರ್ಗದ ಮಹಿಳೆಯರು ತಮ್ಮ ಹೆಸರಿನಲ್ಲಿ ಚರ ಮತ್ತು ಸ್ಥಿರ ಆಸ್ತಿ, ಆರ್‌ಡಿ, ಎಫ್‌ಡಿ, ಜೀವ ವಿಮೆ ಮುಂತಾದ ಸಾಮಾಜಿಕ ಭದ್ರತೆಯನ್ನು ಹೊಂದಿದ್ದಾರೆ.
- 350 ಯಶಸ್ವಿ ಕಿರು ಉದ್ದಿಮೆದಾರರು ಆದಾಯ ಹೆಚ್ಚಿಸಿ ಇತರ ನಿರುದ್ಯೋಗ ಮಹಿಳೆಯರಿಗೆ ಕೆಲಸ ನೀಡುತ್ತಿದ್ದಾರೆ.
- 3,860 ಮಹಿಳೆಯರು ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳಲ್ಲಿ ಜಾಲಬಂಧ ಹೊಂದಿದ್ದಾರೆ.
- 5,860 ಮಹಿಳೆಯರ ಕುಟುಂಬದ ಹೆಣ್ಣು ಮಕ್ಕಳು ವೃತ್ತಿಪರ, ತಾಂತ್ರಿಕ ಶಿಕ್ಷಣ ಮತ್ತು ಉನ್ನತ ವ್ಯಾಸಂಗ ಮಾಡುತ್ತಿದ್ದಾರೆ.
- 4,820 ಮಹಿಳೆಯರು ಗ್ರಾಮದ ವಿವಿಧ ಸ್ಥಳೀಯ ಸಮಿತಿಗಳಲ್ಲಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.
- ಶೇ. 50ರಷ್ಟು ಕುಟುಂಬಗಳಲ್ಲಿ ಗಂಡ ಹೆಂಡತಿ ಸಮಾನವಾದ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಿದ್ದಾರೆ.
- ಹಿಂದುಳಿದ ವರ್ಗದ ಮಹಿಳೆಯರಿಗೆ ಸಮಾಜದಲ್ಲಿ ಗೌರವ ಮತ್ತು ಮನ್ನಣೆ ದೊರಕಿದೆ.

**ವಿವಿಧ ಉದ್ದಿಮೆಗಳನ್ನು ಕೈಗೊಂಡಿರುವವರ ವಿವರ**

| ಕ್ರ. ಸಂ. | ಉದ್ದಿಮೆಯ ಹೆಸರು | ಫಲಾನುಭವಿಗಳ ಸಂಖ್ಯೆ |
|---|---|---|
| 01 | ಕೃಷಿ | 90 |
| 02 | ಅಲ್ಯುಮಿನಿಯಂ ಅಂಗಡಿ | 06 |
| 03 | ಹೈನುಗಾರಿಕೆ | 1,408 |
| 04 | ಅಡಿಕೆ ವ್ಯಾಪಾರ | 16 |
| 05 | ಆಟೋ | 26 |
| 06 | ಬೇಕರಿ ಅಂಗಡಿ | 36 |
| 07 | ಬಾಳೆಹಣ್ಣು ವ್ಯಾಪಾರ | 58 |
| 08 | ಬಳೆ ವ್ಯಾಪಾರ | 16 |
| 09 | ಬಾರ್ ಬೆಂಡಿಂಗ್ | 06 |
| 10 | ಬುಟ್ಟಿ ತಯಾರಿಕೆ | 12 |
| 11 | ಬ್ಯೂಟಿ ಪಾರ್ಲರ್ | 30 |
| 12 | ಬೀಡಿ ತಯಾರಿಕೆ | 26 |
| 13 | ಇಟ್ಟಿಗೆ ತಯಾರಿಕೆ | 19 |
| 14 | ಸೀರೆ ವ್ಯಾಪಾರ | 32 |
| 15 | ಸಾಂಬ್ರಾಣಿ ತಯಾರಿಕೆ | 06 |
| 16 | ಸಿಹಿ ತಿಂಡಿ ತಯಾರಿಕೆ | 16 |
| 17 | ಮೇಣದಬತ್ತಿ ತಯಾರಿಕೆ | 08 |
| 18 | ಕ್ಯಾಂಟೀನ್ | 52 |
| 19 | ಬಡಗಿ | 12 |
| 20 | ಸಿಮೆಂಟ್ ವ್ಯಾಪಾರ | 08 |
| 21 | ಕೋಳಿ ವ್ಯಾಪಾರ | 23 |
| 22 | ಮೆಣಸಿನ ಪುಡಿ | 12 |
| 23 | ಚಿಪ್ಸ್ ವ್ಯಾಪಾರ | 06 |
| 24 | ಬಟ್ಟೆ ವ್ಯಾಪಾರ | 85 |
| 25 | ತೆಂಗಿನಕಾಯಿ ವ್ಯಾಪಾರ | 28 |
| 26 | ಕಂಪ್ಯೂಟರ್ | 08 |
| 27 | ಹತ್ತಿ ವ್ಯಾಪಾರ | 12 |
| 28 | ಎರೆಹುಳ ಗೊಬ್ಬರ | 16 |
| 29 | ಒಣ ಮೀನು ವ್ಯಾಪಾರ | 80 |
| 30 | ಎಲೆಕ್ಟ್ರಿಕಲ್ | 09 |
| 31 | ಕಸೂತಿ | 09 |
| 32 | ಫ್ಯಾನ್ಸಿ ಸ್ಟೋರ್ | 28 |
| 33 | ಕಟ್ಟಿಗೆ ವ್ಯಾಪಾರ | 13 |
| 34 | ಮೀನು ವ್ಯಾಪಾರ | 15 |

| | | |
|---|---|---|
| 35 | ಹಿಟ್ಟಿನ ಗಿರಣಿ | 16 |
| 36 | ಹೂವಿನ ವ್ಯಾಪಾರ | 17 |
| 37 | ಹಣ್ಣಿನ ವ್ಯಾಪಾರ | 22 |
| 38 | ಬಡಗಿ | 18 |
| 39 | ಗೋಣಿ ಚೀಲ ವ್ಯಾಪಾರ | 09 |
| 40 | ಶುಂಠಿ ವ್ಯಾಪಾರ | 05 |
| 41 | ಗ್ಯಾರೇಜ್ | 13 |
| 42 | ಗ್ಯಾಸ್ ರಿಪೇರಿ | 06 |
| 43 | ಕುರಿ ಸಾಕಾಣಿಕೆ | 123 |
| 44 | ಕಸಬರಿಕೆ | 08 |
| 45 | ಗೃಹ ಕೈಗಾರಿಕೆ | 14 |
| 46 | ಹೋಟೆಲ್ | 23 |
| 47 | ಐಸ್ ಕ್ರೀಮ್ | 06 |
| 48 | ಊದಿನಬತ್ತಿ | 53 |
| 49 | ಜೋಳದ ಯಂತ್ರ | 06 |
| 50 | ಕುಷನ್ ತಯಾರಿಕೆ | 04 |
| 51 | ಅಡಿಕೆ ತಟ್ಟೆ ವ್ಯಾಪಾರ | 05 |
| 52 | ಕಬ್ಬಿಣ ವ್ಯಾಪಾರ | 13 |
| 53 | ನಿಂಬೆ ವ್ಯಾಪಾರ | 18 |
| 54 | ಹಾಲಿನ ವ್ಯಾಪಾರ | 38 |
| 55 | ಮಿಕ್ಸಿ ವ್ಯಾಪಾರ | 04 |
| 56 | ಮೊಬೈಲ್ ಅಂಗಡಿ | 05 |
| 57 | ಮೊಬೈಲ್ ಕ್ಯಾಂಟಿನ್ | 12 |
| 58 | ನರ್ಸರಿ | 06 |
| 59 | ಪಾನಿಪುರಿ | 13 |
| 60 | ಹಪ್ಪಳ ತಯಾರಿಕೆ | 05 |
| 61 | ಫಾಸ್ಟ್ ಫುಡ್ | 08 |
| 62 | ಕಿರಾಣಿ ಅಂಗಡಿ | 226 |
| 63 | ಉಪ್ಪಿನಕಾಯಿ ತಯಾರಿಕೆ | 05 |
| 64 | ಪ್ಲಾಸ್ಟಿಕ್ ವ್ಯಾಪಾರ | 12 |
| 65 | ಕೋಳಿ ಸಾಕಾಣಿಕೆ | 07 |
| 66 | ಪ್ರಿಂಟಿಂಗ್ ಪ್ರೆಸ್ | 03 |
| 67 | ದಿನಸಿ ವ್ಯಾಪಾರ | 08 |
| 68 | ಟೈಲರಿಂಗ್ | 186 |
| 69 | ಟೀ ಅಂಗಡಿ | 13 |
| 70 | ಟೈಲ್ಸ್ ವ್ಯಾಪಾರ | 02 |
| 71 | ಟೈರ್ ಅಂಗಡಿ | 03 |
| 72 | ಪಾತ್ರೆ ವ್ಯಾಪಾರ | 07 |
| 73 | ಸಾವಯವ ತರಕಾರಿ ವ್ಯಾಪಾರ | 52 |
| 74 | ವಾಚ್ ವ್ಯಾಪಾರ | 02 |
| 75 | ಹಾಳೆ ತಟ್ಟೆ ತಯಾರಿಕೆ | 04 |
| 76 | ಬಾವಿ ರಿಂಗ್ ತಯಾರಿಕೆ | 01 |
| 77 | ಅಕ್ಕಿ ವ್ಯಾಪಾರ | 26 |
| 78 | ಮರಳು ವ್ಯಾಪಾರ | 02 |
| 79 | ಸೀರೆ ವ್ಯಾಪಾರ | 44 |
| 80 | ಗುಜರಿ ವ್ಯಾಪಾರ | 01 |
| 81 | ಷಾಮಿಯಾನ | 02 |
| 82 | ಚಪ್ಪಲಿ ವ್ಯಾಪಾರ | 03 |
| 83 | ಸ್ಟೇಷನರಿ | 03 |
| 84 | ಟಿ.ವಿ. ರಿಪೇರಿ | 02 |
| | **ಒಟ್ಟು** | **3,586** |

**ಕಿರು ಉದ್ದಿಮೆಯಲ್ಲಿ ನಾರಿ – ಸ್ವಾವಲಂಬನೆಗೆ ದಾರಿ**

ನಾನು ಶ್ರೀಮತಿ ಶೋಭಾ, ಶಿವಮೊಗ್ಗ ನಗರದ ಬಾಪೂಜಿ ನಗರದಲ್ಲಿ ನನ್ನ ಪತಿ ವಿಜಯ ಕುಮಾರ್ ಮತ್ತು ಇಬ್ಬರು ಹೆಣ್ಣು ಮಕ್ಕಳೊಂದಿಗೆ ವಾಸಿಸುತ್ತಿದ್ದೇನೆ. ನನ್ನ ಪತಿ ರಸ್ತೆ



ಬದಿಯಲ್ಲಿ ಬಟ್ಟೆ ವ್ಯಾಪಾರ ಮಾಡಿ ನಮ್ಮ ಕುಟುಂಬದ ನಿರ್ವಹಣೆಯನ್ನು ಮಾಡುತ್ತಿದ್ದಾರೆ. ನಾನು ಎಸ್.ಎಮ್.ಎಸ್. ಎಸ್.ಸಂಸ್ಥೆ ಪ್ರಾಯೋಜಿತ ಮಹಿಮ ಸ್ವ–ಸಹಾಯ ಸಂಘದಲ್ಲಿ ಸದಸ್ಯಳಾಗಿದ್ದೇನೆ. ನಾನು ಕೆಲವು ವರ್ಷಗಳಿಂದೀಚೆಗೆ ಸಂಘದಿಂದ ಸಾಲ ಪಡೆದು ಬಟ್ಟೆ ವ್ಯಾಪಾರವನ್ನು ಮಾಡುತ್ತಿದ್ದೆನು. ಆದರೆ ಇದರಿಂದ ಹೇಳಿಕೊಳ್ಳುವಂತಹ ಲಾಭ ಆಗುತ್ತಿರಲಿಲ್ಲ. ನನಗೆ ಜೀವನ ನಡೆಸುವುದೇ ದುಸ್ತರವಾಗುತ್ತಿತ್ತು. ಕೊನೆಗೆ ಈ ಬಟ್ಟೆ ವ್ಯಾಪಾರವನ್ನು ನಿಲ್ಲಿಸಿ ಬೇರೆ ಉದ್ಯೋಗವನ್ನು ಮಾಡುವ ಬಗ್ಗೆ ಚಿಂತಿಸಿ, ಚರ್ಚಿಸಿ ಚಿಕ್ಕ ಮಕ್ಕಳು ಊದುವ ಪೀಪೀ ತಯಾರಿಕೆಯ ಬಗ್ಗೆ ತಿಳಿದುಕೊಂಡು ತರಬೇತಿಯನ್ನು ಪಡೆದುಕೊಂಡೆನು. ಸಂಘ, ಒಕ್ಕೂಟ ಮತ್ತು ಬ್ಯಾಂಕ್‌ನಿಂದ ಸಾಲವನ್ನು ಪಡೆದು ಮನೆಯಲ್ಲಿ ಪೀಪೀಗಳನ್ನು ತಯಾರಿಸಿ ಮಾರಾಟ ಮಾಡಿ ಕಡಿಮೆ ಬಂಡವಾಳದಲ್ಲಿ ಹೆಚ್ಚು ಲಾಭಗಳಿಸುವ ಬಗ್ಗೆ ತಿಳಿದುಕೊಂಡೆನು.

ಸಂಘದ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿದಾಗ ಕಾರ್ಯಕರ್ತೆ ಶ್ರೀಮತಿ ಕ್ಯಾಥರೀನ್ ರೊಡ್ರೀಗಸ್ ನೀಡಿದ ಮಾಹಿತಿ ಮತ್ತು ಸಲಹೆ ಮೇರೆಗೆ ನಾನು ಸಂಸ್ಥೆಯಲ್ಲಿ ಲಭ್ಯವಿರುವ ಕಿರು ಉದ್ದಿಮೆಗೆ ದೊರಕುವ ಕಿರುಸಾಲವನ್ನು ಪಡೆಯಲು ನಿರ್ಧರಿಸಿದೆನು. ಪುಷ್ಪಾಂಜಲಿ ಮಹಾ ಸಂಘದಲ್ಲಿ ದೊರಕಿದ ಉದ್ಯಮ ಶೀಲತಾ ತರಬೇತಿಯಲ್ಲಿ ಭಾಗವಹಿಸಿ ಉದ್ಯಮ ಕೌಶಲ್ಯವನ್ನು ವೃದ್ಧಿಸಿಕೊಂಡೆನು. ದಿನಾಂಕ 30.12.2009ರಂದು ಕಿರುಸಾಲ ಯೋಜನೆಯಿಂದ

ರೂ. 15,000/– ಸಾಲವನ್ನು ಪಡೆದು ಪೀಪೀ ತಯಾರಿಸುವ ಕಿರು ಉದ್ಯಮವನ್ನು ಆರಂಭಿಸಿದೆನು. ಸಂಸ್ಥೆಯ ಹಾಗೂ ಇತರರ ನಿರಂತರ ಪ್ರೋತ್ಸಾಹ ಹಾಗೂ ಮಾರ್ಗದರ್ಶನದಿಂದ ಇಂದು ನಾನು ಕೆಲವು ಮಹಿಳೆಯರಿಗೆ ಉದ್ಯೋಗ ನೀಡುವ ಮಟ್ಟಕ್ಕೆ ಏರಿದ್ದೇನೆ. ಈ ಉದ್ದಿಮೆಯಲ್ಲಿ ತಿಂಗಳಿಗೆ ನಾನು ಕನಿಷ್ಠ 6,000/– ರೂಪಾಯಿ ಲಾಭವನ್ನು ಗಳಿಸುತ್ತಿದ್ದೇನೆ.

**ತಯಾರಿಸಿದೆ ಸಿಹಿ, ದೂರವಾಯಿತು ಬಾಳಿನ ಕಹಿ!**

ನನ್ನ ಹೆಸರು ರೂಪ ಸುರೇಶ್ ಬಾಬು. ನಾನು ಶಿವಮೊಗ್ಗ ಜಿಲ್ಲೆಯ ವಿದ್ಯಾ ನಗರದಲ್ಲಿ ವಾಸವಾಗಿದ್ದೇನೆ. ನಾನು ಇಬ್ಬರು ಮಕ್ಕಳು ಮತ್ತು ಪತಿಯ ಜೊತೆ ಜೀವನ ನಡೆಸುತ್ತಿದ್ದೇನೆ. ನಾನು ಬಡ ಕುಟುಂಬದವಳಾಗಿದ್ದು ಗಂಡನ ಜೊತೆಗೆ ಕಳೆದ 6 ವರ್ಷಗಳಿಂದ



ಸಿಹಿ ತಯಾರಿಸುವ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದೇನೆ.

ಈ ಮೊದಲು ಕೂಲಿ ಮಾಡುತ್ತಿದ್ದು ಜೀವನ ನಡೆಸುವುದು ಪ್ರಯಾಸಕರವಾಗಿತ್ತು ಆ ಸಮಯದಲ್ಲಿ ನಾನು ಎಸ್.ಎಮ್. ಎಸ್.ಎಸ್. ಸಂಸ್ಥೆಯ ಶ್ರೀನಿಧಿ ಸ್ವ–ಸಹಾಯ ಸಂಘದಲ್ಲಿ ಸದಸತ್ವ ಪಡೆದುಕೊಂಡು, ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಅದೇ ಸಮಯದಲ್ಲಿ "ಕಿರು ಉದ್ದಿಮೆಯಲ್ಲಿ ಮಹಿಳೆ" ಎಂಬ ಯೋಜನೆಯ ಬಗ್ಗೆ ಸಂಘದಲ್ಲಿ ಸಂಸ್ಥೆಯ ಕಾರ್ಯಕರ್ತರಿಂದ ಮಾಹಿತಿ ಪಡೆದುಕೊಂಡೆ. ಕಾಲ ಕಳೆದಂತೆ ನಾವು ತಯಾರಿಸುತ್ತಿದ್ದ ಮೈಸೂರ್ ಪಾಕ್‌ಗೆ ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆ ಬಂತು. ಆದರೆ ನಾವು ಆರ್ಥಿಕವಾಗಿ ಸದೃಢರಲ್ಲದ ಕಾರಣ ಬರುವ ಬೇಡಿಕೆಯನ್ನು ಪೂರೈಸಲು ಕಷ್ಟವಾಯಿತು. ಆ ಸಮಯದಲ್ಲಿ ನಾನು "ಕಿರು ಉದ್ದಿಮೆಯಲ್ಲಿ ಮಹಿಳೆ" ಎಂಬ ಯೋಜನೆಯಲ್ಲಿ ಕಿರು ಉದ್ಯೋಗದ ಬಗ್ಗೆ ತರಬೇತಿ ಪಡೆದು ಸಾಲವನ್ನು ಸಂಸ್ಥೆಯಿಂದ ಪಡೆದು ಮಾರುಕಟ್ಟೆಯಲ್ಲಿ ಮೈಸೂರ್ ಪಾಕ್‌ಗೆ ಇದ್ದಂತಹ ಬೇಡಿಕೆಯನ್ನು ಪೂರೈಸುವತ್ತ ಶ್ರಮಿಸಿದೆ. ಈಗ ಪ್ರತಿನಿತ್ಯ 95 ಕೆ.ಜಿ.ಯಷ್ಟು ಮೈಸೂರ್ ಪಾಕ್ ತಯಾರಿಸಿ 30 ಬಾಕ್ಸ್‌ಗಳಲ್ಲಿ ತುಂಬಿ ಸ್ಥಳೀಯ ಅಂಗಡಿಗಳಿಗೆ ಪೂರೈಸುತ್ತಿದ್ದೇನೆ. ಮಾರುಕಟ್ಟೆಯ ಬೇಡಿಕೆಯನ್ನು ಪೂರೈಸುವ ಸಲುವಾಗಿ ಈಗ ನಾವು ಮೈಸೂರ್ ಪಾಕ್ ತಯಾರಿಸಲು ಬಳಸುವಂತಹ ವಿದ್ಯುತ್ ಯಂತ್ರವನ್ನು ಕೊಂಡುಕೊಂಡಿದ್ದೇವೆ. ಹಾಗೂ ಪ್ರತಿನಿತ್ಯ ಸರಿ–ಸುಮಾರು ರೂ. 500 ರಿಂದ ರೂ.600 ಲಾಭ ಗಳಿಸುತ್ತಿದ್ದೇನೆ ಹಾಗೂ ನನ್ನಂತೆಯೇ ಒಬ್ಬ ಮಹಿಳೆಗೆ ಕೆಲಸವನ್ನು ಒದಗಿಸಿಕೊಟ್ಟಿದ್ದೇನೆ ಮತ್ತು ಸಾಲದ ಮೊತ್ತವನ್ನು ನಿರ್ದಿಷ್ಟ ಸಮಯದಲ್ಲಿ ಮರುಪಾವತಿ ಮಾಡಿದ್ದೇನೆ. ನಮ್ಮ ಈ ಉತ್ತಮ ಸ್ಥಿತಿಗೆ ಕಾರಣರಾದ ಸಂಸ್ಥೆಯವರಿಗೆ ಕೃತಜ್ಞರಾಗಿದ್ದೇವೆ.

**ಹೆಣೆದೆ ಸೀರೆ, ಆದೆ ಧೀರೆ!**

ನನ್ನ ಹೆಸರು ಸುಮನ್ ರಾಜೇಶ್. ನಾನು ಶಿವಮೊಗ್ಗ ಜಿಲ್ಲೆಯ ಮಲವಗೊಪ್ಪ ವಾಸಿಯಾಗಿದ್ದೇನೆ. ನಾನು ನನ್ನ ಪತಿ, ಇಬ್ಬರು ಮಕ್ಕಳು ಮತ್ತು ಮಾವನ ಜೊತೆಗೆ ಬಾಡಿಗೆ



ಮನೆಯಲ್ಲಿ ವಾಸಿಸುತ್ತಿದ್ದೇನೆ. ಈ ಮೊದಲು ನನ್ನ ಗಂಡ ಫ್ಯಾನ್ಸಿ ಸ್ಟೋರ್ ನಡೆಸುತ್ತಿದ್ದು ಅದರಿಂದ ನಾವು ತುಂಬಾ ನಷ್ಟವನ್ನು ಅನುಭವಿಸಿದೆವು.

ಅದೇ ಸಮಯದಲ್ಲಿ ಎಸ್.ಎಮ್.ಎಸ್.ಎಸ್. ಸಂಸ್ಥೆಯ ಪ್ರೇರಣಾ ಸ್ವ–ಸಹಾಯ ಸಂಘದಲ್ಲಿ ಸದಸ್ಯತ್ವ ತೆಗೆದುಕೊಂಡು ಸಂಘದ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದೆ ಹಾಗೂ ಸಂಘ ಮತ್ತು ಬ್ಯಾಂಕ್‌ನಿಂದ ಸಾಲ ಪಡೆದು ಸೀರೆ ವ್ಯಾಪಾರ ಮಾಡಿ ಮನೆ ಪರಿಸ್ಥಿತಿಯನ್ನು ಸುಧಾರಿಸಿಕೊಂಡೆ. ಒಂದು ದಿನ ಸಂಘದ ಸಭೆಯಲ್ಲಿ ಕಾರ್ಯಕರ್ತರು "ಕಿರು ಉದ್ದಿಮೆಯಲ್ಲಿ ಮಹಿಳೆ" ಎಂಬ ಯೋಜನೆಯ ಬಗ್ಗೆ ಮಾಹಿತಿ ನೀಡಿದರು. ಈ ಯೋಜನೆಯು ನನ್ನನ್ನು ಅಕರ್ಷಿಸಿತು ಹಾಗೂ ಈ ಯೋಜನೆಯಲ್ಲಿ ಸಾಲ ಪಡೆದು ಸೀರೆ ವ್ಯಾಪಾರದ ಜೊತೆಗೆ ಟೈಲರಿಂಗ್ ಯಂತ್ರ ಹಾಗೂ ಎಂಬ್ರಾಯ್ಡರಿ ಮಾಡಲು ನಿರ್ಧರಿಸಿ ಸಂಸ್ಥೆಯಲ್ಲಿ ಆಯೋಜಿಸಿದ್ದ ತರಬೇತಿಯಲ್ಲಿ ಭಾಗವಹಿಸಿ ಯೋಜನೆಯಡಿಯಲ್ಲಿ ಸಾಲ ಪಡೆದು ಉದ್ಯೋಗ ಪ್ರಾರಂಭಿಸಿದೆ. ಇದರ ಪರಿಣಾಮವಾಗಿ ಈಗ ಪ್ರತಿನಿತ್ಯ ನಾನು ರೂ. 1,500 ರಿಂದ ರೂ. 2,000 ದವರೆಗೆ ಆದಾಯ ಪಡೆಯುತ್ತಿದ್ದು ಸಾಲವನ್ನು ಮರುಪಾವತಿ ಸರಿಯಾದ ಸಮಯಕ್ಕೆ ಮಾಡುತ್ತಿದ್ದೇನೆ ಹಾಗೂ ಈಗ ಸ್ವಂತ ಮನೆಯನ್ನು ಖರೀದಿಸಲು ನಿರ್ಧರಿಸಿದ್ದೇನೆ. ನಮ್ಮ ಈ ಉತ್ತಮ ಸ್ಥಿತಿಗೆ ಕಾರಣರಾದ ಸಂಸ್ಥೆಯವರಿಗೆ ಕೃತಜ್ಞರಾಗಿದ್ದೇವೆ.

**ಮಹಿಳೆಯರ ನಾಯಕತ್ವದಿಂದ ಹಳ್ಳಿಯ ಅಭಿವೃದ್ಧಿಗಾಗಿ ಹಮ್ಮಿಕೊಂಡ ಕಾರ್ಯಕ್ರಮಗಳು**

1. **ಭೂಮಾಪನ ಸಮೀಕ್ಷೆ:** ಜನರ ಸಹಭಾಗಿತ್ವದೊಂದಿಗೆ ಹಳ್ಳಿಯ ಭೂಮಾಪನ ಸಮೀಕ್ಷೆಯನ್ನು ಮಾಡಲಾಯಿತು.

ಈ ಸಮೀಕ್ಷೆಯಲ್ಲಿ ವಿವಿಧ ಸ್ಥಳಗಳಲ್ಲಿ ಭೂಮಿಯನ್ನು ಸಮತಟ್ಟು ಮಾಡಲು ಸ್ಥಳವನ್ನು ಗುರುತಿಸಲಾಯಿತು. ಕೊಳವೆ ಬಾವಿಗಳನ್ನು ಕೊರೆಸಲು ಜಿಯಾಲಾಜಿಕಲ್ ತಾಂತ್ರಿಕ ಅಧಿಕಾರಿಗಳಿಂದ ನೀರಿನ ಪಾಯಿಂಟ್‌ಗಳನ್ನು ಗುರುತಿಸಲಾಯಿತು.



2. **ತಿಳುವಳಿಕೆಯ ಶಿಬಿರಗಳು:** ವಿವಿಧ ಹಳ್ಳಿಗಳಲ್ಲಿ ತಿಳುವಳಿಕೆ ಶಿಬಿರಗಳನ್ನು ನಡೆಸಿ ಜನರಿಗೆ ನೀರಿನ ಸಂರಕ್ಷಣೆ, ಮಣ್ಣಿನ ಸವಕಳಿ ಮತ್ತು ಸಂರಕ್ಷಣೆ, ಗಿಡ ಮರಗಳ ಸಂರಕ್ಷಣೆ, ಹೈನುಗಾರಿಕೆ, ತೋಟಗಾರಿಕೆ, ಪರ್ಯಾಯ ಇಂಧನಗಳ ಬಳಕೆ, ಸಾವಯವ ಕೃಷಿ, ಎರೆಹುಳು ಗೊಬ್ಬರ ತಯಾರಿಕೆ, ಕಾನೂನು ಮಾಹಿತಿ ಮುಂತಾದ ವಿಚಾರಗಳಲ್ಲಿ ಶಿಬಿರಗಳನ್ನು ನಡೆಸಿ ಜನರಿಗೆ ತಿಳುವಳಿಕೆಯನ್ನು ನೀಡಲಾಗಿದೆ.

3. **ರೈತರಿಗೆ ಅಧ್ಯಯನದ ಪ್ರವಾಸ:** ಕಾರ್ಯಕ್ಷೇತ್ರದ ರೈತರಿಗೆ ಮತ್ತು ಮಹಿಳೆಯರಿಗೆ ಎರಡು ದಿನದ ಅಧ್ಯಯನ ಪ್ರವಾಸಕ್ಕಾಗಿ ಬೇರೆ ಬೇರೆ ಕಡೆ ಕರೆದುಕೊಂಡು ಹೋಗಿ ಅಲ್ಲಿಯ ಸಮಗ್ರ ಗ್ರಾಮ ಅಭಿವೃದ್ಧಿ, ಎರೆಹುಳು ಗೊಬ್ಬರ, ಮಲ್ಲಿಗೆ ಕೃಷಿ, ಸಾವಯವ ತರಕಾರಿ ಉತ್ಪಾದಕರ ಕಂಪನಿ, ಮುಂತಾದ ವಿಷಯಗಳ ಕುರಿತು ಅಧ್ಯಯನ ಮಾಡಲಾಯಿತು.

4. **ನೆಲ ಸಮತಟ್ಟು ಮಾಡುವುದು:** ಈ ಕಾರ್ಯಕ್ರಮದ ಅಡಿಯಲ್ಲಿ ಒಟ್ಟು 62 ಕುಟುಂಬಗಳ, 140 ಎಕರೆಗಳಷ್ಟು ಇಳಿಜಾರು ಪ್ರದೇಶದ ಜಮೀನುಗಳನ್ನು ಸಮತಟ್ಟು ಮಾಡಲಾಗಿದೆ.

5. **ಮಣ್ಣಿನ ಬದುಗಳನ್ನು ಹಾಕುವುದು:** ಮಣ್ಣಿನ ಸವಕಳಿಯನ್ನು ತಡೆಗಟ್ಟಲು 342 ಎಕರೆಗಳಷ್ಟು ಜಮೀನುಗಳಿಗೆ ಮಣ್ಣಿನ ಬದುಗಳನ್ನು ನಿರ್ಮಿಸಲಾಗಿದೆ.

6. **ಕೆರೆ ಊಳು ಎತ್ತುವುದು:–** ವಿವಿಧ ಗ್ರಾಮಗಳ ಕೆರೆಯಲ್ಲಿ ಊಳನ್ನು ಎತ್ತಿ ಜನರ ಜಮೀನುಗಳಿಗೆ ಸಾಗಿಸಿ ಉತ್ತಮ ಬೆಳೆಯನ್ನು ಬೆಳೆಸುವಂತೆ ಮಾಡಲಾಗಿದೆ.

7. **ಕೊಳವೆ ಬಾವಿಗಳ ಸುತ್ತ ಇಂಗು ಗುಂಡಿಗಳನ್ನು ನಿರ್ಮಿಸುವುದು:** ಕೊರೆದ ಬಾವಿಗಳಿಗೆ ನೀರಿನ ಬಳಕೆ ಕಡಿಮೆಯಾಗದಂತೆ ಕೊಳವೆ ಬಾವಿಯ ಸುತ್ತ 10 ಅಡಿ ಅಗಲ 6 ಅಡಿ ಆಳದಷ್ಟು ಗುಂಡಿಗಳನ್ನು ತೋಡಿ, ಅದರಲ್ಲಿ ಕಲ್ಲು, ಮರಳನ್ನು ತುಂಬಿಸಿ ಮಳೆನೀರನ್ನು ಬಾವಿಯ ಸುತ್ತ ಇಂಗಿಸಲು ವ್ಯವಸ್ಥೆಯನ್ನು ಮಾಡಲಾಗಿದೆ.

8. **ಪಂಪುಗಳನ್ನು ಅಳವಡಿಸುವುದು:** ಕೊರೆದ ಬಾವಿಗಳಿಗೆ ಪಂಪ್‌ಗಳನ್ನು ಅಳವಡಿಸಿ, ನೀರನ್ನು ಮೇಲೆ ಎತ್ತಿ, ಸಮಾನಾಂತರವಾಗಿ ಹಂಚಲು ಪ್ರತಿ ರೈತರ ಜಮೀನುಗಳಿಗೆ ಪೈಪುಗಳನ್ನು ಒಳಚರಂಡಿಯ ಮೂಲಕ ಊಳಲಾಗಿ, ನೀರು ಎಲ್ಲಾ ರೈತರಿಗೆ ಸಿಗುವಂತೆ ಮಾಡಲಾಯಿತು. ಕೊಳವೆ ಬಾವಿಗಳಿಂದ ನೀರನ್ನು ಮೇಲಕ್ಕೆತ್ತಲು ವಿದ್ಯುತ್‌ಚ್ಛಕ್ತಿಯ ವ್ಯವಸ್ಥೆಯನ್ನು ಪಡೆಯಲು ಕರ್ನಾಟಕ ವಿದ್ಯುತ್ ನಿಗಮಕ್ಕೆ ಅರ್ಜಿಯನ್ನು ಸಲ್ಲಿಸಲಾಗಿದೆ.

9. **ಗಿಡಗಳನ್ನು ನೆಡುವುದು:** ಬದುಗಳ ಮೇಲೆ ತೇಗ, ಸಿಲ್ವರ್ ಹಾಗೂ ಹಣ್ಣಿನ ಗಿಡಗಳನ್ನು ನೆಡಲಾಗಿದೆ.

10. **ಗಲ್ಲಿ ಪ್ಲಗ್‌ಗಳನ್ನು ನಿರ್ಮಾಣ ಮಾಡುವುದು:** ಹೆಚ್ಚು ಇಳಿಜಾರು ಪ್ರದೇಶಗಳಲ್ಲಿ ನೀರಿನ ಕೊರಕಲುಗಳನ್ನು ತಡೆಯಲು 75 ಗಲ್ಲಿ ಪ್ಲಗ್‌ಗಳನ್ನು ಕಲ್ಲುಗಳಿಂದ ನಿರ್ಮಿಸಲಾಗಿದೆ.

11. **ಸಮುದಾಯ ಭವನಗಳನ್ನು ನಿರ್ಮಿಸುವುದು:** ಹಳ್ಳಿಯ ಜನರಿಗೆ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಭೆ, ಕೌಶಲ್ಯಾಧಾರಿತ ತರಬೇತಿಗಳನ್ನು ನಡೆಸಲು, ಸಂಘ ಮತ್ತು ಒಕ್ಕೂಟಗಳ ಸಭೆಗಳನ್ನು ನಡೆಸಲು ಹಾಗೂ ಮಹಿಳೆಯರು ಆದಾಯ ಬರುವಂತಹ ಚಟುವಟಿಕೆಗಳನ್ನು ಮಾಡಲು 13 ಲಕ್ಷ ರೂಪಾಯಿಗಳ ವೆಚ್ಚದೊಂದಿಗೆ 40x60 ಅಡಿಗಳಷ್ಟು ದೊಡ್ಡ ಸಮುದಾಯ ಭವನವನ್ನು ನಿರ್ಮಿಸಲಾಗಿದೆ.

12. **ಸಮುದಾಯ ಭವನಕ್ಕೆ ಸೋಲಾರ್ ಲೈಟ್‌ಗಳನ್ನು ಹಾಕಿಸುವುದು.:** ಸಂಜೆಯ ಸಮಯಗಳಲ್ಲಿ ಮಕ್ಕಳಿಗೆ ವಿದ್ಯಾಭ್ಯಾಸವನ್ನು ಮಾಡಲು, ಸಭೆಗಳನ್ನು ನಡೆಸಲು, ಸೋಲಾರ್ ಲೈಟ್‌ಗಳನ್ನು ಅಳವಡಿಸಿರುವುದರಿಂದ ಜನರು ಹೆಚ್ಚು ಪ್ರಯೋಜನವನ್ನು ಪಡೆಯುತ್ತಿದ್ದಾರೆ.

13. **ಹೈನುಗಾರಿಕೆ.:** ರೈತರಿಗೆ ಹೆಚ್ಚು ಆದಾಯ ಬರಲು ಸುಧಾರಿತ ತಳಿಯ ಹಸುಗಳನ್ನು ನೀಡಲಾಗಿದೆ.

14. **ಶ್ರಮದಾನ:** ಮೇಲ್ಕಂಡ ಚಟುವಟಿಕೆಗಳನ್ನು ಜನರು ಹೆಚ್ಚು ಆಸಕ್ತಿಯನ್ನು ವಹಿಸಿ, ಶ್ರಮದಾನದ ಮೂಲಕ ಹಲವಾರು ಕೆಲಸಗಳನ್ನು ಮಾಡಿರುತ್ತಾರೆ. ಈ ಶ್ರಮದಾನದಲ್ಲಿ ರೈತರು ಮತ್ತು ಮಹಿಳೆಯರು ಭಾಗವಹಿಸಿದ್ದರು.

**ಫಲಿತಾಂಶಗಳು**

ಹಳ್ಳಿಯ ಸಮಗ್ರ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಹಲವಾರು ಫಲಿತಾಂಶಗಳನ್ನು ಕಂಡುಕೊಂಡಂತಾಗಿದೆ. ಅವುಗಳೆಂದರೆ

- ಮಣ್ಣಿನ ಸವಕಳಿಯನ್ನು ತಡೆದಿದ್ದರಿಂದ ಬೆಳೆಗಳಲ್ಲಿ ಹೆಚ್ಚು ಇಳುವರಿ ಬಂದಿದೆ.
- ವ್ಯವಸಾಯದ ಭೂಮಿಗೆ ಕೆರೆಯ ಊಳನ್ನು ಹಾಕಿದ್ದರಿಂದ ಮಣ್ಣಿನ ಫಲವತ್ತತೆ ಹೆಚ್ಚಿದೆ.
- ಶೇ. 40ರಷ್ಟು ಭೂಮಿಯೂ ಸಮತಟ್ಟಾಗಿದೆ.

- ಮಳೆನೀರನ್ನು ಇಂಗು ಗುಂಡಿಗಳಲ್ಲಿ ಇಂಗಿಸುವುದರಿಂದ ಮಣ್ಣಿನಲ್ಲಿ ನೀರಿನ ಅಂಶ ಹೆಚ್ಚಾಗಿದೆ.
- ಶೇ. 25ರಷ್ಟು ರೈತರ ಜಮೀನಿನಲ್ಲಿ ಇಳುವರಿ ಹೆಚ್ಚಾಗಿದೆ.
- ಸಮುದಾಯ ಭವನ ನಿರ್ಮಾಣದಿಂದ ಜನರಿಗೆ ಸಭೆ ನಡೆಸಲು, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಲು, ಸಾರ್ವಜನಿಕ ಸಭೆಗಳನ್ನು ನಡೆಸಲು ಸ್ಥಳಾವಕಾಶ ದೊರಕಿದೆ.
- ಜನರಿಗೆ ಬೇಸಾಯ ಮತ್ತು ಕಾನೂನಿನ ಬಗ್ಗೆ ಹೆಚ್ಚು ತಿಳುವಳಿಕೆ ಸಿಕ್ಕಿದೆ.
- ಕೆರೆಯಲ್ಲಿ ಹೆಚ್ಚು ನೀರು ಶೇಖರಣೆಯಾಗಿ ಭೂಮಿಯಲ್ಲಿ ನೀರು ಇಂಗುವಂತಾಗಿದೆ.
- ಹಳ್ಳಿಯ ವಾತಾವರಣ ಶುದ್ಧವಾಗಿದೆ.
- ಹಳ್ಳಿಯ ಕೆಲ ರೈತರು ಸಾವಯವ ಗೊಬ್ಬರವನ್ನು ತಯಾರಿಸಲು ತೊಡಗಿಸಿಕೊಂಡಿದ್ದಾರೆ.
- ಹಳ್ಳಿಯಲ್ಲಿ ಹಾಲಿನ ಉತ್ಪಾದನೆ ಹೆಚ್ಚಾಗಿ ಹಾಲಿನ ಡೈರಿಯನ್ನು ಸ್ಥಾಪಿಸಲಾಗಿದೆ.
- ಹಳ್ಳಿಯ ವಿವಿಧ ಸಮುದಾಯದ ಜನರಲ್ಲಿ ಒಗ್ಗಟ್ಟು ಕಂಡುಬಂದಿದೆ.

**ಸುವರ್ಣಾಳ ಸ್ವರ್ಣ ಸೇವೆ**

ನಾನು ಶ್ರೀಮತಿ ಸುವರ್ಣ ಕೃಷ್ಣಮೂರ್ತಿ. ನನಗೀಗ 38 ವರ್ಷ ವಯಸ್ಸು. ನಾನು ಕೃಷಿಯನ್ನು ಜೀವನಾಧಾರವನ್ನಾಗಿಸಿದ್ದೇನೆ. ನನ್ನ ಪತಿಯವರು ತುಪ್ಪೂರು ಗ್ರಾಮ ಪಂಚಾಯತ್ ಅಧ್ಯಕ್ಷರಾಗಿದ್ದಾರೆ. ನನಗೆ ಇಬ್ಬರು ಮಕ್ಕಳಿದ್ದು, ಮಗ 4ನೇ ತರಗತಿ, ಮಗಳು 2ನೇ ತರಗತಿಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ನಾನು ಶಿವಮೊಗ್ಗ ತಾಲ್ಲೂಕಿನ ತುಪ್ಪೂರು ಗ್ರಾಮ ಪಂಚಾಯತ್‌ನ ಚೋಡನಾಳ್ ಗ್ರಾಮದಲ್ಲಿ ವಾಸವಾಗಿದ್ದೇನೆ. ಈ ಗ್ರಾಮವು ಮುಖ್ಯ ರಸ್ತೆಗೆ 4ಕಿ.ಮೀ. ದೂರವಿದ್ದು, ಯಾವುದೇ ಸಾರಿಗೆ ಸಂಚಾರವಿಲ್ಲದ ಕುಗ್ರಾಮವಾಗಿದೆ. ಈ ಗ್ರಾಮದಲ್ಲಿ ಒಟ್ಟು 85 ಕುಟುಂಬಗಳಿದ್ದು, ಗ್ರಾಮದಲ್ಲಿ



ಅನಾರೋಗ್ಯದ ಸಮಸ್ಯೆ ಉಂಟಾದಲ್ಲಿ ಆರೋಗ್ಯ ಸೇವೆ ಪಡೆಯಲು ತುಂಬಾ ಅನಾನುಕೂಲವಾಗುತ್ತಿದೆ. ಮುಂಗಾರು ಮಳೆ, ಗಾಳಿಗೆ ವಿದ್ಯುತ್ ಕಂಬಗಳು ಹಾನಿಗೊಳಗಾಗಿ 3–4 ದಿನಗಳು ಗ್ರಾಮದಲ್ಲಿ ವಿದ್ಯುತ್ ಸೇವೆಗಳಿಲ್ಲದೆ ಜನಜೀವನ ಅಸ್ತವ್ಯಸ್ತವಾಗುತ್ತದೆ. ವಯೋವೃದ್ಧರು, ಮಕ್ಕಳು, ಗರ್ಭಿಣಿ, ಬಾಣಂತಿಯರು, ಶಸ್ತ್ರಚಿಕಿತ್ಸೆಗೆ ಒಳಗಾದವರು ಹಾಗೂ ರೋಗರುಜಿನಿ ಗಾಯಕ್ಕೆ ಒಳಗಾದವರು ದಿನಂಪ್ರತಿ ಚುಚ್ಚುಮದ್ದುಗಳನ್ನು ಪಡೆಯುವಂತಹವರು 6ಕಿ.ಮೀ. ದೂರದಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿ ಚುಚ್ಚುಮದ್ದುಗಳನ್ನು ಪಡೆಯಬೇಕಾಗಿತ್ತು. ನಾನು ಮೂಲತಃ ತೀರ್ಥಹಳ್ಳಿ ತಾಲ್ಲೂಕಿನ ಕುಕ್ಕೆ ಗ್ರಾಮದಲ್ಲಿ ಹುಟ್ಟಿ ಬೆಳೆದು ಪದವಿಪೂರ್ವ ಶಿಕ್ಷಣ ಮುಗಿಸಿ ನರ್ಸಿಂಗ್ ವೃತ್ತಿ ಶಿಕ್ಷಣವನ್ನು ಪೂರೈಸಿ 10 ವರ್ಷಗಳ ಕಾಲ ಖಾಸಗಿ ಆಸ್ಪತ್ರೆಗಳಲ್ಲಿ ನರ್ಸಿಂಗ್ ಸೇವೆಯನ್ನು ಮಾಡಿದ್ದೆ. ತದನಂತರ ನನ್ನ ಕುಟುಂಬದವರು ಚೋಡನಾಳ್ ಗ್ರಾಮದ ಜಮೀನ್ದಾರರಿಗೆ ವಿವಾಹ ಮಾಡಿಕೊಟ್ಟಿದ್ದರಿಂದ ನರ್ಸಿಂಗ್ ಸೇವೆಯನ್ನು ನಿಲ್ಲಿಸಿದೆ. ಗ್ರಾಮದ ಪರಿಸ್ಥಿತಿಯನ್ನು ಮನಗಂಡು ನಾನು ಗ್ರಾಮದಲ್ಲಿ ವಯೋವೃದ್ಧರು, ಮಕ್ಕಳು, ಗರ್ಭಿಣಿ, ಬಾಣಂತಿಯರು, ಶಸ್ತ್ರಚಿಕಿತ್ಸೆಗೆ ಒಳಗಾದವರು ಹಾಗೂ ರೋಗರುಜಿನಿ ಗಾಯಕ್ಕೆ ಒಳಗಾದವರು ದಿನಂಪ್ರತಿ ಚುಚ್ಚುಮದ್ದುಗಳನ್ನು ಪಡೆಯುವಂತವರಿಗೆ ಉಚಿತವಾಗಿ ಚುಚ್ಚುಮದ್ದುಗಳನ್ನು ಹಾಗೂ ರೋಗಿಗೆ ಡ್ರಿಪ್ ಹಾಕುವ ಪ್ರಸಂಗವಿದ್ದಲ್ಲಿ ಡ್ರಿಪ್ ಹಾಕುವಂತಹ ಸೇವೆಯನ್ನು ಯಾವುದೇ ಹಣ ಪಡೆಯದೆ ಸ್ವಯಂ ಸೇವಕಳಾಗಿ ಮಾಡಲು ಪ್ರಾರಂಭಿಸಿದೆ. ಈ ಸೇವಾ ಕಾರ್ಯ ಮಾಡುವುದರಿಂದ ಗ್ರಾಮದಲ್ಲಿ ನನಗೆ ಗೌರವ ಮನ್ನಣೆ ಸ್ಥಾನಮಾನ ಲಭಿಸುತ್ತಿದೆ. ಈ ಕಾರ್ಯ ಮಾಡಲು ಸಹಕರಿಸಿದ ನನ್ನ ಕುಟುಂಬಕ್ಕೂ ಸಹ ನಾನು ಆಭಾರಿಯಾಗಿರುತ್ತೇನೆ. ಇಂತಹ ಒಂದು ಸ್ಫೂರ್ತಿಯನ್ನು ನೀಡಿದ ಎಸ್.ಎಮ್.ಎಸ್.ಎಸ್.ಸಂಸ್ಥೆಗೆ ನಾನು ಚಿರಋಣಿಯಾಗಿದ್ದೇನೆ.

**ಮಿಶ್ರ ಬೇಸಾಯ ಪದ್ಧತಿಯಿಂದ ಹಸನ್ಮುಖಿಯಾದ ಶ್ರೀಮತಿ ರೇಣುಕಾ**

ಮನಸ್ಸಿದ್ದರೆ ಮಾರ್ಗ, ಕಾಯಕವೇ ಕೈಲಾಸ ಎಂಬ ಗಾದೆಮಾತುಗಳನ್ನು ಕೇಳಿದ್ದೇವೆ. ಅಕ್ಷರಶಃ ಇಂತಹ ಗಾದೆಮಾತುಗಳು ಹಾಸುಹೊಕ್ಕಾಗಿವೆ. ನಾನು ಶ್ರೀಮತಿ ರೇಣುಕಮ್ಮ. ನನಗೀಗ 47 ವರ್ಷ ವಯಸ್ಸು. ನಾನು ಶಿವಮೊಗ್ಗ ತಾಲ್ಲೂಕಿನ ಮಂಡಘಟ್ಟ ಗ್ರಾಮ ಪಂಚಾಯತಿ ವ್ಯಾಪ್ತಿಯ ದ್ಯಾವಿನಕೆರೆ ಗ್ರಾಮದಲ್ಲಿ ವಾಸವಾಗಿದ್ದೇನೆ, ನನ್ನ ಪತಿ ಗ್ರಾಮ ಪಂಚಾಯತಿಯ ನೀರುಗಂಟಿಯಾಗಿ ತಿಂಗಳಿಗೆ ರೂ. 3,000/– ವೇತನ



ಪಡೆಯುತ್ತಿದ್ದಾರೆ. ನನಗೆ ಒಂದು ಹೆಣ್ಣು, ಒಂದು ಗಂಡು ಮಗು ಇದೆ. ನಾನು ನನ್ನ ಕುಟುಂಬ ಜೀವನವನ್ನು ಕೃಷಿ ಕೂಲಿ ಮಾಡಿ ಸಾಗಿಸುತ್ತಿದ್ದೆ. ದಿನ ಕಳೆದಂತೆ ಜೀವನ ನಡೆಸುವುದು ತುಂಬಾ ಕಷ್ಟವಾದಾಗ 2005ರಲ್ಲಿ ಎಸ್.ಎಮ್.ಎಸ್.ಎಸ್.ಸಂಸ್ಥೆಯು ಪ್ರೇರೇಪಿಸಿದ ಅಪ್ಸರ ಸ್ವ–ಸಹಾಯ ಸಂಘದ ಸದಸ್ಯೆಯಾದೆ. ನಾನು ನನ್ನ ಸ್ವಂತ ಕೃಷಿ ಭೂಮಿಯಲ್ಲಿ ರಾಗಿ, ಜೋಳ, ಆಹಾರದ

ಬೆಳೆ ಬೆಳೆಸುತ್ತಿದ್ದೆ, ನಾನು ಸಂಸ್ಥೆಯಿಂದ ಏರ್ಪಡಿಸಿದ್ದ ಕೃಷಿ ಆಧಾರಿತ ವಿವಿಧ ಆದಾಯೋತ್ಪನ್ನ ತರಬೇತಿಗಳಲ್ಲಿ ಭಾಗವಹಿಸಿದೆ. ನಾನು ಅರ್ಧ ಎಕರೆ ಕೃಷಿ ಭೂಮಿಯಲ್ಲಿ ಶುಂಠಿ, ತೊಗರಿ, ಹಸಿಮೆಣಸು, ಬೀನ್ಸ್, ಸೌತೆಕಾಯಿ, ಹೀರೆಕಾಯಿ, ಉದ್ದು, ಹೆಸರು, ತರಕಾರಿ ಮತ್ತು ದ್ವಿದಳ ಧಾನ್ಯಗಳ ಮಿಶ್ರ ಬೆಳೆಗಳನ್ನು ಬೆಳೆಸಲು ಪ್ರಾರಂಭಿಸಿದೆ. ಇದರಿಂದ ನನಗೆ ಒಂದು ಬೆಳೆಯಲ್ಲಿ ದರ ಕಡಿಮೆಯಾದರೂ ಇತರೆ ಬೆಳೆಗಳಲ್ಲಿ ದರ ದೊರಕಿ ಹೆಚ್ಚಿನ ಆದಾಯ ದೊರಕುತಿತ್ತು.

ನಂತರ ನಾನು ಸಂಘ ಮತ್ತು ಸಂಸ್ಥೆಯ ಕಿರುಸಾಲ ಪಡೆದು 1 ಎಕರೆ ಕೃಷಿ ಭೂಮಿಯಲ್ಲಿ ಹೆಚ್ಚಿನ ಮಿಶ್ರ ಬೆಳೆಯನ್ನು ಬೆಳೆಸಲು ತೊಡಗಿದೆನು. ತದನಂತರ ಸಾವಯವ ಕೃಷಿ ಬಗ್ಗೆ ಮಾಹಿತಿ ಪಡೆದು ಎರೆಹುಳು ತೊಟ್ಟಿ ನಿರ್ಮಿಸಿ ಎರೆಹುಳು ಗೊಬ್ಬರವನ್ನು



ಕೃಷಿ ಭೂಮಿಗೆ ಉಪಯೋಗಿಸಿದೆ. ನಂತರ 2012ರಲ್ಲಿ ಸಂಘ ಮತ್ತು ಸಂಸ್ಥೆಯ ಕಿರುಸಾಲವನ್ನು ಪಡೆದು ಮಿಶ್ರ ಬೇಸಾಯ ಪದ್ಧತಿ ಜೊತೆಗೆ ಹೈನುಗಾರಿಕೆ ಹಾಗೂ ಜೊತೆಗೆ ಕುರಿ ಸಾಕಾಣಿಕೆ ಮಾಡಿ ಹೆಚ್ಚಿನ ಆದಾಯ ಗಳಿಸಲು ತೊಡಗಿದೆನು. ನಮ್ಮ ಜಮೀನು ಮಳೆ ಆಧಾರಿತ ಜಮೀನಾಗಿದ್ದು, ಕೃಷಿ ಚಟುವಟಿಕೆಗಳನ್ನು ಮಳೆಗಾಲದ ಸಮಯದಲ್ಲಿ ಮಾತ್ರ ಮಾಡುತ್ತಿದ್ದೆವು. ದಿನ ಕಳೆದಂತೆ ಕೌಟುಂಬಿಕ ಜೀವನ ನಡೆಸುವುದು ಕಷ್ಟವಾದಾಗ ನಾನು ಮತ್ತೊಮ್ಮೆ ಸಂಘ ಮತ್ತು ಸಹಕಾರಿಯಿಂದ ರೂ. 50,000/– ಸಾಲ ಪಡೆದು ಕೃಷಿ ಭೂಮಿಯಲ್ಲಿ ಕೊಳವೆ ಬಾವಿಯನ್ನು ಕೊರೆಸಿ ಈಗ ವರ್ಷವಿಡಿ ಮಿಶ್ರ ಬೇಸಾಯ ಪದ್ಧತಿಯನ್ನು ನಡೆಸುತ್ತಿದ್ದೇನೆ. ಹಿಟ್ಟು ರುಬ್ಬುವ ಗ್ರೈಂಡರನ್ನು ಖರೀದಿಸಿ ಅದರಿಂದ ಆದಾಯ ಗಳಿಸುತ್ತಿದ್ದೇನೆ ಈಗ ನನ್ನ ಕುಟುಂಬದಲ್ಲಿ 4 ಹಸು, ಮತ್ತು 4 ಕುರಿಗಳಿಂದ ನಿರಂತರ ಆದಾಯ ಬರುತ್ತಿದೆ. ಈ ಆದಾಯದಿಂದ ನನ್ನ ಮಗ ಐ.ಟಿ.ಐ. ವೃತ್ತಿಪರ ಶಿಕ್ಷಣ ಮುಗಿಸಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಮಗಳಿಗೆ ಪದವಿ ಶಿಕ್ಷಣ ಕೊಡಿಸಿ ಕಳೆದ ಸಾಲಿನಲ್ಲಿ ವಿವಾಹ ಮಾಡಿಸಿದ್ದೇನೆ. ನಾನು ಈ ಕೆಲಸಕ್ಕೆ ತೊಡಗಲು ಸಂಸ್ಥೆ ನೀಡಿದ ಮಾರ್ಗದರ್ಶನ, ಸಲಹೆ ಸೂಚನೆ ಹಾಗೂ ಆರ್ಥಿಕ ನೆರವಿಗೆ ನಾನು ಸಂಸ್ಥೆಗೆ ತುಂಬಾ ಆಬಾರಿಯಾಗಿದ್ದೇನೆ.

ನಾನು ಮಾಡುತ್ತಿರುವ ಈ ರೀತಿಯ ಕೆಲಸ ಕಾರ್ಯಗಳನ್ನು ಗುರುತಿಸಿ ಭದ್ರಾವತಿಯ ಆಕಾಶವಾಣಿ ಕೇಂದ್ರದಲ್ಲಿ ಹಾಗೂ ಚಂದನ ದೂರವಾಣಿಯಲ್ಲಿ ಪ್ರಸಾರಪಡಿಸಿದ್ದಕ್ಕೆ ತುಂಬಾ ಹೆಮ್ಮೆಯೆನಿಸಿದೆ, ನನಗೆ ಸಮಾಜದಲ್ಲಿ ಗೌರವ ಮನ್ನಣೆ ಉತ್ತಮ ಸ್ಥಾನಮಾನ ಲಭಿಸಿದೆ. ನನ್ನ ಸರಾಸರಿ ವಾರ್ಷಿಕ ಆದಾಯ ಈ ಕೆಳಕಂಡಂತಿದೆ.

| ಕ್ರಸಂ | ಆದಾಯದ ಮೂಲ | ವಾರ್ಷಿಕ ಆದಾಯ |
|---|---|---|
| 1 | ಶುಂಠಿ ಬೆಳೆಯಿಂದ | 50,000=00 |
| 2 | ತರಕಾರಿ ಬೆಳೆಯಿಂದ | 30,000=00 |
| 3 | ಹೈನುಗಾರಿಕೆಯಿಂದ | 60,000=00 |
| 4 | ಕುರಿ ಸಾಕಾಣಿಕೆಯಿಂದ | 50,000=00 |
| 5 | ಗೊಬ್ಬರದಿಂದ (ಕುರಿ. ಎರೆಹುಳು, ಜಾನುವಾರು) | 25,000=00 |
| 6 | ಗ್ರೈಂಡರ್‌ನಿಂದ | 10,000=00 |
| | **ಒಟ್ಟು** | **2,25,000=00** |

**ಸಾಂತ್ವನ ಕೇಂದ್ರದಿಂದ ಕೌಟುಂಬಿಕ ನೆಮ್ಮದಿ**

ನಾನು ಶ್ರೀಮತಿ ಪಾರ್ವತಿ. ನಾನು ಶಿವಮೊಗ್ಗ ತಾಲ್ಲೂಕಿನ ಕುಂಸಿ ಗ್ರಾಮ ಪಂಚಾಯತಿಯ ಹಳೆ ಕುಂಸಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನನಗೀಗ 40 ವರ್ಷ ವಯಸ್ಸು. ನನಗೆ ಇಬ್ಬರು ಮಕ್ಕಳಿದ್ದಾರೆ. ನಾನು ಕೃಷಿ ಕೂಲಿ ಕೆಲಸ ಮಾಡುತ್ತಿದ್ದೇನೆ. ನನ್ನ ಪತಿಯವರು ಎಲೆಕ್ಟ್ರಿಕಲ್ ಕೆಲಸ ಮಾಡಿ ಇಬ್ಬರ ಸಂಪಾದನೆಯಲ್ಲಿ ನಮ್ಮ ಕುಟುಂಬವನ್ನು ಸಾಗಿಸುತ್ತಿದ್ದೇವೆ. ಹೀಗೆ ಸಂಸಾರ ಸಾಗುತ್ತಿದ್ದಾಗ ನನ್ನ ಪತಿಯವರು ಕುಡಿತಕ್ಕೆ ಒಳಗಾಗಿ ದಿನನಿತ್ಯ ಮನೆಯಲ್ಲಿ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರು. ದಿನಾಂಕ 08.06.2016ರಂದು ರಾತ್ರಿ ನನ್ನ ಪತಿಯು ತುಂಬಾ ಕುಡಿದು ನನಗೆ ಬೆಂಕಿ ಹಚ್ಚಲು ಬಂದರು. ಆಗ ನಾನು ನನ್ನ ತವರು ಮನೆಗೆ ಬಂದೆ. ನನ್ನ ಅಕ್ಕ ಶ್ರೀಮತಿ ಚಂದ್ರಮ್ಮ ಆಯನೂರು ಕೋಟೆಯ ಎಸ್.ಎಮ್.ಎಸ್.ಎಸ್. ಸಂಸ್ಥೆ ಪ್ರೇರಿತ ಕುವೆಂಪು ಸ್ವ–ಸಹಾಯ ಸಂಘದ ಸದಸ್ಯರಾಗಿದ್ದರು. ಆ ರಾತ್ರಿಯ



ಘಟನೆಯನ್ನು ಸಂಘದ ಸಭೆಯಲ್ಲಿ ಹಂಚಿಕೊಂಡರು. ತದನಂತರ ಸಂಘದ ಸದಸ್ಯರು ಈ ಮಾಹಿತಿಯನ್ನು ಆಯನೂರು ಸ್ತ್ರೀಬಂಧು ಒಕ್ಕೂಟದ ಸಭೆಯಲ್ಲಿ ಚರ್ಚಿಸಿ ಸಂಸ್ಥೆಯ ಸಂಯೋಜಕರು ಮತ್ತು ಕಾರ್ಯಕರ್ತರು ಸಾಂತ್ವನ ಕೇಂದ್ರಕ್ಕೆ ಅರ್ಜಿ ಸಲ್ಲಿಸುವಂತೆ ಪ್ರೇರಣೆ ನೀಡಿದಾಗ ನಾನು ಮಹಿಳಾ ಸಾಂತ್ವನ ಕೇಂದ್ರಕ್ಕೆ ಅರ್ಜಿ ಸಲ್ಲಿಸಿದೆನು. ನಂತರ ನಮ್ಮಿಬ್ಬರನ್ನು ಮಹಿಳಾ ಸಾಂತ್ವನ ಕೇಂದ್ರಕ್ಕೆ ಕರೆಸಿ ಆತ್ಮ ಸಮಾಲೋಚನೆ ನಡೆಸಿ ನನ್ನ ಪತಿಯಿಂದ ಮುಚ್ಚಳಿಕೆ ಬರೆಸಿಕೊಟ್ಟರು. ಈಗ ನಾನು ನನ್ನ ಪತಿಯೊಡನೆ ಒಟ್ಟಾಗಿ ಜೀವನ ಸಾಗಿಸುತ್ತಿದ್ದೇವೆ. ಈ ರೀತಿ ಮಾಹಿತಿ ನೀಡಿದ ಸ್ತ್ರೀಬಂಧು ಒಕ್ಕೂಟಕ್ಕೆ ಹಾಗೂ ಸಂಸ್ಥೆಗೆ ಆಭಾರಿಯಾಗಿದ್ದೇನೆ.

# Family Development through Save A Family Plan

✍ **Sr Premalatha UFS**
**Coordinator**



Save A Family Plan is a Canadian based non-profit international organization encouraging those from developed countries assist families and communities in India. The organization is committed to reduction of poverty in India through sustainable development and the overall strengthening of families and communities. This is made possible through the support and financial assistance of donors from developed countries. The assistance to the families is given through two main programmes namely, Family Development Programme and Community Development Programme.

The Family Development Programme is one of the core programmes of Save A Family Plan since 1965. The beneficiary family receives every month a minimum of $ 20 (twenty Canadian Dollars) as financial support for 6 years. The amount is credited directly to the bank account of the beneficiary family. 100% of the donation amount thus goes directly to the family which has to utilize it for income generative programme/small business of its own and earn an extra income to support the family, build up some assets for its future, which will support it subsequently after the completion of 6 years of financial assistance.

The Save A Family Plan in the then undivided diocese of Chikmagalur was initiated in 1978 and from 1989 onwards the Shimoga Multipurpose Social Service Society (SMSSS) has joined hands with Save A Family Plan India (SAFPI) to successfully carry forward the good initiative of Rev. Monsignor Augustine Kandathil, a Priest from Kerala whose



foresight and concern for the poor inspired him to initiate this programme. Till date 1,800 families have benefitted from this programme under the banner of SAFPI - SMSSS. Out of the 1,800 families 80% of partner families or beneficiaries have come up in life, improving their monthly income extensively.

- 1,800 families have completed the support cycle of six years.
- At present 183 poor and needy families are receiving financial support under this programme.



- The sponsored families are given various types of skill training such as Employee Assistance Programme and Entrepreneurship Development Programme, Budgeting, Planning, Marketing Analysis, Crisis Management, etc.
- The partner families have undertaken good income generative works and have earned extra income for the progress of the family.
- The ongoing families are 133. Shimoga I



  - 55 families, Shimoga II - 58 families and Chitradurga /Davangere - 20 families.

**Benefits of IGP Activities Undertaken by our Partner Families**

- Empowered the partner families by promoting their creative participation in the Self Help Groups, economic independence, leadership,




  self-mobilized decision making and asset creation process;
- Achieved overall development of the family and community through promotion of suitable livelihood initiatives;
- Brought the partner families into the mainstream development activities of society by ensuring active and meaningful



  participation in the development endeavours of various factors;
- The aim of this program is to build the capacity, knowledge and skills of partner families with



  the financial support so that they are able to take up any of the micro-enterprises most suitable for them to lead a happy and healthy life on their own after the six years;
- This is accomplished by identifying the most vulnerable families in the target areas and providing them with financial assistance to help begin and maintain an income generating livelihood, leading to eventual self- reliance;



- Local community financing/ resource mobilization is encouraged, and families undergo entrepreneurship development training. Involvement in Self Help Groups enables individuals gain self-confidence and skills necessary for success;



- This program mainly focuses on creating systemized process of capacity development that will equip target families to begin



addressing their poverty-related issues. Other issues such as environment, health, education, gender and major development issues like poor labour, poor maternal health, food insecurity, malnutrition, poor sanitation, alcoholism, enrolment of children in schools, illiteracy, degraded land, poor yield, and water scarcity are focused on very much.

**Income Generative Activities by the Beneficiaries**

| Sl. No | IGP | No. of families |
|---|---|---|
| 1 | Cloth business | 156 |
| 2 | Bed sheet business | 43 |
| 3 | Building material business | 57 |
| 4 | Carpentry and Furniture | 44 |
| 5 | Chips making | 25 |
| 6 | Coconut business | 36 |
| 7 | Cycle shop | 12 |
| 8 | Candle making | 56 |
| 9 | Egg business | 55 |
| 10 | Dry fish business | 25 |
| 11 | Fancy stores | 45 |
| 12 | Fruits business | 12 |
| 13 | Garland making | 52 |
| 14 | Goat rearing | 265 |
| 15 | Handicraft | 52 |
| 16 | Mat business | 175 |
| 17 | Pappad making | 120 |
| 18 | Petty shop | 45 |
| 19 | Pig rearing | 25 |
| 20 | Rice business | 25 |
| 21 | Sandals making | 10 |
| 22 | Tailoring/stitching | 125 |
| 23 | Tea shop | 15 |
| 24 | Agriculture | 175 |
| 25 | Cow rearing | 125 |
| 26 | Chicks rearing | 25 |
| | | |
| | **Total** | **1,800** |

### An Empowered and Self Reliant Woman

This is a true story. My name is Mrs Margaret Mary. I am a resident of Basavangudi in Shivamogga. I live with my husband and a son. I am a member of an SHG organized by SMSSS for the past 15 years. My husband was formerly working as a daily wage worker, getting very little which was not sufficient

for the maintenance of the family and our son's education. One day the staff from SMSSS visited my house along with the coordinator of SAFP and selected my family for Family Development Programme through which we have benefited a lot.



The organization under the Family Development Programme arranged various modes of awareness and IGP training through which I gained sufficient knowledge and skill to begin my own IGP. Through an experienced person I was trained to prepare candles. At the beginning I received Rs. 15,000 from SAFP. First I bought the equipment to prepare candles. As I had gained sufficient experience in my business of preparing them, I was encouraged to invest more on this and thus expand my business. So I purchased a van to sell candles, incense sticks, religious articles, religious pictures, perfume, etc. near churches, mosques and temples during festivals. From this business intially I was able to make a profit of Rs. 4,000 to 5,000 per month. My



husband and my son after the completion of his 10th have joined me in my business. It is only because of Save A Family Plan I have received a new lease of life and with the support I received from SMSSS we are now in a position to provide jobs to others. My financial situation has improved a lot in these years. I remain ever grateful to SAFPI and SMSSS for their whole-hearted encouragement, training and financial support.

**Mr Anand, Painting Contractor, Harihar**
**9980565274**

K. Shankar
**Sri Mahalaxmi Traders**
224446 (S), 270691 (R),
Cell : 9448628099
Dealers in :
**Phava Bran & Empty Gunny Bags**
Maruthi Rice Mill Building, B.H. Road, Shimoga - 577 201

# Integral Development through Education



✍ **Anie Fiallow**
**Coordinator**

“Education is the most powerful weapon which you can use to change the world,” said Nelson Mandela. In its attempt to make a positive change in the lives of children the Shimoga Multipurpose Social Service Society® has given priority to successfully implement one of its important programmes “Education and Development.” More emphasis is given for formal education, through which the integral development of every beneficiary child is taken care off. The Society implements this programme through the following components.



**Integrated Child Development Programme (ICDP)**

When children were found to be the worst affected due to lack of possibilities to attend regular schooling because of extreme financial constraints and social backwardness and build a bright future for them the thought to support these vulnerable children originated and thus the all important educational support programme called ‘Integrated Child Development Programme’ (ICDP) was intiated as one of the important developmental programme of SMSSS. ICDP was pioneered and launched in the diocese of Shimoga in 1997 during the time of Most Rev. Dr Ignatius Pinto, the first Bishop of the diocese of Shimoga who was later elevated as the Archbishop of the Archdiocese of Bangalore in 1998 during which Rev. Fr Clement D’Souza was the Executive Secretary of SMSSS. The programme received the boost in 2000 when Most Rev. Dr Gerald Isaac Lobo, the Second Bishop of the diocese of Shimoga took over the administration of the diocese. This programme received invaluable support from Rev. Sr Maria Goretti SRA. Under the leadership of Rev. Fr Gilbert Lobo, the Executive Secretary of SMSSS between 2001 to 2006 the programme took a definite shape, flourished very well and the fruit of this is clearly visible now. It was the foresight of these pioneers, their compassion towards poor and needy children and their families which enabled the Society to reach out to most deserving children to dream big and actualise their dream. Under the leadership of Rev. Fr Veeresh V Moras, the Executive Secretary from 2006 and Rev. Fr Richard Pais, the Executive Secretary from 2017



several poor and needy children benefited from the programme. On May 29, 2018 Rev. Fr Clifford Roshan Pinto took over the responsibility as the Executive Secretary of SMSSS and the Director of Chaitanya.

The programme is a reality in SMSSS solely because of the overwhelming generosity of the donor

agencies, Caritas of the Archdiocese of Prague and Slovenska Katolicka Charita (Caritas Slovakia), and all the individual donors who take up the responsibility to sponsor individual child under the banner of these donor agencies. The great



sacrifice of these individual donors for 12 to 17 years to educate one child and the tireless efforts of the donor agencies to find out individual donors



for thousands of poor and marginalized children worldwide is not easy to describe in words. The continued support from the munificent donors and donor agencies has shaped / is shaping the lives of 4,139 children within the geographical area of the diocese of Shimoga. Each individual child receives financial support for 15 to 17 years from standard 1 to post graduation provided the child continues education.

ICDP is one of the most successful programmes of SMSSS through which the Society could reach out to the indigent children who are deprived of



education and a normal childhood environment because of various issues. Irrespective of caste, creed and colour poor needy children from the three districts of Shivamogga, Davanagere and Chitradurga were identified and enrolled under this programme. During the last 21 years this programme has so far provided educational support to over 3211 children. Presently 757 children are continuing their education because of the generosity of the donors. We are proud to state that 731 children have successfully completed their education with qualifications such as BE, MBA, BSc Nursing, MCA, DEd, GNM, HRM, Diploma and ITI courses. Most of those who have completed their education are doing well and leading a happy life.

Every child enrolled under this programme enjoys several benefits such as payment of school/college tuition fee, school/college accessories like bag,



books, etc. and school uniform at the beginning of every academic year. Beneficiaries even receive special gifts and medical assistance. As part of the programme SMSSS conducts various activities throughout the year for the sponsored children in view of enabling every beneficiary to excel in studies as well as other extracurricular activities.



The aim of these camps is to bring to the fore the latent skills and talents from children and also give them important values to build a better personality, improve their behavior, develop their skills, excel in studies, motivate them to dream big in life and also set a perfect goal for their life. All these and many more issues are taken up during



the October and Summer camps. Every child is personally interviewed by the ICDP staff during Summer camps.

Several special programmes have been organized in the past for the integral development of beneficiary children. In May and June 2012 instead of the regular residential summer camps two five-days residential Psycho Spiritual Growth camps entitled "Abhisheka 2012" were organized for all beneficiary children at Sneha Sadan, Sacred Heart Cathedral Campus and Jordan Mukthi Sadan, Malavagoppa, Bhadravathi respectively. The classes and different activities conducted during these camps helped children to retrospect their own lives and improve on their weaknesses so that the future becomes better.

A special residential camp for five days from 17 to 21 April 2017 was organized for all Catholic students from standard 9 onwards at Harihar with the theme 'Yuva Spandana-Summer Thrill 2017.' 620 students including a number of non-ICDP students benefitted from this camp. For the first three days participants were fully engaged with



classes on topics such as 'Youth Walk with Life Skills' and Time Management, etc. Games and cultural activities were also organised. On the fourth and fifth day all were involved in intensive prayer, adoration, Bible studies and worship sessions. The participants experienced the presence of the Holy Spirit in their life.

**Orientation Camps for Tenth Standard Students**

Every year students who are appearing for the standard 10 board examinations for the first time are invited for one or two day camps at Chaitanya for special sessions on how to face the examinations more efficiently. Six well known




and experienced high school teachers are invited as resource persons. Every student receives a

guidebook containing questions and answers as complementary gift which helps them prepare well for the upcoming examinations. These have enormously helped the students to prepare well much in advance for the examinations and score higher marks. 1,726 students have so far benefited from these camps.

**DISHA – Career Advancement Programme (CAP)**

DISHA is a part of the education and development programme of SMSSS and is aimed at preparing students for competitive examinations by motivating them to have self confidence, zeal



and positive approach so that they aim for higher things in life.

**DISHA Programmes**

Herebelow is the list of a few activities organized each year by SMSSS under DISHA:

- Children studying above standard 5 and who have scored more than 65% marks in every subject are noted.
- Through personal counselling and guidance these students are encouraged and motivated to mold their life with a higher dream.
- Students are given sufficient information, guidance and training on different competitive examinations.
- Interested meritorious students are prepared to appear for competitive examinations through quiz competitions, informative camps and personal counselling.
- Information on higher education and job opportunities is collected and passed on to students.
- In collaboration with the Karnataka Regional Organization for Social Service, Bangalore preparatory camps for Public Service Examinations are organized.
- Adequate books, literature and other informative articles are collected and passed on in order to develop and improve knowledge of young students.
- For children from standard 3 onwards who intend to get admissions in Navodaya, Kittur Chennamma, Morarji Desai and other boarding schools relevant information is collected and proper guidance is given.
- We provide information on National Talent Exams (N.T.S.I.), CET, COMED-K, JEE, IIMS, AIEEE, AIPMT, PGCET, CAT, MAT, GMAT, XAT, IAS, IPS, KAS, etc. for higher secondary school students.

**'UNNATI' Loan Scholarship for Higher Education**

Unnati Loan Scholarship for Higher Education is the realisation of the dream of Bishop Gerald Isaac Lobo who was very much concerned that many meritorious students were unable to go for higher education because of financial difficulties. The aim of this programme is to provide interest-free



loan to students to continue their studies. After completing their studies they are supposed to

refund the borrowed amount. So far 407 students have received Unnati Loan Scholarship benefits. A special gathering, SNEHA KOOTA, is organized every year for the beneficiaries of Unnati Loan Scholarship.

On the occasion of the Silver Jubilee of SMSSS a special programme, 'SAHODAYA', was organized at Chaitanya on 18 January 2015 for all former ICDP and Unnati Loan Scholarship beneficiaries. 227 beneficiaries were present for the programme. During the event a special intiative called '**VIDHYADEEPA'**, local child sponsorship programme was launched. Mr Edmund Frank, Professor PGDBM, St Aloysius Autonomous College, Mangalore became the first donor. Mr Ronald D'Silva, a former ICDP beneficiary is the second donor of 'VIDHYADEEPA'. Presently he is working as First Grade Commanding Officer in a Merchandize ship.

**Karnataka Open School and National Institute for Open School**

Youth who can not complete their standard 10 examinations due to unavoidable family circumstances, health problems, unfavorable financial situations or similar such reasons have been given the opportunity to attend tuition classes conducted by SMSSS through KOS and NIOS and appear for the respective board examinations. The classes are held during weekends and the lessons are taught using simple methodology. In the past 14 years SMSSS has helped 674 students complete their standard 10 and either continue their studies or settle down in life with respectable jobs.

**Parents Meetings**

As part of the Integrated Child Development Programme every year parents meetings are held for the parents of all beneficiary children. During the meetings parents along with the children are made to understand the sacrifice made by the individual donors and thus make proper utilization of the benefits received by excelling in studies. Topics such as responsibilities of parents towards their children, availing government benefits, what the child expects from the parents, proper upbringing of their children, the procedure followed in the selection of beneficiaries for sponsorship programme, importance of education, personal hygiene, cleanliness, need for healthy nutrition and preparation of the same, leadership qualities, women empowerment, self employment



and income generating opportunities, etc. are dealt during parents' meetings. It is also made mandatory that the mother of every beneficiary child should be in the SHG of SMSSS.



**Our Esteemed Guests in the Recent Past**

As the Integrated Child Development Programme is financially supported by the donor agencies from Czech Republic and Slovakia the delegates from Caritas Prague and Caritas Slovakia visited the centre in the past 17 years at different times.

1. The most memorable and joyful event for us was to host His Eminence Miloslav Cardinal Vlk of Czech Republic along with the Director of Caritas Prague, Mr Jaroslav Nemec and a

group of Delegates on 25 February 2003. The delegates visited several beneficiary children across the Diocese.

2. On 2 February 2007 a delegation of 15 members from Caritas Prague led by Miss Jarmila Kabatova visited our centre. A sponsor parent, Mrs Marie Dusilkova was among the guests and enjoyed meeting her sponsor child personally. The delegation visited some villages around.

3. In December 2009, a group of delegates from Caritas Slovakia visited the centre for filming life situations of villagers. The visitors had the opportunity to meet children along with their parents and understand their living conditions.

4. On 7 February 2011 we had the pleasure of welcoming a sponsor couple, Mrs and Mr Hyka from Czech Republic who was visiting India and planned to meet their sponsor child Savithri from Honnali.

5. On 29 and 30 May 2012 Mrs Kristina Maralkova and Mrs Natalia Padalcova, officers from Caritas Prague visited the centre. The purpose of the visit was to collect information on the development and achievements of Sponsorship Programme in the diocese and also to view and visit some sites and families to understand the living conditions of the beneficiary children and their families.

6. On 11 March 2013 the President of Caritas Prague, Rev. Fr Vojtech Elias and the Director of Caritas Prague, Mr Jaroslav Nemec paid a short visit to the centre.

**Conclusion**

Educating the poor and marginalized has been the prime motive of this programme of the centre. Thanks to the generosity of thousands of donors from Czech Republic and Slovakia many economically poor and socially marginalized children have seen a bright future and many are on their way. Many such generous hands joining together can take the programme forward and especially if those who have benefitted from this programme make up their mind to make some sacrifice in their life then many more dark lives could be brightened. Our only hope and desire is that the programme should continue to brighten the lives of many more deserving children.

---

**Mary Immaculate Convent, Shimoga**

**Ursuline Franciscan Sisters, Mysore Province**

**Kishan Handicrafts - Mr Subhash, Shimoga**

**Geetha General Stores, Shimoga**

**National Super Bazar, Thirthahalli**

**K. R. K. Novelties, Shimoga**

# ನಿಸರ್ಗದಾನದತ್ತ ಸಂಪನ್ಮೂಲ ನಿರ್ವಹಣೆ



✍ ಮಧು
ಸಂಯೋಜಕರು

ಸೃಷ್ಟಿಯು ಮಾನವನಿಗೆ ಅಪರಿಮಿತವಾದ ನೈಸರ್ಗಿಕ ಸಂಪನ್ಮೂಲಗಳನ್ನು ಕೊಟ್ಟಿದೆ. ಆದರೆ ಬಂಗಾರದ ಮೊಟ್ಟೆ ಕೊಡುವ ಕೋಳಿಯನ್ನು ದುರಾಸೆಯಿಂದ ಕೊಂದಂತೆ, ಮಾನವ ನೈಸರ್ಗಿಕ ಸಂಪನ್ಮೂಲಗಳನ್ನು ಮಿತಿಯಿಲ್ಲದೆ ದುರಾಸೆಯಿಂದ ಬಳಸಿ ವಿನಾಶದ ಅಂಚಿಗೆ ತಂದು ನಿಲ್ಲಿಸಿದ್ದಾನೆ. ಇಂದಿನ ವೈಜ್ಞಾನಿಕ ಯುಗದಲ್ಲಿ ತಾಂತ್ರಿಕವಾಗಿ ಅನೇಕ ರಂಗಗಳಲ್ಲಿ ಅಭಿವೃದ್ಧಿಯಾಗಿದ್ದರೂ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಹಾಗೂ ನಿರ್ವಹಣೆ ವೈಜ್ಞಾನಿಕವಾಗಿ ಆಗುತ್ತಿಲ್ಲ. ಬದಲಾಗಿ ಭೂಮಿ, ಗಾಳಿ, ನೀರು ಎಲ್ಲವನ್ನು ಕಲುಷಿತಗೊಳಿಸಿ ನಮಗೆ ನಾವೇ ಮಾರಕವಾಗುತ್ತಿದ್ದೇವೆ. ಮುಖ್ಯವಾಗಿ ಕೃಷಿಯಲ್ಲಿ ಅತಿಯಾದ ರಾಸಾಯನಿಕ ಗೊಬ್ಬರ ಹಾಗೂ ಔಷಧಿಗಳ ಬಳಕೆಯಿಂದ ಭೂಮಿಯಲ್ಲಿನ ಸತ್ವ ನಾಶವಾಗಿ ನಿರೀಕ್ಷಿಸಿದ ಲಾಭ ಗಳಿಸದೆ ಸಾಲದಲ್ಲಿ ಮುಳುಗಿ ಆತ್ಮಹತ್ಯೆಗೆ ಶರಣಾಗುತ್ತಿರುವ ಅನೇಕ ರೈತರನ್ನು ಕಾಣುತ್ತೇವೆ. ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಸಿಕೊಂಡು ಸಾವಯವ ಕೃಷಿ ಪದ್ಧತಿ ಬಿಟ್ಟು ರೈತರೆಲ್ಲರು ರಾಸಾಯನಿಕಗಳ ಬಳಕೆಗಾಗಿ ಹೆಚ್ಚು ಹೆಚ್ಚು ಖರ್ಚು ಮಾಡುತ್ತಾ ನಷ್ಟ ಅನುಭವಿಸುತ್ತಿರುವುದು ಸರ್ವೇಸಾಮಾನ್ಯವಾಗಿದೆ. ಇದರಿಂದ ಆರ್ಥಿಕ ಪರಿಸ್ಥಿತಿ ಮಾತ್ರವಲ್ಲ ಪರಿಸರ ಮತ್ತು ಮಾನವನ ಆರೋಗ್ಯ ಎರಡನ್ನೂ ಕಳೆದುಕೊಂಡು ಕ್ಲಿಷ್ಟಕರ ಪರಿಸ್ಥಿತಿಯಲ್ಲಿದ್ದೇವೆ. ಪರಿಸರವನ್ನು ಆರೋಗ್ಯಯುತವಾಗಿ ಕಾಯ್ದುಕೊಂಡು ನೈಸರ್ಗಿಕ ಸಂಪನ್ಮೂಲಗಳನ್ನು ನಮ್ಮ ಮುಂದಿನ ಪೀಳಿಗೆಯವರೆಗೂ ಸಂರಕ್ಷಿಸಿ ಕೊಡುವುದು ನಮ್ಮ ಹೊಣೆ.

ಸಂಸ್ಥೆಯ ಪ್ರಮುಖ ಉದ್ದೇಶಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯೂ ಒಂದು. ಎಲ್ಲಾ ಕಡೆಯೂ ಮಹಿಳಾ ಸ್ವ-ಸಹಾಯ ಸಂಘಗಳ ರಚನೆ ಹಾಗೂ ಅವುಗಳ ಮೂಲಕ ಅಭಿವೃದ್ಧಿಯನ್ನು ಸಾಧಿಸುವುದು ಸಾಧ್ಯ ಎಂದು ಸಿದ್ಧವಾಗಿದೆ. ಪುರುಷ ಸ್ವ-ಸಹಾಯ ಸಂಘಗಳನ್ನು ರಚಿಸುವುದು ಹಾಗೂ ಅವುಗಳನ್ನು ನಿರಂತರವಾಗಿ ಬೆಳೆಸುವುದು ತುಂಬಾ ಕಷ್ಟ ಎನ್ನುವುದು ಎಲ್ಲರ ಅಭಿಪ್ರಾಯ. ಆದರೆ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಪುರುಷ ರೈತರ ಭಾಗವಹಿಸುವಿಕೆ ತುಂಬಾ ಮುಖ್ಯ ಎಂಬ ನಮ್ಮ ನಂಬಿಕೆಯ ಮೇಲೆ 2011 ಸಪ್ಟೆಂಬರ್ ತಿಂಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಯೋಜನೆ ಪ್ರಾರಂಭವಾಯಿತು. ಅದರಲ್ಲಿ ಪ್ರಮುಖವಾಗಿ ಮೇಲಿನಬೇಸಿಗೆ, ಮುಂಬಾರು, ಸೊನಲೆ, ಚಿಕ್ಕಜೇನಿ, ಎಂ.ಗುಡ್ಡೆಕೊಪ್ಪ ಈ 5




ಗ್ರಾಮ ಪಂಚಾಯತಿಗಳನ್ನು ಆಯ್ಕೆಮಾಡಿಕೊಂಡು, ಇಲ್ಲಿಯ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸಂಘಟನೆ ಮಾಡಿ ಅವರ ಮೂಲಕ ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ ಮಾಡುವ ಉದ್ದೇಶದೊಂದಿಗೆ ಯೋಜನೆಯನ್ನು ಪ್ರಾರಂಭಿಸಲಾಯಿತು.

**ರೈತ ಸಂಘಗಳ ರಚನೆ:** 5 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ರೈತರೊಡನೆ ಸಂವಾದ ಪ್ರಾರಂಭಿಸಿ ಯೋಜನೆಯ ಉದ್ದೇಶಗಳನ್ನು ಅವರ ಜೊತೆ ಚರ್ಚಿಸಿ, ಅದರ ಮಹತ್ವ, ಉಪಯೋಗ ಹಾಗೂ ಅವರ ಜವಾಬ್ದಾರಿಗಳನ್ನು ಅವರಿಗೆ ಮನದಟ್ಟು ಮಾಡಿ ಅವರ ವಿಶ್ವಾಸವನ್ನು ಗಳಿಸಲಾಯಿತು.



ನಂತರ ಅದೆಲ್ಲವೂ ಸಫಲವಾಗಬೇಕಾದರೆ ಮೊದಲು ರೈತರು ಸಂಘಟಿತರಾಗಬೇಕಾದ ಅವಶ್ಯಕತೆ ಅವರಿಗೆ ತಿಳಿಸಿ



ಮಹಿಳಾ ಸಂಘಗಳ ರೀತಿಯಲ್ಲಿ ರೈತ ಸಂಘಗಳನ್ನು ರಚಿಸಲು ಪ್ರಾರಂಭಿಸಿದೆವು. ಪ್ರಾರಂಭದಲ್ಲಿ ರೈತರಿಂದ ನೀರಸ ಪ್ರತಿಕ್ರಿಯೆ ಬಂದರೂ ನಿರಂತರ ಭೇಟಿ, ಚರ್ಚೆ, ಸಂವಾದಗಳ ಮೂಲಕ ಸುಮಾರು 1,000 ರೈತರನ್ನು ಸಂಘಟಿಸಿ 100 ರೈತ ಸಂಘಗಳನ್ನು ರಚಿಸಲು ಯಶಸ್ವಿಯಾಗಿದ್ದೇವೆ. ಪ್ರತಿ ಸಂಘವೂ ಕೂಡ 10 ರಿಂದ 20 ಸದಸ್ಯರನ್ನು ಹೊಂದಿದ್ದು, ಪ್ರತಿ ತಿಂಗಳು ಸಭೆ, ನಿರಂತರ ಉಳಿತಾಯ, ಅದರಲ್ಲಿಯೇ ಆಂತರಿಕ ಸಾಲವನ್ನು ರೈತರಿಗೆ ನೀಡುತ್ತಿದ್ದು, ಮರುಪಾವತಿ, ಜೊತೆಗೆ ತಮ್ಮ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ಕೈಗೊಳ್ಳುವುದು, ಸರಕಾರಿ ಸೌಲಭ್ಯಗಳನ್ನು ಪಡೆಯುವುದು, ಇತ್ಯಾದಿ ಚಟುವಟಿಕೆಗಳು ನಿರಂತರವಾಗಿ ನಡೆಯುತ್ತಿವೆ.

**ಪಂಚಾಯತಿ ಮಟ್ಟದಲ್ಲಿ ರೈತಬಂಧು ಒಕ್ಕೂಟ:** ಗ್ರಾಮ ಪಂಚಾಯತಿ ಮಟ್ಟದಲ್ಲಿರುವ ಎಲ್ಲ ರೈತ ಸಂಘಗಳು ಹೆಚ್ಚಿನ ಅಭಿವೃದ್ಧಿಗಾಗಿ ಹಾಗೂ ಒಗ್ಗಟ್ಟಿನ ಮೂಲಕ ವಿವಿಧ ಸಮಸ್ಯೆಗಳನ್ನು ನಿರ್ವಹಿಸಲು ಆಯಾ ಗ್ರಾಮ ಪಂಚಾಯತಿ ಮಟ್ಟದಲ್ಲಿ ರೈತಬಂಧು ಒಕ್ಕೂಟಗಳನ್ನು ರಚಿಸಲು ನಿರ್ಧರಿಸಿಕೊಂಡಿದ್ದು, ಅದರಂತೆ ಒಟ್ಟು 5 ರೈತಬಂಧು



ಒಕ್ಕೂಟಗಳು ರಚನೆಯಾಗಿವೆ. ಈ ಒಕ್ಕೂಟಗಳನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ರೈತ ಕುಟುಂಬಗಳು ಅಭಿವೃದ್ಧಿ ಹೊಂದಲು, ವಿವಿಧ ಸರಕಾರಿ ಸೌಲಭ್ಯಗಳನ್ನು ಪಡೆಯಲು ಹಾಗೂ ರೈತ ಸಂಬಂಧಿ ಸಮಸ್ಯೆಗಳನ್ನು ನಿರ್ವಹಿಸಲು ಸಮರ್ಥವಾಗುವಂತೆ ಬೆಳೆಸುವುದು ಇದರ ಪ್ರಮುಖ ಉದ್ದೇಶವಾಗಿದೆ.

**ಸಾವಯವ ಕೃಷಿಯಿಂದ ಸಮೃದ್ಧಿ:** ರೈತ ಸಂಘಗಳು ರಚನೆಯಾಗಿ ನಿರಂತರ ಚಟುವಟಿಕೆಗಳನ್ನು ತಾವೇ ನಿರ್ವಹಿಸಿಕೊಂಡು ಹೋಗುವಂತಾದಾಗ ಕೃಷಿ ಪದ್ಧತಿಯ ಮೇಲೆ ಅವರು ಚಿಂತನೆ ನಡೆಸುವಂತೆ ಮಾಡಿದೆವು. ಈಗಿನ ಕೃಷಿ ಪದ್ಧತಿ, ಅದರ ಸಮಸ್ಯೆಗಳು, ನಮಗೆ ಆಗುತ್ತಿರುವ ಲಾಭ ನಷ್ಟಗಳು ಇತ್ಯಾದಿಗಳನ್ನು ಗಮನಿಸಿದಾಗ ರೈತರು ಸಾವಯವ ಕೃಷಿಯನ್ನು ಲಾಭಯುತವಾಗಿ ಅನುಷ್ಠಾನಗೊಳಿಸಲು ನಿರ್ಧರಿಸಿ ಅದಕ್ಕೆ



ಬೇಕಾದ ತರಬೇತಿ, ಮಾಹಿತಿ, ಕ್ಷೇತ್ರ ಭೇಟಿ ಮಾದರಿ ರೈತರಿಂದ ಅನುಭವ ಹಂಚಿಕೆ ಹಾಗೂ ಸಹಾಯವನ್ನು ಸಂಸ್ಥೆಯಿಂದ ಬಯಸಿದಾಗ, ಸಂಸ್ಥೆಯು ಕೃಷಿ ವಿಜ್ಞಾನ ಕೇಂದ್ರ, ಕೃಷಿ ಇಲಾಖೆ ಹಾಗೂ ಇತರ ಸಂಸ್ಥೆಗಳ ಸಹಕಾರದೊಂದಿಗೆ ಅನೇಕ ತರಬೇತಿ ಹಾಗೂ ಕಾರ್ಯಾಗಾರಗಳ ವ್ಯವಸ್ಥೆ ಮಾಡಿತು. ಕಳೆದ ಅರು ವರ್ಷಗಳ ಫಲಿತಾಂಶ ಅಮೋಘವಾದುದು.

- 100ಕ್ಕೂ ಹೆಚ್ಚು ಸಣ್ಣ ಮತ್ತು ಅತೀ ಸಣ್ಣ ರೈತರು ಕೃಷಿ ಉತ್ಪಾದನಾ ವೆಚ್ಚವನ್ನು ಶೇ 20ರಷ್ಟು ಕಡಿಮೆಗೊಳಿಸಿದ್ದಾರೆ.
- 550ಕ್ಕೂ ಹೆಚ್ಚು ರೈತರು ಸಾವಯವ ಕೃಷಿಯ ಮಹತ್ವ ಅರಿತು ಅದಕ್ಕೆ ಪೂರಕವಾದ ಕಾರ್ಯಚಟುವಟಿಕೆಗಳ ಮೂಲಕ ಸಾವಯವ ಕೃಷಿ ಅಳವಡಿಸಿದ್ದಾರೆ.
- 5 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 195ಕ್ಕೂ ಹೆಚ್ಚು ಎರೆಹುಳು ತೊಟ್ಟಿಗಳ ರಚನೆಯಾಗಿದ್ದು, ಅದರಲ್ಲಿ 85 ರೈತರು ತೊಟ್ಟಿಗಳಿಗೆ ಕೃಷಿ ಇಲಾಖೆಯ ಮೂಲಕ ಸಹಾಯಧನ ಪಡೆದು ಇತರರಿಗೆ ಮಾದರಿಯಾಗಿದ್ದಾರೆ.



- ಸಂಸ್ಥೆಯ ಸಹಾಯಧನದೊಂದಿಗೆ 80 ಸಂಘಗಳು 350 ಜೀವಾಮೃತ ಡ್ರಮ್ ಪಡೆದು

ಹಾಗೂ ಜೀವಾಮೃತ ತಯಾರಿಕೆಯ ತರಬೇತಿ ಪಡೆದು 421 ರೈತರು ಜೀವಾಮೃತ ತಯಾರಿಸಿ ತಮ್ಮ ಜಮೀನಿಗೆ ಬಳಸುತ್ತಿದ್ದಾರೆ.

- 5 ಗ್ರಾಮ ಪಂಚಾಯತಿ ವ್ಯಾಪ್ತಿಯ 43 ರೈತರು ಬಯೋಗ್ಯಾಸ್‌ನ ಘಟಕಗಳನ್ನು ರಚಿಸಿ ನೈಸರ್ಗಿಕ



ಸಂಪನ್ಮೂಲಗಳನ್ನು ಸಮರ್ಪಕವಾಗಿ ಬಳಕೆಮಾಡಿಕೊಂಡು ಇಂಧನವನ್ನು ಉಳಿಸಿದ್ದಾರೆ ಹಾಗೂ ಅದರಿಂದ ಬರುವ ಸ್ಲರಿಯನ್ನು ತಮ್ಮ ಜಮೀನಿಗೆ ಬಳಸುತ್ತಿದ್ದಾರೆ.

- 5 ಗ್ರಾಮ ಪಂಚಾಯತಿಯ 81 ರೈತರು ಸಂಸ್ಥೆಯ ಮೂಲಕ 131 ಅಸ್ತ್ರ ಒಲೆಗಳನ್ನು ಪಡೆದು ನೈಸರ್ಗಿಕ



ಸಂಪನ್ಮೂಲಗಳ ಸದ್ಬಳಕೆಯಿಂದ ಉರುವಲು ಹಾಗೂ ಇಂಧನವನ್ನು ಉಳಿಸುತ್ತಿದ್ದಾರೆ.

- 5 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 215 ರೈತರು ಸಂಸ್ಥೆಯಿಂದ 190 ಸೋಲಾರ್ ಲ್ಯಾಂಟನ್ ಮತ್ತು 25 ಸೋಲಾರ್ ಕುಕ್ಕರ್‌ಗಳನ್ನು ಪಡೆದು ವಿದ್ಯುತ್ ಉಳಿಸುವಿಕೆಗೆ ಸಹಕಾರಿಯಾಗಿದ್ದಾರೆ.

- 315 ರೈತರು ಶ್ರೀ ಪದ್ಧತಿ ನಾಟಿ ಮತ್ತು ಬೀಜೋಪಚಾರದ ತರಬೇತಿ ಪಡೆದು 273 ರೈತರು ತಮ್ಮ ಜಮೀನಿನಲ್ಲಿ ಶ್ರೀ ಪದ್ಧತಿ ನಾಟಿ ಅಳವಡಿಸಿ ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ಉತ್ತಮ ಇಳುವರಿ ಮತ್ತು ಆದಾಯವನ್ನು ಪಡೆದುಕೊಂಡಿದ್ದಾರೆ.

- 5 ಗ್ರಾಮ ಪಂಚಾಯತಿ ವ್ಯಾಪ್ತಿಯ 5 ಹಳ್ಳಿಗಳಲ್ಲಿ ಸೀಡ್ ಬ್ಯಾಂಕ್ ಮಾಡಿದ್ದು, ಸ್ಥಳೀಯ ಬಿತ್ತನೆ ಬೀಜ ಸಂಗ್ರಹಿಸಿ ಸ್ಥಳೀಯವಾಗಿ ರೈತರು ಬಿತ್ತನೆ ಬೀಜವನ್ನು ವಿನಿಮಯ ಮಾಡಿಕೊಳ್ಳುವುದರ ಮೂಲಕ ಸಾವಯವ ಕೃಷಿಗೆ ಸ್ಥಳೀಯ ಬಿತ್ತನೆ ಬೀಜ ಪೂರಕ ಮಾಡುತ್ತಿರುವುದು ಒಂದು ವಿನೂತನ ಪ್ರಯೋಗ.

- **ಸ್ವ–ಉದ್ಯೋಗದಿಂದ ಸ್ವಾವಲಂಬನೆ:** ಉತ್ತಮ ಜೀವನ ನಿರ್ವಹಣೆಗಾಗಿ ಕೃಷಿಯ ಜೊತೆಗೆ ಅವರ ಆದಾಯ ಹೆಚ್ಚಿಸಲು ಇತರ ಸ್ವ–ಉದ್ಯೋಗ ಮಾಡುವ ಸಾಧ್ಯತೆಗಳ ಬಗ್ಗೆಯೂ ಕೂಡ ಚಿಂತನೆ ಮಾಡಲಾಯಿತು. ಕೃಷಿಗೆ ಪೂರಕವಾಗಿ ಅಥವಾ ಪರ್ಯಾಯವಾಗಿ ತಮ್ಮ ಬಿಡುವಿನ ವೇಳೆಯಲ್ಲಿ ಅಥವಾ ಕುಟುಂಬದ ಇತರ



ಸದಸ್ಯರ ಸಹಕಾರದೊಂದಿಗೆ ವಿವಿಧ ಸ್ವ–ಉದ್ಯೋಗಗಳನ್ನು ಲಾಭದಾಯಕವಾಗಿ ಹೇಗೆ ಮಾಡಬಹುದೆಂಬುದರ ಕುರಿತು ಅನೇಕ ತರಬೇತಿಗಳನ್ನು ಆಯೋಜಿಸಲಾಯಿತು. ಅವುಗಳಲ್ಲಿ ಹೈನುಗಾರಿಕೆ, ತರಕಾರಿ ಬೆಳೆಸುವುದು, ಬಾಳೆ ಬೆಳೆಸುವುದು, ಮೀನು ಸಾಕಾಣಿಕೆ, ಕೋಳಿ ಸಾಕಾಣಿಕೆ, ಕುರಿ ಸಾಕಾಣಿಕೆ, ವಿವಿಧ ತರಕಾರಿ ಸೊಪ್ಪು ಬೆಳೆಸುವಿಕೆ, ಇತ್ಯಾದಿಗಳು ಪ್ರಮುಖವಾಗಿವೆ. ಈ ತರಬೇತಿಗಳನ್ನು ವಿವಿಧ ಇಲಾಖೆ ಹಾಗೂ ಸಂಸ್ಥೆಗಳ ಸಹಯೋಗದೊಂದಿಗೆ ಆಯೋಜಿಸಿ ಸರಕಾರಿ ಸೌಲಭ್ಯಗಳನ್ನು ಕೂಡ ಪಡೆಯಲು ಅವರನ್ನು ಪ್ರೋತ್ಸಾಹಿಸಲಾಗಿದೆ. ಅಷ್ಟು ಮಾತ್ರವಲ್ಲ, ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ರಾಷ್ಟ್ರೀಯ



ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕುರಿತು ಮಾಹಿತಿ ಹಾಗೂ ತರಬೇತಿ ನೀಡುವುದರ ಮೂಲಕ ರಾಷ್ಟ್ರೀಯ ಯೋಜನೆಗಳಲ್ಲಿ ತಮ್ಮ ಪಾತ್ರ ಹಾಗೂ ಜವಾಬ್ದಾರಿ ನಿರ್ವಹಿಸಲು ಮಾರ್ಗದರ್ಶನ ನೀಡಲಾಗಿದೆ. ಆರು ವರ್ಷಗಳ ಸಾಧನೆಯ ಅಂಕಿಅಂಶಗಳು ಶ್ರಮಕ್ಕೆ ಸಂದ ಫಲ.

- 500 ರೈತರು ಸ್ವ–ಉದ್ಯೋಗದ ಕುರಿತು ಕೃಷಿ ವಿಜ್ಞಾನ ಕೇಂದ್ರ ಮತ್ತು ಎಸ್.ಎಮ್.ಎಸ್.ಎಸ್.ಸಂಸ್ಥೆಯ ಮೂಲಕ ತರಬೇತಿಯನ್ನು ಪಡೆದು, ಅದರಲ್ಲಿ 100ಕ್ಕೂ ಹೆಚ್ಚು ಸಣ್ಣ ಮತ್ತು ಅತೀ ಸಣ್ಣ ರೈತರು ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಲು ಪರ್ಯಾಯ ಆದಾಯ ಚಟುವಟಿಕೆಗಳನ್ನು ಪ್ರಾರಂಭಿಸಿದ್ದಾರೆ. ಉಳಿದವರು ಕೂಡ ಪ್ರಾರಂಭಿಸಲು ವ್ಯವಸ್ಥೆ ಮಾಡುತ್ತಿದ್ದಾರೆ.
- ಇದುವರೆಗೆ 43 ಸಂಘಗಳಲ್ಲಿ 113 ರೈತರು ಸಂಸ್ಥೆಯಿಂದ ಬಡ್ಡಿರಹಿತ ಸಾಲ ಪಡೆದು ಹೈನುಗಾರಿಕೆ, ತರಕಾರಿ ಬೆಳೆಸುವುದು ಹಾಗೂ ಎರೆಹುಳು ಗೊಬ್ಬರ ತಯಾರಿಸುವುದರ ಮೂಲಕ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ.
- 25 ಹಳ್ಳಿಗಳಲ್ಲಿ 370 ರೈತರು ಮೀನು ಸಾಕಾಣಿಕೆ, ಹೈನುಗಾರಿಕೆ, ತರಕಾರಿ ಹಾಗೂ ಬಾಳೆ ಮುಂತಾದ ವಿವಿಧ ರೀತಿಯ ತರಕಾರಿಗಳನ್ನು ಬೆಳೆಸುವ ಮೂಲಕ ಸ್ವ–ಉದ್ಯೋಗ ಮಾಡುತ್ತಿದ್ದು ತಮ್ಮ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ.
- 5 ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 175ಕ್ಕೂ ಹೆಚ್ಚು ರೈತರು ಪಂಚಾಯತ್ ರಾಜ್ ವ್ಯವಸ್ಥೆ ಹಾಗೂ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಯೋಜನೆಯ ಆದಾಯ ಉತ್ಪನ್ನ ಚಟುವಟಿಕೆ ತರಬೇತಿಗಳಲ್ಲಿ ಭಾಗವಹಿಸಿ ಗ್ರಾಮಸಭೆಗಳ ಕುರಿತು ಮಾಹಿತಿ ಪಡೆದು ಗ್ರಾಮ/ವಾರ್ಡ್/ಜಮಾಬಂಧಿ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಯೋಜನೆಯ ಆದಾಯ ಉತ್ಪನ್ನ ಚಟುವಟಿಕೆ ಕಾಮಗಾರಿಗಳನ್ನು ಗುರುತಿಸಿ ಕ್ರಿಯಾಯೋಜನೆ ಸಿದ್ಧಪಡಿಸಿ 100 ದಿನ ಕೆಲಸ ಪೂರೈಸಿ ಕನಿಷ್ಠ ಕೂಲಿ ಪಡೆಯುತ್ತಿದ್ದಾರೆ.




- ಉದ್ಯೋಗ ಖಾತ್ರಿ ಯೋಜನೆಯ ಮೂಲಕ 32 ರೈತರು ಕೊಟ್ಟಿಗೆ ನಿರ್ಮಾಣ, 89 ರೈತರು ಕುಡಿಯುವ ನೀರಿನ ಬಾವಿ, 115 ರೈತರು ಕೃಷಿ ಹೊಂಡ ಹಾಗೂ ಕೃಷಿ ಬಾವಿಯನ್ನು ಪಡೆದು ತಮ್ಮ ವೈಯಕ್ತಿಕ ಕಾಮಗಾರಿ ಹಾಗೂ ವೈಯಕ್ತಿಕ ಕೂಲಿ ಪಡೆದುಕೊಂಡಿದ್ದಾರೆ. ಇಷ್ಟು ಮಾತ್ರವಲ್ಲ ಉದ್ಯೋಗ ಖಾತ್ರಿ ಯೋಜನೆಯಡಿ ವಿವಿಧ ಕಾಮಗಾರಿಗಳನ್ನು ಕೈಗೊಳ್ಳುವುದರ ಮೂಲಕ ರೈತರು ತಮ್ಮ ಕುಟುಂಬದ ಆದಾಯವನ್ನು ಹೆಚ್ಚಿಸಿಕೊಂಡಿದ್ದಾರೆ ಮಾತ್ರವಲ್ಲ ಪರಿಸರ ಸಂರಕ್ಷಣೆಯಲ್ಲಿ ತಮ್ಮನ್ನೇ ತೊಡಗಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇದೇ ರೀತಿ ರೈತರು ಸಂಘಟಿತರಾದರೆ ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ.

**ಯಶೋಗಾಥೆ**

ನಾನು ಚೌಡಪ್ಪ. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಚಿಕ್ಕಜೇನಿ ಪಂಚಾಯತಿಯ ಹಿರೇಮೈತೆ ಗ್ರಾಮದ ನಿವಾಸಿ.



ನನ್ನ 2.5 ಎಕರೆ ಜಮೀನಿನಲ್ಲಿ ಕೃಷಿ ಮಾಡುತ್ತಾ ಜೀವನ ಸಾಗಿಸುತ್ತಿದ್ದೇನೆ. ಅಡಿಕೆ ಹಾಗೂ ಭತ್ತ ಬೆಳೆಯುವುದರ

ಮೂಲಕ ಒಳ್ಳೆಯ ಜೀವನದ ಕನಸು ಕಾಣುತಿದ್ದೆ. ಆದರೆ ಬರುವ ಆದಾಯ ಕುಟುಂಬದ ನಿರ್ವಹಣೆಗೆ ಸಾಕಾಗದೆ ಮಕ್ಕಳ ಬೇಕುಬೇಡಗಳನ್ನು ಪೂರೈಸುವುದು ಕಷ್ಟವಾಗಿತ್ತು. ನಾನೂ ಕೂಡ ಇತರರಂತೆ ಕೃಷಿಯಲ್ಲಿ ರಾಸಾಯನಿಕಗಳ ಬಳಕೆ ಮಾಡುತ್ತಿದ್ದೆ. ಒಂದು ಎಕರೆ ಭತ್ತ ಬೆಳೆಯಲು ಸುಮಾರು ರೂ. 15,000/–ಗಳವರೆಗೆ ಖರ್ಚು ಮಾಡುತಿದ್ದೆ. ಆದರೆ ನನಗೆ ಸಿಗುತಿದ್ದ ಲಾಭ ಕೇವಲ ರೂ. 5,000/–. ಜೀವನ ನಿರ್ವಹಣೆ ಕಷ್ಟವಾಗಿ ಏನು ಮಾಡಬೇಕೆಂದು ದಿಕ್ಕೇ ತೋಚದಂತಾಗಿತ್ತು.



ಇಂಥ ಪರಿಸ್ಥಿತಿಯಲ್ಲಿರುವಾಗ, ಒಂದು ದಿನ ಎಸ್.ಎಮ್.ಎಸ್.ಎಸ್.ಸಂಸ್ಥೆಯ ಕಾರ್ಯಕರ್ತರು ರೈತರ ಸ್ವ–ಸಹಾಯ ಸಂಘಗಳನ್ನು ರಚಿಸುತ್ತಿರುವ ಬಗ್ಗೆ ಅರಿತು ಬಸವೇಶ್ವರ ರೈತ ಸ್ವ–ಸಹಾಯ ಸಂಘದಲ್ಲಿ ಸೇರಿಕೊಂಡೆ. ಅದರಲ್ಲಿ ನನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡೆ. ಸಂಘದಲ್ಲಿ ಉಳಿತಾಯ



ಮಾಡುವುದರ ಜೊತೆಗೆ ಸಂಸ್ಥೆಯ ಎಲ್ಲಾ ತರಬೇತಿಗಳಲ್ಲಿ ಭಾಗವಹಿಸಿ ಸಾವಯವ ಕೃಷಿಯ ಬಗ್ಗೆ ತಿಳಿದುಕೊಂಡೆ. ಒಂದು ದಿನ ಎರೆಹುಳು ತೊಟ್ಟಿ ನಿರ್ಮಾಣದ ಬಗ್ಗೆ ಮತ್ತು ಅದರ ಉಪಯೋಗಗಳ ಬಗ್ಗೆ ತಿಳಿದುಕೊಂಡು ಅದನ್ನು ಅನುಷ್ಠಾನಗೊಳಿಸಲು ನಿರ್ಧರಿಸಿದೆ. ಸಂಘದಲ್ಲಿ ಸಾಲ ಮತ್ತು ಇಲಾಖೆಯ ಸಹಾಯದೊಂದಿಗೆ ಎರೆಹುಳು ತೊಟ್ಟಿ ನಿರ್ಮಿಸಿ ಜೊತೆಗೆ ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯ ಮಹತ್ವ ಅರಿತು ಬಯೋಗ್ಯಾಸ್ ರಚನೆಯ ಕುರಿತು ಮಾಹಿತಿ ಹೊಂದಿ ಬಯೋಗ್ಯಾಸ್ ರಚಿಸಿದೆ.

ಕೃಷಿಯ ಜೊತೆಗೆ ಸುತ್ತಮುತ್ತಲಿನ ಜಾಗದಲ್ಲಿ ಶುಂಠಿ, ಬಾಳೆ ಹಾಗೂ ತರಕಾರಿ ಬೆಳೆಸಲು ಪ್ರಾರಂಭಿಸಿದೆ. ಸಾವಯವ ಕೃಷಿಯ ಜೊತೆಗೆ ಸ್ಥಳೀಯ ಸಂಪನ್ಮೂಲಗಳ ಬಳಕೆ ಮಾಡುವುದನ್ನು ಕಲಿತ ಮೇಲೆ ಒಂದು ಎಕರೆಗೆ ರೂ. 5,000/– ಖರ್ಚು ಕಡಿಮೆ ಆಯಿತು ಜೊತೆಗೆ ತರಕಾರಿ ಹಾಗೂ ಇತರ ಬೆಳೆ ಅಳವಡಿಸಿಕೊಂಡಿದ್ದರಿಂದ ಪ್ರತಿ ತಿಂಗಳಿಗೆ ರೂ. 5,000/– ಹೆಚ್ಚುವರಿ ಆದಾಯ ಬರಲು ಆರಂಭವಾಯಿತು. ಈಗ ಕನಸುಗಳು ಪುನಃ ಗರಿಗೆದರಿ ಜೀವನ ಸುಂದರವೆನಿಸುತ್ತಿದೆ. ಇಂಥ ಸಮೃದ್ಧ ಜೀವನದ ಅವಕಾಶ ಮಾಡಿಕೊಟ್ಟ ಎಸ್.ಎಮ್.ಎಸ್.ಎಸ್.ಸಂಸ್ಥೆಗೆ ನಾನು ಎಂದಿಗೂ ಚಿರಋಣಿ.

**ತಾಲ್ಲೂಕು ಮಟ್ಟದ ರೈತ ಸಮಾವೇಶದ ಮೂಲಕ ರೈತರ ಮುಖದಲ್ಲಿ ಸಂಘಟನೆಯ ಮಂದಹಾಸ**

5 ಗ್ರಾಮ ಪಂಚಾಯತಿ ವ್ಯಾಪ್ತಿಯ 74 ಸಂಘದ 950 ರೈತರು ಹೊಸನಗರ ತಾಲ್ಲೂಕು ಮಟ್ಟದ ರೈತ ಸಮಾವೇಶವನ್ನು ದಿನಾಂಕ 20–11–2017ರಂದು ವಿದ್ಯಾಸಂಘ ರಂಗಮಂದಿರದಲ್ಲಿ ಬಹು ವಿಜೃಂಭಣೆ ಹಾಗೂ ಸಾಂಪ್ರದಾಯಿಕ ಸಡಗರದ ಮೂಲಕ ಆಚರಣೆ ಮಾಡಿ ಸಮಾವೇಶದಲ್ಲಿ ಮಾದರಿ ಕೃಷಿ ತಜ್ಞರಿಂದ



ಅನುಭವ ಹಂಚಿಕೆ, ಪರ್ಯಾಯ ಬೆಳೆಗಳನ್ನು ಬೆಳೆಸುವುದರ ಪ್ರಾತ್ಯಕ್ಷತೆ, ರೈತರ ಸಂಘಟನೆಯ ಮಹತ್ವ, ರೈತರ ಸಮಸ್ಯೆಗಳ ಕುರಿತು ವಿಚಾರ ಸಂಕೀರಣ, ಆಧುನಿಕ ಕೃಷಿ ಪದ್ಧತಿಯ ಬಳಕೆ ಹಾಗೂ ಹೊಸ ಹೊಸ ಕೃಷಿ ಪದ್ಧತಿಯ ಮನವರಿಕೆ ಮಾಡುವುದರ ಮೂಲಕ ರೈತರು ಸಂಘಟನೆಯ ಮಹತ್ವ ಅರಿತು ಎಲ್ಲರೂ ಒಗ್ಗಟ್ಟಾಗಿ ಅವರ ಬೆಳೆಗಳಿಗೆ ಸೂಕ್ತ ಬೆಲೆ ನಿರ್ಧಾರ ಮಾಡಲು ಅವಕಾಶ ಸಿಗುವ ಸಾಧ್ಯತೆಯಿದೆ ಎಂಬ ಆಶಾಭಾವ ಮೂಡಿದೆ. ಈ ಆಶಾಭಾವ ಇನ್ನಷ್ಟು ರೈತರನ್ನು ಸಂಘಟಿತಗೊಳಿಸಲಿ ಎಂಬುದೇ ಸಂಸ್ಥೆಯ ಆಶಯ.

# ಸಮರ್ಥ ಸಮುದಾಯದಿಂದ ಉತ್ತಮ ಆಡಳಿತ



✍ ರವಿ
ಸಂಯೋಜಕರು

ಸಮುದಾಯದ ಅವಕಾಶ ವಂಚಿತ ಜನರು ಸ್ಥಳೀಯ ಆಡಳಿತಾತ್ಮಕ ವ್ಯವಸ್ಥೆಗಳಾದ ಗ್ರಾಮ ಪಂಚಾಯತಿ, ಶಾಲೆ, ಅಂಗನವಾಡಿ, ಪ್ರಾಥಮಿಕ ಆರೋಗ್ಯಕೇಂದ್ರ, ನ್ಯಾಯಬೆಲೆ ಅಂಗಡಿ, ರೈತಸಂಪರ್ಕ ಕೇಂದ್ರ, ಮುಂತಾದ ಆಡಳಿತ ಸೇವೆಗಳ ಬಗ್ಗೆ ಮಾಹಿತಿ ಇಲ್ಲದೆ ಅರ್ಹರಿಗೆ ಸಿಗಬೇಕಾದ ಸರ್ಕಾರಿ ಯೋಜನೆಗಳು ಬಲಾಢ್ಯರ ಪಾಲಾಗುತ್ತಿದ್ದವು. ಸಾಮಾನ್ಯ ಜನರು ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಪಾಲ್ಗೊಳ್ಳಲು ಹಿಂಜರಿಕೆ ಮತ್ತು ನಾಯಕತ್ವದ ಕೊರತೆಯಿಂದ ಹಾಗೂ ಇವರ ಅಭಿಪ್ರಾಯಗಳಿಗೆ ಮನ್ನಣೆ ಸಿಗದೆ ಶ್ರೀಮಂತರ ಮತ್ತು ಪಟ್ಟಭದ್ರ ಹಿತಾಸಕ್ತಿಗಳ ಪರ ನಿರ್ಧಾರಗಳಾಗುತ್ತಿದ್ದವು. ಸಮುದಾಯದ ಅವಕಾಶ ವಂಚಿತ ಜನರು ಸ್ಥಳೀಯ ಆಡಳಿತಾತ್ಮಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಕ್ಷೇತ್ರಗಳಲ್ಲಿ, ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಪಾರದರ್ಶಕತೆ, ನಿಷ್ಪಕ್ಷಪಾತ ಮತ್ತು ಭ್ರಷ್ಟಾಚಾರಮುಕ್ತ ಆಡಳಿತ ವ್ಯವಸ್ಥೆಗಾಗಿ ಉತ್ತಮ ಆಡಳಿತ ನಿರ್ಮಾಣಗೊಳ್ಳುವಲ್ಲಿ, ಸಂಸ್ಥೆಯು ಅತ್ಯಂತ ಕೆಳಗಿನ ಹಂತವಾದ ಹಳ್ಳಿಗಳಿಂದ ಹಿಡಿದು ರಾಜ್ಯ, ರಾಷ್ಟ್ರಮಟ್ಟದವರೆಗೂ ಈ ಪಾವಿತ್ರ್ಯತೆಯನ್ನು ಉಳಿಸಲು ಉತ್ತಮ ಆಡಳಿತ ಯೋಜನೆಯನ್ನು ರೂಪಿಸಿದೆ.

ಸಮುದಾಯದ ಅವಕಾಶವಂಚಿತ ಜನರು ಸ್ಥಳೀಯ ಆಡಳಿತ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸುವಾಗ ಹಾಗೂ ಸ್ಥಳೀಯ ನಾಯಕರು, ಚುನಾಯಿತ ಪ್ರತಿನಿಧಿಗಳು, ಸರ್ಕಾರದ



ಅಧಿಕಾರಿಗಳು ತಮ್ಮ ಸಾಮರ್ಥ್ಯವನ್ನು ವೃದ್ಧಿಸಿಕೊಂಡು ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ತೋರುವ ಮೂಲಕ ಉತ್ತಮ ನಾಯಕತ್ವ ತೋರಿಸಿದಾಗ ಸ್ಥಳೀಯ ಆಡಳಿತದಲ್ಲಿ ಮತ್ತು ಸರ್ಕಾರದ ವ್ಯವಸ್ಥೆಯಲ್ಲಿ ಸುಸ್ಥಿರ ಅಭಿವೃದ್ಧಿ ಸಾಧ್ಯ. ಸ್ಥಳೀಯ ನಾಗರಿಕರು ವಾರ್ಡ್ ಸಭೆ, ಗ್ರಾಮ ಸಭೆ ಹಾಗೂ ಪಂಚಾಯತ್ ಜಮಾಬಂಧಿಗಳ ಕುರಿತು ಮಾಹಿತಿ ಹೊಂದಿ ಜನಸಾಮಾನ್ಯರ ಮಹತ್ವ ಅರಿತು ಅವುಗಳಲ್ಲಿ ಕ್ರಿಯಾತ್ಮಕವಾಗಿ ಭಾಗವಹಿಸಿ ಜನಸಾಮಾನ್ಯರ ಪರ ಹಾಗೂ ಶೋಷಿತರ ಪರ ನಿರ್ಧಾರಗಳನ್ನು ಕೈಗೊಳ್ಳುವಂತೆ ಮಾಡಿದ್ದಾರೆ. ಚುನಾಯಿತ ಗ್ರಾಮ ಪಂಚಾಯತಿ ಸದಸ್ಯರಿಗೆ ಸಂಸ್ಥೆಯು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೌಲ್ಯಾಧಾರಿತ ನಾಯಕತ್ವ ತರಬೇತಿ ನೀಡಿದ ಪರಿಣಾಮವಾಗಿ, ತಮ್ಮ ಗ್ರಾಮ ಪಂಚಾಯತಿಗಳಲ್ಲಿ ಅವರು ಉತ್ತಮ ನಾಯಕತ್ವ ತೋರುತ್ತಿದ್ದಾರೆ ಹಾಗೂ ಗ್ರಾಮದ ಅಭಿವೃದ್ಧಿ ಪರ ನಿರ್ಣಯಗಳನ್ನು ಕೈಗೊಂಡು ಗ್ರಾಮದ ಮೂಲಭೂತ ಅವಶ್ಯಕತೆಗಳಾದ ಕುಡಿಯುವ ನೀರು, ರಸ್ತೆ, ಸಾರಿಗೆ, ಒಳಚರಂಡಿ, ಬೀದಿ ದೀಪ ಮುಂತಾದ ವ್ಯವಸ್ಥೆಗಳು ಈಡೇರಿವೆ.

ಗ್ರಾಮೀಣ ಹಾಗೂ ನಗರ ಕೊಳಚೆ ಪ್ರದೇಶಗಳಲ್ಲಿನ ಬಡ, ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಾವಿರಾರು ಮಹಿಳೆಯರು ಗ್ರಾಮ ಪಂಚಾಯತಿಯ ಉಪಸಮಿತಿಗಳ ಬಗ್ಗೆ ಹಾಗೂ ಸ್ಥಳೀಯ ಆಡಳಿತಾತ್ಮಕ ಸಮಿತಿಗಳ ಬಗ್ಗೆ ಜಾಗೃತಿ ಹೊಂದಿ 1,640



ಮಹಿಳೆಯರು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ, ಆಹಾರ ಜಾಗೃತ ಸಮಿತಿ, ನೀರು ಮತ್ತು ನೈರ್ಮಲ್ಯ ಸಮಿತಿ, ಬಾಲವಿಕಾಸ ಸಮಿತಿ, ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ, ಜಲಾನಯನ ಸಮಿತಿ, ಪರಿಸರ ಸಮಿತಿ, ಹಾಲಿನ ಡೈರಿ, ನೆರೆಹೊರೆ ಸಮಿತಿ ಮತ್ತು ಗ್ರಾಮಾಭಿವೃದ್ಧಿ ಮುಂತಾದ

ಸಮಿತಿಯಲ್ಲಿ ಆಯ್ಕೆಯಾಗಿ ಉತ್ತಮ ಆಡಳಿತ ವ್ಯವಸ್ಥೆ ರೂಪುಗೊಳಿಸುವಲ್ಲಿ ಯಶಸ್ವಿಯಾಗಿದ್ದಾರೆ ಹಾಗೂ ಉತ್ತಮ ಸೇವೆಗಳು ಜನಸಾಮಾನ್ಯರಿಗೆ ದೊರಕುವಂತೆ ಮಾಡಿದ್ದಾರೆ. ಸಾವಿರಾರು ಸ್ವ–ಸಹಾಯ ಸಂಘದ ಮಹಿಳೆಯರು ಗ್ರಾಮ ಪಂಚಾಯತಿ, ತಾಲ್ಲೂಕ್ ಪಂಚಾಯತಿ, ಜಿಲ್ಲಾ ಪಂಚಾಯತಿ, ಪುರ ಸಭೆ, ಪಟ್ಟಣ ಪಂಚಾಯತಿ, ನಗರ ಸಭೆಗಳಿಗೆ ಸ್ಪರ್ಧಿಸಿ 468 ಮಹಿಳೆಯರು ವಿವಿಧ ಸಂಸ್ಥೆಗಳಿಗೆ ಚುನಾಯಿತರಾಗಿ ಮೌಲ್ಯಾಧಾರಿತ ನಾಯಕರಾಗಿ ನಿಸ್ವಾರ್ಥ ಸೇವೆ ನೀಡುತ್ತಿದ್ದಾರೆ. ಮಹಿಳೆಯರು ವಿವಿಧ ಇಲಾಖೆಗಳೊಂದಿಗೆ ಉತ್ತಮ ಸಂಪರ್ಕ ಜಾಲಬಂಧ ಬೆಳೆಸಿಕೊಂಡು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ, ನ್ಯಾಯಬೆಲೆ ಅಂಗಡಿಗಳಲ್ಲಿನ ಲೋಪದೋಷಗಳನ್ನು ಗುರುತಿಸಿ ಪಡಿತರ ಧಾನ್ಯಗಳು ಸೂಕ್ತ ಸಮಯ, ತೂಕ ಮತ್ತು ದರದಲ್ಲಿ ವಿತರಣೆಯಾಗುವಂತೆ ಸೂಕ್ತ ಕ್ರಮ ಕೈಗೊಂಡಿದ್ದಾರೆ. ನ್ಯಾಯಬೆಲೆ ಅಂಗಡಿಗಳಲ್ಲಿನ ಆಹಾರ ಜಾಗೃತ ಸಮಿತಿಯ ಸದಸ್ಯರಾಗಿ ಮೇಲ್ವಿಚಾರಣೆ ನಡೆಸುತ್ತಿದ್ದಾರೆ.

ಸಮುದಾಯದ ಅವಕಾಶ ವಂಚಿತ ಜನರಿಗೆ ಸರ್ಕಾರದ ವಿವಿಧ ಸೌಲಭ್ಯಗಳಾದ ವಿಧವಾ ವೇತನ, ಸಂಧ್ಯಾ ಸುರಕ್ಷಾ, ಮನಸ್ವಿನಿ, ಭಿನ್ನ ಚೇತನ ಮಾಶಾಸನ, ಮುಂತಾದ ಸೌಲಭ್ಯಗಳು 2,600ಕ್ಕೂ ಅಧಿಕ ಅರ್ಹ ಫಲಾನುಭವಿಗಳಿಗೆ ಸಿಕ್ಕಿ ಈ ಯೋಜನೆಗಳಿಂದ ಅವರು ಫಲ ಪಡೆದಿದ್ದಾರೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಎಲ್ಲಾ ಮಜಲುಗಳಲ್ಲಿ ಕಡು ಬಡವರಿಗೆ ಕೆಲಸ ಪಡೆಯುವಂತೆ ಪ್ರೇರೇಪಿಸಿ ಗ್ರಾಮದ ಸರ್ವಾಂಗೀಣ



ಅಭಿವೃದ್ಧಿಗೆ ಸಂಸ್ಥೆಯು ಸಹಕಾರಿಯಾಗಿದೆ. ಗ್ರಾಮದಲ್ಲಿ ರಸ್ತೆ, ಒಳಚರಂಡಿ, ಕೆರೆದಂಡೆ ಕಾಲುವೆ ನಿರ್ಮಾಣ, ಶಾಲಾ ಕಾಂಪೌಂಡ್, ಕೃಷಿ ಭೂಮಿಗೆ ರಸ್ತೆ ನಿರ್ಮಾಣ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕೃಷಿ ಮತ್ತು ಸಮತಟ್ಟು ಅರಣ್ಯೀಕರಣ ನಿರ್ಮಿಸಲಾಗಿವೆ.

ಸಂಸ್ಥೆಯು ಕಾರ್ಯಕ್ಷೇತ್ರದ ಮಹಿಳೆಯರಿಗೆ ಮಾಹಿತಿ ಹಕ್ಕು ಕಾಯಿದೆಯ ಕುರಿತು ವ್ಯಾಪಕ ತರಬೇತಿ ನೀಡಿರುವುದರ ಫಲವಾಗಿ 2,600 ಮಹಿಳೆಯರು ಮಾಹಿತಿ ಹಕ್ಕು ಕಾಯಿದೆ ಅಡಿಯಲ್ಲಿ ಅರ್ಜಿ ಸಲ್ಲಿಸಿ ವಿಧವಾ ವೇತನ, ಸಂಧ್ಯಾ ಸುರಕ್ಷಾ, ಆಶ್ರಯ ಮನೆ, ಶೌಚಾಲಯ ಹಾಗೂ ಗ್ರಾಮಕ್ಕೆ ಕುಡಿಯುವ ನೀರು, ಸಾರಿಗೆ, ರಸ್ತೆ, ಅಂಗನವಾಡಿ, ಶಾಲೆ ಇತ್ಯಾದಿ ಸೌಲಭ್ಯಗಳನ್ನು ಪಡೆದಿದ್ದಾರೆ. ನ್ಯಾಯಬೆಲೆ ಅಂಗಡಿಗಳಲ್ಲಿನ ನಾಗರಿಕ ಸನ್ನದು ಕೈಪಿಡಿ ಪಡೆದು 160ಕ್ಕೂ ಹೆಚ್ಚು ನ್ಯಾಯಬೆಲೆ ಅಂಗಡಿಗಳಲ್ಲಿನ ಅವ್ಯವಸ್ಥೆಗಳನ್ನು ಸರಿಪಡಿಸಲು ಸಾಧ್ಯವಾಗಿದೆ.

ಆರೋಗ್ಯ ರಕ್ಷಣೆಯ ಹಕ್ಕುಗಳ ಕುರಿತು ಮಹಿಳೆಯರು ತರಬೇತಿ ಪಡೆದು ಆರೋಗ್ಯ ಇಲಾಖೆಯ ಮತ್ತು ಅಂಗನವಾಡಿ ಕೇಂದ್ರಗಳ ಸೌಲಭ್ಯಗಳನ್ನು ಸಮರ್ಪಕವಾಗಿ ಪಡೆದಿದ್ದಾರೆ. 640 ಮಹಿಳೆಯರು ಆಶಾ ಕಾರ್ಯಕರ್ತೆಯರಾಗಿ ಗ್ರಾಮದಲ್ಲಿ ಅಮೋಘ ಸೇವೆಗಳನ್ನು ನೀಡುತ್ತಿದ್ದಾರೆ. ಕಾಲಕಾಲಕ್ಕೆ ಗರ್ಭಿಣಿಯರಿಗೆ ಮತ್ತು ಮಕ್ಕಳಿಗೆ ಲಸಿಕೆ, ಚುಚ್ಚು ಮದ್ದು ಮತ್ತು ಪೌಷ್ಟಿಕ ಆಹಾರ ಸೇವನೆಗೆ ಸಹಾಯ ಹಸ್ತ ನೀಡುತ್ತಿದ್ದಾರೆ. 3,900 ಮಹಿಳೆಯರು ಆರೋಗ್ಯ ಇಲಾಖೆಯ ಯೋಜನೆಗಳನ್ನು ಸಮರ್ಪಕವಾಗಿ ಪಡೆದು ಭಾಗ್ಯಲಕ್ಷ್ಮಿ, ಮಡಿಲು, ಪ್ರಸೂತಿ ಆರೈಕೆ, ತಾಯಿ ಭಾಗ್ಯ ಯೋಜನೆಗಳಿಂದ ಫಲ ಪಡೆದಿದ್ದಾರೆ. 430 ಮಹಿಳೆಯರು ಅಂಗನವಾಡಿಯ ಬಾಲ ವಿಕಾಸ ಸಮಿತಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (NRHM) ಸಮಿತಿಯಲ್ಲಿ 330 ಸದಸ್ಯರು ಆಯ್ಕೆಯಾಗಿ ಉತ್ತಮ ಸೇವೆ ನೀಡುತ್ತಿದ್ದಾರೆ.

ಶಿಕ್ಷಣ ಹಕ್ಕು ಕಾಯಿದೆಯ ಬಗ್ಗೆ ಜಾಗೃತಿ ಹೊಂದಿ 290 ಮಕ್ಕಳು ಉಚಿತ ಕಡ್ಡಾಯ ಶಿಕ್ಷಣ ಪಡೆಯುತ್ತಿದ್ದಾರೆ. ಅಲ್ಪ ಸಂಖ್ಯಾತರ ಇಲಾಖೆಯ ಅರಿವು ಯೋಜನೆ ಪಡೆದು 320 ಮಕ್ಕಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. 690 ಮಹಿಳೆಯರು ಶಾಲಾ ಬಿಸಿಯೂಟದಲ್ಲಿ ಕಾರ್ಯಕರ್ತೆಯರಾಗಿ ಆಯ್ಕೆಯಾಗಿದ್ದಾರೆ. 460 ಮಹಿಳೆಯರು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಾಗಿ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಯಶಸ್ವಿಯಾಗಿದ್ದಾರೆ. 6,000ಕ್ಕೂ ಹೆಚ್ಚು ಮಹಿಳೆಯರು ವಯಸ್ಕರ ಶಿಕ್ಷಣದಲ್ಲಿ ಭಾಗವಹಿಸಿ 5,600 ಮಹಿಳೆಯರು ಓದಲು ಬರೆಯಲು ಕಲಿತಿದ್ದಾರೆ.

ಮಹಿಳೆಯರು ಮಾನವ ಹಕ್ಕುಗಳ ಮತ್ತು ಮಹಿಳಾ ಹಕ್ಕುಗಳ ಕುರಿತು ತರಬೇತಿ ಪಡೆದು ತಮ್ಮ ಹಕ್ಕುಗಳನ್ನು ಚಲಾಯಿಸುವಲ್ಲಿ ಶಕ್ತರಾಗಿದ್ದಾರೆ. 60 ಮಹಿಳೆಯರು ತಮ್ಮ ನಿವೇಶನಗಳಿಗೆ ಹಕ್ಕುಪತ್ರ ಪಡೆದಿದ್ದಾರೆ. ಕುಟುಂಬದಲ್ಲಿ ಗಂಡ, ಹೆಂಡತಿಯರಿಬ್ಬರೂ ಸಮಾನ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಹೆಣ್ಣು ಮಕ್ಕಳನ್ನು ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸಿದ್ದಾರೆ.

ಸಂಸ್ಥೆಯು 15 ಗ್ರಾಮಗಳನ್ನು ಎಲ್ಲಾ ಕ್ಷೇತ್ರಗಳಲ್ಲಿ ಮಾದರಿ ಗ್ರಾಮಗಳನ್ನಾಗಿಸುವ ಪ್ರಯತ್ನ ನಡೆಸಿ ಗ್ರಾಮದ ವಿವಿಧ ಹೊಣೆಗಾರರನ್ನು ಒಳಗೊಂಡ "ನಮ್ಮೂರ ನಾಗರಿಕ ಸಮಿತಿ"

ರಚಿಸಿ ಅವುಗಳ ಮೂಲಕ ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಸಾಕಾರಗೊಳಿಸುವಲ್ಲಿ ಯಶಸ್ವಿಯಾಗಿದೆ.

**ಉತ್ತಮ ಆಡಳಿತ ತರುವತ್ತ ಸಂಸ್ಥೆಯ ಕಾರ್ಯಕ್ರಮಗಳು**

ಎಸ್.ಎಮ್.ಎಸ್.ಎಸ್.ಸಂಸ್ಥೆಯು ಅವಕಾಶ ವಂಚಿತ ಸಮುದಾಯದ ಏಳಿಗೆಯಾಗಬೇಕಾದರೆ ಅದು ಸ್ಥಳೀಯ ಮಟ್ಟದಲ್ಲಿ ಉತ್ತಮ ಆಡಳಿತ ತರುವುದರಿಂದ ಮಾತ್ರ ಸಾಧ್ಯ ಎಂಬ ದೃಢವಾದ ನಿಲುವಿನಿಂದ ಕಾರ್ಯವನ್ನು ನಿರ್ವಹಿಸುತ್ತಿದೆ ಮಾತ್ರವಲ್ಲ ಸ್ಥಳೀಯ ಗ್ರಾಮ ಪಂಚಾಯತಿ ಮಟ್ಟದಲ್ಲಿ ಮೌಲ್ಯಾಧಾರಿತ ನಾಯಕರನ್ನು ರೂಪಿಸಿ



ಉತ್ತಮ ಆಡಳಿತ ತರುವತ್ತ ಶ್ರಮಿಸುತ್ತಿದೆ. ನಾಯಕತ್ವ ವಹಿಸಿಕೊಂಡಿರುವವರು ತಮ್ಮ ಆಡಳಿತದಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ ಬೆಳೆಸಿಕೊಳ್ಳುವಂತೆ ಮಾಡಲಾಗುತ್ತಿದೆ. ಸಂಸ್ಥೆಯ ಪ್ರೋತ್ಸಾಹದಿಂದ ಇಂದು ಗ್ರಾಮ ಪಂಚಾಯತಿಗಳಲ್ಲಿ ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಸಂಸ್ಥೆಯ ಫಲಾನುಭವಿಗಳು ಶಕ್ತರಾಗುತ್ತಿದ್ದಾರೆ. ವಿಶೇಷವಾಗಿ ಅವಕಾಶ ವಂಚಿತ, ನಿರ್ಗತಿಕ ಕುಟುಂಬಗಳು ಹೆಚ್ಚಿನ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿ ಸಫಲವಾಗಿವೆ. 400 ಮಹಿಳೆಯರು ಸ್ಥಳೀಯ ಗ್ರಾಮ ಪಂಚಾಯತಿಗಳಲ್ಲಿ ಸದಸ್ಯರುಗಳಾಗಿ ತಮ್ಮ ನಾಯಕತ್ವವನ್ನು ಪ್ರದರ್ಶಿಸಿದ್ದಾರೆ. ಪ್ರಸ್ತುತ 110 ಸದಸ್ಯರು ಗ್ರಾಮ ಪಂಚಾಯತಿಗಳಲ್ಲಿ ಸದಸ್ಯರುಗಳಾಗಿ ತಮ್ಮ ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಿದ್ದಾರೆ.



ಎಸ್.ಎಮ್.ಎಸ್.ಎಸ್.ಸಂಸ್ಥೆಯು ಸರ್ವಾಂಗೀಣ ಅಭಿವೃದ್ಧಿಗಾಗಿ, ವಿಶೇಷವಾಗಿ ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಅಭಿವೃದ್ಧಿಯಲ್ಲಿ ತೊಡಗಿ ಸಮಾಜದಲ್ಲಿ ಈ ವರ್ಗದ ಮಹಿಳೆಯರು ತಮ್ಮ ಹಕ್ಕುಗಳನ್ನು ಅರಿತು ಅವುಗಳನ್ನು ಚಲಾಯಿಸಲು ಹಾಗೂ ಗ್ರಾಮದ ಇತರೆ ಸಂಘ ಸಂಸ್ಥೆಗಳಲ್ಲಿ ಸದಸ್ಯತ್ವ ಹೊಂದಿ ನಿರ್ಧಾರ ಹಾಗೂ ನಿರ್ಣಯಗಳನ್ನು ತೆಗೆದುಕೊಳ್ಳುವಂತೆ ಮಾಡಿದೆ; ಸಂಸ್ಥೆಯು ಅರಿವು, ಮಾಹಿತಿ ಮತ್ತು ತರಬೇತಿ ಕಾರ್ಯಾಗಾರಗಳ ಮೂಲಕ ಮಹಿಳೆಯರನ್ನು ಹಾಗೂ ಪುರುಷರನ್ನು ಸದೃಢರನ್ನಾಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ನಡೆಸುತ್ತಿದೆ.

- ಮಹಿಳೆಯರಿಗೆ ಹಾಗೂ ಪುರುಷರಿಗೆ ಪಂಚಾಯತ್ ರಾಜ್ ವ್ಯವಸ್ಥೆಯ ಬಗ್ಗೆ ತರಬೇತಿ ನೀಡಲಾಯಿತು.
- ಮಹಿಳೆಯರು ಗ್ರಾಮ ಪಂಚಾಯತಿ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಪೂರ್ವಸಿದ್ಧತೆ ನಡೆಸಿ ಅವರನ್ನು ಚುನಾವಣೆಗೆ ಸಜ್ಜುಗೊಳಿಸಲಾಯಿತು.
- ಚುನಾವಣೆಯಲ್ಲಿ ಸ್ಪರ್ಧಿಸುವ ಮಹಿಳೆಯರಿಗೆ ಗೆಲುವು ಸಾಧಿಸುವ ವಿವಿಧ ಕಾರ್ಯತಂತ್ರಗಳ ಬಗ್ಗೆ ಸಾಮರ್ಥ್ಯ ವರ್ಧನಾ ತರಬೇತಿ ನೀಡಲಾಯಿತು.
- ಮಹಿಳೆಯರಿಗೆ ಗ್ರಾಮದ ವಿವಿಧ ಸ್ಥಳೀಯ ಸಮಿತಿಗಳ ಬಗ್ಗೆ ಮಾಹಿತಿ ನೀಡಲಾಯಿತು.
- ಚುನಾವಣೆಯಲ್ಲಿ ವಿಜೇತರಾದ ಸದಸ್ಯರಿಗೆ ಎರಡು ಹಂತಗಳಲ್ಲಿ 'ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮೌಲ್ಯಾಧಾರಿತ ನಾಯಕತ್ವ' ತರಬೇತಿ ನೀಡಲಾಯಿತು.
- 28 ಗ್ರಾಮಗಳಲ್ಲಿ ಮಾದರಿ ಗ್ರಾಮದ ಪರಿಕಲ್ಪನೆಯ ಬಗ್ಗೆ ತರಬೇತಿ ನೀಡಲಾಯಿತು.
- ಮಾದರಿ ಗ್ರಾಮಗಳಲ್ಲಿ ಗ್ರಾಮದ ಸಮಸ್ಯೆಗಳ ಪರಿಹಾರಕ್ಕೆ ಕಿರು ಕ್ರಿಯಾಯೋಜನೆ ತಯಾರಾಗಿದೆ.
- ಮಹಿಳೆಯರಿಗೆ ಹಕ್ಕು ಆಧಾರಿತ ವಿಧಾನಗಳ ಬಗ್ಗೆ ತರಬೇತಿ ನೀಡಲಾಗಿದೆ.
- ಸಂಸ್ಥೆಯ ಕಾರ್ಯಕ್ಷೇತ್ರದಲ್ಲಿರುವಂತಹ 320 ನ್ಯಾಯಬೆಲೆ ಅಂಗಡಿಗಳ ಸಮಸ್ಯೆಗಳನ್ನು ಸಂಘದ ಮಹಿಳೆಯರೇ ಗುರುತಿಸಿ, ಇಲಾಖಾ ಭೇಟಿ ಮಾಡಿ ಪರಿಹಾರ ಕಂಡುಕೊಳ್ಳುವಂತೆ ಸಾಮರ್ಥ್ಯ ವೃದ್ಧಿಸಲಾಗಿದೆ.
- ಈ ಕೆಳಗಿನ 15 ಮಾದರಿ ಗ್ರಾಮಗಳಲ್ಲಿ ನಮ್ಮೂರ ನಾಗರಿಕ ಸಮಿತಿಯ ಮುಖಾಂತರ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಲಾಗಿದೆ ಹಾಗೂ ಗ್ರಾಮದ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ.

- ಹೊಸನಗರ ತಾಲ್ಲೂಕಿನಲ್ಲಿ ಜೇನಿ, ಎಂ. ಗುಡ್ಡೇಕೊಪ್ಪ ಮತ್ತು ಕೋಡೂರು
- ಶಿವಮೊಗ್ಗ ತಾಲ್ಲೂಕಿನಲ್ಲಿ ಮಂಡಘಟ್ಟ, ಚಿಕ್ಕಮರ್ಸ, ಕೋಟೆಗಂಗೂರು, ಅಬ್ಬಲಗೆರೆ, ಹಾರನಹಳ್ಳಿ, ವಿದ್ಯಾನಗರ ಮತ್ತು ಶರಾವತಿನಗರ ವಾರ್ಡ್
- ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಮೇಲಿನ ಕುರುವಳ್ಳಿ
- ಸಾಗರ ತಾಲ್ಲೂಕಿನಲ್ಲಿ ಕರ್ಕಿಕೊಪ್ಪ
- ಭದ್ರಾವತಿ ತಾಲ್ಲೂಕಿನಲ್ಲಿ ಕಾರೇಹಳ್ಳಿ
- ಹೊಳೆಲ್ಕೆರೆ ತಾಲ್ಲೂಕಿನಲ್ಲಿ ಶಿವಪುರ
- ಹೊನ್ನಾಳಿ ತಾಲ್ಲೂಕಿನಲ್ಲಿ ಕುರುವ.

- ಈ ಮಾದರಿ ಗ್ರಾಮಗಳಲ್ಲಿ ನಮ್ಮೂರ ನಾಗರಿಕ ಸಮಿತಿ ಸದಸ್ಯರ ಮೂಲಕ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಪಡೆದಿದ್ದಾರೆ.
  - ಶೇ 90ರಷ್ಟು ಗ್ರಾಮಸ್ಥರು ಶೌಚಾಲಯದ ಮಹತ್ವ ಅರಿತು ಶೌಚಾಲಯ ನಿರ್ಮಿಸಿಕೊಂಡಿದ್ದಾರೆ.
  - ಶೇ 80ರಷ್ಟು ಕುಟುಂಬಸ್ಥರು ಕೈತೋಟ ನಿರ್ಮಿಸಿದ್ದಾರೆ.



  - ಶೇ 95ರಷ್ಟು 6 ರಿಂದ 14 ವರ್ಷದೊಳಗಿನ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ.
  - ಸರ್ಕಾರಿ ಮತ್ತು ಸರ್ಕಾರೇತರ ಇಲಾಖೆಗಳ ಅಧಿಕಾರಿಗಳೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ.
  - 270 ಜನರು ಸಂಧ್ಯಾ ಸುರಕ್ಷಾ ಯೋಜನೆ ಪಡೆದಿದ್ದಾರೆ.
  - 234 ಮಹಿಳೆಯರು ವಿಧವಾ ವೇತನ ಪಡೆದಿದ್ದಾರೆ.
  - 645 ಸಂಘಗಳು ಗ್ರಾಮ ಪಂಚಾಯತಿಯಿಂದ ಸುತ್ತುನಿಧಿ ಪಡೆದಿವೆ.
  - 18 ಸಂಘಗಳು ಎಸ್.ಜಿ.ಎಸ್.ಆರ್.ವೈ. ಯೋಜನೆ ಪಡೆದಿವೆ.
  - ಪ್ರತಿ ಗ್ರಾಮದಲ್ಲಿ ಸಂಘಗಳ ಸದಸ್ಯರು ಶಾಲಾ ರಾಷ್ಟ್ರೀಯ ಹಬ್ಬಗಳಲ್ಲಿ ಭಾಗವಹಿಸಿ ಮಕ್ಕಳಿಗೆ ಪುರಸ್ಕಾರ ಹಾಗೂ ಸಿಹಿ ಹಂಚಿಕೆ, ಬಡ ಮಕ್ಕಳಿಗೆ ಉಚಿತ ನೋಟ್ ಪುಸ್ತಕ ವಿತರಣೆ ಮಾಡಿದ್ದಾರೆ.
  - 15 ಪಂಚಾಯತಿ ಮಟ್ಟದ ಒಕ್ಕೂಟಗಳಲ್ಲಿ ಉಚಿತ ಆರೋಗ್ಯ ತಪಾಸಣೆ, 8 ಪಂಚಾಯತಿ ಮಟ್ಟದ ಒಕ್ಕೂಟಗಳಲ್ಲಿ ನೇತ್ರ ತಪಾಸಣಾ ಶಿಬಿರ ನಡೆಸಿದ್ದಾರೆ.
  - 853 ಮಹಿಳೆಯರು ಮಾಹಿತಿ ಹಕ್ಕು ಕಾಯಿದೆಯಡಿಯಲ್ಲಿ ಅರ್ಜಿ ಸಲ್ಲಿಸಿ ವಿವಿಧ ಇಲಾಖೆಗಳ ಮಾಹಿತಿ ಹಾಗೂ ವಿವಿಧ ಸೌಲಭ್ಯಗಳನ್ನು ಪಡೆದಿದ್ದಾರೆ.




  - 124 ಗ್ರಾಮ ಹಾಗೂ 35 ವಾರ್ಡ್‌ಗಳಲ್ಲಿ ಪರಿಸರ ದಿನಾಚರಣೆ ಆಚರಿಸಿ 6,000 ಸಸಿಗಳನ್ನು ನೆಡಲಾಗಿದೆ.
  - 1,080 ಮಹಿಳೆಯರು ಗ್ರಾಮದ ವಿವಿಧ ಆಡಳಿತಾತ್ಮಕ ಸಮಿತಿಗಳಲ್ಲಿ ಸದಸ್ಯರಾಗಿ ಆಯ್ಕೆಯಾಗಿದ್ದಾರೆ.
  - 286 ಮಹಿಳೆಯರಿಗೆ ಆಶ್ರಯ ಮನೆ ಮಂಜೂರಾಗಿದೆ.
  - ಸರ್ಕಾರಿ ಸೌಲಭ್ಯಗಳಿಗೆ ಸಂಬಂಧಿಸಿದಂತೆ ಕಟ್ಟಡ ಕಾರ್ಮಿಕರ ಇಲಾಖೆಯಿಂದ ಸಂಘಗಳ ಒಟ್ಟು 2,456 ಸದಸ್ಯರು ಕಾರ್ಡ್ ಪಡೆದಿದ್ದಾರೆ.
  - ಕಾರ್ಡ್ ಪಡೆದ ಫಲಾನುಭವಿಗಳ 1,936 ಮಕ್ಕಳಿಗೆ ವಿದ್ಯಾರ್ಥಿ ವೇತನ ಲಭಿಸಿದೆ.
  - 176 ಅಂಗನವಾಡಿ ಬಾಲವಿಕಾಸ ಸಮಿತಿಯ 1,760 ಸದಸ್ಯರುಗಳು ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ಸಮರ್ಪಕವಾಗಿ ನಿರ್ವಹಿಸುತ್ತಿದ್ದಾರೆ.
  - ಬಾಲವಿಕಾಸ ಸಮಿತಿಯಲ್ಲಿ 145 ಸದಸ್ಯರುಗಳು ಸದಸ್ಯತ್ವ ಹೊಂದಿ ಅಂಗನವಾಡಿಯಲ್ಲಿ ಸಿಗುವ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದಾರೆ.

- 52 ಒಕ್ಕೂಟಗಳಲ್ಲಿ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಚರ್ಚಿಸಿ ಬೀದಿ ದೀಪ, ರಸ್ತೆ, ಒಳಚರಂಡಿ, ಕುಡಿಯುವ ನೀರು, ಸಮುದಾಯ ಭವನ, ಮುಂತಾದ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕಂಡುಕೊಂಡಿದ್ದಾರೆ.

**ಉದ್ಯೋಗ ಖಾತ್ರಿ ಯೋಜನೆಯಲ್ಲಿ ರೂ. 3,14,426/- ಕೂಲಿ ಹಣ ಪಡೆದ ಸಂಘದ ಸದಸ್ಯರು**

ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಗಂಗನಕೋಟೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಗಂಜೇನಹಳ್ಳಿ ಸ್ತ್ರೀಬಂಧು ಒಕ್ಕೂಟದ ದಾನಿಹಳ್ಳಿ ಗ್ರಾಮದ ಸಿಂಧು, ನವೋದಯಾ, ದೀಪಾ ಸ್ವ-ಸಹಾಯ ಸಂಘಗಳ 50 ಸದಸ್ಯರು 15-06-2018ರಂದು ಸಂಸ್ಥೆಯ ಮಾರ್ಗದರ್ಶನ ಮತ್ತು ಉದ್ಯೋಗ ಖಾತ್ರಿ ಯೋಜನೆಯ ಕುರಿತು ತರಬೇತಿ ಪಡೆದು ದಿನಾಂಕ 04-08-2018ರಂದು ಗ್ರಾಮ ಪಂಚಾಯತಿಗೆ ಕೆಲಸಕ್ಕಾಗಿ ನಮೂನೆ 6ರಲ್ಲಿ ಅರ್ಜಿ ಸಲ್ಲಿಸಿದರು. 3 ಸಂಘಗಳಲ್ಲಿ ಒಟ್ಟು



50 ಸದಸ್ಯರು ಇದ್ದು, ಪ್ರತಿ ತಿಂಗಳು ಸಭೆ ನಡೆಸುತ್ತಾರೆ. ಸಂಘದ ಸಭೆಯಲ್ಲಿ ಅಜೆಂಡ ಪ್ರಕಾರ ಸಭೆ ನಡೆಸಿ ಸಂಘದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುತ್ತಾರೆ. ಪ್ರತಿ ತಿಂಗಳು ಒಂದೊಂದು ಕಲಿಕಾ ವಿಷಯ ಮಾಹಿತಿಗಳನ್ನು ಅರಿತು ಸಂಘದಲ್ಲಿ ಅನುಷ್ಠಾನಗೊಳಿಸುತ್ತಿದ್ದಾರೆ. ಪ್ರತಿ ಸದಸ್ಯರು ಕೃಷಿ



ಕೂಲಿ ಕಾರ್ಮಿಕರಾಗಿದ್ದಾರೆ. ಇವರಿಗೆ 6 ತಿಂಗಳು ಕೂಲಿ ಕೆಲಸ ಇದ್ದು, ಇನ್ನುಳಿದ ದಿನಗಳಲ್ಲಿ ನಗರ ಪ್ರದೇಶಗಳಲ್ಲಿ ಇವರು ಕೆಲಸಕ್ಕಾಗಿ ಅಲೆದಾಡುತ್ತಿದ್ದರು. ಸಂಸ್ಥೆಯು ಉದ್ಯೋಗ ಖಾತ್ರಿ ಯೋಜನೆ ಬಗ್ಗೆ ಮಾಹಿತಿ ನೀಡಿದ್ದರಿಂದ ಸಂಘದ ಮಹಿಳೆಯರು ಇದನ್ನು ಅರಿತು ಉದ್ಯೋಗ ಖಾತ್ರಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿ 39 ದಿನದ ಕೂಲಿ ಕೆಲಸ ಮಾಡಿ ಗ್ರಾಮದಲ್ಲಿ ಕೆರೆ ಹೂಳು ಎತ್ತುವುದು, ಕೆರೆದಂಡೆ, ಕಾಲುವೆ ನಿರ್ಮಾಣ ಕೃಷಿ ಭೂಮಿಗೆ ರಸ್ತೆ ನಿರ್ಮಾಣ ಮಾಡಿದ್ದಾರೆ. ಒಟ್ಟಾರೆಯಾಗಿ ರೂ. 3,14,426/- ಕೂಲಿ ಹಣ ಪಡೆದುಕೊಂಡಿದ್ದಾರೆ. ಸಂಸ್ಥೆಯ ಪ್ರೇರಣೆ ಹಾಗೂ ತರಬೇತಿಗೆ ಇವರೆಲ್ಲರೂ ಚಿರಋಣಿಯಾಗಿದ್ದಾರೆ.

ಶರತ್‌ಕುಮಾರ್ ಕೆ.ಎಸ್.
8050479714
ಅಮ್ಮ ಎಲೆಕ್ಟ್ರಿಕಲ್ಸ್
ಕಿತ್ತನಗದ್ದೆ, ತೀರ್ಥಹಳ್ಳಿ
ಎಲ್ಲಾ ರೀತಿಯ ಎಲೆಕ್ಟ್ರಿಕಲ್ಸ್ ಮತ್ತು ಪ್ಲಂಜಿಂಗ್ ಕೆಲಸಗಳಿಗೆ ಹಾಗೂ ಸನ್ ಎನರ್ಜಿ ಸೋಲಾರ್‌ಗಳಿಗೆ ಸಂಪರ್ಕಿಸಿ

ರೋನಿ
9483544016 / 7259253703
ಮರಿಯಾ ಕೃಪಾ ಎಂಟರ್‌ಪ್ರೈಸಸ್
ಆಜಾದ್ ರಸ್ತೆ, ತೀರ್ಥಹಳ್ಳಿ - 577432
ಎಲ್ಲಾ ರೀತಿಯ ಇಟ್ಟಿಗೆಗಳು, ಮರಳು, ಕಲ್ಲು, ಜಲ್ಲಿ, ಎಂ.ಸ್ಯಾಂಡ್ ಎಲ್ಲಾ ರೀತಿಯ ಗೂಡ್ಸ್
ವಾಹನಗಳು ಬಾಡಿಗೆಗೆ ಕೊಡಲಾಗುವುದು. ಎಲ್ಲಾ ವಾಹನಗಳಿಗೆ ವಿಮೆ ಮಾಡಿಕೊಡಲಾಗುವುದು ಸಂಪರ್ಕಿಸಿರಿ.

# DEVELOPMENT THROUGH HEALTHCARE

✍ **Sylvia Maria Correa**
**Coordinator**



## Introduction

Promoting awareness of community health and preventive action is one of the priorities of SMSSS. The purpose of the programme is to sensitize people about the importance of maintaining good health and taking hygienic measures to prevent infection and promote better health through regular health checkup, attending health camps and seminars on various health issues. The objectives of these awareness programmes are to inform, educate and make people aware of



their physical and mental health, thus inculcating in them a healthy lifestyle to lead a healthy life. Special concern is shown to people living with HIV/AIDS. SMSSS has organized various health camps for the general public at different places through federations.

HIV/AIDS is one of the key issues SMSSS is very much concerned with. It has been developing community-based intervention and rehabilitation of PLHIVs. The aim of this intervention is to enhance the quality of life and life expectancy of PLHIVs and reduce the stigma associated with it. SMSSS has successfully formed 13 Village Health Committees which are playing a major role in supporting 233 adults and 70 minor infected people.



Creating livelihood for people living with HIV/AIDS and establishing networks and linkages with other stakeholders were the key components in HIV/AIDS programme. Prime importance was given to strengthen Village Health Committees which in turn demonstrate the capacity of managing HIV/AIDS and health related issues and overall development of the community.

To achieve the above objectives the following activities were organized:

- Awareness programme
- House visits
- Individual & family counselling
- Referrals
- Home-based care
- Life skill education
- Nutritional support
- Medical support
- Capacity building training
- Awareness programme on various Government schemes

- Exposure
- Formation of Support Group
- Regular meetings with the support group
- Identification of PLHIVs and CLHIVs
- Counselling services
- Income Generation Activities
- VHC meetings
- Organizing health related programmes at the village level
- World AIDS observation day at the Grama Panchayat level.
- Fund mobilization
- PPTCT / ICTC test camps.
- Community Sensitization programme related to HIV/AIDS
- Sensitization programme through wall paintings.

**Qualitative Achievements**

1. **Improved Health among PLHAs**

- Out of 358 infected people and children identified, at least 258 PLHIVs have improvement in their physical and emotional/ psychological health because of nutrient supplement and counselling support provided to them through the project. Some of the indicators are that their CD4 count is going higher, reduction in STI and RTI, ability to work, ability to travel and participate in meetings.

2. **Enhanced Self-Confidence among PLHAs**

- Altogether 278 PLHIVs enrolling themselves in district networks indicate that their self-confidence, self-acceptance, and positive outlook towards life are increasing day by day.
- PLHIVs are prepared to take with them CLHIVs and other PLHIVs when they go to ART centres. This indicates the concern they have towards one another.
- 37 positive speakers among PLHIVs have emerged. They have gained self-confidence to speak in public, which helps other PLHIVs to come forward to share their concerns at the meetings.
- 18 PLHIVs have joined the Village Health Committee & SHG.

3. **Created Effective Systems for Referrals**

- 30% PLHIVs have easy access to service through linkages. The Organization has prepared a referral slip. This helps the organization to refer the PLHIVs to ART centers and other NGOs.
- 10 PLHIVs are referred to Snehadan, Mangalore.

4. **Emergence of Volunteers and Peer Educators**

- 397 awareness programmes about HIV/AIDS, STI, RTI have been organized in SHGs, schools, colleges, villages, churches, Anganwadis, for school teachers, ANM and general public. As a result awareness has increased and many of them have gone on with their own testing, which otherwise was not happening. One of the impacts is that peer educators and volunteers have emerged.
- 105 pregnant women went through PPTCT test in target villages.

5. **Result of Collaboration & Linkages with Government and Other NGOs**

- The PLHAs and the caregivers have built strong support with like-minded NGOs such as Abhaya and Hosakirana network. The PLHAs are attending monthly meetings conducted by the above organization.
- Monthly meetings with like-minded NGOs who work for the cause of HIV related issues in the district of Shimoga.
- Regular NGO network meeting is conducted to give the best services for PLHIVs (Abhaya Action Aid, Hosakirana, Red Cross and CCOORR).
- SMSSS is conducting Support Group Meetings in collaboration with Abhaya dhama.
- 43 PLHIVs benefited from Government Schemes such as Ration Card, Widow Pension, and Housing Scheme.

- 6 PLHIVs got MGNREGA card and are working under MGNREGA programme

6. **Advocacy**

- As a result of the Advocacy done by SMSSS along with the district network of positive people, like-minded NGOs, support groups, a new ART center has been started in Shimoga. Thus the burden of PLHIVs and CLHIVs traveling far away for treatment has been reduced.

7. **Capacity Building**:

- Regular monthly meetings have been organized for PLHA Support groups during which time the need-based inputs are given. The inputs are as follows: Self-care, nutrition, medical treatement adherence, and positive living and management of oral infection, Child Marriage, Dowry system, Domestic violence, Immunization, NRHM, Mental Health, HIV / AIDS and Nutrition Programme.
- 350 care givers are trained on how to look after the PLHAs in their families with utmost care and love. This has helped the PLHAs to get emotional and moral support. This has increased the family acceptance of PLHAs.
- 27 PLHAs are helped to start income generation activities like sheep, goat, cow rearing, petty shops, vegetable vending etc. Due to this the income has increased and health status also improved.
- 10 PLHIVs attended 4 days training programme conducted by District Positive Network on various issues concerning HIV / AIDS

8. **F. Community Involvement**

- For the sustainability of the programme 16 Village Health and Sanitation Committees have been promoted. They take initiatives for arranging awareness programmes and health camps in villages. The VHCs have collected from SHGs and PRI some food grains and nutrition food.
- 12 VHCs are linked with NRHM Programme, and the NRHM revolving fund is properly utilized by the anganwadis.
- Eye camps were conducted in different target villages.
- VHC members conducted 3 Simantha Programmes in their villages and are involved actively in giving awareness about PPTCT test and importance of Immunization.
- 6 VHCs utilized NRHM funds for Health and Hygienic work, painting of anganwadis and writing on the walls of public buildings to create awareness on HIV/AIDS.

9. **Reduction of Stigma and Discrimination**

- As a result of sensitization 3 PLHAs have been appointed as staff in the district networks and NGOs as outreach workers. This indicates that stigma and discrimination is decreasing in families and society.
- Prior to our intervention family members of PLHAs were not accepting to take care of $HIV^+$ people. Now they are taking care of the positive people. More and more people are gradually becoming better understanding and empathetic.
- Prior to this intervention the rural community treated HIV/AIDS infected ones as people who are cursed, and ostracized them from the village. Now people are more and more sensitized.

Though there are miles to go before we can rest, our efforts in the area of developing community health and enabling people to live in dignity is praiseworthy. The wholehearted support and encouragement from everyone has taken us this far. The continued support and encouragement from well wishers can take our work to further heights.

# ಸಾಮರ್ಥ್ಯ ವರ್ಧನೆ ಮೂಲಕ ಸಶಕ್ತೀಕರಣ



✍ ವಿನ್ಸೆಂಟ್ ಡಿ'ಮೆಲ್ಲೊ
ಸಂಯೋಜಕರು

ಎಸ್.ಎಮ್.ಎಸ್.ಎಸ್.ಸಂಸ್ಥೆಯು ಪ್ರಮುಖ ಆರು ವಿಭಾಗಗಳ ಮೂಲಕ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಸಾಮರ್ಥ್ಯ ವರ್ಧನೆ ಕಾರ್ಯಕ್ರಮವೂ ಬಹಳ ಪ್ರಮುಖವಾದುದು. ಒಂದು ರೀತಿಯಲ್ಲಿ ಉಳಿದ ಐದು ಕಾರ್ಯಕ್ರಮಗಳು ಸಹ ಸಂಬಂಧಪಟ್ಟವರ ಸಾಮರ್ಥ್ಯ ವರ್ಧನೆಯ ಮೂಲಕವೇ ಜಾರಿಗೆ ತರಲಾಗುತ್ತಿವೆ.

"ಹಸಿದವರಿಗೆ ಮೀನು ಕೊಡುವುದರ ಬದಲು ಮೀನು ಹಿಡಿಯಲು ಕಲಿಸು" ಎಂಬ ನಾಣ್ನುಡಿಯಂತೆ ಅವಕಾಶ ವಂಚಿತ ಜನರು ತಮ್ಮ ಅವಶ್ಯಕತೆಗಳನ್ನು ತಾವೇ ಈಡೇರಿಸಿಕೊಳ್ಳಲು ಸಮರ್ಥರಾಗುವಂತೆ ಮಾಡುವುದೇ ಈ ಕಾರ್ಯಕ್ರಮದ ಮೂಲ ಉದ್ದೇಶ. ಹಲವಾರು ವಿಷಯಗಳಲ್ಲಿ ತರಬೇತಿ ನೀಡುವುದರ ಮೂಲಕ ಸಮುದಾಯದ ಜನರು, ಜ್ಞಾನ ಮತ್ತು ಕೌಶಲ್ಯವನ್ನು ಹೆಚ್ಚಿಸಿ ತಮ್ಮ ಅಗತ್ಯಗಳನ್ನು ತಾವೇ ಪೂರೈಸಿಕೊಳ್ಳಲು ಸಂಸ್ಥೆಯು ನೆರವಾಗುತ್ತಿದೆ.

ಸಂಸ್ಥೆಯು ಈ ಕೆಳಕಂಡ ವಿಷಯಗಳಲ್ಲಿ ವಿವಿಧ ತರಬೇತಿಗಳನ್ನು ಹಮ್ಮಿಕೊಂಡು ಅಬಲರನ್ನು ಸಬಲಗೊಳಿಸುವತ್ತ ಶ್ರಮಿಸಿ ಉತ್ತಮ ಫಲಿತಾಂಶವನ್ನು ಪಡೆದುಕೊಂಡಿದೆ.

### 1. ಸಂಘದ ಪರಿಕಲ್ಪನೆ ಮತ್ತು ನಿಯಮಾವಳಿಗಳ ರಚನೆ

ಅವಕಾಶವಂಚಿತ ಜನರು, ಅದರಲ್ಲೂ ಮಹಿಳೆಯರು, ಸಂಘಟಿತರಾದಾಗ ಮಾತ್ರ ಸಂಘಟನೆ, ಶಿಕ್ಷಣ, ಮತ್ತು



ಸ್ವಾವಲಂಬನೆಯ ಮೂಲಕ ಅಭಿವೃದ್ಧಿ ಸಾಧ್ಯ ಎಂಬ ವಿಷಯವನ್ನು ಮನವರಿಕೆ ಮಾಡಲಾಗುತ್ತದೆ. ತರಬೇತಿ ಪಡೆದ ಮಹಿಳೆಯರು ಸ್ವ-ಸಹಾಯ ಸಂಘಗಳನ್ನು ರಚಿಸಿ, ತಮ್ಮ ಸಂಘದ ನಿಯಮಗಳ ಬಗ್ಗೆ ತಾವೇ ಚರ್ಚಿಸಿ ತೀರ್ಮಾನಿಸುವಂತೆ ಪ್ರೋತ್ಸಾಹಿಸಲಾಗುತ್ತದೆ. ಮುಂದಿನ ಎಲ್ಲಾ ರೀತಿಯ ತರಬೇತಿಗಳನ್ನು ಸಂಘಗಳ ಮೂಲಕವೇ ಆಯೋಜಿಸಲಾಗುತ್ತದೆ.

### 2. ದಾಖಲಾತಿ ಮತ್ತು ಲೆಕ್ಕ ಪತ್ರ ನಿರ್ವಹಣೆ

ಸಂಘದ ಮಹಿಳೆಯರಿಗೆ ಸಂಘದಲ್ಲಿ ಇಡಬೇಕಾದ ದಾಖಲೆಗಳ ಬಗ್ಗೆ ಮತ್ತು ಸಮರ್ಪಕವಾಗಿ ಲೆಕ್ಕ ಪತ್ರಗಳನ್ನು ಬರೆಯುವ ಬಗ್ಗೆ ತರಬೇತಿ ನೀಡಲಾಗುತ್ತದೆ. ಈ ತರಬೇತಿ ಪಡೆದ ಮಹಿಳೆಯರು ತಮ್ಮ ಸಂಘದ ದಾಖಲೆಗಳನ್ನು ತಾವೇ ನಿರ್ವಹಿಸಲು ಶಕ್ತರಾಗಿ ತಮ್ಮ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳುತ್ತಾರೆ.

### 3. ನಾಯಕತ್ವ ತರಬೇತಿ – ಪದಾಧಿಕಾರಿಗಳ ಜವಾಬ್ದಾರಿ

ಈ ತರಬೇತಿಯಲ್ಲಿ ನಾಯಕತ್ವದ ಗುಣಲಕ್ಷಣಗಳ ಬಗ್ಗೆ ವಿವರಿಸಿ ಅವುಗಳನ್ನು ಬೆಳೆಸಿಕೊಳ್ಳುವುದು ಹೇಗೆ ಎಂಬ ವಿಷಯ



ತಿಳಿಸಲಾಗುತ್ತದೆ. ತರಬೇತಿ ಪಡೆದ ಮಹಿಳೆಯರು ತಮ್ಮಲ್ಲಿರುವ ಕೀಳರಿಮೆಯನ್ನು ತೊರೆದು ವಿವಿಧ ಸಂದರ್ಭಗಳಲ್ಲಿ ನಾಯಕತ್ವ ವಹಿಸಲು ಸಮರ್ಥರಾಗುತ್ತಾರೆ. ತಮ್ಮ ಸಂಘದ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸುತ್ತಾರೆ. ಸರ್ಕಾರಿ ಅಧಿಕಾರಿಗಳೊಂದಿಗೆ ಧೈರ್ಯದಿಂದ ಮಾತನಾಡುತ್ತಾರೆ, ಸ್ವ-

ಸಹಾಯ ಸಂಘಗಳ ಬೆಂಬಲದೊಂದಿಗೆ ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದ ಅನೇಕ ಉದಾಹರಣೆಗಳು ನಮ್ಮ ಮುಂದಿವೆ.

### 4. ಉಪಸಮಿತಿಗಳು ಮತ್ತು ಅವುಗಳ ಜವಾಬ್ದಾರಿ

ಸಂಘದಲ್ಲಿರುವ ಮಹಿಳೆಯರು ಸಂಘದ ಹಾಗೂ ಸಮುದಾಯದ ಸಮಸ್ಯೆಗಳಿಗೆ ಸ್ಪಂದಿಸುವಂತೆ ತರಬೇತಿ ನೀಡಲಾಗುತ್ತದೆ. ಆಡಳಿತ ಸಮಿತಿ, ಸಾಮಾಜಿಕ ಮತ್ತು ಶೈಕ್ಷಣಿಕ ಸಮಿತಿ, ರಾಜಕೀಯ ಸಮಿತಿ, ಆರೋಗ್ಯ ಮತ್ತು ಪರಿಸರ ಸಮಿತಿ, ಸಾಂಸ್ಕೃತಿಕ ಸಮಿತಿ ಮುಂತಾದ ಉಪಸಮಿತಿಗಳನ್ನು ರಚಿಸಿ, ಸದಸ್ಯರಿಗೆ ಜವಾಬ್ದಾರಿಗಳನ್ನು ನಿರ್ವಹಿಸಿ ಸಂಘವನ್ನು ಸರ್ವತೋಮುಖವಾಗಿ ಮುನ್ನಡೆಸಲು ತರಬೇತಿ ನೀಡಲಾಗುತ್ತದೆ.

### 5. ಒಕ್ಕೂಟಗಳ ಪರಿಕಲ್ಪನೆ ಮತ್ತು ಕಾರ್ಯವಿಧಾನ

ಸಂಘಗಳಲ್ಲಿ ಸಂಘಟಿತರಾದ ಮಹಿಳೆಯರಿಗೆ ಒಕ್ಕೂಟಗಳ ಮಹತ್ವದ ಬಗ್ಗೆ ತರಬೇತಿ ನೀಡಲಾಗುತ್ತದೆ. ತರಬೇತಿ ಪಡೆದ ಮಹಿಳೆಯರು ತಮ್ಮ ಗ್ರಾಮ ಪಂಚಾಯತಿ ಅಥವಾ ವಾರ್ಡ್



ವ್ಯಾಪ್ತಿಯ ಇತರೆ ಸಂಘಗಳೊಂದಿಗೆ ಸೇರಿ ಒಕ್ಕೂಟವನ್ನು ರಚಿಸಿ ಮುನ್ನಡೆಸುತ್ತಾರೆ. ಗ್ರಾಮ ಪಂಚಾಯತಿ ಮತ್ತು ವಾರ್ಡ್ ಮಟ್ಟದಲ್ಲಿ 54 ಸ್ತ್ರೀಬಂಧು ಒಕ್ಕೂಟಗಳನ್ನು ರಚಿಸಿದ್ದು, ಎಲ್ಲ ಸ್ತ್ರೀಬಂಧು ಒಕ್ಕೂಟಗಳ ಮಹಿಳೆಯರು ಷೇರುದಾರರಾಗಿ ತಮ್ಮದೇ ಆದ ಸ್ತ್ರೀಬಂಧು ಸೌಹಾರ್ದ ಸಹಕಾರಿಯನ್ನು ಪ್ರಾರಂಭಿಸಿ ಯಶಸ್ವಿಯಾಗಿ ನಡೆಸುತ್ತಿದ್ದಾರೆ.

### 5. ಫಲಿತಾಂಶ ಆಧಾರಿತ ಕ್ರಿಯಾಯೋಜನೆ

ಸಂಘ ಹಾಗೂ ಒಕ್ಕೂಟಗಳ ಮುಖಾಂತರ ಸಾಧಿಸಬಹುದಾದ ಅಭಿವೃದ್ಧಿ ಕಾರ್ಯಗಳ ಬಗ್ಗೆ ತರಬೇತಿ ನೀಡಿ ಕ್ರಿಯಾಯೋಜನೆ ರೂಪಿಸಲಾಗುತ್ತಿದೆ. ತರಬೇತಿ ಪಡೆದ ಮಹಿಳೆಯರು ತಮ್ಮ ಸಂಘ ಹಾಗೂ ಒಕ್ಕೂಟಗಳಲ್ಲಿ ಫಲಿತಾಂಶ ಆಧಾರಿತವಾಗಿ ಕ್ರಿಯಾಯೋಜನೆ ರೂಪಿಸಿ ಅನುಷ್ಠಾನಗೊಳಿಸುತ್ತಾರೆ. ಹೀಗೆ ಆಂತರಿಕವಾಗಿ ಸದೃಢಗೊಂಡ ಸಂಘದ ಮಹಿಳೆಯರಿಗೆ ವಿವಿಧ ವಿಷಯಾಧಾರಿತ ತರಬೇತಿ ನೀಡಿ ಸಮುದಾಯದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಪ್ರೇರೇಪಿಸಲಾಗುತ್ತದೆ.

### 6. ಪಂಚಾಯತ್ ರಾಜ್ ವ್ಯವಸ್ಥೆ

ಈ ತರಬೇತಿಯಲ್ಲಿ ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳ ಮಹತ್ವದ ಬಗ್ಗೆ ತಿಳಿಸಿ ಸಂಘದ ಮಹಿಳೆಯರು ಮತ್ತು ಸಮುದಾಯದ ಜನರು ಹೆಚ್ಚು ಹೆಚ್ಚಾಗಿ ಈ ಸಭೆಗಳಲ್ಲಿ



ಭಾಗವಹಿಸಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳುವಂತೆ ಮಾಡಲಾಗುತ್ತದೆ.

### 7. ಹಕ್ಕು ಆಧಾರಿತ ಕಾರ್ಯವಿಧಾನ

ಈ ತರಬೇತಿಯಲ್ಲಿ ಮಾನವ ಹಕ್ಕು, ಮಹಿಳಾ ಹಕ್ಕು, ಮಕ್ಕಳ ಹಕ್ಕು, ಮಾಹಿತಿ ಹಕ್ಕು ಕಾಯ್ದೆ, ಗ್ರಾಹಕರ ಹಕ್ಕು, ಮುಂತಾದ



ವಿವಿಧ ರೀತಿಯ ಹಕ್ಕುಗಳ ಬಗ್ಗೆ ತಿಳಿಸಿ ಸಮುದಾಯದ ಜನರು ತಮ್ಮ ಅವಶ್ಯಕತೆಗಳನ್ನು ಹಕ್ಕಾಗಿ ಪರಿಗಣಿಸುವಂತೆ ಮಾಡಲಾಗುತ್ತದೆ. ಈ ತರಬೇತಿ ಪಡೆದ ಮಹಿಳೆಯರು, ತಮ್ಮ ಹಾಗೂ ಸಮುದಾಯದ ಅವಶ್ಯಕತೆಗಳನ್ನು ಹಕ್ಕಿನಿಂದ ಪಡೆಯಲು ಸಮರ್ಥರಾಗುತ್ತಾರೆ. ವಿವಿಧ ಇಲಾಖೆಗಳಿಂದ ತಮಗೆ ಬೇಕಾದ ಮಾಹಿತಿಯನ್ನು ಮಾಹಿತಿ ಹಕ್ಕು ಕಾಯ್ದೆ ಬಳಸಿ ಪಡೆಯಲು ಸಮರ್ಥರಾಗುತ್ತಾರೆ. ಹಕ್ಕಿನಿಂದ

ವಂಚಿತರಾದ ಬಡವರ ಪರವಾಗಿ, ಸಂಘ ಮತ್ತು ಸ್ತ್ರೀಬಂಧು ಒಕ್ಕೂಟಗಳ ಸಭೆಗಳಲ್ಲಿ ಚರ್ಚಿಸಿ, ಸರ್ಕಾರದ ಉನ್ನತ ಅಧಿಕಾರಿಗಳಿಗೆ, ಶಾಸಕರಿಗೆ, ಮಂತ್ರಿಗಳಿಗೆ, ಮುಖ್ಯ ಮಂತ್ರಿಗಳಿಗೆ ಮನವಿಗಳನ್ನು ಸಲ್ಲಿಸಿ ಯಶಸ್ವಿಯಾಗಿ ಸೌಲಭ್ಯಗಳನ್ನು ಪಡೆದ ಉದಾಹರಣೆಗಳು ಸಾಕಷ್ಟಿವೆ.

### 8. ವಿವಿಧ ಸರ್ಕಾರಿ ಸೌಲಭ್ಯಗಳು ಮತ್ತು ನಿಯಮಗಳು

ಬಡವರಿಗಾಗಿ ಸರ್ಕಾರವು ಕಾಲಕಾಲಕ್ಕೆ ಹತ್ತಾರು ಯೋಜನೆಗಳನ್ನು ರೂಪಿಸುತ್ತದೆ ಹಾಗೂ ಕಾಲಕಾಲಕ್ಕೆ ಅವುಗಳ ನಿಯಮಗಳಲ್ಲಿ ಬದಲಾವಣೆಗಳೂ ಆಗುತ್ತವೆ. ಇವುಗಳ ಬಗೆಗಿನ ಅಜ್ಞಾನದಿಂದಾಗಿ ಅರ್ಹತೆಯುಳ್ಳ ಅನೇಕ ಬಡಜನರು ಇವುಗಳಿಂದ ವಂಚಿತರಾಗುತ್ತಾರೆ. ಈ ಕುರಿತು ತರಬೇತಿ ಪಡೆದ ಮಹಿಳೆಯರು ಸರ್ಕಾರಿ ಸೌಲಭ್ಯಗಳಿಂದ ವಂಚಿತರಾದ ತಮ್ಮ ಸಮುದಾಯದ ಬಡವರನ್ನು ಗುರುತಿಸಿ ಅವರಿಗೆ ಅವಶ್ಯಕವಾದ ಸೌಲಭ್ಯ ಕೊಡಿಸಲು ನೆರವಾಗುತ್ತಾರೆ.

### 9. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ

ಈ ಯೋಜನೆಯು 2005ರಿಂದ ಜಾರಿಯಲ್ಲಿದ್ದರೂ, ಈ ಯೋಜನೆಯಲ್ಲಿ ಸಮುದಾಯದ ಜನರ ಪಾತ್ರ, ಜವಾಬ್ದಾರಿ ಮತ್ತು ಹಕ್ಕುಗಳ ಬಗ್ಗೆ ತಿಳುವಳಿಕೆಯ ಕೊರತೆಯಿಂದಾಗಿ ಇಂದಿಗೂ ಅವಶ್ಯಕತೆಯುಳ್ಳವರಿಗೆ ಇದರ ಸಂಪೂರ್ಣ



ಪ್ರಯೋಜನ ಸಿಗುತ್ತಿಲ್ಲ. ಆದುದರಿಂದ ಈ ವಿಷಯದಲ್ಲಿ ಸಂಸ್ಥೆಯು ಸಂಘಗಳ ಮೂಲಕ ಸಮುದಾಯದ ಜನರಿಗೆ ತರಬೇತಿ ಶಿಬಿರಗಳನ್ನು ನಡೆಸುತ್ತದೆ. ತರಬೇತಿ ಪಡೆದ ಜನರು, ಕೆಲಸಗಾರರ ಗುಂಪುಗಳನ್ನು ರಚಿಸಿ, ಯೋಜನೆಯ ಅನುಸಾರ ನೂರು ದಿನಗಳ ಉದ್ಯೋಗವನ್ನು ತಮ್ಮ ಹಕ್ಕಾಗಿ ಪಡೆಯಲು ಸಮರ್ಥರಾಗುತ್ತಾರೆ. ಯೋಜನೆಯ ಅನುಷ್ಠಾನದಲ್ಲಿ ತಮಗಾಗುವ ಶೋಷಣೆಯ ಬಗ್ಗೆ ಅರಿವು ಹೊಂದಿ, ಮೇಲಾಧಿಕಾರಿಗಳಿಗೆ, ಓಂಬುಡ್ಸ್‌ಮನ್‌ರವರಿಗೆ ದೂರುಸಲ್ಲಿಸಿ ಪರಿಹಾರ ಪಡೆಯಲು ಸಾಮರ್ಥ್ಯ ಹೊಂದುತ್ತಾರೆ.

### 10. ಲಿಂಗ ಸೂಕ್ಷ್ಮತೆ

ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಹಾಸುಹೊಕ್ಕಾಗಿರುವ ಲಿಂಗ ತಾರತಮ್ಯದ ದುಷ್ಪರಿಣಾಮಗಳ ಬಗ್ಗೆ ಜಾಗೃತಿ




ಮೂಡಿಸಿ, ಹೆಣ್ಣುಮಕ್ಕಳಿಗೆ ಮತ್ತು ಮಹಿಳೆಯರಿಗೆ ಸಮಾನ ಅವಕಾಶ ಮತ್ತು ಸ್ಥಾನಮಾನ ದೊರೆಯುವಂತೆ ಮಾಡುವ ಪ್ರಯತ್ನ ಸಂಸ್ಥೆಯ ವತಿಯಿಂದ ನಿರಂತರ ಸಾಗುತ್ತಿದೆ. ಈ ತರಬೇತಿಯ ಪರಿಣಾಮವಾಗಿ ಕುಟುಂಬದಲ್ಲಿ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹ ಸಿಗುತ್ತಿದೆ.

### 11. ಪರಿಸರ ಸಂರಕ್ಷಣೆ, ನೈಸರ್ಗಿಕ ಕೃಷಿ, ನೈಸರ್ಗಿಕ ಸಂಪನ್ಮೂಲಗಳ ಬಳಕೆ

ಆಯ್ದ ಕಾರ್ಯಕ್ಷೇತ್ರದ ರೈತರನ್ನು ಗುರುತಿಸಿ ಅವರಿಗೆ ಪರಿಸರ ಸಂರಕ್ಷಣೆ, ನೈಸರ್ಗಿಕ ಕೃಷಿ, ನೈಸರ್ಗಿಕ ಸಂಪನ್ಮೂಲಗಳ ಬಳಕೆಯ



ಕುರಿತು ತರಬೇತಿ ನೀಡಲಾಗುತ್ತಿದೆ. ಪರಿಣಾಮವಾಗಿ ಈ ರೈತರು ತಮ್ಮ ಜಮೀನಿನಲ್ಲಿ ಸಾವಯವ ಕೃಷಿಯನ್ನು ಅಳವಡಿಸಿಕೊಂಡು, ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿ, ಎರೆಹುಳು ಗೊಬ್ಬರ, ಜೈವಿಕ ಅನಿಲ, ಜೀವಾಮೃತ, ಮುಂತಾದವುಗಳನ್ನು ತಾವೇ ಉತ್ಪಾದಿಸಿ ಕೃಷಿಯಲ್ಲಿ ಸ್ವಾವಲಂಬನೆ ಸಾಧಿಸುತ್ತಿದ್ದಾರೆ. ನೀರು ಅನಾವಶ್ಯಕ ಪೋಲಾಗುವುದನ್ನು ತಪ್ಪಿಸಿ, ನಾವು ಸೇವಿಸುವ ಗಾಳಿ ಮತ್ತು ನೀರು ಮಲಿನವಾಗುವುದನ್ನು ತಡೆಯುತ್ತಾರೆ.

**12. ಆರೋಗ್ಯ ಮತ್ತು ಹೆಚ್.ಐ.ವಿ/ಏಡ್ಸ್ ಬಗ್ಗೆ ಮಾಹಿತಿ ಕಾರ್ಯಾಗಾರ**

ಸಮುದಾಯದ ಜನರಿಗೆ ತಮ್ಮ ಸಾಮಾನ್ಯ ಅರೋಗ್ಯ ಕಾಪಾಡಿಕೊಳ್ಳಲು ಅವಶ್ಯಕವಾದ ಪೌಷ್ಟಿಕ ಆಹಾರ ತಯಾರಿಕೆ, ವೈಯಕ್ತಿಕ ಸ್ವಚ್ಚತೆ ಕಾಪಾಡುವುದು, ಪರಿಸರ ನೈರ್ಮಲ್ಯದ ಕುರಿತು ತರಬೇತಿ, ಹೆಚ್.ಐ.ವಿ. ಮತ್ತು ಏಡ್ಸ್ ಹರಡುವ ಬಗ್ಗೆ ಮುಂಜಾಗ್ರತೆ, ಸಮುದಾಯದಲ್ಲಿ ಗುರುತಿಸಲಾದ ಸೋಂಕಿತರನ್ನು ತಾರತಮ್ಯ ಮತ್ತು ಕಳಂಕವಿಲ್ಲದೆ ಜೀವಿಸಲು ನೆರವು ನೀಡುವುದು, ಮುಂತಾದ ವಿಷಯಗಳಲ್ಲಿ ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಿ ಸೂಕ್ತ ಮಾಹಿತಿ ನೀಡಲಾಗುತ್ತಿದೆ.

**13. ಸ್ವ–ಉದ್ಯೋಗ ಕೌಶಲ್ಯ**

ಸ್ವ–ಸಹಾಯ ಸಂಘಗಳಲ್ಲಿರುವ ಮಹಿಳೆಯರು ಮತ್ತು ಅವರ ಮಕ್ಕಳಲ್ಲಿ ಸ್ವ–ಉದ್ಯೋಗ ಮಾಡಲು ಆಸಕ್ತಿಯುಳ್ಳವರನ್ನು ಗುರುತಿಸಿ, ಇತರೆ ಸಂಸ್ಥೆಗಳ ನೆರವಿನಿಂದ ಅವರಿಗೆ ಕೌಶಲ್ಯಾಧಾರಿತ ತರಬೇತಿಗಳನ್ನು ಆಯೋಜಿಸಲಾಗುತ್ತದೆ. ಹಾಗೂ ವಿವಿಧ ಮೂಲಗಳಿಂದ ಆರ್ಥಿಕ ಬಂಡವಾಳ ಒದಗಿಸಲು ಅಗತ್ಯ ಮಾಹಿತಿ ನೀಡಲಾಗುತ್ತದೆ. ತರಬೇತಿ




ಪಡೆದ ಸಾವಿರಾರು ಜನರು ಇಂದು ಸ್ವ–ಉದ್ಯೋಗಗಳನ್ನು ಕೈಗೊಂಡು ತಮ್ಮ ಕುಟುಂಬದ ಆದಾಯ ಹೆಚ್ಚಿಸಿಕೊಂಡಿದ್ದಾರೆ.

ಈ ರೀತಿಯಲ್ಲಿ ಎಸ್.ಎಮ್.ಎಸ್.ಎಸ್.ಸಂಸ್ಥೆಯ ಸಾಮರ್ಥ್ಯ ವರ್ಧನೆ ಕಾರ್ಯಕ್ರಮವು ಸಮುದಾಯದ ಜನರ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗಿದೆ.

---

# ಮಹಿಳೆಯರಲ್ಲಿ ಚೈತನ್ಯ



✍ **ಜೀನಾ ಫೆರ್ನಾಂಡಿಸ್, ಸಾಗರ**
**ಕಾರ್ಯಕರ್ತೆ**

ಎಲ್ಲಿ ಚೈತನ್ಯ, ಶಕ್ತಿ, ಪವರ್, ಮುಂದಾಲೋಚನೆ, ದಿಟ್ಟತನ, ಸಮಸ್ಯೆಗಳನ್ನು ಎದುರಿಸುವ ಮನೋಭಾವ ಇರುವುದಿಲ್ಲವೊ ಅಲ್ಲಿ ಎಲ್ಲವೂ ಶೂನ್ಯ. ಸಮಗ್ರ ಬೆಳವಣಿಗೆಗೆ ಇವೆಲ್ಲವೂ ಅತ್ಯಗತ್ಯ. ಒಂದು ಬೀಜದಲ್ಲಿ ಅಡಕವಾಗಿರುವ ಶಕ್ತಿಯಿಂದಲೇ ಅದು ಮೊಳಕೆಯೊಡೆಯುತ್ತದೆ, ಸುತ್ತಲಿನ ಪರಿಸರದ ಉಪಯೋಗ ಪಡೆದು ಗಿಡವಾಗಿ ಬೆಳೆದು ಮರವಾಗುತ್ತದೆ. ಎಲ್ಲರಿಗೂ ನೆರಳನ್ನು ನೀಡುತ್ತದೆ. ಬೆಳವಣಿಗೆಯ ಹಿಂದಿರುವ ಶಕ್ತಿಯೇ ಉತ್ಸಾಹ, ಹುಮ್ಮಸ್ಸು, ಸಮಸ್ಯೆಗಳನ್ನು ಎದುರಿಸುವ ಸಾಮರ್ಥ್ಯ.

ಎಲ್ಲಿ ನಿರುತ್ಸಾಹ, ಹಿಂಜರಿಕೆ ತುಂಬಿದೆಯೋ, ಸಾಧನೆ ಮಾಡಬೇಕು, ಮುನ್ನುಗ್ಗಬೇಕು, ಸಮಸ್ಯೆಗಳನ್ನು ಎದುರಿಸಬೇಕು, ಪ್ರತಿಯೊಂದನ್ನು ಅರ್ಥಮಾಡಿಕೊಳ್ಳಬೇಕು ಎಂಬ ಅಪೇಕ್ಷೆ ಇಲ್ಲವೋ ಅಲ್ಲಿ ಅಭಿವೃದ್ಧಿ ಕುಂಟಿತವಾಗುತ್ತದೆ. ಸಮಾಜದಲ್ಲಿ ಇನ್ನೂ ಹಲವೆಡೆ ಮಹಿಳೆಯರು ಎಲ್ಲದಕ್ಕೂ ಪುರುಷರ ಮೇಲೆ ಅವಲಂಬಿತರಾಗಿರುವುದು ಮಹಿಳೆಯರ ದೌರ್ಬಲ್ಯವನ್ನು ಸೂಚಿಸುತ್ತದೆಯೇ ಅಥವಾ ಸಮಾಜ ಇನ್ನೂ ಪುರುಷ ಪ್ರಾಬಲ್ಯವನ್ನು ಹೊಂದಿದೆ ಎಂಬುದಕ್ಕೆ ಸಾಕ್ಷಿಯಾಗಿದೆಯೇ? ನಮ್ಮಿಂದ ಸಾಧ್ಯ ಎಂಬ ಮನೋಭಾವನೆ ಬೆಳೆದಾಗ ಮಾತ್ರ ಮಹಿಳೆಯರು ಸಬಲರಾಗಲು ಸಾಧ್ಯ.

ಎಸ್.ಎಮ್.ಎಸ್.ಎಸ್.ಸಂಸ್ಥೆಯ ಪ್ರಮುಖ ಯೋಜನೆಗಳಲ್ಲಿ ಒಂದಾದ ಮಹಿಳಾ ಸಬಲೀಕರಣದಿಂದ ಇಂದು ಹಲವು ಮಹಿಳೆಯರು ಬಾಳಿನಲ್ಲಿ ಬದಲಾವಣೆಯ ಗಾಳಿಯನ್ನು ಸೇವಿಸುತ್ತಿದ್ದಾರೆ. ಸ್ವ–ಸಹಾಯ ಸಂಘಗಳ, ಸ್ತ್ರೀಬಂಧು ಒಕ್ಕೂಟಗಳ ಮೂಲಕ ಹಲವು ಸಾಮಾಜಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಪುರುಷರಿಂದ ಸಾಧ್ಯವಾಗದ ಕೆಲಸಗಳನ್ನು ಮಾಡಿ ಯಶಸ್ಸನ್ನು ಗಳಿಸಿದ್ದಾರೆ. ಅವಕಾಶ ವಂಚಿತ ಮಹಿಳೆಯರಿಗೆ ಸೂಕ್ತ ಅವಕಾಶಗಳನ್ನು ಒದಗಿಸಿಕೊಡುವುದರ ಮೂಲಕ ಮಹಿಳೆಯರು ತಮ್ಮ ಕುಟುಂಬದ ಅಭಿವೃದ್ಧಿಯ ರೂವಾರಿಯಾಗುವಂತಹ ವಾತಾವರಣವನ್ನು ಸಂಸ್ಥೆ ಕಲ್ಪಿಸಿ ಕೊಟ್ಟಿದೆ. ಎಲ್ಲಕ್ಕಿಂತಲೂ ಮಿಗಿಲಾಗಿ ಮಹಿಳೆಯರನ್ನು ಜವಾಬ್ದಾರಿಯುತರನ್ನಾಗಿಸಿದೆ. ಎಸ್.ಎಮ್.ಎಸ್.ಎಸ್.ಸಂಸ್ಥೆ ಮಹಿಳೆಯರು ಚೈತನ್ಯ, ಶಕ್ತಿ, ಮುಂದಾಲೋಚನೆ, ದಿಟ್ಟತನದ ಗುಣಗಳನ್ನು ರೂಢಿಸಿಕೊಳ್ಳಲು ಪ್ರೇರಣೆಯಾಗಿದೆ. ಈ ಸಂಸ್ಥೆಯಲ್ಲಿ ಕಾರ್ಯಕರ್ತೆಯಾಗಿ ನಾನು ನೀಡುವ ಸೇವೆ ನನಗೆ ಸಂತಸವನ್ನು ನೀಡಿದೆ. ಸಂಸ್ಥೆಯ ಯೋಜನೆಗಳ ಸಂಪೂರ್ಣ ಪ್ರಯೋಜನವನ್ನು ಸಂಸ್ಥೆಯ ಎಲ್ಲಾ ಆದ್ಯತಾ ಸಮುದಾಯಗಳು ಪಡೆವಂತಾಗಲಿ ಎಂಬುದೇ ನನ್ನ ಹಾರೈಕೆ.

# ಸರ್ಕಾರಿ ಸೌಲಭ್ಯಗಳು ಮತ್ತು ನಿಯಮಗಳು

✍ ವಿನ್ಸೆಂಟ್ ಡಿ'ಮೆಲ್ಲೊ
ಸಂಯೋಜಕರು



**ಸರ್ಕಾರಿ ಸೌಲಭ್ಯ ಎಂದರೆ ಏನು ?**

ಆದಾಯವೇ ಇಲ್ಲದ ಅಥವಾ ಕಡಿಮೆ ಆದಾಯವುಳ್ಳ ಜನರು ಕನಿಷ್ಠ ಮೂಲಭೂತ ಸೌಕರ್ಯಗಳನ್ನು ಹೊಂದಿ ಸಾಮಾನ್ಯ ಬದುಕನ್ನು ನಡೆಸಲು ಸಹಾಯವಾಗುವಂತೆ ಸರ್ಕಾರವು ಜನರ ತೆರಿಗೆ ಹಣದ ಒಂದು ಪಾಲನ್ನು ಖರ್ಚು ಮಾಡಿ ವಿವಿಧ ಸೌಲಭ್ಯಗಳನ್ನು ನೀಡುವುದು. ಈ ಮೂಲಕ ಪ್ರಜೆಗಳಿಗೆ ಸಂವಿಧಾನದತ್ತ ಹಕ್ಕುಗಳು ಸಿಗುವಂತೆ ಮಾಡುವುದು.

**ಸಂವಿಧಾನದತ್ತ ಹಕ್ಕುಗಳು ಯಾವುವು**

ಭಾರತ ದೇಶದ ಸಂವಿಧಾನದ ಮೂಲ ಆಶಯ "ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು" ದೊರಕಬೇಕೆಂಬುದೇ ಆಗಿದೆ. ಆದರೆ ವಿವಿಧ ಕಾರಣಗಳಿಂದಾಗಿ ಎಲ್ಲರಿಗೂ ಒಂದೇ ರೀತಿಯ ಆದಾಯವಿರುವುದಿಲ್ಲ. ಇನ್ನು ಕೆಲವರು ಯಾವುದೇ ರೀತಿಯ ಆದಾಯ ಗಳಿಸಲು ಶಕ್ತರಾಗಿರುವುದಿಲ್ಲ. ಆದರೆ ಈ ಕಾರಣದಿಂದ ಅವರು ಜೀವಿಸಲು ಅವಶ್ಯವಿರುವ ಕನಿಷ್ಠ ಮೂಲಭೂತ ಸೌಕರ್ಯಗಳಾದ ಪೌಷ್ಟಿಕ ಆಹಾರ, ಶುದ್ಧ ನೀರು, ಬಟ್ಟೆ, ವಸತಿ, ರಕ್ಷಣೆ, ಶಿಕ್ಷಣ, ಆರೋಗ್ಯ ಮುಂತಾದ ಸೌಲಭ್ಯಗಳಿಂದ ವಂಚಿತರಾಗದಂತೆ ನೋಡಿಕೊಳ್ಳುವುದು ಸಂವಿಧಾನದ ಪ್ರಕಾರ ಸರ್ಕಾರದ ಕರ್ತವ್ಯವಾಗಿರುತ್ತದೆ. ಯಾವುದೇ ಆದಾಯವಿಲ್ಲದವರೂ ಮೇಲ್ಕಂಡ ಕನಿಷ್ಠ ಸೌಲಭ್ಯಗಳನ್ನು ಹೊಂದಿ ಜೀವನ ನಡೆಸುವುದು ಪ್ರತಿಯೊಬ್ಬ ಪ್ರಜೆಯ ಹಕ್ಕಾಗಿರುತ್ತದೆ.

**ಸರ್ಕಾರಿ ಸೌಲಭ್ಯಗಳು ಯಾವುವು**

ಹುಟ್ಟಿನಿಂದ ಸಾಯುವವರೆಗೆ ಬಡವರಿಗೆ (ಸ್ವ–ಸಾಮರ್ಥ್ಯವಿಲ್ಲದವರಿಗೆ) ವಿವಿಧ ರೀತಿಯ ಯೋಜನೆಗಳನ್ನು ಸರ್ಕಾರವು ಘೋಷಿಸುತ್ತದೆ. ಇವುಗಳನ್ನು ಸಾರ್ವಜನಿಕ ಮತ್ತು ವೈಯಕ್ತಿಕ ಸೌಲಭ್ಯಗಳೆಂದು ವಿಂಗಡಿಸಬಹುದು.

**ಸಾಮೂಹಿಕ ಅಥವಾ ಸಾರ್ವಜನಿಕ ಸೌಲಭ್ಯಗಳು**

ರಸ್ತೆ, ನೀರು, ಚರಂಡಿ ವ್ಯವಸ್ಥೆ, ವಿದ್ಯುತ್, ಶಾಲೆ, ಆಸ್ಪತ್ರೆ, ಸಾರಿಗೆ ವ್ಯವಸ್ಥೆ, ಸಾಮೂಹಿಕ ಶೌಚಾಲಯಗಳು, ಆಟದ ಮೈದಾನ, ಪಾರ್ಕ್, ವಿದ್ಯಾರ್ಥಿ ನಿಲಯ, ವೃದ್ಧಾಶ್ರಮ, ಅನಾಥಾಲಯ, ಮಹಿಳಾ ಸಾಂತ್ವನ ಕೇಂದ್ರ, ಪುನರ್ವಸತಿ ಕೇಂದ್ರ, ಮುಂತಾದವು.

**ವೈಯಕ್ತಿಕ ಅಥವಾ ಕೌಟುಂಬಿಕ ಸೌಲಭ್ಯಗಳು**

ಬಿ.ಪಿ.ಎಲ್. ಪಡಿತರ ಚೀಟಿ ಮೂಲಕ ಕಡಿಮೆ ಬೆಲೆಯಲ್ಲಿ ಆಹಾರಧಾನ್ಯ ಮತ್ತಿತರ ಅವಶ್ಯಕ ವಸ್ತುಗಳ ಸರಬರಾಜು (ಅನ್ನಭಾಗ್ಯ); ಜನನಿ ಸುರಕ್ಷಾ ಯೋಜನೆ (ಅಂಗನವಾಡಿಗಳ ಮೂಲಕ); ಮಡಿಲು ಯೋಜನೆ; ಸೀಮಂತ ಯೋಜನೆ; ಭಾಗ್ಯಲಕ್ಷ್ಮಿ ಯೋಜನೆ; ಅಂಗವಿಕಲ ವೇತನ; ಯಶಸ್ವಿನಿ, ಮತ್ತಿತರ ಆರೋಗ್ಯವಿಮಾ ಯೋಜನೆಗಳು; ಆಶ್ರಯ ನಿವೇಶನಗಳು; ಆಶ್ರಯ, ಅಂಬೇಡ್ಕರ್, ಬಸವ ವಸತಿ, ನಮ್ಮ ಮನೆ, ಮುಂತಾದ ವಸತಿ ಯೋಜನೆಗಳು; ಶೌಚಾಲಯಗಳು (ಸಹಾಯಧನ); ಅಕ್ರಮ ಸಕ್ರಮ ಯೋಜನೆ; ಭಾಗ್ಯ ಜ್ಯೋತಿ; ಸ್ವರ್ಣಜಯಂತಿ ಗ್ರಾಮ ಸ್ವ–ರೋಜ್ಗಾರ್ ಯೋಜನೆ; ಸ್ವ–ಉದ್ಯೋಗಕ್ಕಾಗಿ ವಿವಿಧ ರೀತಿಯ ಸಾಲ ಮತ್ತು ಸಹಾಯಧನ ಯೋಜನೆಗಳು (ಸ್ವಾವಲಂಬನಾ, ಶ್ರಮಶಕ್ತಿ); ವಿದ್ಯಾರ್ಥಿಗಳಿಗೆ ಬಿಸಿಯೂಟ, ಕ್ಷೀರಭಾಗ್ಯ, ಪಠ್ಯ ಪುಸ್ತಕ, ಸಮವಸ್ತ್ರ, ಇತ್ಯಾದಿ (ಅಂಗನವಾಡಿಯಿಂದ ಪ್ರೌಢಶಾಲೆ ವರೆಗೆ); ಸ್ವ–ಸಹಾಯ ಸಂಘಗಳಿಗೆ ಸುತ್ತುನಿಧಿ ಮತ್ತು ಸಾಲ ಯೋಜನೆಗಳು (ವೈಟಪ್); ರೈತರಿಗೆ ಕೃಷಿ ಯಂತ್ರೋಪಕರಣ, ಬೀಜ, ಗೊಬ್ಬರ, ಅರಣ್ಯ ಮತ್ತು ಪಶುಸಂಗೋಪನೆಗೆ ಸಹಾಯಧನ, ಸಾಲ, ಮತ್ತು ಉಚಿತ ತರಬೇತಿಗಳು; ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿದ್ಯಾರ್ಥಿವೇತನಗಳು; "ಅರಿವು" ಶೈಕ್ಷಣಿಕ ಸಾಲ ಯೋಜನೆ; ಉನ್ನತ ಶಿಕ್ಷಣಕ್ಕೆ ಸಾಲ ಹಾಗೂ ಸಹಾಯಧನ; ವಿಧವಾ ವೇತನ; ಮನಸ್ವಿನಿ ಯೋಜನೆ (ಅವಿವಾಹಿತ, ವಿಚ್ಛೇದಿತ, ಪರಿತ್ಯಕ್ತ, ಅಶಕ್ತ ಮಹಿಳೆಯರಿಗೆ); ಮೈತ್ರಿ ಯೋಜನೆ (ಲೈಂಗಿಕ ಅಲ್ಪಸಂಖ್ಯಾತರಿಗಾಗಿ); ವೃದ್ಧಾಪ್ಯ ವೇತನ; ಸಂಧ್ಯಾ ಸುರಕ್ಷಾ ಯೋಜನೆ; ಜನಧನ ಯೋಜನೆ; ಪ್ರಧಾನ ಮಂತ್ರಿ ಸುರಕ್ಷಾ ವಿಮಾ ಯೋಜನೆ; ಉದ್ಯೋಗ ಖಾತ್ರಿ ಯೋಜನೆ; ಅಂತ್ಯ ಸಂಸ್ಕಾರ ಸಹಾಯ ನಿಧಿ ಯೋಜನೆ; ಇತ್ಯಾದಿ.

**ಸರ್ಕಾರಿ ಸೌಲಭ್ಯಗಳನ್ನು ಹೇಗೆ ಪಡೆಯುವುದು**

1. **ಅವಶ್ಯಕತೆ ಆಧಾರಿತವಾಗಿ**

ಅಂದರೆ ದೈನ್ಯತೆಯಿಂದ ಪ್ರಜಾಪ್ರತಿನಿಧಿಗಳ ಕೈಕಾಲು ಹಿಡಿದು, ಅಧಿಕಾರಿಗಳಿಗೆ ಲಂಚನೀಡಿ, ದೊಡ್ಡವರಿಂದ ಪ್ರಭಾವ ಬೀರಿ, ಅಲೆದು ಅಲೆದು ಪಡೆದುಕೊಳ್ಳುವುದು.

2. **ಹಕ್ಕು ಆಧಾರಿತವಾಗಿ**

ಅಂದರೆ ಯೋಜನೆಯ ಬಗ್ಗೆ, ಅದರ ನಿಯಮಗಳ ಬಗ್ಗೆ, ಅಧಿಕೃತ ಮಾಹಿತಿಯನ್ನು ಪಡೆದು, ಸರ್ಕಾರದ ಸುತ್ತೋಲೆಗಳ ಆಧಾರದಲ್ಲಿ, ಸರಿಯಾದ ರೀತಿಯಲ್ಲಿ ಅವಶ್ಯಕ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿ, ಅದರ ದಾಖಲೆಯನ್ನು ಜಾಗ್ರತೆಯಿಂದ ಕಾದಿರಿಸಿ, ನಿಗದಿತ ಅವಧಿಯೊಳಗೆ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ, ಸಂಬಂಧಿಸಿದವರಿಗೆ ಮೇಲ್ಮನವಿ/ದೂರು ಸಲ್ಲಿಸುವುದು, ಸಕಾಲ ಕಾಯಿದೆ, ಮಾಹಿತಿ ಹಕ್ಕು ಕಾಯಿದೆ, ಬಳಕೆದಾರರ ಕಾಯಿದೆ, ಜನಸ್ಪಂದನ, ಲೋಕಾಯುಕ್ತ, ಮುಂತಾದವುಗಳ ಬಗ್ಗೆ ತಿಳಿದು ಅವುಗಳ ಪ್ರಕಾರ, ನಮಗಿರುವ ಅವಕಾಶಗಳನ್ನು ಬಳಸಿ, ಸಂಬಂಧಿಸಿದವರ ಮೇಲೆ ಒತ್ತಡ ಹೇರುವುದರ ಮೂಲಕ ಸೌಲಭ್ಯಗಳನ್ನು ಪಡೆಯುವುದು.

ಆದರೆ ಎರಡನೆ ವಿಧಾನದಿಂದ ಅನಕ್ಷರಸ್ಥ ಬಡವರು ಹಾಗೂ ಶೋಷಿತರು, ತುಳಿತಕ್ಕೊಳಗಾದವರು ಸೌಲಭ್ಯಗಳನ್ನು ಪಡೆಯಲು ಸಾಧ್ಯವಿಲ್ಲ. ಅವರಿಗಾಗಿ ಕೆಲಸ ಮಾಡಲು ಆಸಕ್ತಿಯುಳ್ಳ ಯುವಜನರ ತಂಡಗಳು, ಮಹಿಳಾ ಸಂಘ ಮತ್ತು ಒಕ್ಕೂಟಗಳು, ಸೇವೆಯ ಉದ್ದೇಶ ಹೊತ್ತ ಸಮಾಜಸೇವಾ ಸಂಘಗಳು, ಇನ್ನಿತರ ಸಮಾನ ಮನಸ್ಕರೊಡನೆ ಕೂಡಿಕೊಂಡು, ತಮ್ಮ ಸಂಘಟನಾ ಬಲ ಉಪಯೋಗಿಸಿ, ಕಾಲಕಾಲಕ್ಕೆ ಸರ್ಕಾರಿ ಅಧಿಕಾರಿಗಳಿಂದ, ಸಂಪನ್ಮೂಲ ವ್ಯಕ್ತಿಗಳಿಂದ ಮಾಹಿತಿ ಶಿಬಿರಗಳನ್ನು ಏರ್ಪಡಿಸಿ ಜನರಲ್ಲಿ ಜಾಗೃತಿ ಮೂಡಿಸಬೇಕು. ವಿವಿಧ ಸೌಲಭ್ಯಗಳಿಗೆ ಅರ್ಹರಾದ ಬಡವರನ್ನು ಗುರುತಿಸಿ, ಅವರ ಸಭೆ ನಡೆಸಿ, ಹಕ್ಕು ಆಧಾರಿತ ವಿಧಾನಗಳ ಬಗ್ಗೆ ಮಾಹಿತಿ ಮತ್ತು ಮಾರ್ಗದರ್ಶನ ನೀಡಬೇಕು. ಸಾಧ್ಯವಾದಷ್ಟು ಸಾಮೂಹಿಕವಾಗಿ ಅರ್ಜಿ ಸಲ್ಲಿಸಿ, ಸಂಘಟಿತರಾಗಿ ಮೇಲ್ವಿಚಾರಣೆ (ಫಾಲೋಅಪ್) ಮಾಡಬೇಕು. ಆದರೆ ಈ ಸಂದರ್ಭದಲ್ಲಿ ಏಜೆಂಟ್‌ಗಳಂತೆ ಕಾರ್ಯನಿರ್ವಹಿಸದೆ, ಫಲಾನುಭವಿಗಳಿಗೆ ಸಂಬಂಧಿಸಿದ ಕೆಲಸಗಳನ್ನು ಮಾಡುವಂತೆ ಪ್ರೇರೇಪಿಸಬೇಕು. ಅವಶ್ಯವಿದ್ದಲ್ಲಿ ಮಾತ್ರ ಮಧ್ಯ ಪ್ರವೇಶಿಸಬೇಕು. ಇದರಿಂದ ಜನರಲ್ಲಿ ಆತ್ಮವಿಶ್ವಾಸ ಮೂಡಿ ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಸ್ವಾವಲಂಬನೆ ಉಂಟಾಗುತ್ತದೆ. ಜನರಿಗೆ, ಅದರಲ್ಲೂ ಅವಕಾಶ ವಂಚಿತರಿಗೆ, ಇರುವ ಎಲ್ಲಾ ಸೌಲಭ್ಯಗಳು ಸಕಾಲದಲ್ಲಿ ಅವರಿಗೆ ಸಿಗುವಂತಾಗಲಿ ಎಂಬುದೇ ನಮ್ಮೆಲ್ಲರ ಆಶಯ.

# ಬಾಳಿಗೆ ಬೆಳಕು ನೀಡಿದ ಸ್ತ್ರೀಬಂಧು



**ಸರೋಜಾ ಬಾಯಿ**



**ಕೃಷ್ಣಾ ನಾಯ್ಕ**

ನಾನು ಶ್ರೀಮತಿ ಸರೋಜಾ ಬಾಯಿ. ಶಿವಮೊಗ್ಗ ತಾಲ್ಲೂಕು ಕೋಟೆಗಂಗೂರು ಗ್ರಾಮಪಂಚಾಯತಿ ನಿವಾಸಿ. ನಾನು 2005ರಿಂದ ಎಸ್.ಎಮ್.ಎಸ್.ಎಸ್.ಸಂಸ್ಥೆ ಪ್ರೇರಿತ ಮರಿಯಮ್ಮ ಸ್ವ–ಸಹಾಯ ಸಂಘದ ಸದಸ್ಯೆ. ಕಳೆದ 10 ವರ್ಷಗಳಿಂದ ಸಂಸ್ಥೆಯ ಕಾರ್ಯಕರ್ತರು ಸಂಘದ ಸಭೆಗಳಿಗೆ ನಿರಂತರ ಭೇಟಿ ನೀಡಿ ವಿವಿಧ ರೀತಿಯ ಮಾಹಿತಿಗಳನ್ನು ನೀಡುತ್ತಿರುವುದರ ಫಲವಾಗಿ ನಮ್ಮ ಸಂಘದ ಸದಸ್ಯರು ಸ್ವಾವಲಂಬಿ ಹಾಗೂ ಘನತೆಯ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದೆ.

ಕೋಟೆಗಂಗೂರು ಗ್ರಾಮ ಪಂಚಾಯತಿ ವ್ಯಾಪ್ತಿಯ 11 ಸ್ವ–ಸಹಾಯ ಸಂಘಗಳ 138 ಸದಸ್ಯರನ್ನು ಸೇರಿಸಿ ಸ್ತ್ರೀಬಂಧು ಸ್ವ–ಸಹಾಯ ಸಂಘಗಳ ಒಕ್ಕೂಟವನ್ನು ಎಸ್.ಎಮ್.ಎಸ್.ಎಸ್.ಸಂಸ್ಥೆಯ ಪ್ರೇರಣೆಯಲ್ಲಿ 2 ವರ್ಷಗಳ ಹಿಂದೆ ಪ್ರಾರಂಭಿಸಲಾಯಿತು. ಸ್ತ್ರೀಬಂಧು ಒಕ್ಕೂಟದ ಮಾಸಿಕ ಸಭೆಗಳಿಗೆ ಎಲ್ಲಾ ಸದಸ್ಯ ಸಂಘಗಳ 2 ಪ್ರತಿನಿಧಿಗಳು ಹಾಜರಾಗಿ ವಿವಿಧ ವಿಷಯಗಳ ಬಗ್ಗೆ ಚರ್ಚಿಸಲಾಗುತ್ತಿದೆ ಮತ್ತು ಈ ಸಭೆಗಳಿಗೆ ಎಸ್.ಎಮ್.ಎಸ್.ಎಸ್. ಸಂಸ್ಥೆಯ ಸಂಯೋಜಕರು ಹಾಜರಾಗಿ ಮಾಹಿತಿ ಹಾಗೂ ತರಬೇತಿಗಳನ್ನು ನೀಡುತ್ತಿರುತ್ತಾರೆ. ಈ ತರಬೇತಿಗಳ ಫಲವಾಗಿ ಸಂಘಗಳ ಸದಸ್ಯರು ವಿವಿಧ ತರದ ಪ್ರಯೋಜನವನ್ನು ಪಡೆಯಲು ಶಕ್ತರಾಗಿರುವುದು ಅತ್ಯಂತ ಹೆಮ್ಮೆಯ ವಿಷಯ.

ಒಂದು ಒಕ್ಕೂಟ ಸಭೆಯಲ್ಲಿ ಕರ್ನಾಟಕ ಸರ್ಕಾರದ ಕಾರ್ಮಿಕ ಇಲಾಖೆಯ ವತಿಯಿಂದ ಕಟ್ಟಡ ಕಾರ್ಮಿಕರಿಗೆ ದೊರೆಯುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿ ಈ ಸೌಲಭ್ಯಗಳನ್ನು ಪಡೆಯಲು ಅವಶ್ಯವಿರುವ ಗುರುತಿನ ಚೀಟಿಯನ್ನು ಪಡೆಯುವ ವಿಧಾನದ ಬಗ್ಗೆ ಮಾಹಿತಿಯನ್ನು ನೀಡಲಾಯಿತು.


ಈ ಮಾಹಿತಿಯನ್ನು ಪಡೆದು ಸಂಘದ 10 ಸದಸ್ಯರು ಸೇರಿದಂತೆ ಒಕ್ಕೂಟದ 96 ಸದಸ್ಯರು ಸ್ತ್ರೀಬಂಧು ಒಕ್ಕೂಟದ

ಮೂಲಕ ಗುರುತಿನ ಚೀಟಿಗಾಗಿ ಅರ್ಜಿ ಸಲ್ಲಿಸಿದರು. ಹೀಗೆ ಅರ್ಜಿ ಸಲ್ಲಿಸಿದವರಿಗೆ ದಿನಾಂಕ 14.5.2014ರಂದು ಗುರುತಿನ ಚೀಟಿಗಳನ್ನು ವಿತರಿಸಲಾಯಿತು. ಹೀಗೆ ಗುರುತಿನ ಚೀಟಿ ಪಡೆದವರಲ್ಲಿ ಸರೋಜಾ ಬಾಯಿ ಇವರ ಗಂಡ ಶ್ರೀ ಕೃಷ್ಣಾ ನಾಯ್ಕ ಕೂಡ ಒಬ್ಬರು.

ಆದರೆ ದುರದೃಷ್ಟವಶಾತ್ ಕೃಷ್ಣಾ ನಾಯ್ಕ್‌ರವರು ದಿನಾಂಕ 02.08.2014ರಂದು ಆಕಸ್ಮಿಕವಾಗಿ ಮರಣ ಹೊಂದಿದರು. ದಿಕ್ಕೇ ತೋಚದಂತಾದಾಗ ಸಾಂತ್ವನದ ಮೂಲಕ ಸ್ತ್ರೀಬಂಧು ಒಕ್ಕೂಟದ ಸದಸ್ಯರು ತಮ್ಮ ಕೈಲಾದ ಆರ್ಥಿಕ ಸಹಾಯ ಮಾಡುವುದರ ಜೊತೆಗೆ ಕಾರ್ಮಿಕರ ಇಲಾಖೆಯಿಂದ ದೊರೆಯುವ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಲು ಮಾಹಿತಿ ನೀಡಿದರು. ಇದರಂತೆ ದಿನಾಂಕ 10.09.2014ರಂದು ಅಂತ್ಯಕ್ರಿಯೆ ವೆಚ್ಚ ಹಾಗೂ ಅನುಗ್ರಹ ರಾಶಿ ಸೌಲಭ್ಯಕ್ಕಾಗಿ ಶಿವಮೊಗ್ಗದ ಕಾರ್ಮಿಕ ಇಲಾಖೆ ಕಚೇರಿಗೆ ಅರ್ಜಿ ಸಲ್ಲಿಸಲಾಯಿತು.

**ಶುರುವಾಯಿತು ಅಲೆದಾಟ**

ಅರ್ಜಿ ಸ್ವೀಕರಿಸಿದ ಅಧಿಕಾರಿಗಳು ಒಂದು ತಿಂಗಳ ನಂತರ ಬರುವಂತೆ ತಿಳಿಸಿದರು. ಒಂದು ತಿಂಗಳ ನಂತರ ಹೋದರೆ



ಮುಂದಿನ ತಿಂಗಳು ಬಾ, ನಂತರ ಮುಂದಿನ ವಾರ ಬಾ, ನಾಳೆ ಬಾ, ಆಗ ಬಾ, ಈಗ ಬಾ ಎಂದು ಒಂದು ವರ್ಷ ಅಲೆದಾಡಿಸಿದರು.

**ಮೂಲೆ ಸೇರಿದ ಅರ್ಜಿಗೆ ಜೀವ ನೀಡಿದ ಮಾಹಿತಿ ಹಕ್ಕು ಅರ್ಜಿ**

ಈ ರೀತಿ ಅಲೆದು ರೋಸಿಹೋದ ಸರೋಜಾ ಬಾಯಿ ವಿಷಯವನ್ನು ಸ್ವ–ಸಹಾಯ ಸಂಘದ ಸಭೆಯಲ್ಲಿ ಪ್ರಸ್ತಾಪಿಸಿದರು. ಸಂಘದ ಪ್ರತಿನಿಧಿಗಳು ಈ ವಿಷಯವನ್ನು ಸ್ತ್ರೀಬಂಧು ಒಕ್ಕೂಟದ ಸಭೆಯಲ್ಲಿ ಪ್ರಸ್ತಾಪಿಸಿದರು. ಸ್ತ್ರೀಬಂಧು ಒಕ್ಕೂಟದ ಸಭೆಯಲ್ಲಿ ಚರ್ಚಿಸಿದ ಸದಸ್ಯರು ಎಸ್.ಎಮ್. ಎಸ್.ಎಸ್.ಸಂಸ್ಥೆಯ ಸಂಪನ್ಮೂಲ ವ್ಯಕ್ತಿಯ ಸಲಹೆ ಪಡೆದು ಮಾಹಿತಿ ಹಕ್ಕು ಅರ್ಜಿ ಸಲ್ಲಿಸಲು ಸೂಚಿಸಿದರು.


ಅವರ ಸಲಹೆಯಂತೆ ದಿನಾಂಕ 07.10.2015ರಂದು ಮೊದಲು ಸಲ್ಲಿಸಿದ ಅರ್ಜಿ ಯಾವ ಹಂತದಲ್ಲಿದೆ ಎಂಬ ಮಾಹಿತಿ ಕೋರಿ ಮಾಹಿತಿ ಹಕ್ಕು ಕಾಯಿದೆ 2005ರ ಪ್ರಕಾರ ಅರ್ಜಿಯನ್ನು ಸಿದ್ಧಪಡಿಸಿ ಕಛೇರಿ ಅಧಿಕಾರಿಯನ್ನು ಭೇಟಿ ಮಾಡಲಾಯಿತು. ಅರ್ಜಿಯನ್ನು ನೋಡಿದ ಅಧಿಕಾರಿಯು ಗಾಬರಿಗೊಂಡು ಲಭ್ಯವಿರುವ ಸೌಲಭ್ಯವನ್ನು ಕೊಡಿಸಲು ಕೂಡಲೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿ, ಮಾಹಿತಿ ಹಕ್ಕು ಅರ್ಜಿಯನ್ನು ಸಲ್ಲಿಸದೆ ವಾಪಸು ಪಡೆಯಬೇಕೆಂದೂ ಪರಿಪರಿಯಾಗಿ ಕೇಳಿಕೊಂಡಾಗ ಎಲ್ಲರಿಗೂ ಆಶ್ಚರ್ಯವಾಯಿತು. ಇನ್ನೂ ಸ್ವಲ್ಪ ದಿನ ಕಾಯುವ ನಿರ್ಧಾರದಿಂದ ಮಾಹಿತಿ ಕೋರಿರುವ ಅರ್ಜಿಯನ್ನು ಸಲ್ಲಿಸದೆ ವಾಪಾಸು ಪಡೆಯಲಾಯಿತು.

**ಆಶ್ಚರ್ಯ ಆದರೂ ಸತ್ಯ**

ಮಾಹಿತಿ ಹಕ್ಕು ಅರ್ಜಿಯೊಂದಿಗೆ ಕಚೇರಿಗೆ ಭೇಟಿ ನೀಡಿದ ಮರುದಿನವೇ ಅರ್ಜಿಯು ಮಂಗಳೂರಿನ ಕಾರ್ಮಿಕ ಆಯುಕ್ತರ ಕಚೇರಿಗೆ ತಲುಪಿರುವುದಾಗಿಯೂ ತಿಳಿದುಬಂತು. ಕೆಲವು ಮೂಲ ದಾಖಲೆಗಳನ್ನು ಸಲ್ಲಿಸಬೇಕೆಂದು ಶಿವಮೊಗ್ಗ ಕಛೇರಿಯ ಸಿಬ್ಬಂದಿಯ ಮೂಲಕ 14.12.2015ರಂದು ತಿಳಿಸಲಾಯಿತು. ಅದರಂತೆ 28.12.2015ರಂದು ಮೂಲ ಮರಣ ಪ್ರಮಾಣಪತ್ರ ಮತ್ತು ಮೂಲ ಗುರುತಿನ ಚೀಟಿ ನೀಡಿದ ಪತ್ರಗಳನ್ನು ಸಲ್ಲಿಸಲಾಯಿತು.


**ಕೊನೆಗೂ ಸಿಕ್ಕಿತು ಸೌಲಭ್ಯ**

ಸ್ತ್ರೀಬಂಧು ಒಕ್ಕೂಟದ ಬೆಂಬಲ ಮತ್ತು ಎಸ್.ಎಮ್. ಎಸ್.ಎಸ್.ಸಂಸ್ಥೆಯ ಮಾರ್ಗದರ್ಶನದಲ್ಲಿ ಮಾಡಿದ ಪ್ರಯತ್ನದ ಫಲವಾಗಿ ತಡವಾಗಿಯಾದರೂ ದಿನಾಂಕ 05.03.2016ರಂದು ಅಂತ್ಯಕ್ರಿಯೆ ವೆಚ್ಚ ಹಾಗೂ ಅನುಗ್ರಹ ರಾಶಿ ಸೌಲಭ್ಯ ಮಂಜೂರಾತಿ ಆದೇಶದ ಪತ್ರ ಸರೋಜಾ ಬಾಯಿಯ ಕೈಸೇರಿತು ಮತ್ತು ಆದೇಶ ಪತ್ರದಲ್ಲಿ ತಿಳಿಸಿದಂತೆ ರೂ. 54,000/– ಮೊತ್ತವು ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಯಿತು.



ಸರೋಜಾ ಬಾಯಿಯವರಿಗೆ ವಿದ್ಯಾಭ್ಯಾಸ ಮಾಡುತ್ತಿರುವ 2 ಹೆಣ್ಣು ಮಕ್ಕಳಿದ್ದು ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ಈ ಮೊತ್ತವನ್ನು ಖರ್ಚು ಮಾಡಲು ಅವರು ಯೋಚಿಸಿದ್ದಾರೆ.

"ಕತ್ತಲು ತುಂಬಿದ ಬಾಳಿಗೆ ಬೆಳಕಿನ ದಾರಿ ತೋರಿಸಿದ" ಸ್ತ್ರೀಬಂಧು ಒಕ್ಕೂಟದ ಪ್ರತಿನಿಧಿಗಳಿಗೆ ಮತ್ತು ಕಾಲಕಾಲಕ್ಕೆ ನಮಗೆಲ್ಲರಿಗೂ ಅವಶ್ಯಕ ಮಾರ್ಗದರ್ಶನ ನೀಡುತ್ತಿರುವ ಎಸ್.ಎಮ್.ಎಸ್.ಎಸ್.ಸಂಸ್ಥೆಗೆ ಸರೋಜಾ ಬಾಯಿಯವರು ಎಂದೆಂದಿಗೂ ಚಿರಋಣಿಯಾಗಿದ್ದಾರೆ.





| | |
|---|---|
| ಕಟ್ಟಡ ಕಾರ್ಮಿಕರ ಗುರುತಿನ ಚೀಟಿ ಪಡೆದ ದಿನಾಂಕ | 14.05.2014 |
| ಮೃತ ಪಟ್ಟ ದಿನಾಂಕ | 02.08.2014 |
| ಅರ್ಜಿ ಸಲ್ಲಿಸಿದ ದಿನಾಂಕ | 10.09.2014 |
| 13 ತಿಂಗಳ ನಂತರ | |
| ಮಾಹಿತಿ ಹಕ್ಕು ಅರ್ಜಿ ನೀಡಿದ ದಿನಾಂಕ | 07.10.2015 |
| ಮಂಗಳೂರಿನ ಕೇಂದ್ರ ಕಚೇರಿಗೆ ಅರ್ಜಿ ತಲುಪಿದ ದಿನಾಂಕ | 08.10.2015 |
| ಮೂಲ ಪ್ರಮಾಣ ಪತ್ರ ಸಲ್ಲಿಕೆ ಮಾಡಿದ ದಿನಾಂಕ | 28.12.2015 |
| ಮಂಜೂರಾತಿ ಆದೇಶ ಪತ್ರ ದೊರೆತ ದಿನಾಂಕ | 05.03.2016 |

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಯಶಸ್ಸಿಗೆ ಕೆಲಸಗಾರರ ಸಂಘಗಳ ಪಾತ್ರ



✍ **ಮೀನಾ ಡಿ'ಮೆಲ್ಲೊ**
**ಕಾರ್ಯಕರ್ತೆ**

ಕರ್ನಾಟಕದಲ್ಲಿ ಉದ್ಯೋಗ ಖಾತ್ರಿ ಯೋಜನೆಯು ಪ್ರಾರಂಭವಾಗಿ 13 ವರ್ಷಗಳು ಕಳೆದಿವೆ. ಈ ಯೋಜನೆಯಿಂದ ಜನರಿಗಾದ ಪ್ರಯೋಜನದ ಬಗ್ಗೆ ಮೌಲ್ಯಮಾಪನ ನಡೆಸಿದಾಗ ನಿರಾಶೆಯಾಗುತ್ತದೆ. ಯೋಜನೆಯ ಅನುಷ್ಠಾನದಲ್ಲಿ ಖರ್ಚಾದ ಸಾವಿರಾರು ಕೋಟಿ ರೂಪಾಯಿಗಳಲ್ಲಿ, ಹೆಚ್ಚಿನಪಾಲು ಮಧ್ಯವರ್ತಿಗಳು, ಗುತ್ತಿಗೆದಾರರು, ಅಧಿಕಾರಿಗಳು, ಹಾಗೂ ಜನಪ್ರತಿನಿಧಿಗಳ ಪಾಲಾಗಿರುವುದು ಸರ್ಕಾರವೇ ನಡೆಸಿದ ತನಿಖೆಯಿಂದ ಬಯಲಾಗುತ್ತಿದೆ. ಸೋರಿಕೆಯನ್ನು ತಡೆಯಲು ಹಲವು ಹಂತದ ಮೇಲ್ವಿಚಾರಣಾ ವಿಧಾನಗಳನ್ನು ಅಳವಡಿಸಿಯೂ ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಎಂಬಂತೆ ತನಿಖಾಧಿಕಾರಿಗಳೂ ಲೂಟಿಯಲ್ಲಿ ಪಾಲು ಪಡೆಯುತ್ತಿರುವುದು ದುರಾದೃಷ್ಟವೇ ಸರಿ.

ಹೇಳಿ ಕೇಳಿ ಈ ಯೋಜನೆಯ ಫಲಾನುಭವಿಗಳಾಗಬೇಕಾದವರು ಅಕುಶಲ ಕೂಲಿಗಾರರು. ಅಸಂಘಟಿತರಾದ ಇವರ ಅಜ್ಞಾನ, ಅಕುಶಲತೆ, ಅನಕ್ಷರತೆ, ಕೀಳರಿಮೆ, ದೌರ್ಬಲ್ಯ, ಹಕ್ಕುಗಳ ಬಗ್ಗೆ ತಿಳುವಳಿಕೆ ಕೊರತೆ, ಇವುಗಳನ್ನೇ ಬಂಡವಾಳವಾಗಿಸಿಕೊಂಡ ಪಟ್ಟಭದ್ರ ಹಿತಾಸಕ್ತರು, ಇವರ ಹೆಸರಿನಲ್ಲಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ, ಇವರ ಖಾತೆಗಳಿಗೆ ಹಣ ಜಮೆಮಾಡಿಸಿ, ಪುಡಿಗಾಸಿನ ಆಸೆ ತೋರಿಸಿ ಸಾವಿರಾರು ರೂಪಾಯಿಗಳನ್ನು ಇವರಿಂದಲೆ ಬಿಡಿಸಿಕೊಳ್ಳುತ್ತಾರೆಂಬುದು ಹಳ್ಳಿಗಳಲ್ಲಿನ ಕೂಲಿಕಾರರನ್ನು ಮಾತನಾಡಿಸಿದಾಗ ತಿಳಿದುಬರುವ ಸತ್ಯ. **"ಮಂಗ ಮೊಸರನ್ನ ತಿಂದು ಮೇಕೆಬಾಯಿಗೆ ಒರೆಸಿದಂತೆ"** ಎಂಬ ಗಾದೆ ಮಾತಿನಂತೆ ಯೋಜನೆಯ ಹಣ ನುಂಗಿದವರ ಬಗ್ಗೆ ಯಾವ ದಾಖಲೆಗಳೂ ದೊರೆಯುವುದಿಲ್ಲ. ಅಂಕಿ ಸಂಖ್ಯೆ ದಾಖಲೆಗಳ ಪ್ರಕಾರ ಕೂಲಿಗಾರರೇ ಹಣ ಪಡೆದಿರುತ್ತಾರೆ.

ಈ ಪರಿಸ್ಥಿತಿಯಿಂದ ಹೊರಬಂದು ಉದ್ಯೋಗ ಖಾತ್ರಿ ಕೆಲಸಗಾರರು ತಮ್ಮ ನ್ಯಾಯಬದ್ಧ ಹಕ್ಕುಗಳನ್ನು ಪಡೆದು ತಮ್ಮ ಹಾಗೂ ತಮ್ಮ ಹಳ್ಳಿಯ ಸಮುದಾಯದ ಅಭಿವೃದ್ಧಿಗೆ ಸರ್ಕಾರ ಕೊಡುವ ಹಣದ ಸದುಪಯೋಗವಾಗಬೇಕಾದಲ್ಲಿ ಕೆಲಸಗಾರರ ಸಂಘಗಳ ಮೂಲಕ ಸಂಘಟಿತರಾಗುವುದು ಅವಶ್ಯಕ. ಈ ದಿಸೆಯಲ್ಲಿ ನಮ್ಮ ಸಂಸ್ಥೆಯು ಕಳೆದ ಎರಡು ವರ್ಷಗಳಿಂದ, ಆಯ್ದ ಹಳ್ಳಿಗಳಲ್ಲಿ ಕೆಲಸಗಾರರ ಗುಂಪುಗಳನ್ನು ರಚಿಸಿ ಅವರಿಗೆ ಯೋಜನೆಯ ನಿಯಮಗಳ ಮತ್ತು ಹಕ್ಕುಗಳ ಬಗ್ಗೆ ತರಬೇತಿ ನೀಡಿ ಈ ಯೋಜನೆಯ ಪ್ರಯೋಜನವನ್ನು ಪಡೆಯಲು ಅವರನ್ನು ಸಿದ್ಧಗೊಳಿಸುತ್ತಿದೆ. ಜಿಲ್ಲಾ ಪಂಚಾಯತಿ ಅಧಿಕಾರಿಗಳು ನಮ್ಮ ಈ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡುತ್ತಿರುವುದು ತುಂಬಾ ಸಂತೋಷದ ವಿಷಯ. ತೀರ್ಥಹಳ್ಳಿ, ಹೊಸನಗರ, ಭದ್ರಾವತಿ, ಶಿಕಾರಿಪುರ, ಶಿವಮೊಗ್ಗ ತಾಲ್ಲೂಕುಗಳ ಆಯ್ದ ಗ್ರಾಮಗಳನ್ನು ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನದಲ್ಲಿ ಮಾದರಿ ಗ್ರಾಮಗಳನ್ನಾಗಿ ಮಾಡುವ ಯೋಜನೆ ರೂಪಿಸಿ ಇಪ್ಪತ್ತೇಳು ಉದ್ಯೋಗ ಖಾತ್ರಿ ಕೆಲಸಗಾರರ ಸಂಘಗಳನ್ನು ರಚಿಸಲಾಗಿದೆ.

**ಕೆಲಸಗಾರರ 10 ಹಕ್ಕುಗಳು**

### 1. ಉದ್ಯೋಗ ಚೀಟಿಯ ಹಕ್ಕು

ಈ ಯೋಜನೆಯಡಿಯಲ್ಲಿ ಉದ್ಯೋಗ ಬಯಸುವ ಪ್ರತಿ ಕುಟುಂಬವು ಒಂದು ಉದ್ಯೋಗ ಚೀಟಿಯನ್ನು ಪಡೆಯುವ ಹಕ್ಕನ್ನು ಹೊಂದಿರುತ್ತದೆ. ಈ ಉದ್ಯೋಗ ಚೀಟಿ ಪಡೆಯಲು ಯಾವುದೇ ಶುಲ್ಕವಿರುವುದಿಲ್ಲ ಹಾಗೂ ಯಾವುದೇ ಕಾಲಮಿತಿ ಇರುವುದಿಲ್ಲ. ತಮಗೆ ಅವಶ್ಯವಿರುವಾಗ, ಉದ್ಯೋಗ ಚೀಟಿಯಲ್ಲಿ ಕುಟುಂಬ ಸದಸ್ಯರ ಹೆಸರುಗಳನ್ನು ಸೇರಿಸಲು ಮತ್ತು ತೆಗೆಯಲು ಗ್ರಾಮ ಪಂಚಾಯತಿಗೆ ಅರ್ಜಿ ನೀಡಿ ವಿವರಗಳನ್ನು ಬದಲಾಯಿಸಲು ಅವಕಾಶವಿದೆ. ಕಾನೂನುಬದ್ಧ ಕಾರಣಗಳಿಂದ ಉದ್ಯೋಗ ಚೀಟಿ ವಜಾಗೊಂಡಲ್ಲಿ ಪುನಃ ಹೊಸದಾಗಿ ಉದ್ಯೋಗ ಚೀಟಿ ಪಡೆಯಬಹುದು. ಉದ್ಯೋಗ ಚೀಟಿಯನ್ನು ಕುಟುಂಬದ ಸ್ವಾದೀನತೆಯಲ್ಲಿಯೇ ಇಟ್ಟುಕೊಳ್ಳತಕ್ಕದ್ದು ಮತ್ತು ಕೆಲಸ ಮಾಡುವ ಸಮಯದಲ್ಲಿ ಹಾಜರುಪಡಿಸಿ ಕೆಲಸದ ಮತ್ತು ಕೂಲಿಯ ವಿವರಗಳನ್ನು ಸಂಬಂಧಿಸಿದ ಅಧಿಕಾರಿಗಳಿಂದ ಕಡ್ಡಾಯವಾಗಿ ಭರ್ತಿಮಾಡಿಸಿಕೊಳ್ಳತಕ್ಕದ್ದು.

### 2. ಬೇಡಿಕೆ ಸಲ್ಲಿಸಿ 15 ದಿನದ ಒಳಗಾಗಿ ಕೆಲಸ ಪಡೆಯುವ ಹಕ್ಕು

ಕೆಲಸದ ಅವಶ್ಯಕತೆ ಇರುವ ಕುಟುಂಬಗಳು ವೈಯಕ್ತಿಕವಾಗಿ ಅಥವಾ ಒಟ್ಟಾಗಿ ಸೇರಿ ಫಾರಂ 6ರಲ್ಲಿ ಗ್ರಾಮ ಪಂಚಾಯತಿಗೆ

ಅರ್ಜಿಯನ್ನು ನೀಡಬೇಕು. ಯಾವುದೇ ಕಾರಣಕ್ಕೂ ಅರ್ಜಿಯನ್ನು ಪಂಚಾಯತಿಯವರು ನಿರಾಕರಿಸುವಂತಿಲ್ಲ. ಅರ್ಜಿ ಪಡೆಯದೆ ಕೆಲಸಕ್ಕೆ ಕರೆದಲ್ಲಿ ಯಾವುದೇ ಖಾತ್ರಿ ಇಲ್ಲ. ಅರ್ಜಿಯನ್ನು ನೀಡುವಾಗ ಕನಿಷ್ಠ 10 ಜನರು ಕನಿಷ್ಠ 15 ದಿನಗಳ ಕೆಲಸ ಕೋರಿ ಕನಿಷ್ಠ 15 ದಿನಗಳ ಮುಂಚಿತವಾಗಿ ಅರ್ಜಿ ಸಲ್ಲಿಸುವುದು ಅವಶ್ಯಕ. ಈ ನಿಯಮ ಪಾಲಿಸದಿದ್ದಲ್ಲಿ ಖಾತ್ರಿ ಇಲ್ಲ. ಅರ್ಜಿಯಲ್ಲಿ ಅವಶ್ಯಕವಾಗಿ ದಿನಾಂಕ ನಮೂದಿಸಿ ನೀಡಿದಾಗ ಸ್ವೀಕೃತಿಯನ್ನು ಪಡೆಯಬೇಕು.

### 3. ನಿರುದ್ಯೋಗ ಭತ್ಯೆ ಹಕ್ಕು

ಕೆಲಸ ಕೋರಿ ಸಲ್ಲಿಸಿದ ಅರ್ಜಿಯಲ್ಲಿ ಕೆಲಸ ಕೋರಿದ ದಿನಾಂಕ ಅಥವಾ ಅರ್ಜಿ ಸಲ್ಲಿಸಿದ 15 ದಿನಗಳ ಒಳಗೆ ಗ್ರಾಮ ಪಂಚಾಯತಿಯವರು ಉದ್ಯೋಗ ನೀಡಲು ವಿಫಲರಾದಲ್ಲಿ ಅರ್ಜಿಸಲ್ಲಿಸಿದವರು ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಾಗುತ್ತಾರೆ. ಮೊದಲ 30 ದಿನಗಳ ವರೆಗೆ ಕೂಲಿದರದ ನಾಲ್ಕನೇ ಒಂದರಷ್ಟು ಮತ್ತು 30 ದಿನಗಳ ನಂತರವೂ ಉದ್ಯೋಗ ನೀಡದಿದ್ದಲ್ಲಿ ಕೂಲಿದರದ ಅರ್ಧಕ್ಕೆ ಕಡಿಮೆ ಇಲ್ಲದಂತೆ ನಿರುದ್ಯೋಗ ಭತ್ಯೆ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

### 4. ಯೋಜನೆ ಮತ್ತು ಕಾಮಗಾರಿಗಳ ಆಯ್ಕೆಯ ಹಕ್ಕು

ಕೂಲಿಗಾರರು ತಮ್ಮ ವಾರ್ಡ್ ವ್ಯಾಪ್ತಿಯಲ್ಲಿ ಮಾಡಬೇಕಾದ ಕಾಮಗಾರಿಗಳ ಬಗ್ಗೆ ವಾರ್ಡ್ ಮತ್ತು ಗ್ರಾಮ ಸಭೆಯಲ್ಲಿ ಭಾಗವಹಿಸಿ ನಿರ್ಧಾರ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಗ್ರಾಮ ಸಭೆಯಲ್ಲಿ ನಿರ್ಧಾರವಾದ ಕಾಮಗಾರಿಗಳನ್ನು ಸರ್ಕಾರದ ಯಾವುದೇ ಹಂತದಲ್ಲೂ ಬದಲಾವಣೆ ಮಾಡಲು ಸಾಧ್ಯವಿಲ್ಲ.

### 5. ಐದು ಕಿ. ಮಿ. ವ್ಯಾಪ್ತಿಯಲ್ಲಿ ಕೆಲಸ ಪಡೆಯುವ ಹಕ್ಕು

ಕೆಲಸಗಾರರು ತಮ್ಮ ವಾಸಸ್ಥಳದಿಂದ 5 ಕಿ.ಮೀ. ವ್ಯಾಪ್ತಿಯಲ್ಲಿ ಕೆಲಸ ಮಾಡುವ ಹಕ್ಕನ್ನು ಹೊಂದಿರುತ್ತಾರೆ. ಯಾವುದಾದರೂ ಕಾರಣದಿಂದ ಗ್ರಾಮ ಪಂಚಾಯತಿಯವರು 5 ಕಿ.ಮೀ.ಗಿಂತ ಹೆಚ್ಚು ದೂರದಲ್ಲಿ ಕೆಲಸಕ್ಕೆ ನಿಯೋಜಿಸಿದಲ್ಲಿ ಕೂಲಿದರದ ಶೇ. 10ರಷ್ಟು ಪ್ರಯಾಣ ವೆಚ್ಚಕ್ಕಾಗಿ ಭರಿಸತಕ್ಕದ್ದು.

### 6. ಕೆಲಸದ ಸ್ಥಳದಲ್ಲಿ ಸೌಲಭ್ಯ ಪಡೆಯುವ ಹಕ್ಕು

ಕೆಲಸದ ಸ್ಥಳದಲ್ಲಿ ಗ್ರಾಮ ಪಂಚಾಯತಿಯವರು ಕೆಲಸಗಾರರಿಗೆ ಅವಶ್ಯವಿರುವ ಸೌಲಭ್ಯಗಳನ್ನು ಅಂದರೆ ಕುಡಿಯುವ ನೀರು, ನೆರಳು, ಪ್ರಥಮಚಿಕಿತ್ಸೆ ಪೆಟ್ಟಿಗೆ, ಮತ್ತು ಕೆಲಸಕ್ಕಾಗಿ ಬಂದ ಮಹಿಳೆಯರು 5 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕರೆತಂದಲ್ಲಿ ಮತ್ತು ಅಂತಹ 5ಕ್ಕಿಂತ ಹೆಚ್ಚು ಮಕ್ಕಳಿದ್ದಲ್ಲಿ ಅವರನ್ನು ನೋಡಿಕೊಳ್ಳುವ ಸಲುವಾಗಿ ಕೆಲಸಗಾರರಲ್ಲಿ ಒಬ್ಬರನ್ನು ನೇಮಿಸತಕ್ಕದ್ದು. ಕೆಲಸದ ಸಂದರ್ಭದಲ್ಲಿ ಅಪಘಾತವಾಗಿ ಗಾಯಗೊಂಡರೆ ಅಥವಾ ಮೃತಪಟ್ಟರೆ ಪರಿಹಾರ ಪಡೆಯಲು ಹಕ್ಕುಳ್ಳವರಾಗಿರುತ್ತಾರೆ.

### 7. ಕೂಲಿದರದ ಹಕ್ಕು

ಕಾಲಕಾಲಕ್ಕೆ ಸರ್ಕಾರವು ನಿಗದಿಪಡಿಸಿದ ಕೂಲಿದರವನ್ನು ಪಡೆಯಲು ಅವರು ಹಕ್ಕುಳ್ಳವರಾಗಿರುತ್ತಾರೆ. ನಿಗದಿಪಡಿಸಿದ ಕೂಲಿದರಕ್ಕೆ ಮಾಡಬೇಕಾದ ಕೆಲಸದ ಪ್ರಮಾಣವನ್ನು ಅರ್ಜಿದಾರರಿಗೆ ಕೆಲಸ ಪ್ರಾರಂಭಿಸುವ ಮುಂಚಿತವಾಗಿ ಫಾರಂ 7ರಲ್ಲಿ ಬರವಣಿಗೆ ಮೂಲಕ ತಿಳಿಸುವುದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ. ವಿಕಲಚೇತನರಿಗೆ ಮತ್ತು 60 ವರ್ಷ ಮೀರಿದವರಿಗೆ ವಿಶೇಷ ದರವಿರುತ್ತದೆ.

### 8. ವೇತನ ಪಾವತಿ ವಿಳಂಬವಾದಲ್ಲಿ ಪರಿಹಾರ ಪಡೆಯುವ ಹಕ್ಕು

ಕೂಲಿಗಾರರಿಗೆ ವಾರದ ಕೂಲಿಯನ್ನು ವಾರ ಮುಕ್ತಾಯವಾದ 7 ದಿನಗಳ ಒಳಗೆ ಅಂದರೆ ಕೆಲಸ ಪ್ರಾರಂಭವಾದ 15 ದಿನಗಳ ಒಳಗೆ ಅವರ ಖಾತೆಗೆ ನೇರವಾಗಿ ಜಮಾ ಮಾಡುತ್ತಾರೆ. 15 ದಿನಕ್ಕಿಂತ ಹೆಚ್ಚು ವಿಳಂಬವಾದಲ್ಲಿ ಪ್ರತಿ ದಿನ ಒಂದಕ್ಕೆ 0.05% ವಿಳಂಬ ಪರಿಹಾರ ಪಡೆಯಲು ಅವರು ಹಕ್ಕುಳ್ಳವರಾಗಿರುತ್ತಾರೆ.

### 9. ಮೇಲ್ವಿಚಾರಣೆ ಮತ್ತು ಲೆಕ್ಕ ತಪಾಸಣೆಯಲ್ಲಿ ಭಾಗವಹಿಸುವ ಹಕ್ಕು

ಯೋಜನೆಯಡಿಯಲ್ಲಿ ಕೆಲಸ ನಿರ್ವಹಿಸುವ ಕೂಲಿಗಾರರು ತಾವು ಕೆಲಸ ನಿರ್ವಹಿಸುತ್ತಿರುವ ಕಾಮಗಾರಿಯ ಸಂಪೂರ್ಣ ವಿವರವನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ. ಸಾಮಾಜಿಕ ಲೆಕ್ಕ ತಪಾಸಣೆಯಲ್ಲಿ ಭಾಗವಹಿಸಿ ಕಾಮಗಾರಿಗೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲು ಹಕ್ಕುಳ್ಳವರಾಗಿರುತ್ತಾರೆ. ಜಾಗೃತಿ ಮತ್ತು ಉಸ್ತುವಾರಿ ಸಮಿತಿ ಸದಸ್ಯರಾಗುವ ಮೂಲಕ ಕಾಮಗಾರಿಯ ತಪಾಸಣೆ ಮಾಡಲು ಹಕ್ಕುಳ್ಳವರಾಗಿರುತ್ತಾರೆ.

### 10. ಕುಂದು ಕೊರತೆಗಳನ್ನು ಕಾಲಮಿತಿಯೊಳಗೆ ನಿವಾರಿಸುವ ಹಕ್ಕು

ಕಾಮಗಾರಿ ಅನುಷ್ಠಾನದಲ್ಲಿ ಕುಂದು ಕೊರತೆಗಳಿದ್ದಲ್ಲಿ ಸಂಬಂಧಿಸಿದ ಪ್ರಾಧಿಕಾರ, ಜಿಲ್ಲಾ ಪಂಚಾಯತಿ, ಓಂಬುಡ್ಸ್ ಮನ್ ಮತ್ತು ಸಹಾಯವಾಣಿ ಮೂಲಕ ದೂರುಸಲ್ಲಿಸಿ, 15 ದಿನಗಳ ಒಳಗೆ ಪರಿಹಾರ ಪಡೆದುಕೊಳ್ಳುವ ಹಕ್ಕನ್ನು ಹೊಂದಿರುತ್ತಾರೆ.

ಮೇಲ್ಕಂಡ ಹಕ್ಕುಗಳ ಉಲ್ಲಂಘನೆಯಾದಲ್ಲಿ ಕ್ರಿಮಿನಲ್ ಅಪರಾಧವಾಗುತ್ತದೆ. ಉದ್ಯೋಗ ಖಾತ್ರಿ ಯೋಜನೆಯ ಸಂಪೂರ್ಣ ಪ್ರಯೋಜನವನ್ನು ಅರ್ಹ ಫಲಾನುಭವಿಗಳು ಸಕಾಲದಲ್ಲಿ ಪಡೆಯುವಂತಾಗಲಿ ಎಂಬುದೇ ನಮ್ಮ ಆಶಯ.

# ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಶಿವಮೊಗ್ಗ



✍ ದೇವದಾನ್
ವ್ಯವಸ್ಥಾಪಕರು, ಸ್ತ್ರೀಬಂಧು

ಮಲೆನಾಡಿನ ಹೆಬ್ಬಾಗಿಲು ಭತ್ತದ ಕಣಜವೆಂದು ಹೆಸರುವಾಸಿಯಾಗಿರುವ ಶಿವಮೊಗ್ಗದಲ್ಲಿ ಪ್ರಾರಂಭಗೊಂಡ ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ 2018 ನೇ ಇಸ್ವಿ ಐದು ವರ್ಷದ ಸಂಭ್ರಮ. ಈ ಸಹಕಾರಿಯು ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯ ಮಹಿಳೆಯರ, ಅವರ ಕುಟುಂಬಗಳ ಹಾಗೂ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಯ ಉದಾತ್ತ ಗುರಿಯನ್ನು ಹೊಂದಿದೆ ಎಂದರೆ ಅತಿಶಯೋಕ್ತಿಯಾಗಲಾರದು. 'ಸ್ತ್ರೀಬಂಧು' ವಿವಿಧೋದ್ದೇಶ ಸೌಹಾರ್ದ ಸಹಕಾರಿಯು ಎಸ್.ಎಮ್.ಎಸ್.ಎಸ್. ಸಂಸ್ಥೆಯ ಕನಸಿನ ಕೂಸು.

ಎಸ್.ಎಮ್.ಎಸ್.ಎಸ್.ಸಂಸ್ಥೆಯು 2012 ರಲ್ಲಿ 'ಸ್ತ್ರೀಬಂಧು' ಪರಿಕಲ್ಪನೆಯ ಅಧ್ಯಯನ ಮಾಡಿ ಅದರ ರೂಪು ರೇಷೆಗಳನ್ನು ಸಿದ್ಧಪಡಿಸಿ ಮಹಿಳೆಯರಿಗೆ ತರಬೇತಿಗಳನ್ನು ನೀಡುವುದರೊಂದಿಗೆ ಡಿಸೆಂಬರ್ 2013 ರಲ್ಲಿ ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿಗೆ ಚಾಲನೆ ನೀಡಿತು.




ಡಿಸೆಂಬರ್ 7, 2013ರಂದು 534 ಮಹಿಳಾ ಸದಸ್ಯರನ್ನೊಳಗೊಂಡು ಕಾರ್ಯಾರಂಭಗೊಂಡ ಈ ಸ್ತ್ರೀಬಂಧು ಸೌಹಾರ್ದ ಸಹಕಾರಿಯಲ್ಲಿ ಈಗ 10,011 ಮಹಿಳೆಯರು ಸದಸ್ಯತ್ವವನ್ನು ಪಡೆದುಕೊಂಡಿದ್ದಾರೆ. ಇವರೆಲ್ಲ 860 ಸ್ವ-ಸಹಾಯ ಸಂಘಗಳಿಗೆ ಸೇರಿದ್ದು, ಗ್ರಾಮ ಪಂಚಾಯತಿ/ ವಾರ್ಡ್ ಮಟ್ಟದಲ್ಲಿ ಒಟ್ಟು 55 ಸ್ತ್ರೀಬಂಧು ಒಕ್ಕೂಟಗಳನ್ನು ರಚಿಸಿಕೊಂಡಿದ್ದಾರೆ. 5 ವರ್ಷಗಳಲ್ಲಿ ಅಸಾಧ್ಯವೆನಿಸಿದರೂ 7.23 ಕೋಟಿ ರೂಪಾಯಿಗಳ ಬಂಡವಾಳ ಕ್ರೋಢೀಕರಿಸಿ ಮಹತ್ತರ ಸಾಧನೆ ಮಾಡಿದ್ದಾರೆ.

### ಸಾಲ ನೀಡಿಕೆ

ಕಳೆದ ಐದು ವರ್ಷಗಳಲ್ಲಿ 6,000 ಕ್ಕೂ ಹೆಚ್ಚು ಮಹಿಳೆಯರಿಗೆ ಒಟ್ಟು 14.54 ಕೋಟಿ ರೂಪಾಯಿಗಳ ಸಾಲ ನೀಡಿಕೆಯಾಗಿದೆ. ಹೀಗೆ ಸಾಲ ಪಡೆದ ಹೆಚ್ಚಿನ ಮಹಿಳೆಯರು ಕುರಿ ಸಾಕಾಣಿಕೆ, ಹೈನುಗಾರಿಕೆ, ಗುಡಿ ಕೈಗಾರಿಕೆ, ಬ್ಯೂಟಿಷಿಯನ್, ಕಿರಾಣಿ ಅಂಗಡಿ, ಆಹಾರ ಪದಾರ್ಥಗಳ ಉತ್ಪಾದನೆ, ಕ್ಯಾಂಟೀನ್ ಮುಂತಾದ 250ಕ್ಕಿಂತಲೂ ಅಧಿಕ ವಿವಿಧ ರೀತಿಯ ಸ್ವ–ಉದ್ಯೋಗಗಳನ್ನು ಯಶಸ್ವಿಯಾಗಿ ನಡೆಸಿ ಕುಟುಂಬಕ್ಕೆ ತಾವೂ ಆರ್ಥಿಕ ಕೊಡುಗೆಯನ್ನು ನೀಡುತ್ತಿದ್ದಾರೆ.

### ನಗರ ಯಶಸ್ವಿನಿ ಯೋಜನೆ

ಸದಸ್ಯರ ಹಿತಾದೃಷ್ಟಿಯಿಂದ ಸಹಕಾರಿಯು ಸರ್ಕಾರದ 'ನಗರ ಯಶಸ್ವಿನಿ ಯೋಜನೆ'ಯನ್ನು ಅನುಷ್ಠಾನಗೊಳಿಸಿತು. ಈ ಯೋಜನೆಯಡಿಯಲ್ಲಿ ರಾಜ್ಯಾದ್ಯಂತ ಇರುವ ಆಯ್ದ ಆಸ್ಪತ್ರೆಗಳಲ್ಲಿ ರಿಯಾಯಿತಿ ದರದಲ್ಲಿ ಶಸ್ತ್ರಚಿಕಿತ್ಸೆಯೂ ಸೇರಿದಂತೆ ವಿವಿಧ ರೀತಿಯ ವೈದ್ಯಕೀಯ ನೆರವು ದೊರೆಯುತ್ತದೆ. ಸದಸ್ಯರುಗಳು ಈ ಯೋಜನೆಯ ಸದಸ್ಯತ್ವ ಪಡೆದು ಅಥವಾ ನವೀಕರಿಸಿಕೊಂಡು ಹೆಚ್ಚಿನ ಪ್ರಯೋಜನ ಪಡೆಯಬಹುದು. ಕಳೆದ ಐದು ವರ್ಷಗಳಲ್ಲಿ 210 ಸದಸ್ಯರು ಇದರ ಪ್ರಯೋಜನ ಪಡೆದುಕೊಂಡಿರುತ್ತಾರೆ.

### ಮಣಿಪಾಲ್ ಆರೋಗ್ಯ ಕಾರ್ಡ್

ಈ ಭಾಗದ ಜನರಿಗಾಗಿ ವಿಶೇಷವಾಗಿ ಪ್ರಾರಂಭಿಸಿರುವ 'ಮಣಿಪಾಲ್ ಆರೋಗ್ಯ ಕಾರ್ಡ್' ಯೋಜನೆಯನ್ನು ಸಹಕಾರಿಯು ತನ್ನ ಸದಸ್ಯರಿಗಾಗಿ ಬಳಸಿಕೊಂಡು ಕಳೆದ ಮೂರು ವರ್ಷಗಳಲ್ಲಿ 400 ಸದಸ್ಯರು ಇದರ ಪ್ರಯೋಜನವನ್ನು ಪಡೆಯುವಂತೆ ಮಾಡಲಾಗಿದೆ. ಪ್ರತಿ ವರ್ಷ ಈ ಕಾರ್ಡನ್ನು

ನವೀಕರಿಸಿ ಇದರಿಂದ ಸಿಗುವ ಪ್ರಯೋಜನವನ್ನು ಸದಸ್ಯರು ಪಡೆಯುತ್ತಿದ್ದಾರೆ.

**ಎಲ್‌ಐಸಿ ಮೈಕ್ರೋ ಇನ್ಸೂರೆನ್ಸ್ ಪಾಲಿಸಿ**

ಪ್ರತಿಯೊಬ್ಬ ಸದಸ್ಯರು ಎಲ್‌ಐಸಿ ಪಾಲಿಸಿದಾರರಾಗಿ ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಭವಿಷ್ಯಕ್ಕೆ ಭದ್ರತೆಯ ಆಸರೆ ಇರಲಿ ಎಂಬ ಉದ್ದೇಶದಿಂದ ಎಲ್‌ಐಸಿ ಸಹಯೋಗದೊಂದಿಗೆ ಸದಸ್ಯರೆಲ್ಲರನ್ನು 'ಮೈಕ್ರೋ ಇನ್ಸೂರೆನ್ಸ್ ಪಾಲಿಸಿ'ದಾರರನ್ನಾಗಿಸುವ ಗುರಿಯನ್ನು ಹೊಂದಲಾಗಿದೆ. ಆಗಸ್ಟ್ 2016 ರಲ್ಲಿ ಪ್ರಾರಂಭವಾದ ಈ ಯೋಜನೆಯಲ್ಲಿ ಇದುವರೆಗೆ 4,000 ಸದಸ್ಯರು 'ಹೊಸ ಭಾಗ್ಯಲಕ್ಷ್ಮಿ' ಹಾಗೂ 'ಜೀವನ್ ಮಂಗಳ' ಮೈಕ್ರೋ ಇನ್ಸೂರೆನ್ಸ್ ಪಾಲಿಸಿಗಳನ್ನು ಪಡೆದಿರುತ್ತಾರೆ. ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತ ಈ ಸಾಧನೆಗಾಗಿ ಭಾರತೀಯ ಜೀವ ವಿಮಾ ನಿಗಮದಿಂದ ಸನ್ಮಾನಿಸಲ್ಪಟ್ಟಿದೆ.

**ಮೈಕ್ರೋ ಇನ್ಸೂರೆನ್ಸ್ ವಿಮಾ ಗ್ರಾಮ**

ಶಿವಮೊಗ್ಗ ಜಿಲ್ಲೆಯ ಹಸೂಡಿ, ರಾಗಿಗುಡ್ಡ ಹಾಗೂ ಚಾಮುಂಡಿಪುರ ಗ್ರಾಮಗಳ ಸಹಕಾರಿಯ ಸದಸ್ಯರು 2017



ರಲ್ಲಿ ಅತ್ಯಧಿಕ ಪಾಲಿಸಿಗಳನ್ನು ಮಾಡಿ ಎಲ್‌ಐಸಿ ವತಿಯಿಂದ 'ಮೈಕ್ರೋ ಇನ್ಸೂರೆನ್ಸ್ ವಿಮಾ ಗ್ರಾಮ' ಪುರಸ್ಕಾರಕ್ಕೆ ಭಾಜನರಾಗಿದ್ದಾರೆ ಹಾಗೂ ತಲಾ ರೂ 35,000/– ಗಳನ್ನು ಪ್ರೋತ್ಸಾಹಧನವನ್ನಾಗಿ ಪಡೆದಿರುತ್ತಾರೆ. ಈ ಪ್ರೋತ್ಸಾಹಧನದಿಂದ ಹಸೂಡಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು, ರಾಗಿಗುಡ್ಡದ ಸಂತ ಅಂತೋಣಿಯವರ ಆಂಗ್ಲ ಮಾಧ್ಯಮ ಶಾಲೆಗೆ ಎಲ್.ಸಿ.ಡಿ. ಪ್ರಾಜೆಕ್ಟರ್ ಹಾಗೂ ಚಾಮುಂಡಿಪುರದ ದೇವಸ್ಥಾನಕ್ಕೆ ಸೌರ ವಿದ್ಯುತ್ ವ್ಯವಸ್ಥೆಯನ್ನು ಮಾಡಿಸಿ ಗ್ರಾಮಸ್ಥರ ಪ್ರಶಂಸೆಗೆ ಭಾಜನರಾಗಿದ್ದಾರೆ.

**ಪ್ರತಿಭಾ ಪುರಸ್ಕಾರ**

ಎಸ್.ಎಸ್.ಎಲ್.ಸಿ.ಯಲ್ಲಿ ಶೇ.85 ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.80ಕ್ಕಿಂತಲೂ ಅಧಿಕ ಅಂಕಗಳಿಸಿದ ಸಹಕಾರಿಯ ಸದಸ್ಯರ ಪ್ರತಿಭಾವಂತ ಮಕ್ಕಳಿಗೆ ಪ್ರೋತ್ಸಾಹಧನ ನೀಡಿ



ಪುರಸ್ಕರಿಸುವ ಯೋಜನೆ ಸದಸ್ಯರ ಇತರ ಮಕ್ಕಳಿಗೂ ಪ್ರೇರಣೆ ನೀಡುತ್ತಿದೆ. ಸಹಕಾರಿಯ ವಾರ್ಷಿಕೋತ್ಸವದಲ್ಲಿ ಸಾವಿರಾರು ಜನರ ಎದುರು ಪುರಸ್ಕಾರ ನೀಡುವುದರಿಂದ ಇತರ ಮಕ್ಕಳಿಗೂ ಇದು ಸ್ಫೂರ್ತಿಯಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ 220 ಮಕ್ಕಳಿಗೆ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಗಿದೆ. ಹಿಂದೆ ಪ್ರತಿಭಾ ಪುರಸ್ಕಾರಕ್ಕಾಗಿ ಇತರ ಇಲಾಖೆ ಹಾಗೂ ಸಂಸ್ಥೆಗಳ ಬಾಗಿಲು ತಟ್ಟುತ್ತಿದ್ದ ಸದಸ್ಯರಿಗೆ ಇಂದು ತಮ್ಮದೇ ಸಹಕಾರಿ ತಮ್ಮ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡುವ ಮಟ್ಟಕ್ಕೆ ಬೆಳೆದಿರುವುದು ಹೆಮ್ಮೆಯ ವಿಷಯ.

**'ಉತ್ತಮ ಒಕ್ಕೂಟ' ಪ್ರಶಸ್ತಿ**

ಸರ್ವಾಂಗೀಣ ಅಭಿವೃದ್ಧಿಯ ಗುರಿಯನ್ನು ಇರಿಸಿಕೊಂಡು ಸಹಕಾರಿಯ ಸದಸ್ಯರನ್ನು ಸ್ವ–ಸಹಾಯ ಸಂಘಗಳಲ್ಲಿ ಸಂಘಟಿಸಲಾಗಿದೆ. ಗ್ರಾಮ ಪಂಚಾಯತಿ ವ್ಯಾಪ್ತಿ ಅಥವಾ



ನಗರ ಪ್ರದೇಶದ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಈ ಸ್ವ–ಸಹಾಯ ಸಂಘಗಳನ್ನು ಒಟ್ಟು ಸೇರಿಸಿ ಸ್ತ್ರೀಬಂಧು ಒಕ್ಕೂಟಗಳನ್ನು ರಚಿಸಲಾಗಿದೆ. ಈ ಒಕ್ಕೂಟಗಳು ಪ್ರತೀ ತಿಂಗಳು

ಸಭೆ ಸೇರಿ ಆರ್ಥಿಕ, ಸಾಮಾಜಿಕ, ರಾಜಕೀಯ ಹಾಗೂ ಶೈಕ್ಷಣಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದಲು ಚಿಂತನೆಯನ್ನು ನಡೆಸಿ ಕಾರ್ಯಕ್ರಮಗಳನ್ನು ರೂಪಿಸಿ ಕಾರ್ಯಗತಗೊಳಿಸುತ್ತವೆ. ಉತ್ತಮವಾಗಿ ಕಾರ್ಯನಿರ್ವಹಿಸುವ ಒಕ್ಕೂಟಗಳಿಗೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಲಾಗುತ್ತದೆ. ಹಾಜರಾತಿ, ದಾಖಲಾತಿ ನಿರ್ವಹಣೆ, ಹೊಸ ಸಂಘಗಳ ರಚನೆ ಹಾಗೂ ಸೇರ್ಪಡೆ, ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ, ಬಂಡವಾಳ ಹೆಚ್ಚಳ ಇವುಗಳನ್ನು ಮಾನದಂಡವನ್ನಾಗಿಸಿ ಪ್ರತಿ ವರ್ಷ 3 ಒಕ್ಕೂಟಗಳಿಗೆ 'ಉತ್ತಮ ಒಕ್ಕೂಟ ಪ್ರಶಸ್ತಿ' ನೀಡಿ ಗೌರವಿಸಲಾಗುತ್ತದೆ.

### ಮರಣೋತ್ತರ ನಿಧಿ

ಸಹಕಾರಿಯು ಗಳಿಸಿದ ಲಾಭಾಂಶದಲ್ಲಿ ಮರಣೋತ್ತರ ನಿಧಿ ಸ್ಥಾಪಿಸಲಾಗಿದೆ. ಸಹಕಾರಿಯ ಸದಸ್ಯರಲ್ಲಿ ಯಾರಾದರೂ



ಮೃತಪಟ್ಟರೆ ಆ ಸದಸ್ಯರ ಕುಟುಂಬದವರಿಗೆ ಈ ನಿಧಿಯಿಂದ ಆರ್ಥಿಕ ನೆರವು ನೀಡಲಾಗುತ್ತಿದೆ. ಕಳೆದ ಐದು ವರ್ಷಗಳಲ್ಲಿ ಇಂತಹ 50 ಕುಟುಂಬಗಳಿಗೆ ಸಾಂತ್ವನ ನೆರವು ನೀಡಲಾಗಿದೆ.

### ಗಣಕ ತಂತ್ರಾಂಶ ಅಳವಡಿಕೆ

ಸಹಕಾರಿಯ ಕಾರ್ಯವ್ಯಾಪ್ತಿ ವಿಸ್ತಾರವಾಗಿರುವುದರಿಂದ ಹಾಗೂ ಸದಸ್ಯತ್ವ ಗಣನೀಯ ಪ್ರಮಾಣದಲ್ಲಿ ಹೆಚ್ಚಾಗುತ್ತಿರುವ ಕಾರಣ, ಆಡಳಿತ ಹಾಗೂ ಲೆಕ್ಕಪತ್ರ ನಿರ್ವಹಣೆ ಸುಲಭ ಹಾಗೂ ಶೀಘ್ರಗೊಳಿಸುವ ಉದ್ದೇಶದಿಂದ ನೂತನ ಗಣಕ ತಂತ್ರಾಂಶವನ್ನು ಅಳವಡಿಸಲಾಗಿದೆ. ಈ ಮೂಲಕ ಅತೀ ಶೀಘ್ರದಲ್ಲಿ ಹಾಗೂ ಪರಿಣಾಮಕಾರಿಯಾಗಿ ಸದಸ್ಯರಿಗೆ ಸೌಲಭ್ಯಗಳನ್ನು ತಲುಪಿಸಲು ಸಹಕಾರಿಯಾಗಿದೆ.

### ಜಿಪಿಆರ್‌ಎಸ್ ಆಧಾರಿತ ಪಿಗ್ಮಿ ಯಂತ್ರಗಳ ಅಳವಡಿಕೆ

ಸದಸ್ಯರ ಮನೆ ಬಾಗಿಲಲ್ಲೇ ಸಾಲದ ಕಂತು ಹಾಗೂ ಠೇವಣಿ ಸಂಗ್ರಹಿಸಲು ಸಾಧ್ಯವಾಗುವಂತೆ ಠೇವಣಿ ಸಂಗ್ರಹಕಾರರಿಗೆ ಜಿಪಿಆರ್‌ಎಸ್ ಆಧಾರಿತ ಪಿಗ್ಮಿ ಯಂತ್ರಗಳನ್ನು ನೀಡಲಾಗಿದೆ. ಈ ಮೂಲಕ ಸದಸ್ಯರಿಗೆ ಸ್ಥಳದಲ್ಲೇ ತಾವು ನೀಡುವ ಹಣಕ್ಕೆ ರಶೀದಿ ಲಭ್ಯವಾಗುತ್ತದೆ ಮಾತ್ರವಲ್ಲ, ಜಿಪಿಆರ್‌ಎಸ್ ಮೂಲಕ ಸಂಬಂಧಪಟ್ಟ ವಿವರಗಳು ಕೇಂದ್ರ ಕಛೇರಿಯ ಗಣಕ ತಂತ್ರಾಂಶದಲ್ಲಿ ತಕ್ಷಣವೇ ಕ್ರೋಢೀಕರಣಗೊಳ್ಳುತ್ತವೆ.

### ನಿವ್ವಳ ಲಾಭ ಹಾಗೂ ಲಾಭಾಂಶ ಹಂಚಿಕೆ

ಸಹಕಾರಿಯು ಪ್ರತಿ ವರ್ಷ ಅಭಿವೃದ್ಧಿಯನ್ನು ಸಾಧಿಸುತ್ತಿದ್ದು, ಲಾಭ ಗಳಿಸುತ್ತಿದೆ. ಕಳೆದ ಐದು ವರ್ಷಗಳಲ್ಲಿ ಒಟ್ಟು 1.33 ಕೋಟಿ ರೂಪಾಯಿಗಳ ಲಾಭ ಗಳಿಸಿ ನಿಯಮದಂತೆ ಸದಸ್ಯರಿಗೆ ಲಾಭಾಂಶವನ್ನು ಹಂಚುತ್ತಿದೆ. ಆಡಳಿತ ಮಂಡಳಿ ಹಾಗೂ ಸಿಬ್ಬಂದಿಯವರ ಪ್ರಾಮಾಣಿಕ ಪ್ರಯತ್ನ ಮತ್ತು ಸದಸ್ಯರ ಉತ್ತಮ ಸಾಲ ಮರುಪಾವತಿಯಿಂದಾಗಿ ಪ್ರತಿ ವರ್ಷ ಉತ್ತಮ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗುತ್ತದೆ.

### ಸಹಕಾರಿಯ ಸಾಮಾನ್ಯ ಸಭೆ

ಪ್ರತಿ ವರ್ಷ ಸೆಪ್ಟೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ಸ್ತ್ರೀಬಂಧು ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿಯಮಿತದ ವಾರ್ಷಿಕ ಸಾಮಾನ್ಯ ಸಭೆಯನ್ನು ಸೌಹಾರ್ದ ಸಹಕಾರಿಯ ನಿಯಮದ ಪ್ರಕಾರ ನಡೆಸಲಾಗುತ್ತಿದೆ. ಅಂದು ವಾರ್ಷಿಕ ಆಡಳಿತ ವರದಿ ಹಾಗೂ ವಾರ್ಷಿಕ ಲೆಕ್ಕಪತ್ರಗಳನ್ನು ಮಂಡಿಸಿ ಸಭೆಯಲ್ಲಿ ಅನುಮೋದನೆ ಪಡೆದು ನಿಯಮದಂತೆ ಲಾಭಾಂಶ ಘೋಷಣೆಯಾಗುತ್ತದೆ.

### ಉತ್ತಮ ಸಹಕಾರಿ ಪ್ರಶಸ್ತಿ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ಮತ್ತು ಸಹ್ಯಾದ್ರಿ ಜಿಲ್ಲಾ ಸಹಕಾರಿಗಳ ಒಕ್ಕೂಟ ಶಿವಮೊಗ್ಗ ಇವರು ಶಿವಮೊಗ್ಗದ ನೌಕರರ ಭವನದಲ್ಲಿ ಸೌಹಾರ್ದ



ಸಹಕಾರಿ ದಿನಾಚರಣೆ ಆಚರಿಸಿದ ಸಂದರ್ಭದಲ್ಲಿ ಸ್ತ್ರೀಬಂಧು ಸಹಕಾರಿಗೆ 2017 ನೇ ಸಾಲಿನ ಜಿಲ್ಲೆಯ "ಉತ್ತಮ ಸಹಕಾರಿ" ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿರುತ್ತಾರೆ. ಇದು ಸಹಕಾರಿಯ ಸಾಧನೆಗೆ ದೊರೆತ ಕಿರೀಟ.

# ಸ್ವ–ಉದ್ಯೋಗಕ್ಕಾಗಿ ಯುವಜನರಿಗೆ ಕೌಶಲ್ಯ ಅಭಿವೃದ್ಧಿ



✍ ಷಣ್ಮುಖನಾಯ್ಕ
ಸಂಯೋಜಕರು

ಎಸ್. ಎಮ್. ಎಸ್. ಎಸ್. ಸಂಸ್ಥೆ ಕಳೆದ 9 ವರ್ಷಗಳಿಂದ ಹಿಂದುಳಿದ ವರ್ಗಗಳ ನಿರುದ್ಯೋಗಿ 586 ಯುವಜನರಿಗೆ ಹಲವಾರು ಕೌಶಲ್ಯಾಧಾರಿತ ತರಬೇತಿಗಳನ್ನು ನೀಡಿ ಯಶಸ್ವಿಯಾಗಿದೆ. ಅನೇಕ ಯುವಕರು, ಯುವತಿಯರು ವಿವಿಧ ಕಾರಣಗಳಿಂದ ತಮ್ಮ ವಿದ್ಯಾಭ್ಯಾಸವನ್ನು ಮೊಟಕುಗೊಳಿಸಿ ಅತಂತ್ರ ಸ್ಥಿತಿಯಲ್ಲಿರುತ್ತಾರೆ. ಅವರು ತಮ್ಮ ಜೀವನಕ್ಕಾಗಿ ನಿರ್ದಿಷ್ಟ ಉದ್ಯೋಗ ಮಾಡದೇ ಪರಿತಪಿಸುತ್ತಿರುತ್ತಾರೆ. ಶಾಲೆಯನ್ನು ಅರ್ಧಕ್ಕೆ ನಿಲ್ಲಿಸಿದ 18 ವರ್ಷ ಮೇಲ್ಪಟ್ಟ ಹಾಗೂ 30 ವರ್ಷ ವಯಸ್ಸಿಗಿಂತ ಕೆಳಗಿರುವ ಆರ್ಥಿಕವಾಗಿ ಹಿಂದುಳಿದ ಯುವಕ ಯುವತಿಯರಿಗಾಗಿ ಈ ಯೋಜನೆ ಮೀಸಲಾಗಿದೆ. ಕಾರ್ಯಕ್ಷೇತ್ರದಲ್ಲಿರುವ ಮಹಿಳಾ ಸ್ವ–ಸಹಾಯ ಸಂಘಗಳು, ಸ್ಥಳೀಯ ವ್ಯಕ್ತಿಗಳು, ಕಾರ್ಯಕರ್ತರು, ಇತ್ಯಾದಿ ಜನರ ಸಹಾಯದಿಂದ ಅವಕಾಶವಂಚಿತ ಯುವಕ ಯುವತಿಯರನ್ನು ಆಯ್ಕೆ ಮಾಡಿ ಅವರಿಗೆ ಸಾಧ್ಯವಿರುವ ಸ್ವ–ಉದ್ಯೋಗದ ತರಬೇತಿಯನ್ನು ಪರಿಣಿತರಿಂದ ಉಚಿತವಾಗಿ ಕೊಡಿಸಿ ಅವರು ಆದಾಯ ಗಳಿಸುವಂತೆ ಮಾಡಲಾಗಿದೆ. ಈ ಕೆಳಗಿನ ಸ್ವ–ಉದ್ಯೋಗ ತರಬೇತಿಗಳನ್ನು ಆಯೋಜಿಸಿ ಯುವಕ ಯುವತಿಯರನ್ನು ಸಬಲರನ್ನಾಗಿ ಮಾಡುವತ್ತ ಸಂಸ್ಥೆಯು ಶ್ರಮಿಸುತ್ತಿದೆ.

**ನಿರುದ್ಯೋಗಿ ಯುವಜನರಿಗೆ ಸ್ವ–ಉದ್ಯೋಗ ಕೈಗೊಳ್ಳಲು ಕೌಶಲ್ಯಾಧಾರಿತ ತರಬೇತಿಗಳು**

ಸಮೀಕ್ಷೆಯಲ್ಲಿ ಕಂಡುಬಂದ ಅವಶ್ಯಕತೆಗಳನ್ನು ಮನಗಂಡು ಈ ಕೆಳಕಂಡ ಕೌಶಲ್ಯಾಧಾರಿತ ತರಬೇತಿಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

1. ಕೌಶಲ್ಯಾಭಿವೃದ್ಧಿ ಕಾರ್ಯಾಗಾರ
2. ಹೊಲಿಗೆ ತರಬೇತಿ
3. ಗಾರೆ ಕೆಲಸ ತರಬೇತಿ.
4. ಪ್ಲಮಿಂಗ್ ತರಬೇತಿ
5. ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯಮ ಶೀಲತಾ ತರಬೇತಿ
6. ಬ್ಯೂಟಿಷಿಯನ್ ತರಬೇತಿ
7. ಎರೆಹುಳು ಗೊಬ್ಬರ ತಯಾರಿಕೆ ತರಬೇತಿ
8. ಮೋಟರ್ ರಿವೈಂಡಿಂಗ್ ತರಬೇತಿ
9. ಸಸಿ (ನರ್ಸರಿ) ಬೆಳೆಸುವಿಕೆ ತರಬೇತಿ
10. ಮನೆ ವೈಯರಿಂಗ್ ತರಬೇತಿ
11. ದ್ವಿಚಕ್ರ ವಾಹನ ದುರಸ್ತಿ ತರಬೇತಿ
12. ಡ್ರೈವಿಂಗ್ ತರಬೇತಿ
13. ಮೊಬೈಲ್ ರಿಪೇರಿ ತರಬೇತಿ

1. **ಕೌಶಲ್ಯಾಭಿವೃದ್ಧಿ ಕಾರ್ಯಾಗಾರ:–** ಸಂಸ್ಥೆಯು ಈ ಕಾರ್ಯಕ್ರಮವನ್ನು ವಿವಿಧ ಸ್ಥಳಗಳಲ್ಲಿ ಆಯೋಜಿಸಿ ಒಟ್ಟು 586 ಯುವಜನರ ಕೌಶಲ್ಯಾಭಿವೃದ್ಧಿಯಾಗುವಂತೆ ಮಾಡಿದೆ.

2. **ಹೊಲಿಗೆ ತರಬೇತಿಗಳು:–** ಹೊಲಿಗೆ ತರಬೇತಿ ಮುಖ್ಯವಾಗಿ ಯುವತಿಯರಿಗೆ ಹಾಗೂ ಮಹಿಳೆಯರಿಗೆ ಸೀಮಿತವಾಗಿದೆ. ಸಂಸ್ಥೆ ನಿಗದಿಪಡಿಸಿದ ಮಾನದಂಡಗಳಿಗನುಸಾರವಾಗಿ ಇಂಥ ಯುವತಿಯರನ್ನು ಹಾಗೂ ಮಹಿಳೆಯರನ್ನು ಆಯ್ಕೆ ಮಾಡಿ ಅವರಿಗೆ ಈ ತರಬೇತಿಯನ್ನು ನೀಡಲಾಗುತ್ತಿದೆ. ಹೊಲಿಗೆಯ ಬಗ್ಗೆ ಏನೂ ತಿಳಿಯದ ಮಹಿಳೆಯರಿಗೆ ಶಾಲಾ ಉಡುಪುಗಳು, ಮಕ್ಕಳ ಉಡುಪುಗಳು, ಮಹಿಳೆಯರ ನೈಟಿ, ಚೂಡಿದಾರ್, ಬ್ಲೌಸ್ ಇತ್ಯಾದಿಗಳನ್ನು ಹೊಲಿಯುವುದರಲ್ಲಿ ಪರಿಣಿತರನ್ನಾಗಿ ಮಾಡಲಾಗುತ್ತಿದೆ. ಇದುವರೆಗೆ 170 ಮಹಿಳೆಯರನ್ನು ತರಬೇತುಗೊಳಿಸಿ ಅವರ ಜೀವನಾದಾಯಕ್ಕೆ ಸಹಾಯ ಮಾಡಲಾಗಿದೆ.



3. **ಗಾರೆ ಕೆಲಸ ತರಬೇತಿ.:–** ಗಾರೆ ಕೆಲಸ ತರಬೇತಿಯನ್ನು 47 ಯುವಕರಿಗೆ ನೀಡಲಾಯಿತು. ಕಟ್ಟಡವನ್ನು ಕಟ್ಟುವ

ನುರಿತ ಸಿವಿಲ್ ಇಂಜಿನಿಯರ್‌ಗಳ ಸಹಾಯವನ್ನು ಪಡೆದು ಶಿವಮೊಗ್ಗ ತಾಲ್ಲೂಕಿನ ಹೊಳಲೂರಿನ ಕೆನರಾ ಬ್ಯಾಂಕ್ ಸ್ವ–ಉದ್ಯೋಗ ಕೇಂದ್ರದಲ್ಲಿ ಒಂದು ತಿಂಗಳ ಕಾಲ ಈ ತರಬೇತಿಯನ್ನು ನೀಡಲಾಗಿದೆ. ಎರಡನೇ ತಿಂಗಳಿನಲ್ಲಿ ಯುವಜನರು ಉತ್ತಮ ಕಟ್ಟಡ ನಿರ್ಮಾಣ ಮಾಡುವಂತಹ ಕಾಂಟ್ರ್ಯಾಕ್ಟರ್ ಸುಪರ್ಧಿಯಲ್ಲಿ ಹೆಚ್ಚಿನ ಅನುಭವವನ್ನು ಪಡೆದರು. ಈ ಎಲ್ಲಾ 47 ಯುವಜನರು ಈಗ ಸ್ವ–ಉದ್ಯೋಗದಲ್ಲಿ ತೊಡಗಿಕೊಂಡು ಉತ್ತಮ ಆದಾಯವನ್ನು ಪಡೆಯುತ್ತಿದ್ದಾರೆ.

4. **ಪ್ಲಮಿಂಗ್ ತರಬೇತಿ:–** ಈ ತರಬೇತಿಯನ್ನು ಸಹ ಶಿವಮೊಗ್ಗ ತಾಲ್ಲೂಕಿನ ಹೊಳಲೂರಿನ ಕೆನರಾ ಬ್ಯಾಂಕ್ ಸ್ವ–ಉದ್ಯೋಗ ಕೇಂದ್ರದ ಸಹಯೋಗದೊಡನೆ



ನಡೆಸಲಾಯಿತು. ಒಟ್ಟು 20 ನಿರುದ್ಯೋಗಿ ಯುವಜನರು ಇದರಿಂದ ಪ್ರಯೋಜನವನ್ನು ಪಡೆದಿದ್ದಾರೆ.

5 **ನಿರುದ್ಯೋಗಿ ಯುವಕ ಯುವತಿಯರಿಗೆ ಉದ್ಯಮ ಶೀಲತಾ ತರಬೇತಿ:–** ಹೊಲಿಗೆ ತರಬೇತಿ, ಗಾರೆ ಕೆಲಸ ಮತ್ತು ಪ್ಲಮಿಂಗ್ ಕೆಲಸ ಮಾಡುವ ಎಲ್ಲಾ ಶಿಬಿರಾರ್ಥಿಗಳಿಗೆ ಆಯಾಯ ತರಬೇತಿಗಳ ಸಮಯದಲ್ಲಿ 'ಉದ್ಯಮ ಶೀಲತಾ ಜಾಗೃತಿ' ಕಾರ್ಯಾಗಾರಗಳನ್ನು ಏರ್ಪಡಿಸಲಾಗಿದೆ. ಈ ತರಬೇತಿಗಳನ್ನು ನಡೆಸಿಕೊಡಲು ವಿವಿಧ ಸಂಸ್ಥೆಗಳಿಂದ ಸಂಪನ್ಮೂಲ ವ್ಯಕ್ತಿಗಳನ್ನು ಮತ್ತು ಸ್ವ–ಉದ್ದಿಮೆ ಮಾಡಿ ಯಶಸ್ವಿಯಾದ ಹಲವಾರು ಉದ್ದಿಮೆದಾರರನ್ನು ಕರೆದು ಶಿಬಿರಾರ್ಥಿಗಳನ್ನು ಹುರಿದುಂಬಿಸಲಾಗಿದೆ. ಈ ಮೂಲಕ ನಿರುದ್ಯೋಗಿ ಯುವಜನರು ಸ್ವ–ಉದ್ಯೋಗ ಕೈಗೊಳ್ಳಲು ಶಕ್ತರಾಗಿದ್ದಾರೆ.

6 **ಮಹಿಳೆಯರ ಸೌಂದರ್ಯ (ಬ್ಯೂಟಿಷಿಯನ್) ತರಬೇತಿ:–** ಆಸಕ್ತಿ ಇರುವ ಮಹಿಳೆಯರಿಗೆ ಬ್ಯೂಟಿಷಿಯನ್ ತರಬೇತಿಯನ್ನು ಆಯೋಜಿಸಲಾಗಿದೆ. ಇದರಲ್ಲಿ ಮಹಿಳೆಯರಿಗೆ ಬ್ಯೂಟಿ ಪಾರ್ಲರ್‌ಗಳಲ್ಲಿ ಒದಗಿಸುವ ಎಲ್ಲಾ ಸೇವೆಗಳನ್ನು ಕರಗತಗೊಳಿಸಲಾಗಿದೆ. 'ಐ ಬ್ರವ್' ಸುಂದರಗೊಳಿಸುವುದರಿಂದ ಹಿಡಿದು,




ಮದುವೆಗೆ ವಧುವನ್ನು ಸಿದ್ಧಗೊಳಿಸುವವರೆಗೆ ಎಲ್ಲಾ ರೀತಿಯ ಸೇವೆಗಳನ್ನು ಒದಗಿಸಲು ಇವರು ಸಮರ್ಥರಾಗಿದ್ದಾರೆ. ಇದುವರೆಗೆ 180 ಮಹಿಳೆಯರನ್ನು ತರಬೇತುಗೊಳಿಸಲಾಗಿದೆ.

7 **ಎರೆಹುಳು ಗೊಬ್ಬರ ತಯಾರಿಕೆ ತರಬೇತಿ:–** ಈ ತರಬೇತಿಯನ್ನು ಮುಖ್ಯವಾಗಿ ಗ್ರಾಮೀಣ ರೈತ ಯುವಕರಿಗಾಗಿ ಆಯೋಜಿಸಲಾಗಿತ್ತು. ಸಾವಯವ ಕೃಷಿಗೆ ಸಹಾಯಕವಾಗುವಂತೆ ಸ್ವತಃ ಎರೆಹುಳು ಗೊಬ್ಬರವನ್ನು ತಯಾರಿಸುವ ವಿಧಾನವನ್ನು ಕಲಿಸಿಕೊಡಲಾಯಿತು. ಕೃಷಿ ತಜ್ಞರಿಂದ ಎರೆಹುಳು ಗೊಬ್ಬರ ತಯಾರಿಸುವ ವಿಧಾನ, ಉಪಯೋಗಿಸುವ ವಿಧಾನ, ಎರೆಹುಳು ತೊಟ್ಟಿಯನ್ನು



ಕಟ್ಟುವ ವಿಧಾನ ಹಾಗೂ ಇದನ್ನು ಮಾರಾಟ ಮಾಡುವ ವಿಧಾನ ಇತ್ಯಾದಿಗಳನ್ನು ಕಲಿಸಿಕೊಡಲಾಯಿತು. ಮಹಿಳೆಯರು ಕೂಡ ಇದರಲ್ಲಿ ಆಸಕ್ತಿ ತೋರಿ ತರಬೇತಿಯಲ್ಲಿ ಪಾಲ್ಗೊಂಡಿದ್ದಾರೆ. ಇದುವರೆಗೆ 40 ರೈತ ಯುವಕ ಯುವತಿಯರನ್ನು ಎರೆಹುಳು ಗೊಬ್ಬರ ತಯಾರಿಕೆಯಲ್ಲಿ ಪರಿಣಿತರನ್ನಾಗಿ ಮಾಡಲಾಗಿದೆ.

8 **ಮೋಟರ್ ರಿವೈಂಡಿಂಗ್ ತರಬೇತಿ:–** ಗ್ರಾಮೀಣ ಪ್ರದೇಶದಲ್ಲಿ ಪಂಪ್‌ಸೆಟ್ ಹಾಗೂ ಇತರ ಮೋಟರ್‌ಗಳ ದುರಸ್ತಿಗೆ ತುಂಬಾ ಬೇಡಿಕೆ ಕಂಡುಬರುತ್ತದೆ. ಅಂತಹ

ಪ್ರದೇಶಗಳಲ್ಲಿ ಆಸಕ್ತ ಯುವಕರನ್ನು ಗುರುತಿಸಿ ಅವರಿಗೆ ಮೋಟರ್ ದುರಸ್ತಿ/ರಿವೈಂಡಿಂಗ್ ಮಾಡುವ ತರಬೇತಿಯನ್ನು ನೀಡಲಾಯಿತು. ಈ ತರಬೇತಿ ಆ ಭಾಗದ ಗ್ರಾಮಸ್ಥರ ಪ್ರಶಂಸೆಗೊಳಗಾಗಿ ಅವರಿಂದ ಸಾಕಷ್ಟು



ಪ್ರೋತ್ಸಾಹ ದೊರೆತಿದೆ. ಇದುವರೆಗೆ 33 ಯುವಕರನ್ನು ತರಬೇತುಗೊಳಿಸಲಾಗಿದೆ.

9 **ಸಸಿ (ನರ್ಸರಿ) ಬೆಳೆಸುವಿಕೆ ತರಬೇತಿ:** ಮಲೆನಾಡು ಪ್ರದೇಶದಲ್ಲಿ ಸಸಿ ಬೆಳೆಸುವಿಕೆಗೆ ಹೆಚ್ಚು ಪ್ರೋತ್ಸಾಹ ಸಿಗುವ ಕಾರಣ ಸಸಿ ಬೆಳೆಸುವಿಕೆಯ ತರಬೇತಿಯನ್ನು ಆಯೋಜಿಸಲಾಗಿತ್ತು. ಅಭಿವೃದ್ಧಿ ಹೊಂದಿದ ಸಸಿ ಬೆಳೆಸಲು ಸಾಧ್ಯವಿರುವ ತೋಟದಲ್ಲಿ 28 ಮಹಿಳೆಯರಿಗೆ ಈ ತರಬೇತಿಯನ್ನು ಕೊಡಲಾಯಿತು. ಋತುಮಾನಕ್ಕೆ



ಅನುಗುಣವಾಗಿ, ಬೇಡಿಕೆಗೆ ತಕ್ಕಂತೆ ತಮ್ಮ ತಮ್ಮ ಮನೆಯ ಹಿತ್ತಲಿನಲ್ಲಿ ಹೆಚ್ಚು ವೆಚ್ಚವಿಲ್ಲದೆ ಸಸಿಗಳನ್ನು ಬೆಳೆಸಿ ಮಾರಾಟ ಮಾಡುವುದನ್ನು ಕಲಿಸಲಾಯಿತು.

10 **ಮನೆ ವೈಯರಿಂಗ್ ತರಬೇತಿ:** ಮನೆಗಳಿಗೆ ವಿದ್ಯುತ್ ವೈಯರಿಂಗ್ ಮಾಡುವ ತರಬೇತಿಯನ್ನು ಆಯೋಜಿಸಿದಾಗ 20 ಯುವಕ ಯುವತಿಯರು ಇದರಲ್ಲಿ ಆಸಕ್ತಿಯಿಂದ ಭಾಗವಹಿಸಿದರು. ಪಾಠಗಳನ್ನು ಕಲಿಯುವುದರ



ಜೊತೆಗೆ ಅವುಗಳನ್ನು ಅಭ್ಯಾಸ ಮಾಡುವುದರೊಂದಿಗೆ ಪರಿಣತಿಯನ್ನು ಗಳಿಸಿಕೊಂಡರು.

11 **ದ್ವಿಚಕ್ರ ವಾಹನ ದುರಸ್ತಿ ತರಬೇತಿ:** ದ್ವಿಚಕ್ರ ವಾಹನಗಳ ದುರಸ್ತಿ ಮಾಡುವ ಕೆಲಸಕ್ಕೆ ಎಲ್ಲಾ ಕಡೆಯೂ ಬೇಡಿಕೆ ಇದ್ದು, ಒಳ್ಳೆಯ ಕೆಲಸಗಾರರ ಕೊರತೆ ಕಾಣಿಸುತ್ತಿದೆ. ನಗರ



ಪ್ರದೇಶಗಳಲ್ಲಿ ಆಯ್ದ 20 ಯುವಕರಿಗೆ ದ್ವಿಚಕ್ರ ವಾಹನ ಮೋಟರ್ ಸೈಕಲ್ ದುರಸ್ತಿ ಮಾಡುವ ತರಬೇತಿಯನ್ನು ನೀಡಲಾಯಿತು.

12 **ಡ್ರೈವಿಂಗ್ ತರಬೇತಿ** : ನಿರುದ್ಯೋಗಿ 30 ಯುವಕರಿಗೆ ಡ್ರೈವಿಂಗ್ ತರಬೇತಿಯ ಜೊತೆಗೆ ಡ್ರೈವಿಂಗ್ ಲೈಸನ್ಸ್ ಮಾಡಿಸಿಕೊಡಲಾಗಿದೆ.

13 **ಮೊಬೈಲ್ ರಿಪೇರಿ ತರಬೇತಿ** : ಆಸಕ್ತ 30 ಯುವಕರಿಗೆ ಮೊಬೈಲ್ ರಿಪೇರಿ ತರಬೇತಿಯನ್ನು ನೀಡಲಾಗಿದೆ.

ವಿವಿಧ ತರಬೇತಿಗಳಿಗನುಗುಣವಾಗಿ ತರಬೇತಿ ಅವಧಿ ಯನ್ನು ನಿಗದಿ ಮಾಡಲಾಗಿತ್ತು. ಅವರಿಗೆ ಸಂಬಂಧಪಟ್ಟ ತರಬೇತಿಯ ಜೊತೆಗೆ ಆರೋಗ್ಯ, ಉದ್ಯಮ ಶೀಲತಾ ತರಬೇತಿ ಹಾಗೂ ವಿವಿಧ ಸ್ಥಳಗಳಿಗೆ ಭೇಟಿಯನ್ನೂ ಕೂಡ ಆಯೋಜಿಸಲಾಗಿತ್ತು. ಇದಕ್ಕಾಗಿ ಅನೇಕ ಸಂಘ ಸಂಸ್ಥೆಗಳ, ಇಲಾಖೆಗಳ, ತಜ್ಞರ ಸಹಾಯ ಪಡೆಯಲಾಯಿತು. ತರಬೇತಿ ಪಡೆದ ಕೆಲವರು ಕಂಟ್ರಾಕ್ಟರ್‌ಗಳ ಜೊತೆ ಉದ್ಯೋಗ ಮಾಡುತ್ತಿದ್ದರೆ ಇನ್ನೂ ಹಲವರು ಸ್ವಂತ ಉದ್ಯೋಗಗಳನ್ನು ಮಾಡುತ್ತಿದ್ದಾರೆ.

**ತರಬೇತಿಯಿಂದ ಪಡೆದ ಪ್ರಯೋಜನೆಗಳು**

- ನಿರುದ್ಯೋಗಿ ಯುವಜನರು ಆತ್ಮ ವಿಶ್ವಾಸ ಹೆಚ್ಚಿಸಿಕೊಂಡಿದ್ದಾರೆ.
- ನಿರುದ್ಯೋಗಿ ಯುವಜನರು ಕೆಲಸ/ಸ್ವ–ಉದ್ಯೋಗವನ್ನು ಮಾಡಲು ವಿವಿಧ ಅವಕಾಶಗಳು ಎಲ್ಲಿ ಇವೆ ಎಂದು ಕಲಿತುಕೊಂಡಿದ್ದಾರೆ.
- ನಿರುದ್ಯೋಗಿ ಯುವಜನರಿಗೆ ವಿವಿಧ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಪರಿಚಯವಾಗಿದೆ.
- ನಿರುದ್ಯೋಗಿ ಯುವಜನರಲ್ಲಿರುವ ಪ್ರತಿಭೆಗಳನ್ನು ಗುರುತಿಸಲಾಗಿದೆ.
- ಎಲ್ಲಾ ನಿರುದ್ಯೋಗಿ ಯುವಜನರು ಉದ್ಯೋಗದಲ್ಲಿ ತೊಡಗಿಸಿಕೊಂಡು ದಿನವೊಂದಕ್ಕೆ ರೂ. 300–600 ರವರೆಗೆ ದುಡಿದು ತಮ್ಮ ಜೀವನಕ್ಕೆ ನೆಲೆಯನ್ನು ಕಂಡುಕೊಂಡಿದ್ದಾರೆ.

ಸಂಸ್ಥೆ ಕೌಶಲ್ಯಾಧಾರಿತ ತರಬೇತಿಗಳನ್ನು ನಡೆಸಿ ಒಳ್ಳೆಯ ಅನುಭವವನ್ನು ಪಡೆದಂತಾಗಿ, ಪ್ರಸ್ತುತ ಸಾಲಿನಲ್ಲಿ 4 ರೀತಿಯ ಕೌಶಲ್ಯ ತರಬೇತಿಗಳನ್ನು ಹಮ್ಮಿಕೊಂಡು 180 ನಿರುದ್ಯೋಗಿ ಯುವಜನರಿಗೆ ಉದ್ಯೋಗಾವಕಾಶವನ್ನು ನೀಡಲು ಯೋಜನೆಯನ್ನು ಹಮ್ಮಿಕೊಂಡಿದೆ.

**ಮೋಟರ್ ರಿವೈಂಡಿಂಗ್‌ನಲ್ಲಿ ಅಶೋಕನ ಸ್ವಾವಲಂಬನೆ: ನೈಜ ಘಟನೆ**

ಶಿವಮೊಗ್ಗ ಜಿಲ್ಲೆಯ ಹೊಳಲೂರು ಗ್ರಾಮದ ಅಶೋಕನಾದ ನಾನು ಹತ್ತನೇ ತರಗತಿಯಲ್ಲಿ ಅನುತ್ತೀರ್ಣನಾದ ನಿರುದ್ಯೋಗಿ ಯುವಕ. ನನ್ನ ವಿದ್ಯಾಭ್ಯಾಸವನ್ನು ಮುಂದುವರೆಸಲಾಗದೆ ನನ್ನ ಕಾರ್ಪೆಂಟರ್ ಅಣ್ಣನಿಗೆ 3 ವರ್ಷಗಳ ಕಾಲ ಸಹಾಯವನ್ನು ಮಾಡುತ್ತಿದ್ದೆನು. ಆದರೆ ನನಗೆ ಕಾರ್ಪೆಂಟರ್ ಕೆಲಸದಲ್ಲಿ ಆಸಕ್ತಿ ಇರಲಿಲ್ಲ, ಅಲ್ಲದೆ ಮನೆಯಲ್ಲಿ ಬಡತನದಿಂದಾಗಿ



ದುಡಿಮೆ ಸಾಕಾಗುತ್ತಿರಲಿಲ್ಲ. ಆದ ಕಾರಣ ಬೋರ್‌ವೆಲ್‌ನಿಂದ ಮೋಟರನ್ನು ಎತ್ತುವ ಕೆಲಸದಲ್ಲಿ ಒಬ್ಬರ ಹತ್ತಿರ ಸಹಾಯಕನಾಗಿ ಕೆಲಸಕ್ಕೆ ಸೇರಿದೆ. ಆಗ ನನಗೆ ಪ್ರತಿ ದಿನಕ್ಕೆ ರೂ. 150/–ರಂತೆ ಸಂಬಳ ಸಿಗುತಿತ್ತು. ಇದರಿಂದ ಉತ್ತೇಜಿತನಾದ ನಾನು ಮೋಟರ್ ರಿವೈಂಡಿಂಗ್ ಮತ್ತು ರಿಪೇರಿ ಮಾಡುವ ಕೆಲಸವನ್ನು ಕಲಿಯಲು ಆಸಕ್ತನಾದೆನು.

ಎಸ್.ಎಮ್.ಎಸ್.ಎಸ್.ಸಂಸ್ಥೆಯ ಕಾರ್ಯಕರ್ತರ ಮೂಲಕ, ಸಂಸ್ಥೆಯು ಉಚಿತವಾಗಿ ಮೋಟರ್ ರಿವೈಂಡಿಂಗ್ ಕೌಶಲ್ಯ ತರಬೇತಿಯನ್ನು ನೀಡುವುದಾಗಿ ತಿಳಿಸಿದಾಗ ನಾನು ಅತ್ಯಂತ ಸಂತೋಷದಿಂದ ಹಾಗೂ ತುಂಬಾ ಆಸಕ್ತಿಯಿಂದ ಈ ತರಬೇತಿಗೆ ಸೇರಿಕೊಂಡೆನು. ಈ ಅವಧಿಯಲ್ಲಿ ನಾನು ರಾತ್ರಿ 1.00 ಗಂಟೆಯವರೆಗೂ ಈ ಕೌಶಲ್ಯವನ್ನು ಕರಗತ ಮಾಡಿಕೊಳ್ಳಲು ಶ್ರಮಿಸುತ್ತಿದ್ದೆನು.

ಮೋಟರ್ ರಿಪೇರಿ ಕೆಲಸ ಕಲಿತ ಮೇಲೆ ನಾನೇ ಸ್ವಂತವಾಗಿ ಕೆಲಸ ಆರಂಭಿಸಿದೆ. ಸುತ್ತಮುತ್ತಲ ಹಳ್ಳಿಯಲ್ಲಿ ಒಳ್ಳೆಯ ರಿಪೇರಿ ಮಾಡುವವರು ಇರದಿದ್ದುದರಿಂದ ನನಗೆ ಒಳ್ಳೆಯ ಬೇಡಿಕೆ ಬರಲಾರಂಭಿಸಿತು. ಈಗ ಸೆಕೆಂಡ್ ಹ್ಯಾಂಡ್ ಪುಲ್ಲಿ ಹಾಗೂ ಮೋಟರ್ ಚೆಕ್ಕಿಂಗ್ ಸಲಕರಣೆಗಳನ್ನು ಸ್ವಂತವಾಗಿ ಖರೀದಿಸಿ ಪೈಪು ಮತ್ತು ಮೋಟರನ್ನು ಮೇಲೆತ್ತುವ ಕಾರ್ಯ ವನ್ನು ನಿರ್ವಹಿಸುತ್ತಿದ್ದೇನೆ. ಎಸ್.ಎಮ್.ಎಸ್.ಎಸ್. ಸಂಸ್ಥೆಯು ನೀಡಿದ ಸಲಕರಣೆಗಳು ಅತ್ಯಂತ ಸಹಾಯಕವಾಗಿವೆ. ಕೆಲ ಸಮಯದಲ್ಲೇ ಸುತ್ತಮುತ್ತಲ ಹಳ್ಳಿಗಳಲ್ಲಿ ಪ್ರಸಿದ್ಧಿಯನ್ನು ಪಡೆದುಕೊಂಡೆ. ಈಗ ನಾನು 3 ಜನರನ್ನು ಸಹಾಯಕರನ್ನಾಗಿ ನೇಮಿಸಿಕೊಂಡು ಪ್ರತಿದಿನ ರೂ. 300/–ಗಳನ್ನು ಪ್ರತಿ ವ್ಯಕ್ತಿಗೆ ಸಂಬಳವನ್ನಾಗಿ ನೀಡುತ್ತಿದ್ದೇನೆ. ಪ್ರತಿ ದಿನ ನಾನು 2–4 ಪಂಪ್‌ಸೆಟ್‌ಗಳನ್ನು ಎತ್ತಿ ರಿಪೇರಿಯನ್ನು ಮಾಡುತ್ತಿದ್ದೇನೆ ಹಾಗೂ ಬಾವಿಯಲ್ಲಿರುವ ಪೈಪಿನ ಉದ್ದದ ಅಳತೆಯ ಮೇಲೆ ಹಣವನ್ನು ಪ್ರತಿಯಾಗಿ ಪಡೆಯುತ್ತಿದ್ದೇನೆ. ಇದರ ಹೊರತಾಗಿ ಕಂಪನಿಯ ಕಡೆಯಿಂದಲೂ ಹೊಸ ಎಲೆಕ್ಟ್ರಿಕ್ ಮೋಟರುಗಳ ಖರೀದಿಯ ಮೇಲೆ ಶೇ. 10 ಕಮಿಷನನ್ನು ಪಡೆಯುತ್ತಿದ್ದೇನೆ. ಮೊದಲು ದಿನಕ್ಕೆ ರೂ. 150 ಗಳಿಸಲು ಕಷ್ಟಪಡುತ್ತಿದ್ದ ನಾನು ಈಗ ನನ್ನ ಎಲ್ಲಾ ಖರ್ಚುಗಳನ್ನು ಕಳೆದು ಪ್ರತಿ ದಿನಕ್ಕೆ ರೂ. 600 ರಿಂದ ರೂ. 1,000/–ಗಳನ್ನು ಸಂಪಾದಿಸುತ್ತಿದ್ದೇನೆ. ಸ್ವಂತ ಜೀಪನ್ನು ಖರೀದಿಸಿ ಪುಲ್ಲಿ ಹಾಗೂ ಸಲಕರಣೆಗಳನ್ನು ಸಾಗಿಸಲು ಸಹಾಯವಾಗುವಂತೆ ಮಾಡುವುದು ನನ್ನ ಮುಂದಿನ ಯೋಜನೆಯಾಗಿದೆ ಎಂದು ಹರ್ಷದಿಂದ ಹೇಳುತ್ತೇನೆ. ನನ್ನ ಬಾಳನ್ನು ಹಸನು ಮಾಡಿದ ಈ ಸಂಸ್ಥೆಗೆ ನಾನು ಎಂದಿಗೂ ಚಿರಋಣಿಯಾಗಿರುತ್ತೇನೆ.

**ಶಶಿಕಲಳ ಸ್ವ–ಉದ್ಯೋಗ**

ಶಶಿಕಲ ಎಂಬ 32 ವರ್ಷದ ಮಹಿಳೆ ಆಯನೂರು ಗ್ರಾಮಕ್ಕೆ ಸೇರಿದವಳಾಗಿದ್ದಾಳೆ. ಇವಳ ಗಂಡ ಕಾರ್ಪೆಂಟರ್ ಕೆಲಸವನ್ನು ಮಾಡುತ್ತಿದ್ದಾನೆ. ಇವಳಿಗೆ ಒಂದು ಪುಟ್ಟ ಮಗು

ಇದೆ. 2 ಎಕರೆ ಸ್ವಂತ ಒಣ ಭೂಮಿ ಇದ್ದರೂ ಯಾವುದೇ ರೀತಿಯ ಬೆಳೆಯನ್ನು ಬೆಳೆಯುತ್ತಿದ್ದಿಲ್ಲ. ಸೀಮಿತ ಆದಾಯ ಕುಟುಂಬಕ್ಕೆ ಊಟಕ್ಕೆ ಮತ್ತು ಬಟ್ಟೆಗೆ ಮಾತ್ರ ಸಾಕಾಗುತ್ತಿದ್ದು ಕುಟುಂಬ ನಿರ್ವಹಣೆಗೆ ಹಾಗೂ ಮಕ್ಕಳ ಭವಿಷ್ಯಕ್ಕೆ ತುಂಬ ಕಷ್ಟಕರವಾದ ಪರಿಸ್ಥಿತಿ ಇತ್ತು. ಹೆಚ್ಚು ವಿದ್ಯಾಭ್ಯಾಸವಿಲ್ಲದ ಶಶಿಕಲಳಿಗೆ ಹೊರಗಡೆ ಹೋಗಿ ದುಡಿಯುವ ಅವಕಾಶಗಳು ಇರಲಿಲ್ಲ. ಮನೆಯಲ್ಲಿಯೇ ಏನಾದರೂ ದುಡಿದು ಕುಟುಂಬಕ್ಕೆ ಸಹಾಯ ಮಾಡುವ ಆಕಾಂಕ್ಷೆ ಮಾತ್ರ ಬಲವಾಗಿತ್ತು. ಅಂತಹ



ಸಂದರ್ಭದಲ್ಲಿ ಎಸ್.ಎಮ್.ಎಸ್.ಎಸ್.ಸಂಸ್ಥೆಯಿಂದ ಉಚಿತ ಹೊಲಿಗೆ ತರಬೇತಿ ಕೇಂದ್ರ ಪ್ರಾರಂಭಿಸಿರುವುದು ಗೊತ್ತಾಯಿತು. ಸಂತೋಷದಿಂದ ಹೊಲಿಗೆ ತರಬೇತಿಗೆ ಸೇರಿಕೊಂಡಳು.

ಶಶಿಕಲ ಪ್ರತಿ ದಿನವೂ ಹೊಲಿಗೆ ತರಬೇತಿ ಶಾಲೆಗೆ ತಪ್ಪದೆ ಹಾಜರಾಗಿ ಹೊಲಿಗೆ ತರಬೇತಿಯನ್ನು ಪಡೆದಳು ಮಾತ್ರವಲ್ಲ ಹೊಲಿಗೆಯಲ್ಲಿ ಪರಿಣತಿಯನ್ನು ಕಂಡುಕೊಂಡಳು. ಇವಳು ಸಂಘದ ಮಹಿಳೆಯಾಗಿದ್ದು ಸಂಘದಿಂದ ಸಾಲವನ್ನು ತೆಗೆದುಕೊಂಡು ತನ್ನದೆ ಆದ ಒಂದು ಹೊಲಿಗೆ ಯಂತ್ರವನ್ನು ತಂದುಕೊಂಡು ತನ್ನ ಗ್ರಾಮದಲ್ಲೇ ಬಟ್ಟೆಯನ್ನು ಹೊಲಿಯಲು ಪ್ರಾರಂಭಿಸಿದಳು. ಇವಳಿಗೆ ಗ್ರಾಮದಲ್ಲಿ ತುಂಬಾ ಗ್ರಾಹಕರಿದ್ದಾರೆ. ನಿಧಾನವಾಗಿ ಇವಳಿಗೆ ಶಿವಮೊಗ್ಗದಲ್ಲಿರುವ ಮೀರಾ ಗಾರ್ಮೆಂಟ್ಸ್‌ನ ಸಂಪರ್ಕವಾಯಿತು. ಇಂದು ಶಶಿಕಲ ಪ್ರತಿದಿನ ಅಂದಾಜು 25 ಪೆಟಿಕೋಟನ್ನು ಹೊಲಿದು ಕೊಡುತ್ತಿದ್ದಾಳೆ. ಇವಾಗ ಶಶಿಕಲ ಈ ವೃತ್ತಿಯಲ್ಲಿ ಬಿಡುವಿಲ್ಲದೆ ತನ್ನನ್ನೇ ತೊಡಗಿಸಿಕೊಂಡಿದ್ದರಿಂದ ಪ್ರತಿದಿನ ಕನಿಷ್ಠ ರೂ. 600/–ಗಳಿಗಿಂತಲೂ ಹೆಚ್ಚು ಸಂಪಾದನೆ ಮಾಡುತ್ತಿದ್ದಾಳೆ. ಇವಳು ಲಂಬಾಣಿ ಜನಾಂಗಕ್ಕೆ ಸೇರಿರುವುದರಿಂದ ಇವರ ಜನಾಂಗದ ಜನರ ಬಟ್ಟೆಗಳು ವಿಭಿನ್ನ ರೀತಿಯ ಕಸೂತಿ ಹಾಗೂ ಅಲಂಕಾರಿಕವಾಗಿ ಮಾಡಿಕೊಡುವುದರಿಂದ ಇನ್ನೂ ಹೆಚ್ಚಿನ ಹಣ ಇವಳಿಗೆ ಸಿಗುತ್ತದೆ.

ಇವಳು ಮತ್ತು ಇವಳ ಕುಟುಂಬವು ಈಗ ಸ್ವಾವಲಂಬನೆಯ ಜೀವನ ನಡೆಸುತ್ತಿದ್ದು, ಮುಖದ ಮೇಲೆ ಆತ್ಮವಿಶ್ವಾಸದ ನಗು ಎದ್ದು ಕಾಣುತ್ತದೆ. ಇಂದು ಇವಳ ಈ ಸುಖೀ ಜೀವನಕ್ಕೆ ಎಸ್.ಎಮ್.ಎಸ್.ಎಸ್. ಸಂಸ್ಥೆ ಹಾಗೂ ಎಫ್.ವಿ.ಟಿ.ಆರ್.ಎಸ್ ಯೋಜನೆಯೇ ಕಾರಣ ಎಂದು ಹೆಮ್ಮೆಯಿಂದ ಎಲ್ಲರೊಂದಿಗೂ ಹೇಳಿಕೊಳ್ಳುತ್ತಾಳೆ.

**ಮಂಜಮ್ಮನ ಬದುಕಿನ ನೈಜ ಘಟನೆ**

ನಾನು ಶ್ರೀಮತಿ ಮಂಜಮ್ಮ. ನನಗೆ ಈಗ 48 ವರ್ಷ. ನಾನು ಶಿಕಾರಿಪುರ ತಾಲ್ಲೂಕಿನ ಯೇರೆಕಟ್ಟೆ ಗ್ರಾಮದಲ್ಲಿ ವಾಸಿಸುತ್ತಿದ್ದೇನೆ. ನನಗೆ ಇಬ್ಬರು ಗಂಡು ಮಕ್ಕಳು. ನನಗೆ ಇದ್ದ 2 ಎಕರೆ ಬಗರ್ ಹುಕುಂ ಜಮೀನಿನಲ್ಲಿ ಜೋಳ ಬೆಳೆದು ಜೀವನ ನಡೆಸುತ್ತಿದ್ದೆ, ಇದರಲ್ಲಿ ದೊಡ್ಡ ಮಗನ ಮದುವೆ ಮಾಡಿದೆ. ಆದರೆ ಬೆಳೆದ ಬೆಳೆ ವರ್ಷಕ್ಕೆ ಮಾತ್ರ ಸೀಮಿತವಾಗಿತ್ತು, ದಿನದ, ವಾರದ, ತಿಂಗಳಿನ ಖರ್ಚುಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತಿದ್ದೆ, ಈ ಕೂಲಿ ಕೆಲಸದಿಂದ ಜೀವನ ನಡೆಸುವುದು ತುಂಬಾ ಕಷ್ಟವಾಗುತ್ತಿತ್ತು, ನಂತರ ಎಸ್.ಎಮ್.




ಎಸ್.ಎಸ್.ಸಂಸ್ಥೆಯ ಪ್ರೇರಿತ ಪರಿಸರ ಸ್ವ–ಸಹಾಯ ಸಂಘಕ್ಕೆ ಸೇರಿಕೊಂಡೆ. ಸಂಘದ ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸಂಯೋಜಕರು ಹಾಗೂ ಕಾರ್ಯಕರ್ತರು ನೀಡುತ್ತಿದ್ದ ಸಾವಯವ ತರಕಾರಿ ಬೆಳೆಸುವ ಬಗ್ಗೆ, ಗೊಬ್ಬರ ತಯಾರಿಸುವ ಬಗ್ಗೆ, ಜೀವಾಮೃತ ತಯಾರಿಸುವ ಬಗ್ಗೆ ಮಾಹಿತಿ ಪಡೆದು ಆಯೋಜಿಸಿದ ತರಬೇತಿಗಳಲ್ಲಿ ಸಕ್ರೀಯವಾಗಿ ಭಾಗವಹಿಸಿ ಸಾವಯವದ ಸಂಪೂರ್ಣ ಮಾಹಿತಿ ಪಡೆದುಕೊಂಡೆ.

ಎಸ್.ಎಮ್.ಎಸ್.ಎಸ್.ಸಂಸ್ಥೆಯ ಸಂಯೋಜಕರು ಹಾಗೂ ಕಾರ್ಯಕರ್ತರು ನೀಡುತ್ತಿದ್ದ ಮಾಹಿತಿಗಳ ಆಧಾರದ ಮೇಲೆ ನನ್ನ 2 ಎಕರೆ ಬಗರ್ ಹುಕುಂ ಜಮೀನಿನಲ್ಲಿ ಹಾಗೂ ಬೇರೆ ಕಡೆ 1 ಎಕರೆ ಜಮೀನು ಗುತ್ತಿಗೆ ಪಡೆದು ಆ ಜಮೀನಿನಲ್ಲಿ ಸಾವಯವ ತರಕಾರಿ ಬೆಳೆಸಲು ಪ್ರಾರಂಭಿಸಿದೆ, ವಿವಿಧ ರೀತಿಯ ತರಕಾರಿ ಬೆಳೆಸಿ ವಾರಕ್ಕೊಮ್ಮೆ ಮಾರಾಟ ಮಾಡುತಿದ್ದೆ ಹಾಗೂ ಸಾವಯವ ಎರೆಹುಳು ಗೊಬ್ಬರ ಮಾರಾಟ ಮಾಡಿ ತಿಂಗಳಲ್ಲಿ

ರೂ. 3,800/– ರಿಂದ ರೂ. 4,500/– ರಷ್ಟು ಆದಾಯವನ್ನು ಗಳಿಸುತ್ತಿದ್ದು ನನ್ನ ಎರಡನೇ ಮಗನ ಮದುವೆಯನ್ನು ಸಾಲವಿಲ್ಲದೆ ಮಾಡಲು ಅದು ತುಂಬಾ ಸಹಾಯವಾಯಿತು.

ಈ ಸಾವಯವ ತರಕಾರಿ ಬೆಳೆಯ ಆದಾಯವನ್ನು ನೋಡಿ ಈಗ ನನ್ನ ಮಗ ಕೂಡ ಸಾವಯವ ತರಕಾರಿ ಬೆಳೆಸುವುದರಲ್ಲಿ ನಿರತನಾಗಿದ್ದಾನೆ. ನನಗೆ ಬರುವ ಉತ್ತಮ ಲಾಭಾಂಶದಿಂದ ನನ್ನ ಸಂಘದ ಉಳಿತಾಯ, ಸಾಲದ ಸೇವಾಶುಲ್ಕ, ಮನೆ ಖರ್ಚು, ಇತ್ಯಾದಿಗಳನ್ನು ನಿಭಾಯಿಸಿ, ಮನೆ ರೀಪೇರಿ ಮಾಡಿಸಿ ಈಗ ಯಾವುದೇ ತೊಂದರೆ ಇಲ್ಲದೆ ಜೀವನ ನಡೆಸಲು ಸಾಧ್ಯವಾಗಿದೆ. ಈ ನೆಮ್ಮದಿಯ ಜೀವನಕ್ಕೆ ದಾರಿ ದೀಪವಾದ ಎಸ್.ಎಮ್.ಎಸ್.ಎಸ್.ಸಂಸ್ಥೆಗೆ ನಾನು ಚಿರಋಣಿಯಾಗಿರುತ್ತೇನೆ.

# ನಡೆದು ಬಂದ ದಾರಿ



✍ ಸವಿತಾ ಎಂ.
ಕಾರ್ಯಕರ್ತೆ

ನಾನು ಶ್ರೀಮತಿ ಸವಿತಾ ನಾಗರಾಜ್. ನನ್ನ ಪತಿ ಹಾಗೂ ಇಬ್ಬರು ಗಂಡು ಮಕ್ಕಳೊಂದಿಗೆ ಶಿವಮೊಗ್ಗ ನಗರದ ಗಾಡಿಕೊಪ್ಪ ಬಡಾವಣೆಯಲ್ಲಿ ವಾಸವಾಗಿದ್ದೇನೆ. ನನ್ನ ಪತಿ ಖಾಸಗಿ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ನಾನು ಮೂಲತಃ ಶಿವಮೊಗ್ಗ ತಾಲ್ಲೂಕಿನ ಸಿರಿಗೆರೆ ಗ್ರಾಮದ ಕೃಷಿ ಕುಟುಂಬದಲ್ಲಿ ಬೆಳೆದು ನನ್ನ ಪೂರ್ವ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಸಿರಿಗೆರೆಯಲ್ಲಿ ಪೂರೈಸಿದ್ದೇನೆ. ನನ್ನ ಕುಟುಂಬದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲದ ಕಾರಣ ಕಾಲೇಜ್ ಶಿಕ್ಷಣವನ್ನು ಪೂರೈಸಲು ಸಾಧ್ಯವಾಗಲಿಲ್ಲ. ಒಂದು ದಿನ ನಮ್ಮ ಗ್ರಾಮಕ್ಕೆ ಎಸ್.ಎಮ್.ಎಸ್.ಎಸ್.ಸಂಸ್ಥೆಯಿಂದ ಮಹಿಳಾ ಸಂಘಟನೆಗಾಗಿ ಸಿಬ್ಬಂದಿಗಳು ಆಗಮಿಸಿದ್ದರು. ಆಗ ನನಗೆ ಸಂಸ್ಥೆಯ ಪರಿಚಯವಾಯಿತು. ತದನಂತರ ಸಂಸ್ಥೆಯ ಸಂಘಗಳ ಪ್ರೇರಕಿಯಾಗಿ ಕಾರ್ಯನಿರ್ವಹಿಸುವ ಅವಕಾಶ ದೊರೆಯಿತು. ನಾನು ಆಗ ನಾಲ್ಕು ಗೋಡೆಯ ಮಧ್ಯೆ ವಾಸಿಸುತ್ತಿದ್ದು ಯಾವುದೇ ಜ್ಞಾನ, ತಿಳುವಳಿಕೆ ಇರಲಿಲ್ಲ. ಸಂಸ್ಥೆ ನನಗೆ ಹಲವಾರು ರೀತಿಯ ಮಾಹಿತಿ ತರಬೇತಿಗಳನ್ನು ನೀಡಿ ಸಾಮರ್ಥ್ಯ ಬೆಳವಣಿಗೆಗೆ ಹೆಚ್ಚಿನ ಸಹಕಾರ ನೀಡಿತು. ನಾನು ನಮ್ಮ ಗ್ರಾಮದ ಸುತ್ತಮುತ್ತಲಿನ ಬಡ ಮಹಿಳೆಯರನ್ನು ಸಂಘಟಿಸಿ ಸ್ವ–ಸಹಾಯ ಸಂಘಗಳನ್ನು ರಚಿಸಿ ಸಂಸ್ಥೆ ನೀಡಿದ ಮಾಹಿತಿ ಹಾಗೂ ತರಬೇತಿಗಳನ್ನು ಸಂಘದ ಮಹಿಳೆಯರಿಗೆ ನೀಡುವುದರ ಮೂಲಕ ಮಹಿಳೆಯರ ಸಶಕ್ತೀಕರಣದ ಕಾರ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡೆ. ನನಗೆ ಸಂಸ್ಥೆಯು ವಿವಿಧ ಸರ್ಕಾರಿ ಸೌಲಭ್ಯ, ನಾಯಕತ್ವ ಮತ್ತು ಸಂವಹನ ಕೌಶಲ್ಯಗಳ ಕುರಿತು ನೀಡಿದ ತರಬೇತಿಗಳು ನನ್ನ ಆತ್ಮಸ್ಥೈರ್ಯವನ್ನು ಹೆಚ್ಚಿಸಿದವು. ಇದರ ಜೊತೆಗೆ ಮಾನವ ಹಕ್ಕು, ಪಂಚಾಯತ್ ರಾಜ್ ವ್ಯವಸ್ಥೆ, ಕೌಟುಂಬಿಕ ದೌರ್ಜನ್ಯ, ಕಾನೂನಿನ ನೆರವು, ಈ ಹಲವಾರು ವಿಷಯಗಳ ಬಗ್ಗೆ ಸಂಸ್ಥೆಯಿಂದ ನಾನು ಪಡೆದ ಮಾಹಿತಿ ನನ್ನ ಸಮಾಜಸೇವಾ ಕಾರ್ಯವನ್ನು ಇನ್ನಷ್ಟು ಯಶಸ್ವಿಯಾಗಿ ಮಾಡಲು ನೆರವಾಯಿತು. ವ್ಯಕ್ತಿತ್ವ ವಿಕಸನ, ದಾಖಲಾತಿ ನಿರ್ವಹಣೆ, ಒಕ್ಕೂಟ ಪರಿಕಲ್ಪನೆ ತರಬೇತಿಗಳು ನನ್ನ ವ್ಯಕ್ತಿತ್ವ ವಿಕಸನಗೊಳಿಸಿದವು. ಇಂದು ನಾನು ಸಂಘ ಮತ್ತು ಸಮುದಾಯದ ಜನರಿಗೆ ತರಬೇತಿ ನೀಡುವ ಕೌಶಲ್ಯವನ್ನು ಬೆಳೆಸಿಕೊಂಡಿದ್ದೇನೆ. ಇಲಾಖೆ ಹಾಗೂ ಸಮುದಾಯದ ಜನರೊಂದಿಗೆ ಉತ್ತಮ ಸಂಪರ್ಕ ಜಾಲಬಂಧ ಬೆಳೆಸುವಲ್ಲಿ ಯಶಸ್ವಿಯಾಗಿರುತ್ತೇನೆ.

ಶೋಷಿತ ಬಡವರ್ಗದ ಏಳಿಗೆಗೆ ನಾನು ಸಲ್ಲಿಸಿದ ಸೇವೆಯನ್ನು ಗುರುತಿಸಿ ಸ್ಥಳೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಒದಗಿ ಬಂದಿರುವುದು ನನಗೆ ಹೆಮ್ಮೆಯ ಸಂಗತಿ. ಪ್ರಸ್ತುತ ನನ್ನ ಕುಟುಂಬದಲ್ಲಿ ಸಮಾನ ನಿರ್ಧಾರ ಕೈಗೊಳ್ಳುವ ಅವಕಾಶ, ಸಾಮಾಜಿಕ ಹಾಗೂ ಆರ್ಥಿಕ ಭದ್ರತೆ ಲಭಿಸಿದೆ. ಇಂದು ನಾನು ಸಮಗ್ರ ಅಭಿವೃದ್ಧಿ ಹೊಂದಿ ಸಮಾಜದಲ್ಲಿ ಗೌರವ, ಮನ್ನಣೆ, ಸಾಮಾಜಿಕ ಸ್ಥಾನಮಾನ ಲಭಿಸಲು ಅವಕಾಶ ನೀಡಿರುವ ಎಸ್.ಎಮ್.ಎಸ್.ಎಸ್.ಸಂಸ್ಥೆಗೆ ನಾನು ಎಂದೆಂದಿಗೂ ಚಿರಋಣಿ.

# ಸೋತು ಗೆದ್ದವರು... ಆದರೆ ನಾವು

✍ ಸಿಸ್ಟರ್ ಲವೀನಾ ಲೋಬೊ, ಯು.ಎಫ್.ಎಸ್.
ಮೈಸೂರು



ಥಾಮಸ್ ಆಲ್ವಾ ಎಡಿಸನ್ ವಿದ್ಯುತ್ ಬಲ್ಬ್ ಕಂಡು ಹಿಡಿಯಲು ಸಾವಿರಾರು ಬಾರಿ ಪ್ರಯತ್ನ ಪಟ್ಟು ಸೋತಿದ್ದರು. ಆದರೆ ಪ್ರಯತ್ನವನ್ನು ಕೊನೆಗಾನಿಸಲಿಲ್ಲ...

ಆಲ್ಬರ್ಟ್ ಐನ್‌ಸ್ಟೈನರ ಶಾಲಾ ಶಿಕ್ಷಕಿ ಇವನೊಬ್ಬ ಹುಚ್ಚ ಮತ್ತು ಬುದ್ದಿಹೀನ ಮಗು ಎಂದಿದ್ದರು ಮತ್ತು ಇವರಿಗೆ 4 ವರ್ಷದವರೆಗೆ ಮಾತನಾಡಲೂ 7 ವರ್ಷದವರೆಗೆ ಓದಲೂ ಬರುತ್ತಿರಲಿಲ್ಲ. ಆದರೆ ತಾಯಿಯ ಪ್ರೇರಣೆಯಿಂದ...

ಲಿಯೋನಲ್ ಮೆಸ್ಸಿ ತಮ್ಮ ಫುಟ್ಬಾಲ್ ಟ್ರೈನಿಂಗ್ ಹಣಕ್ಕಾಗಿ ಚಹಾ ಅಂಗಡಿಯಲ್ಲಿ ಸೇವಕನಾಗಿ ಕೆಲಸ ಮಾಡುತ್ತಿದ್ದರು...

ಬಿಲ್ ಗೇಟ್ಸ್ ಕಾಲೇಜಿನಲ್ಲಿ ಫೇಲ್ ಆಗಿ ಹೊರಬಿದ್ದವರು. ಇವತ್ತು ಜಗತ್ತು ಕಂಡ ಅತೀವ ಶ್ರೀಮಂತರಲ್ಲಿ ಇವರೂ ಒಬ್ಬರು...

ಕೆ.ಎಫ್.ಸಿ. ಸಂಸ್ಥಾಪಕ ಕೊಲೊನೆಲ್ ಸ್ಯಾಂಡರ್ಸ್ ತನ್ನ 61ರ ವಯಸಿನ್ನಲ್ಲಿ 1,009 ಬಾರಿ ತನ್ನ ಕೈರುಚಿಯ ಚಿಕನ್ ಮಾರಲು ಹೋಗಿ ಸೋತಿದ್ದರು, ಆದರೆ ಪ್ರಯತ್ನ ನಿಲ್ಲಿಸಲಿಲ್ಲ...

ಸ್ಟೀವ್ ಜಾಬ್ಸ್ ಒಂದು ಕಾಲದಲ್ಲಿ ಗೆಳೆಯರ ಮನೆಯ ಮೇಲೆ ಮಲಗಿ ಎದ್ದು, ದೇವಸ್ಥಾನದಲ್ಲಿ ಸಿಗುತ್ತಿದ್ದ ಉಚಿತ ಪ್ರಸಾದ ಊಟ ಮಾಡುತ್ತಿದ್ದರು, ಗೆಳೆಯರ ಮನೆಯಲ್ಲಿ ಆ್ಯಪಲ್ ಕಂಪೆನಿ ಸ್ಥಾಪಿಸಿದರು, ಮುಂದಿನದೆಲ್ಲಾ ಯಶೋಗಾಥೆ...

ಡಾ. ಅಬ್ದುಲ್ ಕಲಾಂರವರು ಪೈಲಟ್ ಸಂದರ್ಶನದಲ್ಲಿ ತಿರಸ್ಕರಿಸಲ್ಪಟ್ಟಿದ್ದರು, ಮುಂದಿನದ್ದೆಲ್ಲಾ ಇಂದು ಇತಿಹಾಸ...

ಜೆ.ಕೆ.ರೌಲಿಂಗ್‌ರವರ 'ಹ್ಯಾರಿ ಪಾಟರ್' ಕೃತಿಯು 12 ಪಬ್ಲಿಷರ್ಸ್‌ಗಳಿಂದ ತಿರಸ್ಕರಿಸಲ್ಪಟ್ಟಿತ್ತು, ಆದರೆ ಅವರ ಪ್ರಯತ್ನ ನಿಲ್ಲಲಿಲ್ಲ...

ಟೋನಿ ಬ್ಲೇರ್‌ರ ಶಿಕ್ಷಕರು ಅವರನ್ನು ಶಾಲೆಯಲ್ಲಿ ಫೇಲ್ಯೂರ್ ಎಂದಿದ್ದರು, ಮುಂದೆ ಬ್ಲೇರ್ ಬ್ರಿಟನ್ನಿನ ಪ್ರಧಾನ ಮಂತ್ರಿಯಾದರು...

ಅಮಿತಾಬ್ ಬಚ್ಚನ್‌ರಿಗೆ ಆಲ್ ಇಂಡಿಯಾ ರೇಡಿಯೋ ನಿನ್ನ ದ್ವನಿ ಕರ್ಕಶವಾಗಿದೆ ಎಂದು ಉದ್ಯೋಗ ನಿರಾಕರಿಸಿತ್ತು...

ಮೈಕಲ್ ಜೋರ್ಡನ್ ಹೈಸ್ಕೂಲ್ ಬಾಸ್ಕೆಟ್ ಬಾಲ್ ತಂಡದಿಂದ ಹೊರಬಿದ್ದಿದ್ದರು. ಇವರು ಇಂದು ಜಗತ್ತಿನ ನಂ. 1 ಬಾಸ್ಕೆಟ್ ಬಾಲ್ ಆಟಗಾರ...

ಧೀರೂಬಾಯಿ ಅಂಬಾನಿಯವರು ಒಂದು ಕಾಲದಲ್ಲಿ ಪೆಟ್ರೋಲ್ ಬಂಕ್‌ನಲ್ಲಿ ಗಾಡಿಗಳಿಗೆ ಪೆಟ್ರೋಲ್ ತುಂಬಿಸುವ ಕೆಲಸ ಮಾಡುತ್ತಿದ್ದರು. ಮುಂದೆ ಭಾರತದ ನಂಬರ್ 1 ಶ್ರೀಮಂತರಾದರು...

ಈ ಜಗತ್ತಿನಲ್ಲಿ ಯಾರೂ ಕಷ್ಟ ನಷ್ಟ ನೋವುಗಳಿಲ್ಲದೆ ಮುಂದೆ ಬರುವುದಿಲ್ಲ. ಹಿಂದೊಂದು ದಿನ ಸೋತವರು ಇಂದು ಮಹಾನ್ ಸಾಧಕರೆನಿಸಿಕೊಂಡಿದ್ದಾರೆ. ಸಾಧನೆಯ ತುಡಿತವಿದ್ದವರಿಗೆ ಕಷ್ಟಗಳು ಕೇವಲವೆನಿಸುತ್ತವೆ. ಬಾಳಿನಲ್ಲಿ ಸೋತಾಗ ಸೋತು ಗೆದ್ದಂತವರನ್ನು ನೆನಪಿಸಿಕೊಂಡರೆ ಬಾಳಿನಲ್ಲಿ ಗೆಲುವನ್ನು ಗಳಿಸಲು ಪ್ರೇರಣೆ ಲಭಿಸುತ್ತದೆ. ಸೋಲು ಯಶಸ್ಸಿನ ಹೆದ್ದಾರಿ. ಗೆಲ್ಲಬೇಕಾದರೆ ಅನೇಕ ಬಾರಿ ಸೋಲಿನ ಕಹಿಯನ್ನು ಅನುಭವಿಸಲೇಬೇಕು.

ಜೀವನದಲ್ಲಿ ಸೋಲಲು ಪ್ರಮುಖ ಕಾರಣಗಳು:

- ಕಷ್ಟಗಳನ್ನೇ ಬಯಸದಿರುವುದು
- ಯಾವುದೇ ಪ್ರಯತ್ನ ಮಾಡದಿರುವುದು
- ಜೀವನದಲ್ಲಿ ಮೌಲ್ಯಗಳಿಗೆ ಪ್ರಾಧಾನ್ಯತೆ ಇಲ್ಲದಿರುವುದು
- ಸಾಧಿಸುವೆನೆಂಬ ಅಹಂಕಾರ
- ಸೂಕ್ತವಾದ ಕಾರ್ಯಯೋಜನೆ ಇಲ್ಲದಿರುವುದು
- ಜೀವನದಲ್ಲಿ ಗುರಿ ಇಲ್ಲದಿರುವುದು.

ಜೀವನದಲ್ಲಿ ಗೆಲುವನ್ನು ಸಾಧಿಸಬೇಕಾದರೆ ಈ ಕೆಲವು ಸೂತ್ರಗಳನ್ನು ಪಾಲಿಸಬೇಕು.

- ಬದುಕಿನಲ್ಲಿ ಒಂದು ಆಸೆ, ಆಕಾಂಕ್ಷೆ ಇರಬೇಕು
- ಕಠಿಣ ಪರಿಶ್ರಮದಿಂದ ಕಷ್ಟಪಟ್ಟು ಗೆಲುವಿಗಾಗಿ ಪ್ರಯತ್ನಿಸಬೇಕು
- ಅರ್ಪಣಾ ಮನೋಭಾವವಿರಬೇಕು
- ಜವಾಬ್ದಾರಿಯುತನಾಗಿರಬೇಕು
- ಸಕಾರಾತ್ಮಕವಾಗಿ ಆಲೋಚಿಸಬೇಕು
- ಬದುಕಿನಲ್ಲಿ ಎದುರಾಗುವಂತಹ ತೊಡಕುಗಳನ್ನು ಧೈರ್ಯವಾಗಿ ಎದುರಿಸಿ ಅವುಗಳ ಮೇಲೆ ಜಯಸಾಧಿಸಲು ಪ್ರಯತ್ನಿಸಬೇಕು
- ಪ್ರತೀ ಯಶಸ್ಸಿನ ಹಿಂದೆ ಸೋಲಿನ ವ್ಯಥೆ ಇದೆ ಎಂಬ ಸತ್ಯವನ್ನು ಅಂಗೀಕರಿಸಬೇಕು.

# ಜೀವನದಲ್ಲಿ ಏನಾದರೂ ಸಾಧನೆ ಮಾಡಬೇಕೇ?...

✍ ಸಿಸ್ಟರ್ ಲವೀನಾ ಲೋಬೊ, ಯು.ಎಫ್.ಎಸ್.
ಮೈಸೂರು

ಒಬ್ಬ ವ್ಯಕ್ತಿ ತುಂಬಾ ಆಕರ್ಷಣೀಯವಾಗಿ ಚಿತ್ರ ಬಿಡಿಸುತ್ತಿದ್ದ. ಪ್ರತಿನಿತ್ಯ ಬೆಳಿಗ್ಗೆ ಮಾರುಕಟ್ಟೆಗೆ ಹೋಗಿ ಅವನು ತನ್ನ ಚಿತ್ರವನ್ನು ರೂ. 500/–ಗಳಿಗೆ ಮಾರಿ ಮನೆಗೆ ಬರುತ್ತಿದ್ದ. ಪ್ರತಿನಿತ್ಯದ ಈ ರೀತಿಯ ಕೆಲಸದಿಂದ ಅವನ ಆದಾಯ ತಿಂಗಳಿಗೆ ರೂ. 15,000/– ಆಗುತ್ತಿತ್ತು. ಇದೇ ಆತನ ದಿನಚರಿಯಾಗಿತ್ತು. ಪ್ರತಿದಿನ ಸಾಯಂಕಾಲ ಚಿತ್ರ ಬಿಡಿಸುವುದು, ಬೆಳಿಗ್ಗೆ ಎದ್ದು ಮಾರುಕಟ್ಟೆಗೆ ಹೋಗಿ ಅದನ್ನು ರೂ. 500 ಗಳಿಗೆ ಮಾರಿ ಮನೆಗೆ ಬರುವುದು. ಇದೇ ರೀತಿಯ ದಿನಚರಿಯಿಂದ ಅನೇಕ ವರ್ಷಗಳನ್ನು ಸವೆಸಿದ. ಆತನಿಗೆ ವಯಸ್ಸಾಯಿತು, ಚಿತ್ರ ಬಿಡಿಸಲು ಅಸಾಧ್ಯವಾಗುವ ಸ್ಥಿತಿಗೆ ತಲುಪಿದಾಗ ತನ್ನ ಮಗನನ್ನು ಕರೆದು ಇನ್ನು ಮುಂದೆ ನನಗೆ ಚಿತ್ರ ಬಿಡಿಸಲು ಕಷ್ಟ ಆಗುತ್ತದೆ. ಆದ್ದರಿಂದ ನೀನು ಈ ವಿದ್ಯೆಯನ್ನು ಕಲಿಯಬೇಕು ಎಂದು ಹೇಳಿ ಮಗನಿಗೆ ಚಿತ್ರ ಬಿಡಿಸುವ ಕಲೆಯನ್ನು ಕಲಿಸಲು ಆತುರನಾದ. ತನ್ನ ತಂದೆಯಿಂದ ಕಲಿತ ವೃತ್ತಿಯನ್ನು ತನ್ನ ಮಗನಿಗೆ ಸಂತೋಷದಿಂದ ಕಲಿಸುವ ಆಶಯ ಈತನದ್ದಾಗಿತ್ತು. ತನ್ನ ಮಗನ ಬಳಿಗೆ ಹೋಗಿ ತನ್ನ ಆಶಯವನ್ನು ವ್ಯಕ್ತಪಡಿಸಿದ ಹಾಗೂ ತನ್ನಿಂದ ಇನ್ನು ಮುಂದೆ ಚಿತ್ರ ಬಿಡಿಸುವ ವೃತ್ತಿಯನ್ನು ಮುಂದುವರಿಸಲು ಸಾಧ್ಯವಿಲ್ಲ, ತನ್ನ ಮಗನೇ ಈ ವೃತ್ತಿಯನ್ನು ಮುಂದುವರಿಸಬೇಕು ಎಂದು ತಿಳಿಸಿ ತನ್ನ ವಿದ್ಯೆಯನ್ನು ಮಗನಿಗೆ ಕಲಿಸಲು ಆರಂಭಿಸಿದ. ಬಣ್ಣವನ್ನು ಯಾವ ರೀತಿ ತೆಗೆದುಕೊಳ್ಳಬೇಕು, ಯಾವ ರೀತಿ ಹಚ್ಚಬೇಕು, ಚಿತ್ರವು ಆಕರ್ಷಣೀಯವಾಗಬೇಕಾದರೆ ಏನು ಮಾಡಬೇಕು, ಚಿತ್ರವನ್ನು ಹೇಗೆ ಮಾರಾಟ ಮಾಡಬೇಕು, ಈ ರೀತಿ ಎಲ್ಲವನ್ನೂ ಅಪ್ಪ ಮಗನಿಗೆ ಕಲಿಸಲು ಪ್ರಾರಂಭಿಸಿದ. ಕಾಲ ಕಳೆದಂತೆ ಮಗ ಎಲ್ಲವನ್ನು ಕಲಿತುಕೊಂಡ.

ಚಿತ್ರ ಬರೆಯುವುದನ್ನು ಕಲಿತ ಮಗ ಒಂದು ಚಿತ್ರವನ್ನು ಬಿಡಿಸಿ ಅದನ್ನು ಮಾರಾಟ ಮಾಡಲು ಮಾರುಕಟ್ಟೆಗೆ ಹೋಗಿ ಅದನ್ನು ಕೇವಲ 100 ರೂ.ಗಳಿಗೆ ಮಾರಿ ಮನೆಗೆ ಬಂದು ತಂದೆಗೆ ವಿಷಯವನ್ನು ತಿಳಿಸುತ್ತಾನೆ. ತನ್ನ ಮಗ ಮೊದಲ ಬಾರಿಗೆ ತಾನೇ ಚಿತ್ರವನ್ನು ಬಿಡಿಸಿ ಅದನ್ನು ಮಾರಿ ಹಣ ಗಳಿಸಿದ್ದರಿಂದ ತಂದೆ ತುಂಬಾ ಖುಷಿಪಡುತ್ತಾರೆ. ಆದರೆ ಮಗನ ಮುಖದಲ್ಲಿ ಸಂತೋಷವಿರಲಿಲ್ಲ. ತನ್ನ ನೋವನ್ನು ತಂದೆಗೆ ಈ ರೀತಿ ವಿವರಿಸುತ್ತಾನೆ. ನೀವು ನಿಮ್ಮ ಚಿತ್ರವನ್ನು 500 ರೂ.ಗಳಿಗೆ ಮಾರಿ ಬರುತ್ತಿದ್ದೀರಿ. ಆದರೆ ನನ್ನಿಂದ ನನ್ನ ಚಿತ್ರವನ್ನು 100 ರೂ.ಗಳಿಗೆ ಮಾತ್ರ ಮಾರಲು ಸಾಧ್ಯವಾಯಿತು ನನಗೆ ಇನ್ನೂ ಉತ್ತಮವಾಗಿ ಚಿತ್ರ ಬಿಡಿಸಲು ಕಲಿಸಿಕೊಡಿ. ನಿಮಗೆ ಗೊತ್ತಿರುವ ಯಾವುದೋ ಒಂದು ವಿಷಯ ನನಗೆ ಗೊತ್ತಿಲ್ಲ. ಅದನ್ನು ನಾನು ಕಲಿಯಬೇಕು ಎಂದು ತಿಳಿಸಿದ. ತಂದೆಯಿಂದ ಇನ್ನೂ ಹೆಚ್ಚಿನ ತರಬೇತಿಯನ್ನು ಪಡೆದ ಮಗ ಮತ್ತೊಂದು ಚಿತ್ರವನ್ನು ಬಿಡಿಸಿ ಬೆಳಿಗ್ಗೆ ಮಾರುಕಟ್ಟೆಗೆ ಹೋಗಿ ಅದನ್ನು 200 ರೂ. ಗಳಿಗೆ ಮಾರಿ ಮನೆಗೆ ಹಿಂದಿರುಗುತ್ತಾನೆ. ಮತ್ತೊಮ್ಮೆ ತಂದೆಯ ಬಳಿ ಬಂದು ನನಗೆ ಇನ್ನೂ ಸಂತೋಷವಾಗಿಲ್ಲ. ಏಕೆಂದರೆ ನನಗೆ ನನ್ನ ಚಿತ್ರವನ್ನು ಕೇವಲ 200 ರೂ.ಗಳಿಗೆ ಮಾತ್ರ ಮಾರಲು ಸಾಧ್ಯವಾಯಿತು. ಆದರೆ ನೀವು 500 ರೂ.ಗಳಿಗೆ ಮಾರಾಟ ಮಾಡುತ್ತಿದ್ದೀರಿ, ನನಗೆ ಗೊತ್ತಿಲ್ಲದ ಯಾವುದೋ ಒಂದು ವಿಚಾರ ನಿಮಗೆ ಮಾತ್ರ ತಿಳಿದಿದೆ. ನನಗೆ ದಯವಿಟ್ಟು ಅದನ್ನು ತಿಳಿಯಪಡಿಸಿ ಎಂದು ಬೇಡಿಕೊಂಡ. ತಂದೆಯಿಂದ ಮತ್ತೆ ತರಬೇತಿ ಪಡೆದ ಮಗ ಮತ್ತೊಂದು ಚಿತ್ರವನ್ನು ಬಿಡಿಸಿ ಈ ಬಾರಿ 300 ರೂ.ಗಳಿಗೆ ಮಾರಾಟ ಮಾಡುತ್ತಾನೆ. ಆದರೆ ಮಗನಿಗೆ ತೃಪ್ತಿಯಿಲ್ಲ. ಮತ್ತೆ ತನ್ನ ತಂದೆಯ ಬಳಿ ಹೋಗಿ ನನಗೆ ನೀವು ಇನ್ನೂ ಕಲಿಸಬೇಕಾಗಿದೆ ಎಂದು ಮತ್ತೆ ತಂದೆಯನ್ನು ವಿನಂತಿಸಿದ. ತಂದೆ ಮಗನಿಗೆ ಇನ್ನೂ ಹೆಚ್ಚಿನ ಮಾಹಿತಿಯನ್ನು ನೀಡಿದ. ಹೀಗೆ ತರಬೇತಿಯನ್ನು ಪಡೆದ ಮಗ ಒಂದು ದಿನ ತಾನು ಬಿಡಿಸಿದ ಚಿತ್ರವನ್ನು ಮಾರುಕಟ್ಟೆಯಲ್ಲಿ ರೂ. 700ಗಳಿಗೆ ಮಾರಲು ಶಕ್ತನಾದ. ತನ್ನ ಸಾಧನೆಯಿಂದ ಸಂತುಷ್ಟನಾದ ಮಗ ತಂದೆಯ ಬಳಿ ಬಂದು ತನ್ನ ಸಂತೋಷವನ್ನು ತಂದೆಯ ಬಳಿ ಹಂಚಿಕೊಂಡ. ತಂದೆ ಸಂತೋಷದಿಂದ ಬಾ ನಿನ್ನ ಚಿತ್ರವನ್ನು ರೂ. 1,000ಗಳಿಗೆ ಮಾರಾಟವಾಗುವ ರೀತಿಯಲ್ಲಿ ಚಿತ್ರ ಬಿಡಿಸಲು ಇನ್ನೂ ಕೆಲವು ವಿಷಯಗಳನ್ನು ಕಲಿಸುತ್ತೇನೆ ಎಂದು ಮಗನಿಗೆ ಉತ್ತೇಜನ ನೀಡಿದ. ತಕ್ಷಣ ಮಗ ತಂದೆಯನ್ನು ಉದ್ದೇಶಿಸಿ, ನಿನ್ನ ಜೀವಮಾನದಲ್ಲಿ ರೂ. 500ಗಳಿಗಿಂತ ಹೆಚ್ಚಿನ ಮೊತ್ತಕ್ಕೆ ಚಿತ್ರವನ್ನು ಮಾರಲು ನಿನ್ನಿಂದ ಸಾಧ್ಯವಾಗಿಲ್ಲ ಎಂದ ಮೇಲೆ ರೂ. 1,000ಗಳಿಗೆ ಚಿತ್ರವನ್ನು ಮಾರುವ ವಿದ್ಯೆಯನ್ನು ನೀನು ನನಗೆ ಕಲಿಸುವುದಾದರೂ ಹೇಗೆ. ನಾನು ರೂ. 700ಗಳಿಗೆ ಮಾರಾಟವಾಗುವಂತಹ ಚಿತ್ರವನ್ನು ಬಿಡಿಸಲು ಕಲಿತಿದ್ದೇನಲ್ಲ. ರೂ. 500ಗಳಿಗೆ ಚಿತ್ರ ಮಾರುವವನಿಂದ ರೂ. 700ಗಳಿಗೆ ಚಿತ್ರ ಮಾರುವವನು ಕಲಿಯುವುದೇನಿದೆ ಎಂದು ತಂದೆಗೆ ಹೀಯಾಳಿಸಿದ. ಆಗ ತಂದೆ ಹೀಗೆನ್ನುತ್ತಾರೆ. ಮಗನೇ ಇನ್ನು ಮುಂದೆ ನಿನ್ನ ಚಿತ್ರ ರೂ. 700ಗಳಿಗಿಂತ ಹೆಚ್ಚಿನ ಮೊತ್ತಕ್ಕೆ ಮಾರಾಟವಾಗುವುದಿಲ್ಲ. ಕಾರಣ ನೀನು ಕಲಿಯುವುದನ್ನು ನಿಲ್ಲಿಸಿಬಿಟ್ಟೆ. ನಾನು ಕೂಡ ನನ್ನ ತಂದೆಯಿಂದ ಚಿತ್ರ ಬಿಡಿಸುವ ಕಲೆಯನ್ನು ಕಲಿತು ಚಿತ್ರ ಬಿಡಿಸಿ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಪ್ರಾರಂಭಿಸಿದಾಗ ನಿನ್ನಂತೆಯೇ ಕಡಿಮೆ ಮೊತ್ತಕ್ಕೆ

ಮಾರಾಟ ಮಾಡಿ ಬಂದು ಹೆಚ್ಚಿನ ಕಲೆಯನ್ನು ಕಲಿತೆ. ಒಂದು ದಿನ ನಾನು ಬಿಡಿಸಿದ ಚಿತ್ರವನ್ನು ರೂ. 500ಗಳಿಗೆ ಮಾರಾಟ ಮಾಡಿ ಬಂದು ತಂದೆಯ ಬಳಿ ನನ್ನ ಸಂತೋಷವನ್ನು ವ್ಯಕ್ತಪಡಿಸಿದೆ. ತಂದೆ ಬಾ ನಿನ್ನ ಚಿತ್ರವನ್ನು ರೂ. 700ಗಳಿಗೆ ಮಾರಾಟ ಮಾಡುವ ವಿದ್ಯೆಯನ್ನು ಕಲಿಸುತ್ತೇನೆ ಎಂದಾಗ ನಾನೂ ನಿನ್ನಂತೆಯೇ ನೀವು ನಿಮ್ಮ ಚಿತ್ರವನ್ನು ರೂ. 300 ಗಳಿಗಿಂತಲೂ ಹೆಚ್ಚಿನ ಮೊತ್ತಕ್ಕೆ ಮಾರಲು ಸಾಧ್ಯವಾಗಿಲ್ಲ ಅಂದಮೇಲೆ ರೂ. 500ಗಳಿಗೆ ಚಿತ್ರವನ್ನು ಮಾರಿದವರು ರೂ. 300ಗಳಿಗೆ ಚಿತ್ರವನ್ನು ಮಾರಿದವರಿಂದ ಕಲಿಯುವುದು ಏನಿದೆ ಎಂದು ಹಠದಿಂದ ಕಲಿಯುವುದನ್ನೇ ನಿಲ್ಲಿಸಿದೆ. ಅಂದಿನಿಂದ ಈವರೆಗೆ ರೂ. 500ಗಳಿಗಿಂತಲೂ ಹೆಚ್ಚಿನ ಮೊತ್ತಕ್ಕೆ ಚಿತ್ರವನ್ನು ಮಾರಲು ಸಾಧ್ಯವಾಗಲೇ ಇಲ್ಲ ಎಂದು ಮಗನಿಗೆ ತಿಳಿಸಿದ. ನನ್ನ ಸಾಧನೆಯಿಂದ ನನ್ನಲ್ಲಿ ಅಹಂಕಾರ ತುಂಬಿಕೊಂಡಿತು. ಅಹಂಕಾರದಿಂದ ಕಲಿಯುವುದನ್ನೇ ನಿಲ್ಲಿಸಿಬಿಟ್ಟೆ.

ಜೀವನದಲ್ಲಿ ಕಲಿಯುವುದನ್ನು ನಿಲ್ಲಿಸಿದಾಗ ಏನನ್ನಾದರೂ ಸಾಧಿಸಬೇಕು ಎಂಬ ಹಂಬಲ ಕಣ್ಮರೆಯಾಗುತ್ತದೆ. ಅಹಂಕಾರ ತುಂಬಿದ ಬಾಳು ಹೆಚ್ಚಿನ ವಿಷಯಗಳನ್ನು ಕಲಿಯಲು ಅವಕಾಶ ನೀಡುವುದಿಲ್ಲ. ಅಹಂಕಾರ ಕಲಿಕೆಯ ಬಲುದೊಡ್ಡ ಶತ್ರು. ಅಹಂಕಾರ ಮಾನವನನ್ನು ನಿಧಾನವಾಗಿ ಅವನತಿಯೆಡೆಗೆ ಕೊಂಡೊಯ್ಯುತ್ತದೆ. ಜೀವನದಲ್ಲಿ ಸದಾ ಉನ್ನತಿಗೇರಬೇಕಾದರೆ ಜೀವನದ ಕೊನೆಯವರೆಗೆ ಕಲಿಕೆಗೆ ಅವಕಾಶ ನೀಡಬೇಕು. ನಮ್ಮಲ್ಲಿರುವ ನ್ಯೂನತೆಗಳನ್ನು ಗುರುತಿಸಿಕೊಂಡು ಅವುಗಳನ್ನು ಸರಿಪಡಿಸಲು ಶ್ರಮಿಸಬೇಕು. ಯಶಸ್ಸು ಲಭಿಸಿದಾಗ ಅಹಂಕಾರಿಗಳಾಗದೆ ಇನ್ನೂ ಹೆಚ್ಚಿನ ಸಾಧನೆಯತ್ತ ಚಿತ್ತವನ್ನು ಕೇಂದ್ರೀಕರಿಸಬೇಕು. ಆಗ ಮಾತ್ರ ಸಾಧನೆಯ ಮೆಟ್ಟಿಲನ್ನು ಏರುತ್ತಲೇ ಹೋಗಬಹುದು.

# ಲೋಕದಲ್ಲಿ ಸ್ನೇಹ ಚಿರಂಜೀವಿ

✍ ಕಾವ್ಯ ಪಿ.
ದ್ವಿತೀಯ ಬಿ. ಎ.
ಹಾರ್ನಹಳ್ಳಿ



ಕವಿ ಸತ್ತರೂ ಕವಿತೆ ಸಾಯಲ್ಲ
ಕಲಾವಿದ ಸತ್ತರೂ ಕಲೆ ಸಾಯಲ್ಲ
ಶಿಲ್ಪಿ ಸತ್ತರೂ ಶಿಲೆ ಸಾಯಲ್ಲ
ಒಂದು ವೇಳೆ ನಾವೆಲ್ಲರೂ ಸತ್ತರೂ
ನಮ್ಮ ನಿಮ್ಮೆಲ್ಲರ ಸ್ನೇಹ ಸಾಯಲ್ಲ

ಈ ಪ್ರಪಂಚದಲ್ಲಿ ಬೆಲೆ ಕಟ್ಟಲಾಗದ ಮೌಲ್ಯಗಳೆಂದರೆ ಪ್ರೀತಿ ಹಾಗೂ ಸ್ನೇಹ. ಸ್ನೇಹ ಎಂದರೆ ಅದನ್ನು ಬರೀ ಬಾಯಿ ಮಾತಲ್ಲಿ ಹೇಳಿ ಮುಗಿಸುವಂಥದಲ್ಲಾ, ಅದನ್ನು ಅನುಭವಿಸಬೇಕು, ಗೌರವಿಸಬೇಕು, ಕೆಲವು ಬಾರಿ ಅದನ್ನು ಕಳೆದುಕೊಳ್ಳುವ ಸಂದರ್ಭ ಬಂದಾಗ ಅದನ್ನು ನಿವಾರಿಸಿ ಫ್ರೆಂಡ್‌ಶಿಪ್‌ನ್ನು ಭದ್ರಮಾಡಿಕೊಳ್ಳಬೇಕು.

ಫ್ರೆಂಡ್‌ಶಿಪ್ ಏನೋ ಶುರುವಾಯ್ತು. ಆದರೆ ಅದನ್ನು ಕಾಪಾಡೋದು ಹೇಗೆ? ಫ್ರೆಂಡ್‌ಶಿಪ್ ಅನ್ನೋದು ಒಂದು ಮಧುರವಾದ ಬಾಂಧವ್ಯ. ಈ ಫ್ರೆಂಡ್‌ಶಿಪ್ ಅನ್ನೋದು

ಆಕಾಶದಂತೆ ವಿಶಾಲವಾಗಿ
ಸೂರ್ಯನಂತೆ ಪ್ರಕಾಶಮಾನವಾಗಿ
ಹೂವಿನಂತೆ ಸುಂದರವಾಗಿ
ನಕ್ಷತ್ರಗಳಂತೆ ಚಿರಕಾಲ ಹೊಳೆಯುವಂತದ್ದು

ಪ್ರಪಂಚದಲ್ಲಿ ಒಳ್ಳೆಯವರು, ಕೆಟ್ಟವರು, ಶತ್ರುಗಳು, ಮಿತ್ರರು, ಆಪ್ತರು ಯಾರೆಲ್ಲಾ ಇರುತ್ತಾರೋ ಅವರೆಲ್ಲಾ ಬಾಳಿನಲ್ಲಿ ಫ್ರೆಂಡ್ಸ್.

ಪ್ರೇಮಿಗಳು ಸತ್ತರು ಅಂತಾರೆ ಆದರೆ
ಪ್ರೀತಿ ಸತ್ತು ಹೋಯಿತು ಅಂತ ಯಾರಾದರೂ ಹೇಳ್ತಾರಾ? ಪ್ರಪಂಚದಲ್ಲಿ ಪ್ರೀತಿ ಮಾಡಿ ಮೋಸ ಹೋದೆ ಅಂತಾರೇ? ಆದರೆ ಸ್ನೇಹ ಮಾಡಿ ಮೋಸ ಹೋದೆ ಅಂತ ಯಾರೂ ಹೇಳಲ್ಲ. ಪ್ರಪಂಚದಲ್ಲಿ ಸ್ನೇಹ ಅನ್ನೋದು ಚಿರಂಜೀವಿ. ಅದಕ್ಕೆ ಎಂದಿಗೂ ಸಾವಿಲ್ಲ. ಸ್ನೇಹವನ್ನು ಯಾರೂ ಯಾರಿಂದಲೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಸ್ನೇಹ ಅನ್ನೋದು ಬಲವಂತವಲ್ಲ, ಮನಪೂರ್ವಕವಾದದ್ದು.

ಸ್ನೇಹ ಅನ್ನೋದು ಒಂದು ಮೌಲ್ಯಯುತವಾದ, ಒಂದು ಮಧುರವಾದ ಬಾಂಧವ್ಯ. "ಮುತ್ತು ಕಳೆದರೆ ಸಿಕ್ಕೀತು, ಹೊತ್ತು ಕಳೆದರೆ ಸಿಕ್ಕೀತೆ'? ಹಾಗೆಯೇ ಫ್ರೆಂಡ್‌ಶಿಪ್ ಕೂಡ. ಫ್ರೆಂಡ್ಸ್‌ಗಳು ಒಬ್ಬರ ಮೇಲೆ ಇಟ್ಟಿರುವ ನಂಬಿಕೆಯನ್ನು ಉಳಿಸಿಕೊಳ್ಳಬೇಕು. ಅದನ್ನು ಅಳಿಸಿಕೊಳ್ಳಬಾರದು. ನಂಬಿಕೆಯನ್ನು ಉಳಿಸಿಕೊಳ್ಳದಿದ್ದರೆ ಮತ್ತೆ ಯಾವತ್ತೂ ಅದನ್ನು ಗಳಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ನಗುವ ಗುಲಾಬಿ ಹಿಂದೆ ಮುಳ್ಳು ಎಂಬ ನೋವಿರುತ್ತದೆ. ಹಾಗೆಯೇ ನಗಿಸುವವರ ಮನದಲ್ಲಿ ನಗಲಾರದಷ್ಟು ನೋವು ಇರುತ್ತೆ...

ಉಸಿರು ನಿಲ್ಲುವ ಸಮಯದಲ್ಲಿ ಅವನ/ಅವಳ ಮುಖ ನೋಡಿ ಸಾಯಬೇಕು ಅನ್ನೋದು ಪ್ರೀತಿ. ಆದರೆ... ಉಸಿರು ನಿಲ್ಲುವ ಸಮಯದಲ್ಲೂ ಉಸಿರು ಕೊಟ್ಟು ಕಾಪಾಡಬೇಕು ಅನ್ನೋದು ಸ್ನೇಹ. That is Friendship.


# ಸಂಸ್ಥೆಯ ಮೂಲಕ ಬಾಳಿನಲ್ಲಿ ಬದಲಾವಣೆ



✍ ಸುಮಿತ್ರ
ಚಿತ್ರದುರ್ಗ

ನಾನು ಚಿತ್ರದುರ್ಗದ ನಿವಾಸಿ ಸುಮಿತ್ರ. ಎಸ್.ಎಮ್.ಎಸ್.ಎಸ್.ಸಂಸ್ಥೆಯ 30 ವರ್ಷಗಳ ನಿಸ್ವಾರ್ಥ ಜನಪರ ಸೇವೆಗಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಾ ಸಂಸ್ಥೆಯ ಮುಖಾಂತರ ನನ್ನ ಬಾಳಿನಲ್ಲಿ ಆದ ಬದಲಾವಣೆಗಳನ್ನು ಹಂಚಿಕೊಳ್ಳಲು ಇಷ್ಟಪಡುತ್ತೇನೆ. ನಾನು ಹುಟ್ಟಿ ಬೆಳೆದದ್ದು ತೆಲಂಗಾಣ ರಾಜ್ಯದ ಹೈದರಾಬಾದ್‌ನಲ್ಲಿ. 1999ರಲ್ಲಿ ಮೈಸೂರಿಗೆ ಬಂದೆ. ಅಲ್ಲಿ ನನ್ನ ವಿವಾಹವಾದ ಬಳಿಕ ಕರ್ನಾಟಕದ ಚಿತ್ರದುರ್ಗದಲ್ಲಿ ನನ್ನ ಕುಟುಂಬ ಜೀವನವನ್ನು ಪ್ರಾರಂಭಿಸಿದೆ. ನನಗೆ 3 ಮಕ್ಕಳಿದ್ದಾರೆ. 2003ರಲ್ಲಿ ಎಸ್.ಎಮ್.ಎಸ್.ಎಸ್.ಸಂಸ್ಥೆ ಪ್ರೇರಿತ ಸ್ವ-ಸಹಾಯ ಸಂಘಕ್ಕೆ ಸೇರಿದ ಮೇಲೆ ಬಾಳಿನಲ್ಲಿ ಮಹತ್ತರ ಬದಲಾವಣೆ ಆಯಿತು.

ನನ್ನ ವಿದ್ಯಾಭ್ಯಾಸವನ್ನು ತೆಲುಗು ಮೀಡಿಯಂನಲ್ಲಿ ಮಾಡಿದ್ದರಿಂದ ನನಗೆ ಕನ್ನಡ ಸರಿಯಾಗಿ ಓದುವುದಕ್ಕೂ, ಮಾತನಾಡುವುದಕ್ಕೂ ಬರುತ್ತಿರಲಿಲ್ಲ. ಆದರೂ ಸಂಘದಲ್ಲಿ ನೀಡಿದ ಮಾಹಿತಿಯನ್ನು ಕೇಳಿ ಪ್ರೇರಿತಳಾಗಿ ನಾನು ಕೇವಲ ಕುಟುಂಬಕ್ಕೆ ಸೀಮಿತವಾಗಿರದೆ ಸ್ವಾವಲಂಬಿಯಾಗಿ, ಸ್ವತಂತ್ರಳಾಗಿ ಬದುಕಬೇಕು, ನಾನು ಸಮಾಜದಲ್ಲಿ ಗುರುತಿಸಿಕೊಳ್ಳುವಂತವಳಾಗಬೇಕು ಅನ್ನುವ ಆಸೆ ಹುಟ್ಟಿತು. ಎಸ್.ಎಮ್.ಎಸ್.ಎಸ್.ಸಂಸ್ಥೆಯಿಂದ ಅನೇಕ ಮಾಹಿತಿಗಳನ್ನು ಪಡೆದುಕೊಂಡೆ. 2004ರಿಂದ ಸತತವಾಗಿ 8 ಬಾರಿ ಸಂಘದ ಖಜಾಂಜಿಯಾಗಿ ಸೇವೆ ಸಲ್ಲಿಸಿದ್ದೇನೆ. ನಾನು ಎಲ್ಲಾ ವಿಷಯಗಳನ್ನು ತೆಲುಗಿನಲ್ಲಿ ಎಂಟ್ರಿ ಮಾಡಿಕೊಂಡು ನಂತರ ಮನೆಗೆ ಹೋದ ಮೇಲೆ ನನ್ನ ಯಜಮಾನರ ಹತ್ತಿರ ಕನ್ನಡದಲ್ಲಿ ಪುಸ್ತಕಕ್ಕೆ ಬರೆಸುತ್ತಿದ್ದೆ. ಕ್ರಮೇಣ ನಾನು ಕಲಿಯಬೇಕು ಎಂಬ ಛಲ ಹುಟ್ಟಿತು. ಸಂಘದಲ್ಲಿ ವಯಸ್ಕರ ಶಿಕ್ಷಣದ ಬಗ್ಗೆ ಮಾಹಿತಿ ದೊರೆತಾಗ ನನಗೂ ಓದಬೇಕು ಅನಿಸಿತು. ನಾನು ಕನ್ನಡ ಕಲಿತು 2012ನೇ ಇಸವಿಯಲ್ಲಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆ ಬರೆದು ಉತ್ತೀರ್ಣಳಾಗಿದ್ದೇನೆ. ಕನ್ನಡ ಕಲಿತು ಪರೀಕ್ಷೆ ಬರೆದು ಪಾಸ್ ಆಗಿರುವುದು ನನ್ನಲ್ಲಿ ಆತ್ಮಸ್ಥೈರ್ಯವನ್ನು ಹೆಚ್ಚಿಸಿತು. ನಾವು ಏನನ್ನಾದರೂ ಸಾಧಿಸಬಹುದು ಎಂದು ನಮ್ಮನ್ನು ಸತತವಾಗಿ ಪ್ರೋತ್ಸಾಹಿಸಿ ಮಾಹಿತಿಗಳನ್ನು ನೀಡುತ್ತಿರುವ ಸಂಸ್ಥೆಗೆ ನಾನು ಚಿರಋಣಿ.



13215929 Q005574
GOVERNMENT OF KARNATAKA
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ
Karnataka Secondary Education Examination Board
This is to certify that the candidate has PASSED S.S.L.C. Examination.
Register No.: 20120637875 — Medium of Instruction: KANNADA
Month & Year: APRIL-2013 — Student Type: Private Repeater
Name: SUMITHRA
Father's Name: ASADISUBBARAO
Mother's Name: BHAGYAMMA
Date of Birth: 13-04-1982 THIRTEENTH APRIL NINETEEN EIGHTY TWO — Gender: GIRL

| SUBJECTS | MAX. | MIN. | MARKS OBTAINED |
|---|---|---|---|
| FIRST LANGUAGE: KANNADA | 125 | 44 | 74* |
| SECOND LANGUAGE: ENGLISH | 100 | 35 | 56* |
| THIRD LANGUAGE: HINDI | 100 | 35 | 65* |
| MATHEMATICS | 100 | 35 | 30 |
| SCIENCE | 100 | 35 | 53* |
| SOCIAL SCIENCE | 100 | 35 | 49* |
| TOTAL MARKS | 625 | 219 | 327 |

CLASS OBTAINED: 327 PASS (52.32%)
TOTAL MARKS OBTAINED IN WORDS: THREE HUNDRED TWENTY SEVEN ONLY — SCHOOL CODE: 00056
SCHOOL & ADDRESS: SRI MADAKARI NAYAKA HIGH SCHOOL, CHITRADURGA TQ, CHITRADURGA DISTRICT, 577501
DATE: 06-05-2013
SECRETARY, KARNATAKA SECONDARY EDUCATION EXAMINATION BOARD, BANGALORE



270544
ಕರ್ನಾಟಕ ಸರ್ಕಾರ
GOVERNMENT OF KARNATAKA
ಪದವಿ ಪೂರ್ವ ಶಿಕ್ಷಣ ಇಲಾಖೆ
DEPARTMENT OF PRE-UNIVERSITY EDUCATION
ಪ್ರಮಾಣ ಪತ್ರ CERTIFICATE
This is to certify that the candidate mentioned below has completed the course and passed the second year Pre-University Examination with the following details:
Candidate's Name: SUMITHRA — Month/Year: MARCH 2018
Mother's Name: BHAGYAMMA — Register No: 247399
Father's Name: ASADISUBBARAO

| Subject | Register No | Month/Year | Max Marks | Marks | | Total | In words |
|---|---|---|---|---|---|---|---|
| KANNADA | 247399 | MAR 2018 | 100 | 43 | | 43 | FOUR THREE |
| ENGLISH | 247399 | MAR 2018 | 100 | 50 | | 50 | FIVE ZERO |
| HISTORY | 247399 | MAR 2018 | 100 | 43 | | 43 | FOUR THREE |
| ECONOMICS | 247399 | MAR 2018 | 100 | 41 | | 41 | FOUR ONE |
| SOCIOLOGY | 247399 | MAR 2018 | 100 | 55 | | 55 | FIVE FIVE |
| POLITICAL SC | 247399 | MAR 2018 | 100 | 39 | | 39 | THREE NINE |

College Code: GG004 — Total: 271 — 271
In words: TWO SEVEN ONE — Class Obtained: THIRD
College: GOVT PU COLLEGE FOR BOYS, POONA - BNG ROAD, CHITRADURGA 577501
Student Type: PRIVATE
Medium: KANNADA
Date of Result: 01.05.2018
DIRECTOR, Department of Pre-University Education

ಸ್ವ–ಉದ್ಯೋಗದ ಬಗ್ಗೆ ಉತ್ತಮ ತರಬೇತಿಯನ್ನು ನೀಡಿ ನಮ್ಮ ಕುಟುಂಬಗಳನ್ನು ಅಭಿವೃದ್ಧಿ ಪಡಿಸಲು ನಮಗೆ ಸಂಸ್ಥೆ ಆಸರೆಯಾಗಿ ನಿಂತಿದೆ. ಸಂಸ್ಥೆಯ ಮುಖಾಂತರ ಎಸ್.ಎಸ್.ಎಲ್.ಸಿ. ಮುಗಿಸಿದ ನಂತರ ಸಾಗರದ ಬೆಥನಿ ಸಂಸ್ಥೆಯಲ್ಲಿ ಎನ್.ಟಿ.ಸಿ. ಶಿಕ್ಷಣ ಮುಗಿಸಿಕೊಂಡು ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಈ ಕೆಲಸದ ಜೊತೆಗೆ ನನ್ನ ಶಿಕ್ಷಣವನ್ನು ಮುಂದುವರಿಸಲು ಯೋಚಿಸಿ 2017–2018ನೇ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆ ಬರೆದು ಎಲ್ಲಾ ವಿಷಯಗಳಲ್ಲಿ ತೇರ್ಗಡೆಯಾಗಿರುತ್ತೇನೆ. ನನ್ನ ಮಗಳನ್ನು ಐ.ಸಿ.ಡಿ.ಪಿ. ಫಲಾನುಭವಿಯಾಗಿ ಆಯ್ಕೆ ಮಾಡಿದುದಕ್ಕಾಗಿ ಹಾಗೂ ನನ್ನ ಕುಟುಂಬವನ್ನು ಸೇವ್ ಎ ಫ್ಯಾಮಿಲಿ ಪ್ಲ್ಯಾನ್ ಫಲಾನುಭವಿಯಾಗಿ ಆಯ್ಕೆ ಮಾಡಿಕೊಂಡು ನನ್ನ ಕುಟುಂಬದ ಚಿತ್ರಣವನ್ನೇ ಬದಲಾಯಿಸಿದ ಸಂಸ್ಥೆಗೆ ನನ್ನ ಕೃತಜ್ಞತೆಗಳು.

ನಾನು 2 ವರ್ಷ ಸಂಸ್ಥೆಯಲ್ಲಿ ಸ್ವಯಂಸೇವಕಿಯಾಗಿ ಸೇವೆ ಸಲ್ಲಿಸಿದ್ದೇನೆ. ನಾನು ಸಂಸ್ಥೆಯ ಒಬ್ಬ ಸದಸ್ಯಳು ಎಂದು ಗುರುತಿಸಿಕೊಳ್ಳಲು ನನಗೆ ತುಂಬಾ ಖುಷಿಯಾಗುತ್ತಿದೆ. ನನ್ನ ಮಕ್ಕಳಲ್ಲಿ ಮೊದಲನೆಯವಳು ಪ್ರಥಮ ಬಿಕಾಂ ಓದುತ್ತಿದ್ದರೆ ಹಿರಿಯ ಮಗ ಗುರು ತರಬೇತಿಯನ್ನು ಪಡೆಯಲು ಬೆಂಗಳೂರಿನಲ್ಲಿ ಮೈನರ್ ಸೆಮಿನರಿಯಲ್ಲಿದ್ದಾನೆ, ಕಿರಿಯ ಮಗ 9ನೇ ತರಗತಿಯಲ್ಲಿ ಓದುತಿದ್ದಾನೆ. 30 ವರ್ಷಗಳ ಕಾಲ ಹಲವಾರು ಮಕ್ಕಳಿಗೆ ವಿದ್ಯಾಭ್ಯಾಸವನ್ನು ನೀಡುತ್ತಾ, ಬಡ ಕುಟುಂಬಗಳಿಗೆ ಸೇವ್ ಎ ಫ್ಯಾಮಿಲಿ ಪ್ಲ್ಯಾನ್ ಮುಖಾಂತರ ಸಂಸ್ಥೆ ನೀಡುತ್ತಿರುವ ಸೇವೆಗಾಗಿ ನನ್ನ ಹಾಗೂ ನನ್ನ ಕುಟುಂಬದ ಪರವಾಗಿ ವಂದನೆಗಳನ್ನು ಸಲ್ಲಿಸಿ ಶುಭವನ್ನು ಹಾರೈಸುತ್ತೇನೆ. ಈ ಸಂಸ್ಥೆ ಇನ್ನೂ ಬೆಳೆಯಲಿ. ಸಂಸ್ಥೆಯ ಅಧ್ಯಕ್ಷರು, ನಿರ್ದೇಶಕರು, ಸಂಸ್ಥೆಯಲ್ಲಿ ಸೇವೆ ನೀಡುತ್ತಿರುವ ಎಲ್ಲರಿಗೂ ದೇವರು ಉತ್ತಮ ಆರೋಗ್ಯವನ್ನು ದಯಪಾಲಿಸಲಿ ಎಂದು ಪ್ರಾರ್ಥಿಸುತ್ತೇನೆ. ಸಂಸ್ಥೆಯ ಮುಖಾಂತರ ನಾನು ಇಂದು ಇಂತಹ ಜೀವನವನ್ನು ಜೀವಿಸಲು ಸಾಧ್ಯವಾಗಿದೆ. ಪ್ರಸ್ತುತ ನಮ್ಮ ಸಂಘದಲ್ಲಿ ನಾನು ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತಿದ್ದೇನೆ. ಧರ್ಮಕೇಂದ್ರಕ್ಕೆ ನನ್ನ ಕೈಲಾದ ಸಹಾಯವನ್ನು ನೀಡುತ್ತಿದ್ದೇನೆ. ಧರ್ಮಕೇಂದ್ರದಲ್ಲಿ ಪಾಲನಾ ಪರಿಷತ್ತಿನ ಸದಸ್ಯಳಾಗಿ, ಸಂಘಟನೆಯ ಕಾರ್ಯದರ್ಶಿಯಾಗಿ, ಕ್ಯಾಥೊಲಿಕ್ ಅಸೋಸಿಯೇಷನ್ ಉಪಾಧ್ಯಕ್ಷೆಯಾಗಿ, ಸಮುದಾಯದಲ್ಲಿ ಪಾಲನಾ ಪರಿಷತ್ತಿನ ಸದಸ್ಯೆಯಾಗಿ, ಧರ್ಮೋಪದೇಶ ತರಗತಿಯ ಶಿಕ್ಷಕಿಯಾಗಿ ನಾನು ಸೇವೆ ಸಲ್ಲಿಸುತಿದ್ದೇನೆ. ನಾನು ಗಾಯನ ವೃಂದದಲ್ಲಿ ಹಾಗೂ ಮರಿಯ ಸೈನ್ಯದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿದ್ದೇನೆ. ನಾನು ಈ ಮಟ್ಟಕ್ಕೆ ಬೆಳೆದು ನಿಲ್ಲಲು ನನಗೆ ಸಂಪೂರ್ಣ ಬೆಂಬಲವನ್ನು ನೀಡಿದ ಸಂಸ್ಥೆಗೆ ನಾನು ಆಭಾರಿಯಾಗಿದ್ದೇನೆ.

**ಕೆ. ಸಿ. ಬಸವರಾಜ್**
ನಿರ್ದೇಶಕರು
**ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಸಮಾಜ ಪರಿವರ್ತನಾ ಟ್ರಸ್ಟ್ (ರಿ)**
**ಕೆ. ಹೆಚ್. ಬಿ. ಮುಖ್ಯ ರಸ್ತೆ, ರವೀಂದ್ರನಗರ, ಶಿವಮೊಗ್ಗ**

**ಕೆ. ಬದರೀಶ್**
**ಚೈತನ್ಯ ರೂರಲ್ ಡೆವೆಲಪ್‌ಮೆಂಟ್ ಸೊಸೈಟಿ**
**ಶಿವಮೊಗ್ಗ**

ನವೀನ್ ಎಂ.ಹೆಚ್
ಮೊ : 9449129608
**ಮೇಳಿಗೆ ಆಗ್ರೋ ಸರ್ವೀಸ್**
ವಿಜಯ್ ಎಂ.ಹೆಚ್
ಮೊ : 9482927110
ಪುರಪಂಚಾಯತ್ ಮಳಿಗೆ ಸಂಖ್ಯೆ 6, ಕಾರ್ಪೊರೇಶನ್ ಬ್ಯಾಂಕ್ ಪಕ್ಕ, ಆಜಾದ್ ರೋಡ್, ತೀರ್ಥಹಳ್ಳಿ
ನಮ್ಮಲ್ಲಿ ಕೃಷಿ ಉಪಕರಣಗಳು, ಪೈಪ್ಸ್, ಫಿಟಿಂಗ್ಸ್ ಉಪಕರಣಗಳು, ಪಂಪ್ ಸೆಟ್‌ಗಳು, ಕೃಷಿ ಸಲಕರಣೆಗಳು ಮತ್ತು ಕಳೆಕೊಚ್ಚು ಯಂತ್ರಗಳು, ಔಷಧಿ ಸಿಂಪಡಿಸುವ ಯಂತ್ರ, ಮರಕೊಯ್ಯುವ ಯಂತ್ರಗಳ ಮಾರಾಟ ಹಾಗೂ ರಿಪೇರಿ ಮತ್ತು ಬಿಡಿಭಾಗಗಳು ದೊರೆಯುತ್ತದೆ.

# ಸೇವೆಯ ಮೂಲಕ ನಾಯಕತ್ವ



✍ ವಂ. ಫಾದರ್ ಫ್ರಾಂಕ್ಲಿನ್ ಡಿಸೋಜ
ಕುಟುಂಬ ಸಮಾಲೋಚನಾ ನಿರ್ದೇಶಕರು
ಶಿವಮೊಗ್ಗ ಧರ್ಮಕ್ಷೇತ್ರ

"ನಾನು ಬಂದದ್ದು ಸೇವೆ ಮಾಡಿಸಿಕೊಳ್ಳಲು ಅಲ್ಲ ಸೇವೆ ಮಾಡಲು" ಎಂಬ ಪ್ರಭು ಯೇಸುವಿನ ನುಡಿಗಳು ಪ್ರತಿಯೊಬ್ಬರೂ ಸೇವೆಯ ಮನೋಭಾವನೆಯನ್ನು ಬೆಳೆಸಿಕೊಳ್ಳಲು ನಮಗೆ ಪ್ರೇರಣೆಯಾಗಿವೆ. ಕೊನೆಯ ಭೋಜನದ ಸಮಯದಲ್ಲಿ ಯೇಸು ತಮ್ಮ ಶಿಷ್ಯರ ಪಾದಗಳನ್ನು ತೊಳೆದು "ನೀವು ನನ್ನನ್ನು ಗುರುವೇ ಎಂದು ಸಂಭೋದಿಸುತ್ತೀರಿ, ಆದರೇ ಗುರುವು ಆದ ನಾನೇ ನಿಮ್ಮ ಪಾದಗಳನ್ನು ತೊಳೆದಿದ್ದೇನೆ. ನೀವು ಸಹ ಪರಸ್ಪರರ ಪಾದಗಳನ್ನು ತೊಳೆಯಿರಿ". ಅಂದರೆ, ಅಹಂಕಾರಿಗಳಾಗದೆ ಸ್ವಾರ್ಥಿಗಳಾಗದೆ ಪ್ರೀತಿಯಿಂದ ಪರಸ್ಪರ ಸೇವೆ ಮಾಡಿರಿ ಎಂದು ಸೇವಾ ನಾಯಕತ್ವಕ್ಕೆ ಕರೆ ನೀಡಿದರು. ಪ್ರಭು ಯೇಸುಕ್ರಿಸ್ತರ ಈ ಮಾತುಗಳಿಂದ ಪ್ರೇರಿತರಾಗಿ ಕಳೆದ ಮೂವತ್ತು ವರುಷಗಳಿಂದ ಎಸ್.ಎಮ್. ಎಸ್.ಎಸ್.ಸಂಸ್ಥೆಯು ಅವಿರತವಾಗಿ ದೀನ ದಲಿತರ ಸೇವೆಯನ್ನು ಮಾಡುತ್ತಾ ಬಂದಿದೆ. ಧರ್ಮ, ಭಾಷೆ, ಜಾತಿ, ಮತಗಳ ಎಲ್ಲೆಯನ್ನು ಮೀರಿ ಸಮಾಜದಲ್ಲಿ ದೀನ ದಲಿತರ, ಬಡಬಗ್ಗರ, ಸಮಾಜದಲ್ಲಿ ತಿರಸ್ಕೃತರ ಏಳಿಗೆಗೆ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಎಲ್ಲಾ ಸಿಬ್ಬಂದಿ ವರ್ಗದವರ ಸಮರ್ಪಣಾ ಸೇವೆ ಶ್ಲಾಘನೀಯವಾದದ್ದು.

## 1. ಸೇವಾ ನಾಯಕತ್ವ

"ನಾನು ಬಂದದ್ದು ಸೇವೆ ಮಾಡಲು, ಸೇವೆ ಮಾಡಿಸಿಕೊಳ್ಳಲು ಅಲ್ಲ" ಎಂದರು ಯೇಸು. ಈ ಮಾದರಿಯನ್ನು ಅನುಸರಿಸುವ ಸಂಸ್ಥೆಯು ಸಮಾಜದಲ್ಲಿ ಅಗತ್ಯದ ಸೇವೆಯನ್ನು ಸಲ್ಲಿಸುತ್ತಿದೆ. ಹೇಗೆ ಕುರುಬನು ಕಳೆದುಹೋದ ಕುರಿಯನ್ನು ಹುಡುಕಿ ಅದನ್ನು ಸಂರಕ್ಷಿಸುತ್ತಾನೊ ಅದೇ ರೀತಿ ಗೌರವಯುತ ಜೀವನ ಜೀವಿಸಲಾಗದವರಿಗೆ ಭೇಟಿ ನೀಡಿ ಅವರ ಕಷ್ಟಗಳನ್ನು ತಿಳಿದು ಅವರಿಗೆ ಸಮಾಜದಲ್ಲಿ ಅಭಿವೃದ್ಧಿಯಾಗುವಂತಹ ಸೇವೆಯನ್ನು ಮಾಡಲಾಗಿದೆ. ಹಾಗೆಯೇ ಗಾಯಗೊಂಡ ಕುರಿಯ ಹೆಚ್ಚು ಆಸಕ್ತಿ ತೆಗೆದುಕೊಂಡು ಕುರುಬನು ಅದರ ಬೆಳವಣಿಗೆಗೆ ಗಮನ ನೀಡುತ್ತಾನೊ ಹಾಗೆಯೇ ಕಷ್ಟ–ಕಾರ್ಪಣ್ಯಗಳಿಂದ, ದು:ಖದಿಂದ ತುಂಬಿದ ಕುಟುಂಬಗಳ ಕಣ್ಣೀರನ್ನು ಒರೆಸುವತ್ತ ಈ ಸಂಸ್ಥೆ ದುಡಿಯುತ್ತಾ ಬಂದಿದೆ. ತನ್ನ ಸೇವಾ ನಾಯಕತ್ವದ ಮೂಲಕ ಚೈತನ್ಯ ಸಂಸ್ಥೆ ತನ್ನದೇ ಆದ ಛಾಪು ಮೂಡಿಸಿದೆ, ಹಲವರಿಗೆ ಪ್ರೇರಣೆಯಾಗಿದೆ.

## 2. ಪ್ರೀತಿಯ ನಾಯಕತ್ವ

ಮಾನವ ರೂಪಿಸಿದ ಅಥವಾ ಸೃಷ್ಟಿಸಿದ ಕಟ್ಟುಪಾಡುಗಳ ಎಲ್ಲೆಯನ್ನು ಮೀರಿ ಮಾಡುವ ಸೇವೆಯೇ ಪ್ರೀತಿಯ ನಾಯಕತ್ವ. ಪ್ರಭು ಯೇಸು, ಯಹೂದ್ಯರು ಅಸಹ್ಯವೆಂದು ಭಾವಿಸಿದ ಸಮಾರಿಯದ ಊರಿಗೆ ಹೋಗಿ ತನ್ನ ಪ್ರೀತಿಯನ್ನು ತೋರ್ಪಡಿಸಿದರು. ಜನರ ಸಮಸ್ಯೆಗಳಿಗೆ ಸ್ಪಂದಿಸಿದರು ಮತ್ತು ಅವರಿಗೆ ಬೋಧನೆ ಮಾಡಿ ಅವರೊಡನೆ ತಂಗಿದರು ಹಾಗೂ ಅನೇಕರನ್ನು ಸ್ವಸ್ಥಪಡಿಸಿದರು. ಚೈತನ್ಯ ಸಂಸ್ಥೆಯು ಮಾನವ ನಿರ್ಮಿತ ಎಲ್ಲೆಗಳನ್ನು ಮೀರಿ ಪ್ರೀತಿಯಿಂದ ಸರ್ವ ಜನರ ಒಳಿತಿಗೆ ಸರ್ವೇ ಜನ: ಸುಖಿನೋ ಭವಂತು ಎಂಬ ಮಾತನ್ನು ಅಕ್ಷರಶ: ಪಾಲಿಸುತ್ತಾ ಬಂದಿದೆ. ಸಂತ ಪೌಲರು ನುಡಿದ ಮಾತು ಪ್ರೀತಿಯೇ ಸಮಸ್ತವನ್ನು ಐಕ್ಯಗೊಳಿಸುವ ಬಂಧನ. ಹಾಗೆಯೇ ಪ್ರೀತಿ ನನ್ನಲ್ಲಿಲ್ಲದಿದ್ದರೆ ನಾನು ಕೇವಲ ಶೂನ್ಯ. ಮಾನವೀಯ ಪ್ರೀತಿ ಪ್ರೀತಿಭರಿತ ನಾಯಕತ್ವದ ಶ್ರೇಷ್ಠ ಗುಣ.

## 3. ಕರುಣಾಭರಿತ ನಾಯಕತ್ವ

ಪ್ರಭು ಯೇಸು ತಮ್ಮಲ್ಲಿಗೆ ಬರುವ ಜನರನ್ನು ಕಂಡು ಮನ ಮರುಗಿದರು. ಏಕೆಂದರೆ ಅವರು ಕುರುಬನಿಲ್ಲದ ಕುರಿಗಳಂತೆ ಇದ್ದರು. ಆ ಜನರ ಕಷ್ಟ–ಕಾರ್ಪಣ್ಯ, ದು:ಖ–ದುಗುಡಗಳನ್ನು ಆಲಿಸಲು ಯಾರೂ ಇರಲಿಲ್ಲ. ಅದಕ್ಕಾಗಿಯೇ ಯೇಸು ಐದು ಸಾವಿರ ಜನರಿಗೆ ಅದ್ಭುತಕರವಾಗಿ ಭೋಜನ ನೀಡಿದರು. ಅವರ ಮೇಲೆ ಯೇಸುವಿಗೆ ಕರುಣೆ ಬಂದಿತು. ಎಸ್.ಎಮ್. ಎಸ್.ಎಸ್.ಸಂಸ್ಥೆ ಪ್ರಭುವಿನ ಕರುಣಾಭರಿತ ನಾಯಕತ್ವದಿಂದ ಪ್ರೇರಣೆಗೊಂಡು ಸೇವೆ ಮಾಡುತ್ತಾ ಬಂದಿದೆ. ಯೇಸು ನುಡಿದ 'ದಯೆ ತೋರುವವನೇ ನಿನ್ನ ನೆರೆಯವನು' ಎಂಬ ಮಾತನ್ನು ಅರ್ಥೈಸಿ ದಯೆಯನ್ನು ತಮ್ಮ ಸೇವೆಯಲ್ಲಿ ತೋರ್ಪಡಿಸುತ್ತಿದೆ. ಈ ನಿಟ್ಟಿನಲ್ಲಿ ಅನೇಕ ತರಬೇತಿಗಳ ಮೂಲಕ ಇಂತಹ ಮೌಲ್ಯಗಳನ್ನು ಸಂಸ್ಥೆಯು ತನ್ನ ಸಿಬ್ಬಂದಿಗಳ ಮೂಲಕ ಫಲಾನುಭವಿಗಳಿಗೆ ಬೋಧಿಸುತ್ತಿದೆ ಮತ್ತು ಅದರ ಅಳವಡಿಕೆಯ ಕುರಿತು ಬಹಳ ಗಮನ ವಹಿಸುತ್ತಿದೆ.

## 4. ಕ್ಷಮೆಯ ನಾಯಕತ್ವ

ಪ್ರಭು ಯೇಸು ನುಡಿದರು "ನಿನ್ನನ್ನು ನೀನು ಪ್ರೀತಿಸಿದಂತೆಯೇ ನಿನ್ನ ನೆರೆಹೊರೆಯವರನ್ನು ಪ್ರೀತಿಸು". "ನಿಮ್ಮ ಶತ್ರುಗಳನ್ನು

ಪ್ರೀತಿಸಿರಿ, ಪೀಡಿಸುವವರಿಗಾಗಿ ಪ್ರಾರ್ಥಿಸಿರಿ, ಆಗ ನೀವು ಸ್ವರ್ಗದಲ್ಲಿರುವ ನಿಮ್ಮ ತಂದೆಯ ಮಕ್ಕಳಾಗುವಿರಿ". ಒಬ್ಬ ನಾಯಕ ಕ್ಷಮಾ ಮನೋಭಾವವನ್ನು ಹೊಂದಿದರೆ ಆ ಸಮಾಜ ಅಥವಾ ಆ ಸಂಸ್ಥೆ ಆಶೀರ್ವಾದವನ್ನು ಪಡೆಯುತ್ತದೆ. ದ್ವೇಷ ಬಾಳಿಗೆ ವಿಷ. ದ್ವೇಷ ನಮ್ಮನ್ನು ಕೊಲ್ಲುತ್ತೆ ನಿಮಿಷ ನಿಮಿಷ, ದ್ವೇಷ ಇದ್ದಾತನ ಬಾಳು ಹಾಳು, ಜೀವನ ಪರಿಯಂತ ಬರೀ ಗೋಳು. ಅಪಕಾರಕ್ಕೆ ಅಪಕಾರವಲ್ಲ ಬದಲಾಗಿ ಉಪಕಾರ. ಪ್ರತಿಕಾರಕ್ಕೆ ಪ್ರತಿಕಾರವಲ್ಲ ಬದಲಾಗಿ ಪ್ರತ್ಯುಪಕಾರ. ಇದೇ ಯೇಸುವಿನ ಸಂದೇಶದ ಸಾರ. ನಾವು ಕೇಡಿಗೆ ಸೋಲದೆ ಒಳಿತಿನಿಂದ ಕೇಡನ್ನು ಸೋಲಿಸಬೇಕು. ಚೈತನ್ಯ ಸಂಸ್ಥೆ ಈ ನಿಟ್ಟಿನಲ್ಲಿ ಶ್ರಮಿಸುತ್ತಿದೆ ಹಾಗೂ ಸಾಮಾಜಿಕ ನ್ಯಾಯ ನೀತಿಯನ್ನು ಸೇವೆ, ಪ್ರೀತಿ, ಕ್ಷಮೆಯ ಮೂಲಕ ಎತ್ತಿ ಹಿಡಿಯಲು ಪ್ರಯತ್ನಿಸುತ್ತಿದೆ. ಒಬ್ಬ ನಾಯಕನಾದವನಲ್ಲಿರಬೇಕಾದ ಶ್ರೇಷ್ಠ ಗುಣ 'ಕ್ಷಮಾಗುಣ'. ಪ್ರಚೋದನೆಗಳು, ಸಾಮಾಜಿಕ ನಾಯಕತ್ವದ ಪ್ರಲೋಭನೆಗಳು ಸಮಾಜದ ಬೆಳವಣಿಗೆಗೆ ಮಾರಕ. ಪ್ರೇರಣಾದಾಯಕ ಮಾತುಗಳು ಸಾಮಾಜಿಕ ಏಳಿಗೆಗೆ ಪೂರಕ.

### 5. ಜೀವದಾಯಕ ನಾಯಕತ್ವ

ಯೇಸು ನುಡಿದರು "ಲೋಕದ ಪ್ರಜಾಪತಿಗಳು ತಮ್ಮ ಪ್ರಜೆಗಳ ಮೇಲೆ ದರ್ಪದಿಂದ ದೊರೆತನ ಮಾಡುತ್ತಾರೆ. ಜನನಾಯಕರು ಎನಿಸಿಕೊಳ್ಳುವವರು ಜನರ ಮೇಲೆ ಅಧಿಕಾರ ಪ್ರದರ್ಶನ ಮಾಡುತ್ತಾರೆ. ಆದರೆ ನಿಮ್ಮಲ್ಲಿ ಹಾಗಾಗಬಾರದು" ನಾಯಕತ್ವ ದಬ್ಬಾಳಿಕೆಗಲ್ಲ ಬದಲಾಗಿ ತನ್ನನ್ನೇ ಬರಿದು ಮಾಡಿ ಸಮರ್ಪಣಾ ಭಾವದಿಂದ ಜನರ ಬಗ್ಗೆ ಕಾಳಜಿ ತೋರಿಸುವುದು. ಅನೇಕ ಬಾರಿ ಈ ಸಮಾಜದಲ್ಲಿ ದಬ್ಬಾಳಿಕೆಯ, ಶೋಷಣೆಯ ಹಾಗೂ ಭ್ರಷ್ಟಾಚಾರದ ನಾಯಕತ್ವ ನಮಗೆ ಎದ್ದು ಕಾಣುತ್ತಿದೆ. ಪ್ರಮಾಣಿಕರಿಗೆ ಇದು ಸಕಾಲವಲ್ಲ ಎಂಬ ಮಾತು ಕೇಳಿ ಬರುತ್ತದೆ. ಆದರೆ ನಾವು ಮಾಡುವ ಸೇವೆ ನಮ್ಮ ಒಳಿತಿಗಲ್ಲ ಬದಲಾಗಿ ಅದರ ಮೂಲಕ ನಮಗೆ ಅತಿಯಾದ ಆನಂದ, ತೃಪ್ತಿದಾಯಕ ಭಾವ ಲಭಿಸುತ್ತದೆ. ನಮ್ಮ ಸೇವೆ ಬಡ ಬಗ್ಗರ ಒಳಿತಿಗೆ, ದೀನ ದಲಿತರ ಏಳಿಗೆಗೆ. ಈ ಮೂಲಕ ತನ್ನನ್ನೇ ಸಮಾಜದ ಒಳಿತಿಗೆ ತೊಡಗಿಸುವಂತಹ ನಾಯಕತ್ವ ನಮಗೆ ಬೇಕು. ಈ ನಿಟ್ಟಿನಲ್ಲಿ ಚೈತನ್ಯ ಸಂಸ್ಥೆಯು ಸ್ವ–ಹಿತವನ್ನು ಗಮನಿಸದೆ ಪರ–ಹಿತವನ್ನು ತನ್ನ ಗುರಿಯಾಗಿಸಿಕೊಂಡು ಸೇವೆ ಸಲ್ಲಿಸುತ್ತಾ ಬಂದಿದೆ ಎಂಬುದು ಗಮನಾರ್ಹವಾದ ವಿಷಯವಾಗಿದೆ. ಇದು ಒಂದು 'ವ್ಯಕ್ತಿಕೇಂದ್ರಿತ' ಸಂಸ್ಥೆಯಲ್ಲ ಬದಲಾಗಿ ಸಮಾಜ ಕೇಂದ್ರಿತ ಸಂಸ್ಥೆಯಾಗಿ ಬೆಳೆದು ನಿಂತಿದೆ. ಸರ್ವರ ಏಳಿಗೆಗೆ ತನ್ನನ್ನೇ ತೊಡಗಿಸಿಕೊಂಡಿದೆ.

### ನಾಯಕತ್ವದಲ್ಲಿ ಮೂರು ರೀತಿಯ ವ್ಯಕ್ತಿಗಳು

### 1. ಬಂದು ಹೋಗುವವರು

ಇವರು ತಮ್ಮ ಜೀವನವನ್ನು ಮಾತ್ರ ಜೀವಿಸಿ, ತಮ್ಮ ಹಿತವನ್ನೇ ಬಯಸುವವರು. ಸಮಾಜದ ಏಳಿಗೆಗಾಗಿ ಇವರ ಪಾಲು ಶೂನ್ಯ. ತಾನು ತನ್ನದು ಎಂಬ ಮನೋಭಾವ ಈ ರೀತಿಯ ಜನರದ್ದು ಹಾಗೂ ಮುಖಂಡರದ್ದು. ಇಂತಹ ಮಾದರಿ ಸಮಾಜಕ್ಕೆ ಮಾರಕವಾದದು. ಸಮಾಜದಲ್ಲಿ ಇಂತಹ 70% ಜನ ಇರುವುದರಿಂದ ಸಮಾಜದ ಏಳಿಗೆ ಕುಂಠಿತವಾಗಿದೆ ಹಾಗೂ ಅಭಿವೃದ್ಧಿ ಕಾಣಲು ಹರಸಾಹಸ ಪಡುತ್ತಿದೆ.

### 2. ನಾವೇ ಏನಾದರೂ ಮಾಡೋಣ

ಇಂತಹ ರೀತಿಯ ಜನರು ಪ್ರಶ್ನೆಗಳನ್ನು ಕೇಳುತ್ತಾರೆ. ಯಾಕೆ ಜನರು ಬಡವರಾಗಿದ್ದಾರೆ? ಯಾಕೆ ಹಕ್ಕುಗಳು ಕಸಿಯಲ್ಪಟ್ಟಿವೆ? ಯಾಕೆ ತಾರತಮ್ಯ ಹೆಚ್ಚಾಗುತ್ತಿದೆ? ಯಾಕೆ ಯುದ್ಧಗಳು ನಡೆಯುತ್ತಿವೆ? ಯಾಕೆ ಕೋಮು ಗಲಭೆ ಸೃಷ್ಟಿಯಾಗಿ ಏಕಾಂಥತೆ ಹೆಚ್ಚುತ್ತಿದೆ? ಯಾಕೆ ನಿರಾಶ್ರಿತರು? ಯಾಕೆ ನಿರ್ಗತಿಕರು? ಇಂತಹ ಪ್ರಶ್ನೆಗಳನ್ನು ಹಾಕಿದಾಗ ಮನುಷ್ಯನ ಅಂತರಂಗ ಕಲುಕುತ್ತದೆ. ಅವನ ಮಾನವೀಯ ಗುಣ ಹಾಗೂ ಪ್ರೇಮ ಏನಾದರೂ ಮಾಡೋಣವೆಂಬ ಛಲವನ್ನು ಪ್ರಬಲಗೊಳಿಸುತ್ತದೆ. ಈ ಒಂದು ಪ್ರೇರಣೆಯಿಂದ ಇಂದು "ಸಮಾಜ ಸೇವೆ ಸಂಸ್ಥೆಗಳು" ಜನಿಸಿದ್ದು. ಇಂತಹ 20% ಜನರಿರುವುದರಿಂದ ಈ ಸಮಾಜದಲ್ಲಿ ಒಳ್ಳೆಯ ಕೆಲಸಗಳು ನಡೆಯುತ್ತಿವೆ. ಒಂದು ವೇಳೆ ಒಳ್ಳೆಯ ಉದ್ದೇಶದಿಂದ ಆರಂಭಗೊಂಡ ಸಂಸ್ಥೆ ಇಂದು ಅದರ ಗುರಿ ಉದ್ದೇಶವನ್ನು ಮರೆತು ತನ್ನ ಸ್ವಾರ್ಥವನ್ನು ಸಾಧಿಸುವತ್ತ ದಾಪುಗಾಲು ಇಟ್ಟರೆ ಅದು ಆ ಸಂಸ್ಥೆಯ "ಮಹಾದುರಂತ" ಎಂದೇ ಹೇಳಬಹುದು.

### 3. ನಾನ್ಯಾಕೆ ಮಾಡಬಾರದು

ಇಂತಹ ವ್ಯಕ್ತಿಗಳು ತಮ್ಮನ್ನೇ ಸಂಪೂರ್ಣವಾಗಿ ಸಮಾಜದ ಏಳಿಗೆಗೆ ತೊಡಗಿಸಿಕೊಳ್ಳುತ್ತಾರೆ. ಇಂತವರಲ್ಲಿ ಒಂದು ವಿಶೇಷ ಕರೆಯನ್ನು ಕಾಣಬಹುದು. ಇಂತವರಲ್ಲಿ ಇರುವ ಶ್ರೇಷ್ಠ ಶಕ್ತಿ ಅವರ ಪ್ರೀತಿ ಮತ್ತು ಧೈರ್ಯ. ನೆಲ್ಸನ್ ಮಂಡೇಲಾ, ಮಹಾತ್ಮ ಗಾಂಧೀಜಿ, ಮದರ್ ತೆರೇಸಾ, ಮಾರ್ಟಿನ್ ಲೂಥರ್ ಕಿಂಗ್, ಲೂಯಿಪಾಸ್ಚರ್, ಮಲಾಲ, ಕೈಲಾಸ ಸತ್ಯಾರ್ಥಿ ಮುಂತಾದವರು ತಮ್ಮನ್ನೆ ಸಮಾಜದ ಏಳಿಗೆಗಾಗಿ ತೊಡಗಿಸಿ ಸೇವೆ ಮಾಡಿದ್ದಾರೆ, ಮಾಡುತ್ತಾ ಇದ್ದಾರೆ. ಇಂತಹ ಅನೇಕ ವ್ಯಕ್ತಿಗಳನ್ನು ನಾವು ನಮ್ಮ ಸಮಾಜದಲ್ಲಿ ಕಾಣಬಹುದು. ಸೇವೆ ಮಾಡಲು ಅಧಿಕಾರವೇ ಬೇಕೆಂದಿಲ್ಲ, ಒಳ್ಳೆಯ ಮನಸ್ಸು, ಸದೃಶ್ಯ ಕನಸ್ಸು ಮತ್ತು ಮಾನವೀಯ ಪ್ರೀತಿ ಸಾಕು ಎಂಬುದನ್ನು ಇಂತವರು

ನಮಗೆ ತೋರಿಸಿದ್ದಾರೆ. ಸಮಾಜದಲ್ಲಿ ಇಂತಹ ನಾಯಕರು ಶೇಕಡಾ ಹತ್ತರಷ್ಟು ಕಾಣಬಹುದು.

ಈ ಲೇಖನದಿಂದ ಪ್ರೇರಣೆಗೊಂಡು ನಾವು ಕೂಡ ಪ್ರೀತಿ, ತ್ಯಾಗ, ಸೇವೆಯ ಮನೋಭಾವದಿಂದ ಕೂಡಿದ ರಾಷ್ಟ್ರ ನಿರ್ಮಾಣಕ್ಕೆ, ಸಮಾಜದ ಏಳಿಗೆಗೆ ಪ್ರೀತಿಯಿಂದ, ಧೈರ್ಯದಿಂದ ತೊಡಗೋಣ. ನಮ್ಮೊಳಗಿರುವ ನಾಯಕರನ್ನು ಬಡಿದೆಬ್ಬಿಸೋಣ. ಸಮಾಜವನ್ನು ಹಾಗೂ ಸಮಾಜದಲ್ಲಿರುವ ನಾಯಕರನ್ನು ದೂಷಿಸುವ ಬದಲು, ನಕಾರಾತ್ಮಕ ಮಾತುಗಳಿಂದ ನಕಾರಾತ್ಮಕ ಚಿಂತನೆಗಳಿಂದ ಕರಗಿ ಹೋಗುವ ಬದಲು ನಾವೂ ಸಕಾರಾತ್ಮಕವಾಗಿ ಅಲೋಚಿಸುವವರಾಗೋಣ. ನಮ್ಮ ಸಮಾಜದ ಏಳಿಗೆಗಾಗಿ ಒಂದು ಪ್ರೀತಿ, ಶಾಂತಿ, ಕ್ಷಮಾಭರಿತ ರಾಷ್ಟ್ರವನ್ನು ನಿರ್ಮಾಣ ಮಾಡಲು ನಾವೆಲ್ಲರೂ ಶ್ರಮಿಸೋಣ. ಮೂವತ್ತು ವರುಷಗಳ ಎಸ್.ಎಮ್.ಎಸ್.ಎಸ್.ಸಂಸ್ಥೆಯ ಸೇವೆಯು ಇನ್ನೂ ಉತ್ತುಂಗಕ್ಕೇರಲೆಂದು ಸರ್ವೇಶ್ವರರಲ್ಲಿ ಮೊರೆಯಿಡೋಣ. ಸರ್ವರಿಗೂ ಶುಭವಾಗಲಿ.

"ಹೇಡಿಗಳು ಸಾವಿಗೆ ಮುನ್ನ ಹಲವು ಸಲ ಸಾಯುವುದು, ಧೀರರು ಸಾವಿನ ಸವಿಯ ಒಂದೇ ಸಲ ಸವಿಯುವರು" ಹೇಡಿಗಳಾಗದೆ ಧೀರರಾಗಿ ಸಮಾಜ ಸೇವೆಗೆ ಪಣಗೈಯೋಣ. ಭಗವಂತ ನಮಗೆ ಖಂಡಿತವಾಗಿಯೂ ಯಶಸ್ಸನ್ನು ನೀಡುವರು.

**"ಸರ್ವೇ ಜನ ಸುಖಿನೋ ಭವಂತು"**

---

# ಭಾರತೀಯ ನಾರಿ

**✍ ಪ್ರೇಮಾವತಿ ಪಿ**
**ಹಸೂಡಿ ಫಾರಂ, ಶಿವಮೊಗ್ಗ**

ಚೆಂದದ ಭಾರತೀಯ ನಾರಿ
ಎಲ್ಲಿಹೋಯಿತು ನಿನ್ನ ಸಾರಿ
ನೀ ತುಳಿದೆ ಆಧುನಿಕತೆಯ ದಾರಿ
ನೀನಾಗಬೇಡ ಪಾಶ್ಚಾತ್ಯ ಸಂಸ್ಕೃತಿಯ ಕುರಿ
ಇದರಿಂದ ಆಗದಿರಲಿ ನಮ್ಮ ಸಂಸ್ಕೃತಿ ಪರಾರಿ.

ನೀನು ಕರುಣೆ ಸಹನೆಯ ಕುಸುರಿ
ಮಮತೆ ವಾತ್ಸಲ್ಯಕ್ಕೆ ಮಾದರಿ
ನಿನ್ನ ಹಣೆಯ ಕುಂಕುಮ ಬೀಳದಿರಲಿ ಜಾರಿ
ಮುಡಿಯ ಹೂವು ಇಳಿಯದಿರಲಿ ಉದುರಿ
ಒಳ್ಳೆ ಗುಣಗಳು ಕೈಗಳಿಂದ ಹೋಗದಿರಲಿ ಸೋರಿ
ಏಕೆಂದರೆ ಇವೆಲ್ಲ ಭಾರತದ ಸೊಬಗಿನ ಐಸಿರಿ
ಮಹಾತ್ಮಳಾಗು ಶಾಂತಿ ಮಂತ್ರವ ಸಾರಿ.
ಭಾರತದ ಏಳಿಗೆಯ ರೂವಾರಿ
ರಾಮನು ಕಾಡಿಗಟ್ಟಿದರೂ ಸರಿ
ಧೈರ್ಯದಿಂದ ಎದುರಿಸುವ ಸೀತೆಯಂತಹ ಪರಿ

ನೀನಾಗು ದುಷ್ಟ ಪದ್ಧತಿಗಳ ಸಂಹಾರಿ
ನೀಚರ ಪಾಲಿಗೆ ಆಗು ನೀ ಮಾರಿ
ದುರುಳರ ಗೆಳೆತನದಿಂದ ನೀ ಹಿಂಜರಿ
ಆಶಿಸುವೆನು ನಿನ್ನ ಸಮಾನತೆಯನ್ನು ಕೋರಿ
ಆದರೆ ಮರೆಯದಿರು ನಿನ್ನ ನಾಗರಿಕತೆಯ ಐಸಿರಿ

# ಶಾಲೆ ಬಿಟ್ಟು

**✍ ಸ್ಟ್ಯಾನಿ ಲೋಪಿಸ್, ಕಾರ್ಗಲ್**

ಶಾಲೆ ಬಿಟ್ಟು ಕೆಲಸಕ್ಕೋಗೋ ಮಕ್ಕಳನ್ನು ನಾನು ನೋಡ್ತೀನಿ
ಮನಸಿಗೆ ದು:ಖ ತಡಿಯಕ್ಕಾಗದೆ ಈ ಹಾಡನ್ನು ಹಾಡ್ತೀನಿ
ಶಾಲೆ ಬಿಟ್ಟ ಮಕ್ಕಳಿಗೆಲ್ಲ ಕೈಮುಗಿದು ಕೇಳ್ತೀನಿ
ಕೆಲ್ಸಬಿಟ್ಟು ವಿದ್ಯೆ ಕಲಿಯಕೆ ಶಾಲೆ ಮೆಟ್ಟಿಲೇರಿ ಅಂಥ ಹೇಳ್ತೀನಿ

ವಿದ್ಯೆ ಕಲಿಯೋ ಮಕ್ಕಳು ಇಂದು ಗದ್ದೆ ಕೆಲಸಕ್ ಹೋಗ್ತೌರೆ
ಅಂಗಡಿ ಗ್ಯಾರೆಜ್ ಹೋಟೆಲ್‌ನಾಗೆ ಹಗಲು ರಾತ್ರಿ ದುಡಿತೌರೆ
ಕಷ್ಟ ಅನ್ನೋದ್ ಯಾರಿಗಿಲ್ಲ ಎಲ್ಲಾರಿಗೂ ಇದ್ದದ್ದೆ
ವಿದ್ಯೆ ಅನ್ನೋದ್ ಬೆಳೆಯೋ ಮಕ್ಕಳಿಗ್ ಕಡ್ಡಾಯವಾಗಿ ಬೇಕಾದ್ದೆ

ಶಾಲೆಗೋಗೋ ಮಕ್ಕಳಿಗಿಂದು ಎಷ್ಟೋಂದ್ ಸವಲತ್
ಕೊಡ್‌ತೌರೆ
ಪ್ರತ್ಯೊಬ್ಬರಿಗೂ ಸೈಕಲ್ಕೊಟ್ಟು ಬಿಸಿಊಟ ಬಡಸ್ತೌರೆ
ಓದಕ್ ಪುಸ್ತಕ ಪೆನ್ನುಕೊಟ್ಟು ಯುನಿಫಾರ್ಮು ಕೊಡುತೌರೆ
ಚಂದಾಗೋದೊ ಮಕ್ಕಳಿಗೌರು ಸ್ಕಾಲರ್‌ಶಿಪ್ಪು ಕೊಡುತೌರೆ.

ನಾಕ್ಕೈದು ಅಕ್ಷರ ಕಲ್ತ್ರೆ ನಿಮ್ಮ ಬುದ್ದಿ ವೃದ್ದಿ ಆಗುತ್ತೆ
ಸೂಟು ಬೂಟು ಧರಿಸಿ ಕತ್ನಲ್ ತಿರುಗೊ ಬ್ಯಾಗ್ ಸಿಗತ್ತೆ
ಮತ್ಯಾಕ್ ನೀವು ತಡಮಾಡ್ತೀರಿ ಈಗ್ಲೆ ಶಾಲ್ಗೆ ಬಂದ್ ಬಿಡಿ
ವಿದ್ಯೆ ಕಲಿತು ಶ್ರದ್ಧೆಯಿಂದ ಪಾಠ ಪದ್ಯ ಕಲಿರಿ.

# ಮುಗ್ಧ ಮನಗಳ ಬದುಕು ರೂಪಿಸುವ ಶಿಲ್ಪಿಗಳು ನೀವು...



✍ ಫಾದರ್ ಪಿಯುಸ್ ಡಿಸೋಜ
ಯುವಜನ ನಿರ್ದೇಶಕರು, ಶಿವಮೊಗ್ಗ ಧರ್ಮಕ್ಷೇತ್ರ

ಈ ಲೇಖನದ ಆರಂಭದಲ್ಲಿ ನಿಮಗೊಂದು ಸಿಹಿ ಸುದ್ದಿ ಮತ್ತು ಕಹಿ ಸುದ್ದಿ ಇದೆ! ಖಂಡಿತ ಸಿಹಿ ಸುದ್ದಿಯನ್ನೇ ಆಯ್ಕೆ ಮಾಡಿಕೊಳ್ಳುತ್ತಿರೆಂಬುದು ನನ್ನ ನಂಬಿಕೆ. ಸಿಹಿ ಹಾಗೂ ಕಹಿ ಸುದ್ದಿ ಎರಡೂ ಪೋಷಕರಿಗೆ ಮಾತ್ರ!! ಪ್ರೀತಿಯ ಪೋಷಕರೇ, ನಿಮ್ಮ ಮಕ್ಕಳಿಗೆ ಎಲ್ಲಾ ತಿಳಿದಿದೆ, ಎಲ್ಲದರ ಜ್ಞಾನ ಇದೆ. ಅದು ಸಿಹಿ ಸುದ್ದಿ. ಎಲ್ಲವನ್ನೂ ತಿಳಿದವರು ತನ್ನ ಮಕ್ಕಳು ಎಂದಾಗ ಎಷ್ಟು ಸಂತೋಷ ಆಗುತ್ತದೆ ಅಲ್ವಾ? ಖಂಡಿತ ನಿಮಗೂ ಇಂಥಹ ಅನುಭವ ಆದರೆ ವಿಸ್ಮಯವೇನೂ ಇಲ್ಲ. ಹೆಮ್ಮೆ ಪಡಬೇಕಾದ ಸಂಗತಿಯೇ ಅದು. ಆದರೆ ಸ್ವಲ್ಪ ಉಸಿರು ಬಿಗಿ ಹಿಡಿದು ಕಹಿ ಸುದ್ದಿಯನ್ನೂ ಕೇಳಲು ಸಿದ್ಧರಾಗುವುದು ಸಮಯೋಚಿತ. ಕಹಿ ಸುದ್ದಿ ಏನು ಎಂದು ಆಲೋಚಿಸುತ್ತಿದ್ದಿರಲ್ಲವೇ? ನಿಮ್ಮ ಮಕ್ಕಳಿಗೆ ಏನೆಲ್ಲಾ ತಿಳಿದಿದೆಯಲ್ಲಾ ಅದರಲ್ಲಿ ಬಹುಪಾಲು ತಪ್ಪು ಮಾಹಿತಿ!!! ಅವರು ಯಾವುದು ಸರಿ ಯಾವುದು ತಪ್ಪು ಎಂದು ತಿಳಿಯದೆ ಎಲ್ಲವನ್ನೂ ಅಂದರೆ ಸಿಕ್ಕಿರುವ ಮಾಹಿತಿಯನ್ನು ತಮಗೆ ಸಿಕ್ಕಿರುವಂತೆಯೇ ತಮ್ಮೊಳಗೆ ತೆಗೆದುಕೊಳ್ಳುತ್ತಾರೆ. ಹದಿಹರೆಯ ಹಾಗೂ ಯೌವನದ ಹೊಸ್ತಿಲಲ್ಲಿರುವವರು ಈ ಗೊಂದಲಕ್ಕೆ ಸಿಲುಕಿರುವವರು. ತಮ್ಮ ಹಿರಿಯರಲ್ಲಿ, ಶಿಕ್ಷಕ ಶಿಕ್ಷಕಿಯರಲ್ಲಿ ಹಂಚಿಕೊಂಡು ಸರಿ ಮಾಹಿತಿ ಪಡೆಯುವ ಗೋಜಿಗೆ ಅವರು ಹೋಗದೆ ತನ್ನ ವಯಸ್ಸಿನ ತನ್ನ ಗೆಳೆಯ ಗೆಳತಿಯರ ಬಳಿ ನೆರವಿಗೆ ಧಾವಿಸುತ್ತಾರೆ. ಆ ಸ್ನೇಹಿತನೂ ಇಂತಹದೇ ಗೊಂದಲದಲ್ಲಿದ್ದರೆ ಒಬ್ಬ ಕುರುಡ ಇನ್ನೊಬ್ಬ ಕುರುಡನಿಗೆ ದಾರಿ ತೋರಿಸಿದಂತಾಗುತ್ತದೆ. ಈ ಪ್ರಾಯದಲ್ಲಿ ಪೋಷಕರು ಹಾಗೂ ಶಿಕ್ಷಕರ ಬಳಿ ಹೋಗಿ ಗೊಂದಲವನ್ನು ಪರಿಹರಿಸಿಕೊಳ್ಳಲು ಪ್ರಯತ್ನಿಸದಿದ್ದರೆ ಪೋಷಕರು ಹಾಗೂ ಶಿಕ್ಷಕರು ಈ ಮಕ್ಕಳ ಹಾವಭಾವಗಳನ್ನು ಗಮನಿಸಿ ಅರ್ಥಮಾಡಿಕೊಂಡು ಅವರ ವಯಸ್ಸಿಗೆ ತಕ್ಕಂತೆ ಅವರನ್ನು ಸರಿದಾರಿಯಲ್ಲಿ ನಡೆಸಿದರೆ ಅವರೆಂದಿಗೂ ದಾರಿತೋರಿಸಿದ ಗುರುವನ್ನು ಮರೆಯುವುದಿಲ್ಲ. ಏಕೆಂದರೆ ಮನದಾಳದ ಮಾತುಗಳನ್ನು ಅರ್ಥಮಾಡಿಕೊಂಡ ವ್ಯಕ್ತಿ ಅವರಾಗಿರುತ್ತಾರೆ. ಆದ್ದರಿಂದ ಮುಗ್ಧ ಮನಗಳ ಬದುಕು ರೂಪಿಸುವ ಶಿಲ್ಪಿಗಳು ಪೋಷಕರು ಹಾಗೂ ಶಿಕ್ಷಕರು. ತುಂಬಾ ವಿಷಯಗಳು ಮಕ್ಕಳಿಗೆ ತಿಳಿದಿಲ್ಲ, ಶಿಕ್ಷಕರು ಪೋಷಕರು ಹೇಳಿರುವುದಿಲ್ಲ. ಆದ್ದರಿಂದಲೆ ಹಲವಾರು ಅನಾಹುತಗಳು ನಡೆಯುತ್ತವೆ.

ನಮ್ಮ ಕುಟುಂಬದಲ್ಲಿ ಬೆಳೆಯುತ್ತಿರುವ ಮಕ್ಕಳು, ಯುವ ಪೀಳಿಗೆ ಇಂದು ಎಲ್ಲಿದ್ದಾರೆ ಎಂಬ ಪ್ರಶ್ನೆ ಉದ್ಭವಿಸಿದಾಗ ತಂದೆ ತಾಯಿ ಅವರನ್ನು ಪ್ರಶ್ನಿಸಿದರೆ ನಿಖರವಾದ ಸ್ಥಳ ಅವರು ಹೇಳಲು ಬಯಸುವುದಿಲ್ಲಾ ಕಾರಣ ಅವರು ಇರುವ ಸ್ಥಳ ಎಲ್ಲಾದರೂ ಮನೆಯಲ್ಲಿ ತಿಳಿದರೆ ಪೋಷಕರು ನಿದ್ದೆ ಮಾಡುವುದಿಲ್ಲಾ! ಅಂಥಾ ಸ್ಥಳಗಳಲ್ಲಿ ನಮ್ಮ ಯುವಪೀಳಿಗೆ ಹಾಗೂ ಮಕ್ಕಳು ಇದ್ದಾರೆ. ಹಿಂದೊಂದು ಕಾಲವಿತ್ತು ಸಮಾಜಘಾತುಕ ಕೃತ್ಯಗಳಲ್ಲಿ ಭಾಗಿಯಾಗುವವರು 30 ವರ್ಷ ಮೇಲ್ಪಟ್ಟವರು ಎಂದು ಚಿಂತಿಸುವ ಕಾಲ. ಆದರೆ ಬೆಳೆಯುವ ಮಕ್ಕಳಲ್ಲಿ ಇಂದು ಅಪರಾಧ ಕೃತ್ಯವೆಸಗುವ ಮನೋಭಾವ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಅದಕ್ಕೆ ಕಾರಣವೇನು ಎಂದು ಎಲ್ಲಾ ಪೋಷಕರು ತಿಳಿದುಕೊಳ್ಳಬೇಕು ಹಾಗೂ ಮುಗ್ಧ ಮನಗಳನ್ನು ಬಾಲ್ಯದಿಂದಲೆ ಉತ್ತಮ ಜೀವನದೆಡೆಗೆ ಮುನ್ನಡೆಸಬೇಕು. ಇದಕ್ಕೆ ಬದ್ಧತೆ, ತ್ಯಾಗದ ಮನೋಭಾವ ಇರಬೇಕು.

ನವಸಮಾಜ ನಿರ್ಮಾಣವಾಗಬೇಕು. ಎಲ್ಲರೂ ಸಂತೋಷವಾಗಿ ಸಾಮರಸ್ಯದಿಂದ ಬಾಳಬೇಕು. ಇನ್ನೊಬ್ಬರು ನನ್ನ ಶತ್ರು ಎನ್ನುವುದಕ್ಕಿಂತ ಮಿತ್ರ ಎಂದು ಚಿಂತಿಸುವ ಕಾಲ, ಶೇಖರಿಸಿಟ್ಟುಕೊಳ್ಳುವ ಕೊಳ್ಳುಬಾಕ ಸಂಸ್ಕೃತಿಯಿಂದ ತನಗಿರುವುದರಲ್ಲಿ ಇನ್ನೊಬ್ಬರಿಗೆ ಹಂಚಿ ಸಂಭ್ರಮಿಸುವ ಸಂತೋಷ, ಎಲ್ಲಾ ಧರ್ಮಗಳಿಗಿಂತ ಮಾನವಧರ್ಮ ಶ್ರೇಷ್ಠ ಎಂಬುದನ್ನು ಮನಗಂಡು ಜೀವಿಸಲು ಆರಂಭಿಸಿದರೆ ಖಂಡಿತ ನವಸಮಾಜ ನಿರ್ಮಾಣವಾದಂತೆ. ಇನ್ನೊಬ್ಬರಿಂದ ಕಿತ್ತು ತಿನ್ನುವುದಕ್ಕಿಂತ ತನಗಿರುವುದನ್ನು ಹಂಚಿ ತಿನ್ನುವ ಸಂಸ್ಕೃತಿಯತ್ತ ನಾವು ನಡೆಯಬೇಕಾಗಿದೆ ಹಾಗೂ ಯುವಪೀಳಿಗೆ ಹಾಗೂ ಹದಿಹರೆಯದವರನ್ನು ನಡೆಸಬೇಕಾಗಿದೆ. ಈ ದೆಸೆಯಲ್ಲಿ ಎಂಥಹ ಪರಿಸ್ಥಿತಿಯಲ್ಲಿ ಮೊಗ್ಗಿನ ಮನಸ್ಸುಗಳು ಅರಳುತ್ತಿವೆ

ಎಂಬುದನ್ನು ಅವಲೋಕನ ಮಾಡುತ್ತಾ ಮುಂದೆ ಸಾಗೋಣ. ಬದಲಾವಣೆಯನ್ನು ಇನ್ನೊಬ್ಬರು ತರಲು ಸಾಧ್ಯವಿಲ್ಲ ನನ್ನಿಂದ ಆರಂಭವಾಗಬೇಕು. ಪರಿವರ್ತನೆ ಇನ್ನೊಬ್ಬರು ತರಲು ಸಾಧ್ಯವಿಲ್ಲ ಅದು ನನ್ನ ವರ್ತನೆಯಿಂದ ಮಾತ್ರ ಸಾಧ್ಯ ಎಂಬ ಅಂಶವನ್ನು ಮನದಲ್ಲಿಟ್ಟು ವಿಮರ್ಷಿಸೋಣವೇ? ಈ ಕೆಳಗೆ ತಿಳಿಸಿರುವ 4 ಯುಗಗಳಲ್ಲಿ ಮೊಗ್ಗಿನ ಮನಸ್ಸು ಗೊಂದಲಕ್ಕೆ ಒಳಗಾಗಿವೆ. ಗೊಂದಲಕ್ಕೆ ಒಳಗಾದವರಿಗೆ ನೆರವಾಗುವುದಾದರೆ ನೀವು ಅವರ ಬಾಳಿಗೆ ವರವಾಗುತ್ತೀರಿ.

1. **ಮಾಹಿತಿ ತಂತ್ರಜ್ಞಾನಯುಗದಲ್ಲಿ ಮಕ್ಕಳು:** ನಮ್ಮ ಯುವಪೀಳಿಗೆ ಮತ್ತು ಮಕ್ಕಳು ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಇರುವಾಗ ಅವರಿಗೆ ಅಂಗೈಯಲ್ಲಿ ಎಲ್ಲಾ ಮಾಹಿತಿಗಳು ಸಿಗುತ್ತದೆ. ಪುಸ್ತಕವನ್ನು ಓದಿ ವಿಷಯವನ್ನು ತಿಳಿಯುವುದು, ಗುರು–ಹಿರಿಯರನ್ನು ಸಂಪರ್ಕಿಸಿ ಅವರ ಅನುಭವಗಳ ಪುಟಗಳಿಂದ ಕೇಳಿ ತಿಳಿಯುವುದು ಇಂದು ಕಣ್ಮರೆಯಾಗಿ ತಕ್ಷಣ ಗೂಗಲ್‌ನಲ್ಲಿ ಜಾಲಾಡುವ ಪರಿಸ್ಥಿತಿಗೆ ಸದ್ಯಕ್ಕೆ ಬಂದು ತಲುಪಿದ್ದಾರೆ. ಇಂದು ಮಾತು ಕಡಿಮೆ ಬೆರಳುಗಳಿಗೆ ಕೆಲಸ ಜಾಸ್ತಿಯಾಗಿದೆ. ವಿಪರ್ಯಾಸ ಎಂದರೆ ಬೆರಳಂಚಿನಲ್ಲಿ ಸಿಗುವ ಮಾಹಿತಿಯಲ್ಲಿ ಸತ್ಯಾಸತ್ಯತೆಯನ್ನು ತಿಳಿಯದೇ ಸಿಕ್ಕ ಮಾಹಿತಿಯನ್ನು ಹಾಗೆಯೇ ತೆಗೆದುಕೊಂಡು ಜೀವನ ಕೆಡಿಸಿಕೊಂಡವರು, ನಿರಾಸೆ, ಖಿನ್ನತೆಗಳಿಗೆ ಬಲಿಯಾಗಿ ಆತ್ಮಹತ್ಯೆಗೆ ಶರಣಾದವರ ಉದಾಹರಣೆಗಳೇನು ಕಡಿಮೆಯಿಲ್ಲ. ಈ ಹಂತದಲ್ಲಿ ಈ ಮುಗ್ಧಮನಗಳಿಗೆ ಸರಿ ತಪ್ಪುಗಳ ವ್ಯತ್ಯಾಸ ತಿಳಿಯದೆ ಸಿಕ್ಕ ಮಾಹಿತಿಯೇ ಸರಿ ಎಂದು ತಿಳಿದು ಬದುಕುವವರು ಹಲವರಿದ್ದಾರೆ. ಅದಕ್ಕೆ ಪೂರಕವಾಗಿ ಸಾಮಾಜಿಕ ಮಾಧ್ಯಮಗಳು ವಾಟ್ಸ್ಯಾಪ್, ಫೇಸ್‌ಬುಕ್, ಟ್ವೀಟರ್ ಇತ್ಯಾದಿಗಳಲ್ಲಿ ಸಿಗುವ ಮಾಹಿತಿಗಳು ಸತ್ಯವಾದುದೆಂದು ನಂಬಿ ಕೆಟ್ಟವರು ಹಲವರು. ಈ ಸಾಮಾಜಿಕ ಮಾಧ್ಯಮಗಳು ಹೆಚ್ಚು ಹೆಚ್ಚು ಸುಳ್ಳು ಮಾಹಿತಿಗಳನ್ನು ನೀಡಿ ಕೋಮುಗಲಭೆ, ಖಿನ್ನಮನೋಸ್ಥಿತಿಯನ್ನು, ಸಂಕುಚಿತ ಮನೋಭಾವವನ್ನು ಜನರಲ್ಲಿ ಬಿತ್ತರಿಸುತ್ತಲಿವೆ. ಆದ್ದರಿಂದ ಹಿರಿಯರಿಗೂ ಕಿರಿಯರಿಗೂ ಮಾಧ್ಯಮಗಳ ಅವಲೋಕನ ಮಾಡಿ ಸತ್ಯವನ್ನು ಗ್ರಹಿಸಿಕೊಳ್ಳುವ ಮನೋಭಾವ ಅಗತ್ಯವಾಗಿ ಕಲಿಯಬೇಕಾಗಿದೆ.

2. **ಫಾಸ್ಟ್ ಯುಗದಲ್ಲಿ ಮಕ್ಕಳು:** ಯಾವುದೇ ವಾಹನ ತೆಗೆದುಕೊಳ್ಳಿ ಯುವಪೀಳಿಗೆ ಕೇಳುವ ಪ್ರಶ್ನೆ ಇದರ ಗರಿಷ್ಠ ವೇಗ ಎಷ್ಟು ಎಂದು? ಯಾರೂ ಜೀವಿಸುವ ಬಗ್ಗೆಯಾಗಲಿ ನಿಧಾನವೇ ಪ್ರಧಾನವೆಂದಾಗಲಿ ಯೋಚನೆ ಮಾಡುವುದಿಲ್ಲ. ನಿಧಾನವೇ ಪ್ರಧಾನ ಎನ್ನುವವರಿದ್ದರೆ ಅವರು 60 ವರ್ಷ ದಾಟಿರಬೇಕು ಎಂಬುದು ಖಚಿತವಾಗುತ್ತದೆ. ಅಂದರೆ ಫಾಸ್ಟ್ ಫುಡ್, ಫಾಸ್ಟ್ ಕ್ಯಾಶ್, ಫಾಸ್ಟ್ ರಿಸಲ್ಟ್, ಫಾಸ್ಟ್ ಡ್ರೈವ್ ಹೀಗೆ ಕಾಯುವ ತಾಳ್ಮೆಯನ್ನು ಇಂದಿನ ಯುಗದ ಜನರು ಮರೆತೇ ಬಿಟ್ಟಿದ್ದಾರೆ. ಯಾರಿಗೂ ಸಮಯವೇ ಇಲ್ಲ! ನಿಜವೇನೆಂದರೆ ಸಮಯ ಆರಂಭದಿಂದಲೇ ಇಂದಿನವರೆಗೆ ದಿನಕ್ಕೆ 24 ಗಂಟೆಗಳೇ. ಅದರಲ್ಲಿ ಏನೂ ಬದಲಾವಣೆ ಆಗಲಿಲ್ಲ. ಆದರೆ ಜನರ ಅನಗತ್ಯ ಕೆಲಸಗಳು ಜಾಸ್ತಿಯಾಗಿವೆ. ಇಂದು ಇದ್ದಷ್ಟು ಸವಲತ್ತುಗಳು ಕೆಲವು ವರ್ಷದ ಹಿಂದೆ ಇರಲಿಲ್ಲ. ಆದರೂ ಅವರಲ್ಲಿ ಮನರಂಜನೆ, ನೆರೆಹೊರೆಯವರನ್ನು ಭೇಟಿಮಾಡಿ ಸುಖ–ದು:ಖಗಳನ್ನು ಕೇಳಿ ತಿಳಿದುಕೊಳ್ಳಲು ಸಮಯ ಇತ್ತು ಹಾಗೂ ಬದುಕಿನಲ್ಲಿ ಸಂತೃಪ್ತಿ ಇತ್ತು. ನೆರೆಹೊರೆಯವರು ನೆರವಿಗೆ ಬರುತ್ತಿದ್ದರು. ಹಬ್ಬ–ಹರಿದಿನಗಳನ್ನು ಒಟ್ಟಾಗಿ ಸಂಭ್ರಮಿಸುತ್ತಿದ್ದರು. ಒಟ್ಟಾಗಿ ಅಡುಗೆ ಮಾಡಿ ಒಟ್ಟಾಗಿ ಕುಳಿತು ಊಟ ಮಾಡುವಾಗ ಹಬ್ಬದೌತಣದ ಸವಿಯನ್ನು ಸವಿಯುತ್ತಿದ್ದರು. ಆದರೆ ಇಂದು ಹಬ್ಬವನ್ನು ಹೊಟೇಲ್ ಮಾಲ್‌ಗಳಲ್ಲಿ ಆಚರಣೆ ಮಾಡುವ ಪರಿಸ್ಥಿತಿ ಬಂದಿದೆ. ಅದಕ್ಕೆ ಬಲ್ಲವರು ನುಡಿಯುತ್ತಾರೆ 'ಇಂದು ಎಲ್ಲಾ ಇದೆ ಆದರೆ ಏನೂ ಇಲ್ಲದವರಂತೆ ಬದುಕುತ್ತಿದ್ದೇವೆ'. ಮತ್ತೆ ನಾವೆಲ್ಲೊ ಹಿಂದಿನ ದಿನಗಳು ಮರುಕಳಿಸುವಂತೆ ನೋಡಿಕೊಳ್ಳಬೇಕೇನೋ? ಸೌಕರ್ಯಗಳು ಹೆಚ್ಚಿವೆ. ಸಮಾಧಾನ, ಸಂತೃಪ್ತಿ ಕುಸಿದಿದೆ. ಆದ್ದರಿಂದ ವೇಗದ ಯುಗದಲ್ಲಿ ನಿಧಾನವಾಗಿ ಸಾಗುವ ಅಭ್ಯಾಸವನ್ನು ಮರೆಯಬಾರದು. ಅದಕ್ಕಾಗಿಯೇ ರಸ್ತೆಯ ಬದಿಯಲ್ಲಿ ನೆಟ್ಟ ಫಲಕದಲ್ಲಿ ಬರೆದಿರುತ್ತಾರೆ ಅವಸರವೇ ಅಪಘಾತಕ್ಕೆ ಕಾರಣ! ಅತಿಯಾದ ವೇಗ ಸಾವು ಬೇಗ...

3. **ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು:** ಎಲ್ಲರಿಗೂ ಒಂದೇ ಆಸೆ ನಮ್ಮ ಮಕ್ಕಳು ಪ್ರಥಮ ಸ್ಥಾನವನ್ನು ಗಳಿಸಬೇಕು, ಮುಂದೆ ಬರಬೇಕು ಅದಕ್ಕಾಗಿ ಏನು ಬೇಕಾದರೂ ತ್ಯಾಗಮಾಡಲು ಸಿದ್ಧ. ಆದರೆ ಅಂತ್ಯದಲ್ಲಿ ತ್ಯಾಗಮಾಡಿದ ತಂದೆ ತಾಯಿಯರನ್ನು ತ್ಯಾಗಮಾಡಿ ವೃದ್ಧಾಶ್ರಮಗಳಿಗೆ ಸೇರಿಸುವ ಕಾಲ ಈ ದಿನಗಳು. ಏಕೆಂದರೆ ಮಕ್ಕಳಿಗೆ ಉತ್ತಮ ಸಂಸ್ಕಾರವನ್ನು ನೀಡದೇ ಇದ್ದರೆ ಆಗುವುದೇ ಹೀಗೆ. ಮಕ್ಕಳು ಸ್ಪರ್ಧೆಗಿಳಿಯಬೇಕು ಇಲ್ಲದಿದ್ದರೆ ಅವರು ಯಶಸ್ವಿಯಾಗುವುದು ಹೇಗೆ? ಎಂದು ನೀವು ಯೋಚಿಸಬಹುದು. ನಿಮ್ಮ ಪ್ರಶ್ನೆ ನೂರಕ್ಕೆ ನೂರು ಸತ್ಯವಾದುದು. ಅದರೆ ಯೋಚಿಸಿದ ರೀತಿ ಮಾತ್ರ ತಪ್ಪು!!!. ಸ್ಪರ್ಧೆ ಬೇಕು ಆದರೆ ಇಲ್ಲಿ ಉದ್ಭವಿಸುವ ಪ್ರಶ್ನೆ ಅದು ಯಾರೊಂದಿಗೆ ಎನ್ನುವುದು! ಸ್ಪರ್ಧೆ ಇತರರೊಂದಿಗೆ ಮಾಡಿದರೆ ನಿರಾಸೆ ಅಸಂತೃಪ್ತಿ

ಕಟ್ಟಿಟ್ಟ ಬುತ್ತಿ. ಏಕೆಂದರೆ ಪ್ರತಿಯೊಬ್ಬರ ಸಾಮರ್ಥ್ಯ ಬೇರೆ ಬೇರೆಯಾಗಿರುತ್ತದೆ. ಅದಕ್ಕಾಗಿಯೇ ಸ್ಪರ್ಧೆ ಇತರರೊಂದಿಗೆ ಅಲ್ಲ ತನ್ನೊಂದಿಗೆ ಸ್ಪರ್ಧೆಗಿಳಿಯಬೇಕು. ತನ್ನೊಂದಿಗೆ ಎಂದರೆ ತನ್ನಲ್ಲಿ ಸಾಮರ್ಥ್ಯ ಇದೆ ಆದರೆ ಪ್ರಯತ್ನ ಮಾಡುವುದಿಲ್ಲವಾದರೆ ಅಲ್ಲಿ ತನ್ನ ಸಾಮರ್ಥ್ಯವನ್ನು ಸಂಪೂರ್ಣ ಸದ್ವಿನಿಯೋಗ ಮಾಡಿಕೊಳ್ಳುವತ್ತ ಸ್ಪರ್ಧೆಗಿಳಿಯಬೇಕು. ಅದೇ ನಿಜವಾದ ಸ್ಪರ್ಧೆ. ಹಿರಿಯರು ಇದರತ್ತ ಸ್ವಲ್ಪ ಗಮನ ಹರಿಸಿದರೆ ಖಿಂಡಿತ ಮಕ್ಕಳಲ್ಲಿಯ ಒತ್ತಡ, ಖಿನ್ನತೆಗೆ ಜಾರುವ ಸಂದರ್ಭಗಳು ತಪ್ಪಿಸಬಹುದು. 'ಅರಿವೇ ಗುರು' ನೀವು ಅರಿತುಕೊಳ್ಳಿ ಮಕ್ಕಳಿಗೆ ಗುರುವಾಗಿ.

**4. ಕನೆಕ್ಟಿಂಗ್ ಯುಗ:** ಯುವಪೀಳಿಗೆ ಹೆಚ್ಚಾಗಿ ಕೇಳುವ ಪ್ರಶ್ನೆ wifi ಇದೆಯಾ? ಇದ್ದರೆ connect ಮಾಡಿ! Bluetooth pair ಮಾಡಿ, power connect ಮಾಡಿ ಚಾರ್ಜ್ ಇಲ್ಲ!! ಸಾಮಾಜಿಕ ಮಾಧ್ಯಮಗಳ ಯುಗದಲ್ಲಿ ಎಲ್ಲರೂ connect ಆಗಿರಲು ಬಯಸುತ್ತಾರೆ ಆದರೆ ಯಾರೂ relate ಆಗಲು ಪ್ರಯತ್ನಿಸುವುದೇ ಇಲ್ಲ!!!. ಕಾರಣ ಬಾಲ್ಯದಿಂದಲೇ ಪ್ರತೀ ಪೋಷಕರು connect ಆಗುವ ಸಾಧನಗಳನ್ನು ಮಕ್ಕಳಿಗೆ ಕೊಡಿಸುತ್ತಾ ನನ್ನ ಮಕ್ಕಳೂ ತುಂಬಾ ಸಲೀಸಾಗಿ connect ಆಗ್ತಾರೆ ಅಂಥ ಹೆಮ್ಮೆಯಿಂದ ಬೀಗುತ್ತಾರೆ. ಅದಕ್ಕೇ ಮಕ್ಕಳು ಯಾವಾಗಲೂ ಹೊರಜಗತ್ತಿನೊಂದಿಗೆ connect ಆಗಿನೇ ಇರ್ತಾರೆ. ಎಲ್ಲೆಲ್ಲಿ ಅಂದರೆ ಊಟ ಮಾಡುವಾಗಲೂ connect, ಸ್ನಾನದ ಕೋಣೆಯಲ್ಲೂ connect, ವಾಹನ ನಡೆಸುವಾಗಲೂ connect, ಕೊನೆಗೆ ಅಪಘಾತ ಸಂಭವಿಸಿದಾಗಲೂ ನೆರವಾಗುವ ಬದಲು connect ಆಗಿಯೇ ಇರುತ್ತಾರೆ. ಇಂದು ಹಲವು ಕುಟುಂಬಗಳಲ್ಲಿ ಪಕ್ಕದಲ್ಲೇ ತಂದೆ ತಾಯಿ ಕುಳಿತಿದ್ದರೂ ಅವರೊಂದಿಗೆ ಮಾತನಾಡುವುದು chat ಮಾಡುವುದರ ಮೂಲಕನೇ!! ಅಂತಿಮವಾಗಿ ಯುವಜನರು ತಲೆಯೆತ್ತುವುದನ್ನೇ ಮರೆತುಬಿಡುತ್ತಾರೇನೋ? ಕನೆಕ್ಟಿಂಗ್ ಗುಂಗಿನಲ್ಲಿ ಸಂಬಂಧಗಳು ನಶಿಸುತ್ತಿವೆ, ಕಾಳಜಿಯ ಮಾತುಗಳು ಕೇಳಸಿಗದಾಗಿವೆ, ಎಲ್ಲವೂ ವ್ಯವಹಾರಿಕವಾಗಿಯೇ ಉಳಿದಿದೆ.

ಇಂಥಹ ಪರಿಸ್ಥಿತಿಯಲ್ಲಿ ಯುವಜನರು ಮಕ್ಕಳು ನಿಜವಾಗಿಯೂ ಗೊಂದಲದಲ್ಲಿದ್ದಾರೆ. ಗೊಂದಲ ಏನು ತಿಳಿದಿದೆಯೇ? ಮಾಹಿತಿ ತಂತ್ರಜ್ಞಾನದ ಯುಗದಲ್ಲಿ ಸರಿ ಮತ್ತು ತಪ್ಪು ಮಾಹಿತಿಯ ಆಯ್ಕೆಯ ಗೊಂದಲ. ವೇಗದ ಯುಗದಲ್ಲಿ ಯಾವುದಕ್ಕಾಗಿ ವೇಗ ಎಂದು ತಿಳಿಯದೆ ಓಡುತ್ತಿದ್ದಾರೆ. ಸ್ಪರ್ಧಾತ್ಮಕ ಯುಗದಲ್ಲಿ ಯಾರೊಂದಿಗೆ ಸ್ಪರ್ಧೆ? ಯಾಕೆ ಸ್ಪರ್ಧೆ ಎಂದು ತಿಳಿಯದ ಗೊಂದಲ. connect ಮತ್ತು relate ಮಧ್ಯೆ ಗೊಂದಲ. ಹೀಗೆ ಹತ್ತು ಹಲವು ಗೊಂದಲಗಳಲ್ಲಿ ನಮ್ಮ ಭವ್ಯ ಸಮಾಜದ ಮುಂದಿನ ಪ್ರಜೆಗಳು ಕಷ್ಟಪಡುತ್ತಿದ್ದಾರೆ. ಹಲವರು ಸಮಸ್ಯೆಗಳಿಗೆ ಪರಿಹಾರ ಹುಡಿಕಿಕೊಂಡು ಉತ್ತಮ ಬದುಕು ರೂಪಿಸಿಕೊಂಡರೆ ಇನ್ನೂ ಹಲವರು ದುರಾವಸ್ಥೆಗೆ ತಲುಪಿದ್ದಾರೆ. ಈ ಸಂದರ್ಭದಲ್ಲಿ ಈ ಮೊಗ್ಗಿನ ಮನಸ್ಸುಗಳಿಗೆ ಸಕಾಲಕ್ಕೆ ಸರಿಯಾದ ದಾರಿ ತೋರಿಸುವ ಗುರು, ಕೈಹಿಡಿದು ಪ್ರೀತಿಯ ಅಪ್ಪುಗೆ ನೀಡುತ್ತಾ ಮುನ್ನಡೆಸುವ ತಂದೆ–ತಾಯಿ ಸಿಕ್ಕಿದರೆ ಬಾಳು ಬೆಳಗುವುದರಲ್ಲಿ ಸಂಶಯವಿಲ್ಲ. ವಿಪರ್ಯಾಸವೆಂದರೆ ಇಂದು ಮನರಂಜನೆಗಾಗಿ ನೋಡುವ ಧಾರವಾಹಿಗಳು, ಸಿನಿಮಾಗಳೇ ಹಲವು ಕುಟುಂಬಗಳಲ್ಲಿ ಜೀವನವಾಗಿಸಿಕೊಂಡಿದ್ದಾರೆ. ಇದೆಲ್ಲಾ ಮನರಂಜನೆಗೆ ಸೀಮಿತವಾಗಿಸಿಕೊಂಡು ಜೀವನ ಧಾರವಾಹಿ, ಸಾಮಾಜಿಕ ಮಾಧ್ಯಮಗಳಿಗಿಂತ ಶ್ರೇಷ್ಠವಾದುದು ಎಂದು ಅರಿಯುವ ಕಾಲಕ್ಕೆ ಪಾದಾರ್ಪಣೆ ಮಾಡಬೇಕು. ಹಲವು ಪೋಷಕರು ಮಕ್ಕಳಿಗಾಗಿ ಆಸ್ತಿಯನ್ನು ಸಂಪಾದಿಸುವ ಸೋಗಿನಲ್ಲಿ ಸಂತೋಷವನ್ನೇ ಮರೆತುಬಿಟ್ಟಿದ್ದಾರೆ. ಇಂದು ಆಸ್ತಿ, ಹಣ, ಅಧಿಕಾರ, ಸಮಾಜದಲ್ಲಿ ಗೌರವ ಎಲ್ಲಾ ಇದೆ ಆದರೆ ಮುಖದಲ್ಲಿ ನಗುವಿಲ್ಲ ಮನದಲ್ಲಿ ಸಮಾಧಾನವೇ ಇಲ್ಲ! ಅದ್ದರಿಂದ ಮಕ್ಕಳಿಗಾಗಿ ಆಸ್ತಿಯನ್ನು ಸಂಗ್ರಹಿಸಲು ಪ್ರಯತ್ನಿಸಬೇಡಿ ಮಕ್ಕಳನ್ನೇ ಆಸ್ತಿಯಾಗಿಸಿಕೊಳ್ಳಿ. ವಸ್ತುಗಳನ್ನು ಉಪಯೋಗಿಸಿ ಮನುಷ್ಯರನ್ನು ಪ್ರೀತಿಸಿ. ಕುಟುಂಬದೊಂದಿಗೆ ಸಮಯ ಕಳೆಯಿರಿ. ಕಿರುಪ್ರವಾಸ, ಮನರಂಜನೆ ಇವುಗಳೊಂದಿಗೆ ಜೀವನವನ್ನು ಸಂಭ್ರಮವಾಗಿಸಿ.

ಮನಸ್ಸು ಮಾಡಿ ಬದಲಾವಣೆಯನ್ನು ಇಂದೇ ತಂದುಕೊಳ್ಳಿ. ನಿಮ್ಮ ಜೀವಕ್ಕೆ ಹಾಗೂ ಮುಂದಿನ ಜೀವನಕ್ಕೆ ವಿಮೆಯನ್ನು ಮಾಡಿಸಿದ್ದೀರಿ ಆದರೆ ನಿಮಗೆ ವಯಸ್ಸಾದಾಗ, ವಿಶ್ರಮಿಸುವ ಕಾಲಬಂದಾಗ ವಿಮೆಯ ಹಣವೇನೊ ಸಿಗಬಹುದು ಆದರೆ ಸಂತೋಷ, ಸಮಾಧಾನ ಸಂತೃಪ್ತಿಯೇ ಇಲ್ಲದಿದ್ದರೆ ವಿಮೆಯ ಹಣವನ್ನು ಆಸ್ಪತ್ರೆಗೆ ಸುರಿದು ಆಸ್ಪತ್ರೆಯ ಅಭಿವೃದ್ಧಿಯ ದಾನಿಗಳಾಗುತ್ತೀರಿ. ಊಟ ಕಡಿಮೆ ಮಾಡಿ ಔಷಧಗಳನ್ನು ಜಾಸ್ತಿ ತಿನ್ನುವಂತಾಗಬಹುದು. 'ಮಿಂಚಿಹೋದ ಕಾಲಕ್ಕೆ ಚಿಂತಿಸಿ ಫಲವಿಲ್ಲ.' ಆದ್ದರಿಂದ ನಿಮ್ಮ ಮಕ್ಕಳನ್ನು ಸಂಸ್ಕಾರಯುತವಾಗಿ ಬೆಳೆಸಿ, ಅವರಿಗೆ ತಂದೆ–ತಾಯಿಯಾಗುವುದಕ್ಕಿಂತ ಹೆಚ್ಚಾಗಿ ಗೆಳೆಯ ಗೆಳತಿಯರಾಗಿ, ಸರಿ–ತಪ್ಪುಗಳ ತಿಳುವಳಿಕೆ ಕಿರಿಯ ವಯಸ್ಸಿನಿಂದಲೆ ನೀಡಿ. ಇಂದೂ ಎಂದೆಂದೂ ಜೀವನ ಸಂಭ್ರಮಿಸುವುದನ್ನು ಕಲಿಯಬೇಕಾಗಿದೆ. ನಿರ್ಧಾರ ಮಾಡಿದ್ದೀರಾ ಅನಿಸುತ್ತೇ!

# ಪರಿಸರದ ಕಣ್ಣಾ ಮುಚ್ಚಾಲೆ



✍ **ಡಾ. ನಾ. ಡಿಸೋಜ**
ನೆಹರು ನಗರ
ಸಾಗರ 577 401
98806 35245



ಮಲೆನಾಡಿಗರು ಎಂದು ಕರೆಸಿಕೊಳ್ಳಲು ಸದಾ ಹೆಮ್ಮೆ ಪಡುವ ನಾವು ಮಲೆನಾಡನ್ನ ಉಳಿಸಿಕೊಂಡು ಬರುವಲ್ಲಿ ಸದಾ ಹಿಂದಿದ್ದೇವೆ. ಮಲೆನಾಡಿನ ಬಗ್ಗೆ ದಿವಸದಲ್ಲಿ ಒಂದು ನಿಮಿಷ ಯೋಚಿಸಿದರೆ ಸಾಕೇ ಸಾಕು ಮಲೆನಾಡು ಉಳಿಯುತ್ತದೆ. ಆದರೆ ನಮಗೆ ಮಲೆನಾಡನ್ನ ನಾಶ ಮಾಡುವಲ್ಲಿ ಇರುವ ಆಸಕ್ತಿ ಶ್ರದ್ಧೆ ಅದನ್ನ ಉಳಿಸುವಲ್ಲಿ ಇಲ್ಲವಾಗಿದೆ. ನಮ್ಮ ರಸ್ತೆ ಕಾಮಗಾರಿಯನ್ನ ನೋಡಿಕೊಳ್ಳುವ ಗುತ್ತಿಗೆದಾರರು ಬೆಳೆಯಲಿಕ್ಕೆ ಐವತ್ತು, ನೂರು ವರ್ಷ ತೆಗೆದುಕೊಂಡ ಮರಗಳನ್ನ ವಿದ್ಯುತ್ ಗರಗಸದಿಂದ ನಿಮಿಷದಲ್ಲಿ ಕಡಿದು ಉರುಳಿಸುತ್ತಾರೆ. ಪರಿಸರ ಯಾವುದನ್ನ ಕಾಪಾಡಿಕೊಂಡು, ಉಳಿಸಿಕೊಂಡು, ಗಾಳಿ ಮಳೆಯಿಂದ ರಕ್ಷಿಸಿಕೊಂಡು ಬಂದಿರುತ್ತದೋ ಅಂತಹ ಮರವನ್ನ ಕ್ಷಣ ಮಾತ್ರದಲ್ಲಿ ನಾವು ಉರುಳಿಸಿ ಬಿಡುತ್ತೇವೆ ಅಂದರೆ ಈ ವಿಪರ್ಯಾಸದ ಬಗ್ಗೆ ನಾವು ಯೋಚಿಸುವುದೇ ಇಲ್ಲ ಅಲ್ಲವೆ?

ಹೌದು ಈ ಮಲೆನಾಡು ಅಂದರೆ ಯಾವುದು? ಮಲೆನಾಡು ಅಂದರೆ ಏನು? ಎಂಬ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿ ಬಂದಿರುವುದು ನಿಜಕ್ಕೂ ಒಂದು ದುರಂತ. ಯಾವುದನ್ನ ಮನುಷ್ಯ ತನ್ನ ಅನುಭವದಿಂದ ತಿಳಿದುಕೊಳ್ಳಬೇಕಿತ್ತೋ ಅದರ ಬಗ್ಗೆ ಪಾಠ ಮಾಡಬೇಕಾಗಿ ಬಂದಿರುವುದು ನಿಜಕ್ಕೂ ಒಂದು ದುರಂತ. ಸರಳವಾಗಿ ಹೇಳಬೇಕು ಅಂದರೆ ಸಾಲುಸಾಲಾದ ಎತ್ತರದ ಬೆಟ್ಟಗಳು, ಅಲ್ಲಲ್ಲಿ ಮೈತುಂಬಿ ಹರಿಯುವ ನದಿ ಹಳ್ಳಗಳು, ಆಕಾಶವನ್ನ ಚುಂಬಿಸುವ ಎತ್ತರದ ಮರಗಳು, ಇವುಗಳ ಆಶ್ರಯದಲ್ಲಿ ಬೆಳೆದ ವೈವಿಧ್ಯಮಯವಾದ ಹಕ್ಕಿ, ಪ್ರಾಣಿ ಪಕ್ಷಿಗಳು, ಅಷ್ಟೇ ವೈವಿಧ್ಯಮಯವಾದ ಗಿಡ ಮರ ಬಳ್ಳಿಗಳು, ಔಷಧೀಯ ಸಸ್ಯಗಳು, ವರ್ಷಕ್ಕೆ ಇಷ್ಟು ಎಂದು ಸುರಿಯುವ ಮಳೆ, ಈ ಮಳೆಯನ್ನ ತನ್ನಲ್ಲಿ ಇಂಗಿಸಿಕೊಂಡು ವರ್ಷವೆಲ್ಲ ಕಾಡು ಪ್ರಾಣಿಗಳಿಗೆ ನದಿ ಹಳ್ಳಗಳ ಮೂಲಕ ಉಣಿಸುವ ಒಂದು ವ್ಯವಸ್ಥೆ, ಚಳಿ, ಪ್ರಕೃತಿಯ ವಿಶೇಷಗಳು, ಇವೆಲ್ಲ ಮಲೆನಾಡು ಎಂದು ನಾವು ಕರೆಯುವ ವಿಶೇಷ. ವಿಶಾಲ ಅರ್ಥದಲ್ಲಿ ನಾವು ಯಾವುದನ್ನ ಪಶ್ಚಿಮ ಘಟ್ಟ ಎಂದು ಕರೆಯುತ್ತೇವೆಯೋ ಅದರ ಶಿಶು ಈ ಮಲೆನಾಡು ಅನ್ನ ಬಹುದು. ಬಹಳ ವಿಸ್ತಾರವಾದ ರೂಪದಲ್ಲಿ ಪಶ್ಚಿಮ ಘಟ್ಟ, ಒಂದು ರಾಜ್ಯದ ಮಟ್ಟದಲ್ಲಿ ಅದು ಮಲೆನಾಡು.

ಒಂದು ವಿಚಿತ್ರವೆಂದರೆ ಪಶ್ಚಿಮ ಘಟ್ಟದ ಮೇಲೆ ಏನೆಲ್ಲ ಅತ್ಯಾಚಾರಗಳು ನಡೆಯುತ್ತಿವೆಯೋ ಆ ಎಲ್ಲ ಅತ್ಯಾಚಾರಗಳೂ ಮಲೆನಾಡಿನ ಮೇಲೆ ಆಗುತ್ತಿವೆ, ನಾವು ಈವತ್ತು ಮಲೆನಾಡನ್ನೂ ರಕ್ಷಿಸಿಕೊಂಡು ಬರಬೇಕಿದೆ ಪಶ್ಚಿಮ ಘಟ್ಟಗಳನ್ನೂ ರಕ್ಷಿಸಿಕೊಂಡು ಬರಬೇಕಿದೆ. ಕನ್ಯಾಕುಮಾರಿಯಿಂದ ತಾಪಿ ನದಿಯವರೆಗೆ 1600 ಕಿ.ಮೀ.ವರೆಗೆ ಚಾಚಿಕೊಂಡಿದೆ ಪಶ್ಚಿಮ ಘಟ್ಟ. ಹಲವು ರಾಜ್ಯಗಳು ಪಶ್ಚಿಮ ಘಟ್ಟಗಳ ವ್ಯಾಪ್ತಿಯಲ್ಲಿ ಬರುತ್ತವೆ. ಅದರಲ್ಲಿ ನಮ್ಮ ಮಲೆನಾಡು ಕೂಡ ಒಂದು.

ಬ್ರಿಟೀಷರು ಪಶ್ಚಿಮ ಘಟ್ಟದ ಮೇಲೆ ಏನೆಲ್ಲ ಅತ್ಯಾಚಾರವನ್ನ ಮಾಡಿದರೋ ಆ ಎಲ್ಲ ಅತ್ಯಾಚಾರಗಳು ಮಲೆನಾಡಿನ ಮೇಲೂ ನಡೆದವು. ಕಾಡು ಕಡಿದರು, ಕಾಡಿನೊಳಗೆ ರಸ್ತೆಗಳನ್ನ ನಿರ್ಮಿಸಿ ದೊಡ್ಡ ದೊಡ್ಡ ಮರಗಳನ್ನ ಸಾಗಿಸಿದರು. ನಂದಿ,

ತೇಗ, ಮತ್ತಿ ಮರಗಳ ಆಸನಗಳನ್ನ ಮಾಡಿ ತಮ್ಮ ಮೋಜಿಗಾಗಿ ಬಳಸಿಕೊಂಡರು, ಮಲೆನಾಡಿನ ಕಾಡಿಗೆ ನುಗ್ಗಿ ಇಲ್ಲಿಯ ಹುಲಿ, ಕಾಡುಕೋಣ, ಜಿಂಕೆಗಳ ಬೇಟೆಯಾಡಿದರು, ಇಲ್ಲಿಯ ಕಲ್ಲು ಕಬ್ಬಿಣ ಮೊದಲಾದ ಖನಿಜಗಳನ್ನ ಬಳಸಿಕೊಂಡರು. ಕೆಲ ವಿದೇಶೀ ಸಸ್ಯಗಳನ್ನ ಇಲ್ಲಿಗೆ ತಂದು ಇಲ್ಲಿ ನೆಟ್ಟು ಇಲ್ಲಿಯ ಜನರಿಗೂ ಅದನ್ನ ಬೆಳೆಸುವುದನ್ನ ಹೇಳಿಕೊಟ್ಟರು. ಇಡೀ ದೇಶ ಅವರದ್ದೇ ಆಗಿದ್ದರಿಂದ ಈ ದೇಶದ ಪ್ರಕೃತಿಯನ್ನೇ ಬದಲಾಯಿಸಿದರು.

ಸ್ವಾತಂತ್ರ್ಯಾನಂತರ ಕೂಡ ಇದು ಮುಂದುವರೆಯಿತು. ವ್ಯವಸಾಯಕ್ಕಾಗಿ ಹೊಸ ಜಮೀನು ಬೇಕಿದ್ದರಿಂದ ಕಾಡನ್ನ ಸವರಿದರು, ಗುಡ್ಡಗಳನ್ನ ಅಗೆದರು, ವಾಹನ ಸಂಚಾರಕ್ಕಾಗಿ ರಸ್ತೆಗಳನ್ನ ಮಾಡಿದರು. ಹೊಸ ರಸ್ತೆಗಳ ನಿರ್ಮಾಣವೇ ಪ್ರಗತಿ ಎಂದು ತಿಳಿದರು, ಹೊಸ ಅಣೆಕಟ್ಟುಗಳ ನಿರ್ಮಾಣದಿಂದಾಗಿ ಮುಳುಗಡೆ ಅನ್ನುವುದು ನಮ್ಮನ್ನ ಕಾಡತೊಡಗಿತು. ಪಂಡಿತ ಜವಾಹರಲಾಲ ನೆಹರು ಅವರು “ಅಣೆಕಟ್ಟುಗಳನ್ನ ಆಧುನಿಕ ಭಾರತದ ದೇವಾಲಯಗಳು” ಎಂದು ಕರೆದರು. ಈ ದೇವಾಲಯಗಳು ಇಂದು ನೂರು ಸಮಸ್ಯೆಗಳನ್ನ ಸೃಷ್ಟಿಮಾಡಿವೆ. ಸಾವಿರಾರು ಎಕರೆ ಕಾಡನ್ನ ಕಡಿದಿದ್ದರಿಂದ ಮಳೆ ಕಡಿಮೆ ಆಗಿ ನೀರಿನ ಅಭಾವ ಕಾಡತೊಡಗಿದೆ. ಬೇರೆ ಬೇರೆ ಸಮಸ್ಯೆಗಳು ನಮ್ಮನ್ನ ಕಾಡ ತೊಡಗಿದವು.

ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ಅರಣ್ಯದ ಮೇಲೆ ರೈತರ ಕಣ್ಣು ಬಿದ್ದುದರಿಂದ ಅಲ್ಲಿಯ ಉತ್ಪನ್ನಗಳ ಮೇಲೆ ರೈತರು ದಾಳಿ ಮಾಡಿ ಅದರ ಬೇಕಾಬಿಟ್ಟಿ ದೋಚುವಿಕೆಗೆ ಕಾರಣರಾದರು. ಕಾಡು ಕಡಿದು ರಸ್ತೆಗಳ ನಿರ್ಮಾಣ ಮಾಡುವುದೇ ಒಂದು ಉದ್ಯಮವಾಗಿದ್ದರಿಂದ ಕಾಡಿನ ಪ್ರಾಣಿಗಳೆಲ್ಲ ಪೇಟೆಗೆ ಬರತೊಡಗಿದವು. ಸಹಸ್ರ ವರ್ಷಗಳಿಂದ ಭೂ ಗರ್ಭದಲ್ಲಿ ಅಡಗಿದ್ದ ಅತ್ಯಮೂಲ್ಯವಾದ ಲೋಹಗಳನ್ನ ತೆಗೆಯಲು ಕೆಲ ವಿದೇಶೀ ಕಂಪನಿಗಳು ದಾಳಿ ಇಟ್ಟವು.

ಶ್ರೀ ಹೆಚ್. ಡಿ. ದೇವೇಗೌಡರು ಪ್ರಧಾನಿಗಳಾಗಿದ್ದಾಗ ಆಸ್ಟ್ರೇಲಿಯಾದ ಒಂದು ಕಂಪನಿ ಇಲ್ಲಿ ಚಿನ್ನ ತೆಗೆಯಲು ಮುಂದಾಗಿ ಮಲೆನಾಡಿನ 50 ಸಹಸ್ರ ಜನ ಇದನ್ನ ವಿರೋಧಿಸಿ ಧರಣಿ ಮಾಡಬೇಕಾಯಿತು. ಇಂದಿಗೂ ಕೂಡ ಭೂನುಂಗಣ್ಣಗಳು ಕಾಡಿಗೆ ಕೃತಕವಾಗಿ ಬೆಂಕಿ ಇಟ್ಟು ಜಮೀನನ್ನ ಕಬಳಿಸುವ ಕೆಲಸ ಮಾಡುತ್ತಿದ್ದಾರೆ. ಮಲೆನಾಡಿಗೆ ಹೇಳಿ ಮಾಡಿಸದ ಹತ್ತಿ, ಶುಂಠಿ, ರಬ್ಬರು, ಇತ್ಯಾದಿಗಳನ್ನ ಇಲ್ಲಿಯ ನೆಲದಲ್ಲಿ ಬಿತ್ತಿ ಈ ನೆಲವನ್ನ ಮುಂದಿನ ಕೆಲ ವರ್ಷಗಳವರೆಗೆ ನಿರುಪಯೋಗಿ ಆಗುವಂತೆ ಮಾಡುತಿದ್ದಾರೆ. ಇಂತಹ ಅಪಾಯಕಾರಿ ಬೆಳೆಗೆ ಕೇರಳ ಸರಕಾರ ನಿಷೇಧವನ್ನ ವಿಧಿಸಿದಾಗ ಈ ಬೆಳೆಯನ್ನ ಕೇರಳದಲ್ಲಿ ಬೆಳೆಯುತ್ತಿದ್ದ ರೈತರು ತಮ್ಮ ಚಟುವಟಿಕೆಯನ್ನ ಕರ್ನಾಟಕಕ್ಕೆ ಸ್ಥಳಾಂತರಿಸಿ ಇಲ್ಲಿಯ ಭೂಮಿಯನ್ನ ಕೆಡಿಸುತ್ತಿದ್ದಾರೆ. ಇಲ್ಲಿಯ ಸರಕಾರ ಇದನ್ನ ಗಮನಿಸದೇ ಕುರುಡರಂತೆ ವರ್ತಿಸುತ್ತಿದೆ.

ನಮ್ಮ ಸುತ್ತಲಿರುವ ಪರಿಸರವನ್ನ ಅರ್ಥ ಮಾಡಿಕೊಂಡು ಅದರ ಜೊತೆಯಲ್ಲಿ ನಾವು ಒಂದು ಬಗೆಯ ಅನುಸಂಧಾನ ಮಾಡಿಕೊಳ್ಳುವ ತನಕ ಪರಿಸರ ನಮ್ಮನ್ನ ರಕ್ಷಿಸುತ್ತದೆ. ನಾವು ಪರಿಸರವನ್ನ ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ ಪರಿಸರ ಸಂದರ್ಭ ನೋಡಿ ನಮ್ಮ ಮೇಲೆ ಸೇಡು ತೀರಿಸಿಕೊಳ್ಳುತ್ತದೆ. ಮೊನ್ನೆ ಮೊನ್ನೆ ಕೇರಳದಲ್ಲಿ ಆದದ್ದು ಇದೇ. ಮನುಷ್ಯ ಅದೆಷ್ಟೇ ವೈಜ್ಞಾನಿಕವಾಗಿ ಮುಂದುವರೆದವನಾಗಿದ್ದರೂ ಅವನು ಪ್ರಕೃತಿಯ ಮುಂದೆ ಶಿಶು. ಇದರ ಅನುಭವ ನಮಗೆ ಈಗಾಗಲೇ ಆಗುತ್ತಿದೆ. ಈ ಹಿಂದೆಯೂ ಇದು ನಮಗೆ ಆಗಿದೆ. ಆದರೆ ಮನುಷ್ಯನ ಅಹಂಕಾರ ಈ ಸತ್ಯವನ್ನ ಅರ್ಥ ಮಾಡಿಕೊಳ್ಳಲು ಅಡ್ಡ ಬಂದಿದೆ. ಆದರೂ ಪ್ರಕೃತಿಯ ಕೈ ಮೇಲಾಗಿ ಬಡಪಾಯಿ ಮನುಷ್ಯ ಸೋಲುತ್ತಿದ್ದಾನೆ.

1900 ರಿಂದ 1950ರವರೆಗೆ ಮಲೆನಾಡಿನಲ್ಲಿ ಬೀಳುತ್ತಿದ್ದ ಮಳೆಯ ಅಂಕಿ ಅಂಶವನ್ನ ಕಲೆಹಾಕಿ ಸರಕಾರ ಲಿಂಗನಮಕ್ಕಿಯಲ್ಲಿ ಒಂದು ಅಣೆಕಟ್ಟನ್ನ ನಿರ್ಮಿಸಿತು. ಇದರಿಂದ ಅದೆಷ್ಟೋ ಮೆಗಾವ್ಯಾಟ್ ವಿದ್ಯುತ್ತನ್ನ ತಯಾರಿಸುವ ಹೊಂಚು ಹಾಕಿತು. ಸರಕಾರ ಕಲೆಹಾಕಿದ ಅಂಕಿ ಅಂಶ ಈ ಪ್ರದೇಶದಲ್ಲಿ ವರ್ಷಕ್ಕೆ 320 ಇಂಚು ಮಳೆ ಬೀಳುತ್ತದೆಂದು ಹೇಳಿತು. ಅಣೆಕಟ್ಟಿನ ನಿರ್ಮಾಣದಿಂದಾಗಿ ಸುಮಾರು 12,000 ಎಕರೆ ಕಾಡು ನಾಶವಾಗಿ ಮಳೆ 70–80 ಇಂಚಿಗೆ ಇಳಿಯಿತು. ಇದೀಗ ವಿದ್ಯುತ್ ಸ್ರೋತಾ ನಮಗೆ ಅನಿವಾರ್ಯವಾಗಿದೆ. ಸರಕಾರ ಶರಾವತಿ ಯೋಜನಾ ಪ್ರದೇಶದಲ್ಲಿ ಕೃತಕ ಮಳೆ ತರಿಸಿತು. ಯಾವನೋ ದೈವ ಮಾನವನೊಬ್ಬನನ್ನ ಕರೆಸಿ ಲಿಂಗನಮಕ್ಕಿ ಬಯಲಿನಲ್ಲಿ ಒಂದು ಯಾಗವನ್ನ ಗುಟ್ಟಾಗಿ ಮಾಡಿಸಲಾಯಿತು. ಮಳೆ ಮಾತ್ರ ಬರಲಿಲ್ಲ. ಮಳೆ 70, 80ರ ಗಡಿ ದಾಟಲಿಲ್ಲ.

ಅತಿ ಮಳೆ, ಅಕಾಲಿಕ ಮಳೆ, ಅತಿ ಬಿಸಿಲು, ಅತಿ ಚಳಿ ಇವೆಲ್ಲ ಪ್ರಕೃತಿಯ ವೈಪರೀತ್ಯಗಳು, ಇವು ಹೆಚ್ಚುತ್ತಿವೆ. ನಿಸರ್ಗ ಅನ್ನುವುದು ಕೆರಳಿ ನಿಂತಿದೆ. ಭೂಮಿಯ ಅಂತ್ಯವೇ ಬಂದಿದೆ ಅನ್ನುವ ಮಾತು ಕೇಳಿ ಬರುತ್ತಿದೆ. ಇಂತಹಾ ಸಂದರ್ಭದಲ್ಲಿ ಮಾನವನ ಹೊಣೆಯ ಬಗ್ಗೆ ನಾವೆಲ್ಲ ಯೋಚಿಸಬೇಕಿದೆ. ಈಗಿನ ಹಾಗೆಯೇ ದುಂದುಗಾರ ಮಗನ ಹಾಗೆ ನಾವು ಪರಿಸರವನ್ನ ಬಳಸಿಕೊಳ್ಳುವುದನ್ನ ಮುಂದುವರೆಸಿದರೆ ನಾಳೆ ನಿಜಕ್ಕೂ ಅಪಾಯವನ್ನ ನಾವೇ ತಂದು ಕೊಟ್ಟಂತೆ ಆಗುತ್ತದೆ. ಈ ಎಚ್ಚರಿಕೆ ನಮಗಿದ್ದರೆ ಈ ನಮ್ಮ ಪರಿಸರ, ಮಲೆನಾಡು ಉಳಿಯುತ್ತದೆ ಅದರ ಜೊತೆಗೆ ನಾವೂ..........

# ಅಪ್ಪು ಮತ್ತು ಅಪ್ಪುವಿನ ತಪ್ಪು...



✍ ಸ್ಟ್ಯಾನಿ ಲೋಪಿಸ್, ಕಾರ್ಗಲ್
stanylopes@gmail.com

ಮನೆಯಲ್ಲಿ ಸಡಗರ ಸಂಭ್ರಮದ ವಾತಾವರಣ ಎಲ್ಲೆಡೆ ತುಂಬಿತ್ತು. ಹಿರಿಯರೆಲ್ಲರು ಪಂಚಾಯ್ತಿ ಮಾಡುತ್ತಿದ್ದರು, ಹೆಂಗಸರು ಅಡುಗೆ ಕೆಲಸದಲ್ಲಿ ಮುಳುಗಿದ್ದರು, ಮಕ್ಕಳು ಮನೆಯನ್ನೆಲ್ಲ ಒಂದು ಮಾಡಿದಾಗೆ ಕುಣಿದು ಕುಪ್ಪಳಿಸುತ್ತಿದ್ದರು. ಇವರ ನಡುವೆ ಅಪ್ಪು ತನ್ನ ತುಂಟಾಟ ಮಾಡುತ್ತ ಅತ್ತಿತ್ತ ಓಡಾಡುತ್ತಿದ್ದ. ಅಪ್ಪುಗೆ ಏನು ಮಾಡಬೇಡ ಎನ್ನತ್ತೇವೋ ಆ ಕೆಲಸವೇ ಬಹುಬೇಗ ಮಾಡುವ ಪ್ರವೃತ್ತಿಯ ಗುಣದವನು. ಅಂದರೆ ಶುದ್ದ ತರಲೆ. ಮುಟ್ಟಬೇಡ ಎಂದು ಹೇಳಿದರೆ ಆ ವಸ್ತುವನ್ನು ಮುಟ್ಟಿಯೇ ತಿರುವೆನೆಂಬ ಬಂಡತನದ ಸ್ವಭಾವ ಅವನದಾಗಿತ್ತು. ಹೀಗಿರುವಾಗ ಅಪ್ಪು ಬಂದನೆಂದರೆ ಮನೆಯ ವಸ್ತುಗಳೆಲ್ಲ ಅಪ್ಪಚ್ಚಿಯಾಗೋ ಮುನ್ನ ಮಾಳಿಗೆ ಮೇಲೆತ್ತಿಡುತ್ತಿದ್ದರು.ಕಾರಣ ಈತನ ಕೈಯಲ್ಲಿ ಚಿನ್ನದ ಕೆಲಸಕ್ಕೆಂದು ಬಳಸುವ ಸಣ್ಣ ಕಬ್ಬಿಣದ ಸುತ್ತಿಗೆ ಸದಾ ಜೊತೆಗಿರುತ್ತಿತ್ತು.ಇದೇ ಅವನ ಅಚ್ಚು ಮೆಚ್ಚಿನ ಆಟಿಕೆ ಸಾಮಾಗ್ರಿಯಾಗಿತ್ತು. ಎಲ್ಲೇ ಹೋದರು ಇವನ ಬಾಲದಂತೆ ಅದು ಜೊತೆಗೆ ಇರಬೇಕಿತ್ತು. ಅಪ್ಪುವಿನ ಕಿಸೆಯಲ್ಲಿ ಬಿಟ್ಟರೆ ಕೈಯಲ್ಲಿ ಹಾಗು ಮಲಗುವಾಗ ತಲೆದಿಂಬಿನ ಅಡಿಯಲ್ಲಿರುತ್ತಿತ್ತು. ಹಾಗಾಗಿ ಬಂದವರೆಲ್ಲರ ಗಮನವನ್ನು ಈತ ಬಹುಬೇಗ ಸೆಳೆಯುತ್ತಿದ್ದ, ಅದಲ್ಲದೆ ನೋಡಲು ಬಲು ಚೂಟಿಯಾಗಿದ್ದು ಮುದ್ದು ಮುದ್ದಾಗಿದ್ದ.

ಸದಾ ಕಾಲಿಗೆ ಚಕ್ರ ಕಟ್ಟಿದ ಹಾಗೆ ಮನೆಯೊಳಗೆ ಹೊರಗೆ ಓಡಾಡುಡುವ ಅಪ್ಪು ಆ ದಿನ ಮನೆಯ ಒಂದು ಕೋಣೆಗೆ ನುಗ್ಗಿದ. ಕೋಣೆಯಲ್ಲಿದ್ದ ಅಲಂಕಾರದ ಸಾಮಾಗ್ರಿಗಳತ್ತ ದೃಷ್ಟಿ ನೆಟ್ಟ. ನೇತಾಕಿದ್ದ ಬಳೆಯನ್ನೆಲ್ಲ ಒಮ್ಮೆಗೇ ಬಾಚಿದ , ನೆಲಕ್ಕೆ ಕೆಡವಿದ. ಪಕ್ಕದಲ್ಲಿದ್ದ ಪೌಡರ್ ಡಬ್ಬದತ್ತ ಕೈ ಹಾಕಿ ಕೋಣೆಯಲ್ಲೆಲ್ಲ ಚೆಲ್ಲಿ ಹರಡಿದ.ಅಲ್ಲಿದ್ದ ಇನ್ನು ಹಲವು ವಸ್ತುಗಳು ಅಪ್ಪುವಿನ ಕೈ ಸೇರಿ ನೆಲಸಮವಾಗಿ ಚೂರಾಗತೊಡಗಿದವು. ಅಷ್ಟೊತ್ತಿಗಾಗಲೆ ಇವನ ಅವಸ್ಥೆಯನ್ನು ನೋಡಿ ಲಕ್ಷ್ಮಿ ಅಮ್ಮನ ಕಿವಿಗೆ ಸುದ್ದಿ ಮುಟ್ಟಿಸಿದಳು. ಅಮ್ಮ ಅಡಿಗೆ ಮನೆಯಿಂದ ಗುಡುಗುತ್ತಲೆ ಅಪ್ಪುವಿನತ್ತ ಬಂದು ಅವನಿಗೆ ಸರಿಯಾಗಿ ನಾಲ್ಕೈದು ಏಟು ಬಾರಿಸಿದಳು. ಅಪ್ಪುವಿಗೆ ಅಮ್ಮನ ಪೆಟ್ಟಿನ ನೋವಿಗಿಂತ ಲಕ್ಷ್ಮಿ ದೂರದಲ್ಲಿ ನಿಂತು ಗೇಲಿಮಾಡಿ ಹಿಯಾಳಿಸಿ ನಗುತ್ತಿರುವುದು ಸಹಿಸಲಾಗಲಿಲ್ಲ. ಸಿಟ್ಟು ನೆತ್ತಿಗೇರಿತ್ತು.ಗಲ್ಲದಿಂದ ಕಂಬನಿಹನಿ ಜಾರಿ ನೆಲಸೇರುತ್ತಿತ್ತು.ಲಕ್ಷ್ಮಿಯ ಮೇಲೆ ಅಪ್ಪುವಿಗೆ ಕೋಪ ಕೆಂಡದಂತಾಗಿತ್ತು. ಸೇಡು ತೀರಿಸಿಕೊಳ್ಳಲು ಸಂಚನ್ನು ಮಸ್ತಕದಲ್ಲಿ ಸಿದ್ಧಗೊಳಿಸಿ ಅವಕಾಶಕ್ಕಾಗಿ ಅಳುತ್ತಾ ಕಾಯುತ್ತಿದ್ದ.

ಅಷ್ಟೊತ್ತಿಗಾಗಲೆ ಲಕ್ಷ್ಮಿಗೆ ಅಮ್ಮ ಸ್ನಾನಮಾಡಿಸಲೆಂದು ಆಕೆಯ ಕಿವಿಯಲ್ಲಿದ್ದ ಬಂಗಾರದ ಕಿವಿಯೋಲೆ, ಕೈ ಬಳೆ ಹಾಗು ಸರವನ್ನೆಲ್ಲ ಕಳಚಿಟ್ಟು ಸ್ನಾನಕ್ಕೆ ಕರೆದೊಯ್ದರು. ಸ್ನಾನ ಮುಗಿಸಿ ಹೊರಬಂದು ನೋಡುವ ಹೊತ್ತಿಗೆ ಅಪ್ಪು ಕಣ್ಮರೆಯಾಗಿದ್ದ. ತುಸು ಹೊತ್ತಿನಲ್ಲಿ ಲಕ್ಷ್ಮಿಗೆ ಅಮ್ಮ ರೇಗಾಡುತ್ತ ಕಿವಿಹಿಂಡಿ ಕೆನ್ನೆಯಮೇಲೆ ಎರಡೇಟು ಬಾರಿಸಿದಾಗ ಲಕ್ಷ್ಮಿಯು ಅಳುವ ಸದ್ದುಕೇಳಿ ಅಪ್ಪು ಅದ್ದೆಲ್ಲಿಂದಲೋ ಬಲು ಸಂತಸದಿಂದ ನಗುತ್ತ ಕೈಯಲ್ಲಿ ಸುತ್ತಿಗೆಯನ್ನು ಹಿಡಿದು ಬಂದ.ಲಕ್ಷ್ಮಿಯನ್ನು ನೋಡುತ್ತಲೇ ಸುತ್ತಿಗೆಯನ್ನು ತನ್ನ ಭುಜದ ಮೇಲೇರಿಸಿಕೊಂಡು ನಗತೊಡಗಿದ. ಲಕ್ಷ್ಮಿಗೆ ಆತ ಯಮರಾಯನಂತೆ ಕಂಡ.

ಅವನದೆ ಈ ಕಿತಾಪತಿಯೆಂದರಿತು ಅಮ್ಮನಿಗೆ ಹೇಳಲು ಮುಂದಾದಳು. ಇದನ್ನು ಗ್ರಹಿಸಿದ ಅಪ್ಪು ಅಲ್ಲಿಂದ ಮರುಕ್ಷಣವೆ ಕಾಲ್ಗೆ ಕೆಲಸಕೊಟ್ಟು ಹೊರನಡೆದಿದ್ದ.

ಅಮ್ಮನ ತಾಳ್ಮೆ ಇಷ್ಟೊತ್ತಿಗಾಗಲೆ ಮಿತಿಮೀರಿ ಸಿಟ್ಟು ನೆತ್ತಿಗೇರಿತ್ತು. ಇದಕ್ಕೆ ಕಾರಣ ಲಕ್ಷ್ಮಿಯ ಒಂದು ಕಿವಿಯೋಲೆ ಕಾಣೆಯಾಗಿತ್ತು. ಅದನ್ನು ಬಹಳ ಕಷ್ಟಪಟ್ಟು ಮಗಳಿಗೆಂದು ತಂದೆ ಮಾಡಿಸಿದ್ದನು. ಅದರ ಜೊತೆಗೆ ಹಲವು ಭಾವನೆಗಳು, ನೆನಪುಗಳು, ಕಷ್ಟದ ದಿನದಲ್ಲಿ ಮಾಡಿದ ತ್ಯಾಗ ಆ ಕಿವಿಯೋಲೆಯ ಜೊತೆಗಿತ್ತು. ಅದಕ್ಕೆ ಅದರ ಮೇಲೆ ವಿಶೇಷ ಒಲವಿದ್ದ ಕಾರಣ ಕಿವಿಯೋಲೆ ಎಲ್ಲಿಹುದೆಂದು ತಿಳಿದುಕೊಳ್ಳಲು ಅಮ್ಮ ರೌದ್ರಾವತಾರವನ್ನು ತಾಳಿದ್ದಳು. ಹೊರಗಡೆ ಆಟವಾಡುತ್ತಿದ್ದ ಅಪ್ಪುವಿಗೆ ಕರೆದು 'ಲಕ್ಷ್ಮಿಯ ಕಿವಿಯೋಲೆ ಮುಟ್ಟಿದ್ದೀಯ?' ಎಂದು ಕೇಳಿದ್ದೆ ಅಪ್ಪು ತಬ್ಬಿಬ್ಬಾದವನಂತೆ ತಡವರಿಸಿ 'ನನಗೆ ಗೊತ್ತಿಲ್ಲ' ಎಂದನು. ತಾಯಿ ಮಗನ ಮಾತಿನಲ್ಲೆ ಅರಿತಳು ಇದು ಅಪ್ಪುವಿನ ಕೆಲಸವೆಂದು ಆದರೆ ಅಪ್ಪುವಿಗೆ ರೇಗಾಡಲು ಹೋಗಲಿಲ್ಲ ಕಾರಣ ಆತನಿಗೆ ರೇಗಾಡಿ ಕೂಗಾಡಿದರೆ ಸತ್ಯ ಬಾಯ್ಬಿಡುವುದಿಲ್ಲವೆಂಬ ಸಂಗತಿ ಆಕೆಗೆ ತಿಳಿದಿತ್ತು. ಅಪ್ಪು ಈ ಹಿಂದೆ ಅಪ್ಪನ ವಾಚ್ ತನ್ನ ಸುತ್ತಿಗೆಯಿಂದ ಜಜ್ಜಿ ಚೂರು ಮಾಡಿದ್ದ ಆದರೆ ಅಪ್ಪ ರೇಗಾಡಿ ಕೂಗಾಡಿ ಅವನ ಕೇಳಿದಕ್ಕೆ ಅದರ ಸುಳಿವು ಬಿಡದೆ ಗೊಬ್ಬರದ ಗುಂಡಿಗೆ ಎಸೆದಿದ್ದ. ತೋಟಕ್ಕೆ ಗೊಬ್ಬರ ಹಾಕುವಾಗ ಕೆಲಸಗಾರನ ಕಾಲಿಗೆಸಿಕ್ಕಿ ಕಾಲಿಂದ ಸರಿಸಿ ಎಸೆದಾಗಲೆ ತಿಳಿದಿದ್ದು ಅದು ಎಂಟು ತಿಂಗಳ ಹಿಂದೆ ಕಾಣೆಯಾದ ವಾಚ್ ಎಂದು. ಅದಕ್ಕೆ ಅಪ್ಪುವಿನ ಬಳಿ ಪ್ರೀತಿಯಿಂದ ನಯವಾಗಿ ಅವನ ತಲೆಸವರುತ್ತ ಕೇಳಲು ಮುಂದಾದಳು ಕಾರಣ ಆಕೆಗೆ ಅವನಿಗೆ ದಂಡಿಸುವುದಕ್ಕಿಂತ

ಕಿವಿಯೋಲೆ ಎಲ್ಲಿರುವುದೆಂದು ತಿಳಿಯುವುದು ಮುಖ್ಯವಾಗಿತ್ತು.

ಅಪ್ಪುವಿಗೆ ಸುತ್ತಿ ಬಳಸಿ ಹಲವು ರೀತಿಯಲ್ಲಿ ಮಾತಾಡಿಸಿ ತಾಯಿಯು ತನ್ನ ವಿಶ್ವಾಸಕ್ಕೆ ತೆಗೆದುಕೊಂಡು ಅವನ ಜೊತೆಗೆ ಮಾತಾಡುತ್ತಿರುವಾಗ ಅಪ್ಪು ಅಮ್ಮನಿಗೊಂದು ಪ್ರಶ್ನೆಯೊಂದನ್ನು ಕೇಳಿದ 'ಅಮ್ಮ ಈ ಚಿನ್ನ, ಕಬ್ಬಿಣ, ಲೋಹಗಳು ಮಾತ್ತಾಡುತ್ತವೆಯೆ? ಅವುಗಳಿಗೂ ನೋವಾಗುತ್ತದೆಯೆ' ಎಂದು ಕೇಳಿದ. ಅವನ ಈ ಪ್ರಶ್ನೆಯ ಹಿಂದೆ ಕಾಣೆಯಾದ ವಸ್ತುವಿನ ಸುಳಿವು ಹೊರತೆಗೆಯಬೇಕೆಂದು 'ಹೌದು ಮನುಷ್ಯರಂತೆ ಚಿನ್ನ, ಬೆಳ್ಳಿ ,ತಾಮ್ರ, ಲೋಹಗಳು ಮಾತಾಡುತ್ತವೆ. ಆದರೆ ಅವರ ಭಾಷೆ ಸದ್ದಿನ ಮೂಲಕ ಹೊರಹೊಮ್ಮುತ್ತದೆ. ಅದಕ್ಕೆ ಅವುಗಳನ್ನ ಎಲ್ಲಂದರಲ್ಲಿ ಎಸೆಯುವುದಿಲ್ಲ ಜೋಪಾನವಾಗಿ ಒಂದೆಡೆ ಎತ್ತಿಡುತ್ತಾರೆ.ಎಲ್ಲಂದರಲ್ಲಿ ಬಿಸಾಡಿದರೆ ಅವುಗಳಿಗೆ ನೋವಾಗುತ್ತದೆ. 'ಎಂದು ಹೇಳಿದ್ದೆ ಅಪ್ಪು ಅದೇನೋ ಯೋಚಿಸಲು ಶುರುಮಾಡಿದ. ಒಂದೆರಡು ಕ್ಷಣ ಬಿಟ್ಟು 'ಬೇರೆ ಬೇರೆ ಲೋಹಗಳು ಬಾಯಿ ಮಾತಿಲ್ಲದೆ ಬರೀ ಸದ್ದಿನಿಂದಲೇ ಪರಸ್ಪರ ಹೇಗೆ ಭಾವನೆ ಅರ್ಥೈಸಿ ಕೊಳ್ಳುತ್ತವೆ.?ಅವುಗಳಿಗೆ ನೋವಾದರೆ ಹೇಗೆ ಹೇಳುತ್ತವೆ.?'ಎಂದು ಮರು ಪ್ರಶ್ನೆ ಹಾಕಿದ. ಅಮ್ಮ ನಗು ಮೊಗದಿ ಬೆನ್ನ ಸವರುತ್ತ ನುಡಿದರು 'ಅಪ್ಪು ಅವುಗಳಿಗೆ ನೋವಾದರೆ ನಮ್ಮಹಾಗೆ ಬಾಯ್ಬಿಟ್ಟು ಹೇಳುವುದಿಲ್ಲ, ಅದು ಯಾರ ಜೊತೆಗಿರುತ್ತದೋ ಅವರೆ ಅದನ್ನ ಅರ್ಥಮಾಡಿಕೊಳ್ಳಬೇಕು.ನಾವೆ ಅದರ ಬಳಿ ಮಾತಾಡುತ್ತಿರಬೇಕು. ಹೇಗೆ ನೀನು ಸುತ್ತಿಗೆಯನ್ನು ಒಂದು ಕ್ಷಣವೂ ಬಿಟ್ಟಿರುವುದಿಲ್ಲವೋ ಹಾಗೆ ಪ್ರತಿಯೊಂದು ವಸ್ತುಗಳು ಮನುಷ್ಯನ ಭಾವನೆಗಳ ಜೊತೆಯಲ್ಲಿ ಬೆರೆತು ಅವುಗಳ ನೋವು ನಲಿವುಗಳನ್ನು ಹಂಚಿಕೊಳ್ಳುತ್ತದೆ. ಆದರೆ ಅದನ್ನು ಅರ್ಥಮಾಡಿಕೊಂಡು ಸ್ಪಂದಿಸಲು ಕೆಲವೊಮ್ಮೆ ನಾವು ವಿಫಲರಾಗಿ ಎಲ್ಲಂದರಲ್ಲಿ ಎಸೆದಾಗ ಅವು ಬಹಳ ನೊಂದಿಕೊಳ್ಳುತ್ತವೆ.' ಎಂಬ ಅಮ್ಮನ ಉತ್ತರ ಅವನ ಮನಸ್ಸಲ್ಲಿ ಇನ್ನಷ್ಟು ಯೋಚಿಸುವಾಗೆ ಮಾಡಿತು.ಕಾರಣ ಆತನು ಲಕ್ಷ್ಮಿಯ ಮೇಲಿನ ಸಿಟ್ಟಿಗೆ ಆಕೆಯ ಅತೀ ಪ್ರೀತಿಯ ಕಿವಿಯೋಲೆಯನ್ನು ಕಾಣೆಮಾಡಿ ಅದರಮೇಲೆ ತನ್ನ ಸಿಟ್ಟನ್ನು ತೀರಿಸಿಕೊಂಡು ತನ್ನ ಕಿಸೆಯಲ್ಲಿ ಇಟ್ಟುಕೊಂಡಿದ್ದ. ಅದಕ್ಕೆ ನೋವಾಗುತ್ತಿದೆ ಎಂಬ ಭಾವನೆ ಆತನಿಗೆ ಕಾಡತೊಡಗಿತು. ಆದರೆ ಮತ್ತೆ ಅದೇನೋ ಗೊಂದಲಕ್ಕೆ ಉತ್ತರಬಯಸಿ ಮತ್ತೊಂದು ಪ್ರಶ್ನೆಯ ಬಾಣಬಿಟ್ಟ.' ಅಮ್ಮ ನನ್ನ ಈ ಪುಟ್ಟ ಕಬ್ಬಿಣದ ಸುತ್ತಿಗೆಯು ಇಂದು ಚಿನ್ನದ ಬಳಿ ಮಾತಾಡಿತು ಆದರೆ ಅದು ಅಷ್ಟೇನು ಸದ್ದುಮಾಡಿ ಉತ್ತರಿಸಿಲ್ಲ ಆದರೆ ನಾನು ಬೇರೆ ಬೇರೆ ಕಬ್ಬಿಣದ ಜೊತೆಗೆ ಸುತ್ತಿಗೆಯನ್ನು ಮಾತಾಡಿಸಿದಾಗ ಬಲು ಜೋರಾಗಿ ಸದ್ದಿಕ್ಕುತ್ತ ಮಾತಾಡುತ್ತದೆ ಯಾಕೆ.?' ಎಂದಿದ್ದೆ ಅಮ್ಮನ ಮನದಲ್ಲಿ ಆತಂಕ ಶುರುವಾಯಿತು. ಸಾವಿರ ನೆನಪಿಗೆ ರುವಾರಿಯಾಗಿರುವ ಕಿವಿಯೋಲೆ ಅಪ್ಪುವಿನ ಕೈ ಸೇರಿ ಅದ್ಯಾವ ಸ್ಥಿತಿ ತಲುಪಿಹುದೋ ಎಂದು ಮನದಲ್ಲೇ ನೊಂದುಕೊಂಡಳು.ಮಕ್ಕಳ ತುಂಟಾಟಕ್ಕೆ ಇನ್ನೆಷ್ಟು ಪ್ರೀತಿಯ ವಸ್ತುಗಳು ಬಲಿಯಾಗಬೇಕಿದೆಯೋ ಎಂದು ಕಣ್ಣಲ್ಲಿ ನೀರು ತುಂಬಿಕೊಂಡಿತು. ಗಂಟಲು ಬಿಗಿಯಾಗಿ ಅಪ್ಪುವಿನತ್ತ ನುಡಿದಳು 'ಮಗು ನಮ್ಮವರಿಂದಲೆ ನಮಗೆ ಹೊಡೆತಬಿದ್ದಾಗ ಜಾಸ್ತಿ ನೋವಾಗುತ್ತದೆ,ಸಹಿಸಲು ಕಷ್ಟವಾಗಿ ಸದ್ದು ಜೋರಾಗಿ ಬರುತ್ತದೆ' ಎಂದು ಹೇಳುತ್ತಿದ್ದಂತೆ ಅಮ್ಮನ ಕಣ್ಣೀರ ಕಟ್ಟೆಯೊಡೆದು ತನಗರಿವಿಲ್ಲದೆ ಹೊರಬಂದು ಅಪ್ಪುವಿನ ಸುತ್ತಿಗೆಯ ಮೇಲೆ ಬಿತ್ತು. ಇದನ್ನು ಕಂಡ ಅಪ್ಪು ನಿಧಾನವಾಗಿ ತನ್ನ ಕಿಸಿಯಲ್ಲಿದ್ದ ಕಿವಿಯೋಲೆಯನ್ನು ಹೊರತೆಗೆದ.ಲಕ್ಷ್ಮಿ ಮೇಲಿನ ಸಿಟ್ಟಿಗೆ ಆಕೆ ಸ್ನಾನಕ್ಕೆ ಹೋದಾಗ ಕಿವಿಯೋಲೆಯನ್ನು ಅಪ್ಪು ಎತ್ತಿಕೊಂಡು ಹೋಗಿ ಸುತ್ತಿಗೆಯಿಂದ ಜಜ್ಜಿಬಿಟ್ಟಿದ್ದ. ಇದನ್ನು ನೋಡುತ್ತಲೇ ಅಮ್ಮ ಜೋರಾಗಿ ಎರಡೇಟು ಹೊಡೆದು ಅಳುತ್ತ ಜಜ್ಜಿದ ಕಿವಿಯೋಲೆಯನ್ನು ಎದೆಗೊತ್ತಿಕೊಂಡು ಮನೆಯೊಳಗೆ ನಡೆದಳು.

ಅಪ್ಪುವಿನ ಮೇಲೆ ತಾಯಿಯ ಕಣ್ಣೀರು ಬಹಳ ಪರಿಣಾಮ ಬೀರಿತು. ಇದಕೆಲ್ಲ ಕಾರಣ ತನ್ನ ತುಂಟತನ, ಕೋಪ,ಎಂಬುದು ಅವನಿಗೆ ಅರಿವಾಯಿತು. ಸುತ್ತಿಗೆಯನ್ನು ಬೀಸಿ ಎಸೆದು ಬಿಟ್ಟ. ಮತ್ತೆಂದಿಗೂ ಈ ತಪ್ಪು ಮಾಡುವುದಿಲ್ಲವೆಂದು ವಚನತೊಟ್ಟ. ಸಿಟ್ಟು, ಕೋಪ,ತುಂಟಾಟವ ಬಿಟ್ಟು ಶ್ರದ್ದೆಯಿಂದ ವಿದ್ಯೆಯ ಕಲಿತು ಅಪ್ಪ ಅಮ್ಮನ ಪ್ರೀತಿಯ ಗೆದ್ದನು.

---

## ಚುಟುಕು

ಕಷ್ಟ ಬಂದರೇನಂತೆ "ಅಂಜದಿರು"
ನಿನಗೂ ಒಂದು ಕಾಲವಿದೆ "ಕಾಯುತಿರು"
ಯಾವ ಕಷ್ಟದಲ್ಲೂ ಆಗುವುದಿಲ್ಲ "ಸಂಬಂಧಿಕರು"
ಕಷ್ಟ ಬಂದಾಗ ಕೈ ಬಿಡದವರೇ "ಸ್ನೇಹಿತರು".

**ಮದನ್ ಜಿ ಎನ್**

ಹುಟ್ಟು ಸಾವುಗಳ ನಡುವೆ ಇರುವುದು 'ಜೀವನ'
ಪೆನ್ನು ಪುಸ್ತಕಗಳ ನಡುವೆ ಇರುವುದು 'ಕವನ'
ಕಪ್ಪು ಬಿಳಿ ಕೂದಲುಗಳ ನಡುವೆ ಇರುವುದು 'ಯೌವನ'
ನನ್ನ ನಿನ್ನ ನಡುವೆ ಇರುವುದು ನಿಜವಾದ 'ಗೆಳೆತನ'.

**ನಿಫಾ ಡಿಸೋಜ**

# ಬೆತ್ತಲೆ ಜಗತ್ತಿನ ಕತ್ತಲೆ ಪ್ರೀತಿಗೆ ನನ್ನಯ ಯಕ್ಷ ಪ್ರಶ್ನೆ.?

ಹೆಣ್ಣು ಹೆಣ್ಣು ಹೆಣ್ಣು ಎನುತ
ಹೆಣ್ಣಿಗಾಗಿ ಹಂಬಲಿಸುವರು
ಹೆಣ್ಣು ಸಿಕ್ಕ ಮೇಲೆ ಆಕೆಯನೇಕೆ
ಹುಣ್ಣು ಕಂಡಂತೆ ಕಾಣುವರು?

ಮದುವೆಯಾಗುವವರೆಗೆ ಆಕೆಗೆ
ಹೊಗಳಿ ಮೇಲೇರಿಸಿ ಉಬ್ಬಿಸುವರು
ಮಾಂಗಲ್ಯವು ಕೊರಳಿಗೆ ಬಿದ್ದ ಮೇಲೆ
ಗಂಡು ಮಗುವಿಗೆ ಜನ್ಮ ನೀಡೆಂದು
ಮಸ್ತಕಕ್ಕೆ ಮಾತಿನ ಏಟನೇಕೆ ನೀಡ್ವರು?

ನೋವಿನ ನರಕದ ಸುಳಿಯಲ್ಲಿ ಬೆಂದು
ಜೀವವ ಅಂಗೈಯಲ್ಲಿ ಗಟ್ಟಿ ಹಿಡಿದಿಟ್ಟು
ಸಾವಿನ ಬಾಗಿಲ ಸನಿಹಕ್ಕೆ ನುಸುಳಿ
ಹೊಸ ಜನ್ಮವ ಪಡೆದವಳೀಕೆ.

ನಿಟ್ಟುಸಿರು ಬಿಟ್ಟು ದೇವರ ನೆನೆಯುತಿಹಳು
ಕರುಳ ಕುಡಿಯ ಧ್ವನಿಯ ಕೇಳುತ
ನೋವನೆಲ್ಲ ಕ್ಷಣದಿ ಮರೆತಿಹಳು
ಮಡಿಲಲ್ಲಿ ಮಲಗಿದ ಕಂದನಿಗೆ ಚುಂಬಿಸುತ್ತ.

ಆದರೆ...

ಈ ಬೆತ್ತಲೆ ಜಗದ ಕತ್ತಲೆ ಪ್ರೀತಿಯ
ಸ್ವಾರ್ಥದ ಮನುಜರಿಗೆ
ಹೆಣ್ಣಿನ ಮೇಲೆ ತಾತ್ಸಾರವೇಕೆ?
ತಾಯಿಯ ಮಡಿಲಿನ ಹಸು ಕೂಸನು ಕಂಡು
ಮೂಗು ಮುಸುಡಿಯ ತಿರುಗಿಸುವರೇಕೆ?

ಗಂಡಿಗಂತೂ ಹೆಣ್ಣುತನದ ಗುಟ್ಟನರಿಯಲು
ಕ್ಲಿಷ್ಟವಾಗಬಹುದು ಜೋಕೆ.
ಆದರೆ ಹೆಣ್ಣಿಗೂ ಅರ್ಥವಾಗುತ್ತಿಲ್ಲವೇಕೆ?
ಗಂಡು ಮಗುವೇ ಬೇಕೆಂಬ ಹುಚ್ಚುತನ
ಮರುಳು ಹೆಣ್ಣೆ ನಿನಗ್ಯಾಕೆ?

ತಾಯಿ ಮೊಮ್ಮಗಳ ಜನ್ಮವ ಹೊಗಳಿ
ಮಗನಿಗೆ ಶುಭ ಹಾರೈಸುವುದ ಬಿಟ್ಟು
ಹೆಣ್ಣು ಹೆತ್ತಿಹಳು ಪೀಡೆ ಎನುತ
ಗೊಣಗುಟ್ಟುತ್ತಿರುವುದೇಕೆ?

ಹೆಣ್ಣಿಗೆ ಹೆಣ್ಣೇ ಶತ್ರುವೆಂದು
ಜಗಕ್ಕೆ ಬಿಂಬಿಸುತ್ತಿರುವಳೇಕೆ?
ಹೆಣ್ಣೇ ಹೆಣ್ಣನ್ನು ತೆಗಳುವ ಮುನ್ನ
ತಾನ್ನೊಂದು ಹೆಣ್ಣೆಂಬುದ ಮರೆತಿರುವಳೇಕೆ?

# ಅನ್ನದ ಬೆಲೆ

✍ ಸ್ಟ್ಯಾನಿ ಲೋಪಿಸ್, ಕಾರ್ಗಲ್

ನನ್ನ ಹೆಸರು ಪೆಡ್ಡಿ
ನನ್ನ ಫ್ರೆಂಡ್ ಗಿಡ್ಡಿ.
ನನಗೆ ಎರಡು ಕಾಲು
ಅದಕ್ಕೆ ನಾಲ್ಕು ಕಾಲು.

ನಾವು ಜೊತೆಗೆ ಇದ್ರೆ
ಮಾಡುತ್ತೀವಿ ಮಸ್ತಿ
ಆಡುತ್ತೀವಿ ಕುಸ್ತಿ
ಪ್ರೀತಿ ನಮ್ಮ ಆಸ್ತಿ

ಊಟ ತಿಂಡಿ ಮರೆತ್ವೀ
ಆಟಾಡೋದ ಕಲತ್ವೀ.
ನಮ್ಮ ಆಟ ನೋಡಿ
ಬಂದರು ಅಮ್ಮ ಓಡಿ

ಊಟದ ತಟ್ಟೆ ನೋಡಿ
ಅವಿತ್ಕೋ ಬಿಟ್ಟೆ ಓಡಿ
ಅಮ್ಮ ಹೇಳ್ದರು ಬುದ್ಧಿ
ನನ್ನ ಕಿವಿ ಹಿಂಡಿ.

ಬಿಡಬೇಡ ಒಂದು ತುತ್ತು
ಇದು ರೈತರ ಬೆವರ ಗಿಫ್ಟ್.
ಮಾಡಿದ್ರೆ ಬೇಗ ಊಟ
ಕೊಡುತ್ತೀನಿ ಬೊಂದಿ ಲಾಡು.

ಅಮ್ಮನ ನುಡಿಯ ಕೇಳಿ
ಸನ್ನೆ ಮಾಡಿದೆ ಗಿಡ್ಡಿಗೆ
ಮಿಯಾವ್ ಎನ್ನುತ ಗಿಡ್ಡಿ
ಚಂಗನೆ ಎಗರಿತು ತಟ್ಟೆಗೆ.

ಮಗಚಿ ಬಿದ್ದ ತಟ್ಟೆ ಸದ್ದಿಗೆ
ಬಿತ್ತು ಅಮ್ಮನ ಗುದ್ದು ಬೆನ್ನಿಗೆ
ಗಲಿಬಿಲಿ ಗೊಂಡನು ಪೆಡ್ಡಿ
ಕಲಿತನು ಇದರಿಂದ ಬುದ್ಧಿ
ಅನ್ನದ ಬೆಲೆಯನು ಅರಿತು
ತೋರಿದ ತಟ್ಟೆಗೆ ಭಕ್ತಿ.

# ಅಪ್‌ಡೇಟ್ ಹೆಸರಿನಲ್ಲಿ ಮುಂದಿನ ಪೀಳಿಗೆಯ ನಾಶ



✍ ಬ್ರದರ್ ಕಾಣಿಕ್‌ಸ್ವಾಮಿ ವಿಜಯ್ ಕುಮಾರ್
ಶಿವಮೊಗ್ಗ ಧರ್ಮಕ್ಷೇತ್ರ

ಹಿಂದಿನ ಕಾಲದಲ್ಲಿ ನಮ್ಮ ಪೂರ್ವಜರು ಒಂದು ಸಂದೇಶವನ್ನು ರವಾನಿಸಲು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಬೇಕಿತ್ತು ಅಥವಾ ಪತ್ರದ ಮೂಲಕ ಕಳುಹಿಸಬೇಕಿತ್ತು. ಸಂದೇಶ ತಲುಪಲು ಹಲವು ದಿನಗಳು ತಗಲುತ್ತಿದ್ದವು. ಆದರೆ ಪ್ರಸ್ತುತ ಯುಗದಲ್ಲಿ ಆ ಚಿಂತೆಯೇ ಇಲ್ಲ. ಮೊಬೈಲ್ ಫೋನ್‌ಗಳಿಂದ ವಾಟ್ಸ್‌ಅಪ್ ಮೂಲಕ ಸಂದೇಶವನ್ನು ಅತೀ ಸುಲಭದಲ್ಲಿ, ಅತೀ ಶೀಘ್ರದಲ್ಲಿ, ಎಷ್ಟು ದೂರ ಬೇಕಾದರೂ ರವಾನಿಸಬಹುದಾಗಿದೆ. ಹಿಂದೆ ಹಣ ಪಡೆಯಲು ಬ್ಯಾಂಕ್‌ಗಳಲ್ಲಿ ಉದ್ದ ಸಾಲಿನಲ್ಲಿ ನಿಲ್ಲಬೇಕಾಗಿತ್ತು ಈಗ ಆ ಚಿಂತೆಯೆ ಇಲ್ಲ. ಎ.ಟಿ.ಎಮ್‌ಗಳ ಮೂಲಕ ಹಣವನ್ನು ಪಡೆಯಬಹುದಾಗಿದೆ, ಅನ್‌ಲೈನ್‌ಗಳ ಮೂಲಕ ಹಣವನ್ನು ಕಳುಹಿಸಬಹುದಾಗಿದೆ. ಹಿಂದೆ ನಮ್ಮ ಮನೆಗಳಲ್ಲಿ ದಪ್ಪ ಗಾತ್ರದ ಟಿ.ವಿ.ಗಳಿದ್ದವು. ಆದರೆ ಈಗ ಸ್ಲಿಮ್ ಟಿ.ವಿ.ಗಳು. ಎಲ್ಲವೂ ಅಪ್‌ಡೇಟ್‌ಮಯವಾಗಿದೆ. 1947 ಆಗಸ್ಟ್ 15ರಂದು ನಮಗೆ ಸ್ವಾತಂತ್ರ್ಯ ದೊರಕಿತು. ಅಂದಿನ ಭಾರತಕ್ಕೂ ಇಂದಿನ ಈ ಆಧುನಿಕತೆಯ ಭಾರತಕ್ಕೂ ಅಜಗಜಾಂತರವಿದೆ. ಇದಕ್ಕೆಲ್ಲಾ ಕಾರಣ ಅಪ್‌ಡೇಟ್. ಬದಲಾವಣೆಗಳು ಒಳ್ಳೆಯ ರೀತಿಯಲ್ಲೆ ಇರಲಿ ಅಥವಾ ಕೆಟ್ಟ ರೀತಿಯಲ್ಲೆ ಇರಲಿ, ಆಮೆಯ ರೀತಿ ನಿಧಾನವಾಗಿ ಓಡಲಿ ಅಥವಾ ಚಿರತೆಯಂತೆ ವೇಗವಾಗಿ ಓಡಲಿ ಪ್ರತಿ ಕ್ಷಣ ಪ್ರತಿ ನಿಮಿಷ ಅತಿಯಾಗಿ ಬದಲಾಗುತ್ತಿರುವುದು ಮಾನವ ಮಾತ್ರ. ಸಮಾಜದಿಂದ ಮಾನವ ಬದಲಾಗುತ್ತಿಲ್ಲ ಬದಲಾಗಿ ಮಾನವ ಸಮಾಜವನ್ನು ತನ್ನ ಇಷ್ಟಕ್ಕನುಗುಣವಾಗಿ ಬಳಸುತ್ತಿದ್ದಾನೆ, ಬದಲಾಯಿಸುತ್ತಿದ್ದಾನೆ. ವೈಜ್ಞಾನಿಕ ತಂತ್ರಜ್ಞಾನದ ಮುಖಾಂತರ ಸಂಶೋಧನೆಯನ್ನು ನಡೆಸಿ ಹೊಸ ಹೊಸ ವಸ್ತುಗಳನ್ನು ಕಂಡು ಹಿಡಿಯುತ್ತಾನೆ. ಈ ಎಲ್ಲಾ ಅನ್ವೇಷಣೆಗಳಿಂದ ನಮ್ಮ ಈಗಿನ ಪೀಳಿಗೆ ನಾಶವಾಗುತ್ತಿದೆ.

ವೈಜ್ಞಾನಿಕ ತಂತ್ರಜ್ಞಾನ ಎಂದಾಕ್ಷಣ ನಮ್ಮ ನೆನಪಿಗೆ ಬರುವುದು ಭಾರತದ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ. ಜವಾಹರಲಾಲ್ ನೆಹರೂ ಅವರು ಪ್ರಧಾನಿಯಾಗಿದ್ದಾಗ ಈ ಸಂಸ್ಥೆ ಆರಂಭವಾಯಿತು. 1991 ಜೂನ್ 21ರಂದು ಹಣಕಾಸು ಸಚಿವರಾದ ಮನ್‌ಮೋಹನ್ ಸಿಂಗ್ ನೇತೃತ್ವದಲ್ಲಿ ಭಾರತದ ಮಾರುಕಟ್ಟೆಯನ್ನು ವಿಶ್ವ ಮಾರುಕಟ್ಟೆಗೆ ತರಲಾಯಿತು. ಯಾವಾಗ ಭಾರತದ ಮಾರುಕಟ್ಟೆ ಅಪ್‌ಡೇಟ್ ಆಯಿತೋ ಆಗ ಆನೆಬಲ ಬಂದಂತಾಯಿತು. ಈ ಬೆಳವಣಿಗೆ ಎಷ್ಟರ ಮಟ್ಟಿಗೆ ತಲುಪಿದೆಯೆಂದರೆ 20 ಜನ ಮಾಡಬೇಕಾಗಿದ್ದ ಕೆಲಸವನ್ನು ಇಂದು ಒಂದು ರೋಬೋಟ್ ಕ್ಷಣಮಾತ್ರದಲ್ಲಿ ಮಾಡಿ ಮುಗಿಸುವ ಹಂತಕ್ಕೆ ಬಂದಿದೆ.

ಒಂದು ಕಾರನ್ನು ತಯಾರಿಸಿ ಮಾರುಕಟ್ಟೆಗೆ ತರಲು ವರ್ಷಾನುಗಟ್ಟಲೆ ಕಷ್ಟಪಡಬೇಕಾಗಿತ್ತು. ಈಗ ಮಾನವ ಇಲ್ಲದೆ ಕಾರುಗಳನ್ನು ಓಡಿಸಬಹುದಾದ ಕಾಲ ಬಂದಿದೆ. ಒಂದು ಫೋನ್ ಮಾಡಲು ನಾವು ಸಂಖ್ಯೆಯನ್ನು ಬರೆದಿಟ್ಟು ಅದನ್ನು ಫೋನ್‌ನಲ್ಲಿ ಒತ್ತಿ ನಂತರ ಮಾತನಾಡಬೇಕಿತ್ತು. ಅದು ಅಪ್‌ಡೇಟ್ ಆಗಿ ಮೊಬೈಲ್ ಬಂದಿದೆ. ಅದರಲ್ಲಿ ಸಂಖ್ಯೆಗಳನ್ನು ಸಂಗ್ರಹಿಸಿ ಇಡಬಹುದು, ಮತ್ತೆ ಮತ್ತೆ ಸಂಖ್ಯೆಗಳನ್ನು ಒತ್ತಬೇಕಾಗಿಲ್ಲ. ಈಗ ಇನ್ನೂ ಅಪ್‌ಡೇಟ್ ಆಗಿ ಸ್ಮಾರ್ಟ್‌ಫೋನ್ ಬಂದಿದೆ. ಮತ್ತೊಂದೆಡೆ ಕಂಪ್ಯೂಟರ್ ತಂತ್ರಜ್ಞಾನದ ಯುಗದಿಂದ ನಮ್ಮ ನೈಸರ್ಗಿಕ ಕೆಲಸಗಳನ್ನು ನಾವು ಕೃತಕ ಕಾರ್ಯಗಳಿಗೆ ಒಪ್ಪಿಸಿ ಅದಕ್ಕೆ ಹೊಂದಿಕೊಂಡು ಬದುಕುತ್ತಿದ್ದೇವೆ. ಈ ಕಂಪ್ಯೂಟರ್ ತಂತ್ರಜ್ಞಾನಕ್ಕೆ ಮಾನವನ ಮೆದುಳೇ ಮೂಲ. ಆದರೂ ಈ ತಂತ್ರಜ್ಞಾನ ಮಾನವನ ಮೆದುಳನ್ನು ಮಲಗಿಸಿ ತಾನೇ ಎಲ್ಲವನ್ನು ತಿಳಿದವನು ಎಂಬಂತೆ ಮೆರೆಯುತ್ತಿದೆ. ತಮ್ಮನ್ನು ಇನ್ನೊಬ್ಬರ ಕೈಯಿಂದ ದೊರೆತನ ಮಾಡಿಸಿಕೊಳ್ಳಲು ಮಾನವ ನಿರ್ಮಿಸಿರುವ ಸಾಧನವೇ ಈ ಕಂಪ್ಯೂಟರ್‌ಗಳು.

ಈ ಎಲ್ಲಾ ಅವಿಷ್ಕಾರಗಳಿಂದ ಪ್ರೇರೇಪಿತನಾಗಿರುವ ಮಾನವ ತನ್ನ ಅಳಿವಿಗೆ ದಾರಿಯನ್ನು ತಾನೇ ಹುಡುಕಿಕೊಂಡು ಹೊರಟಿದ್ದಾನೆ. ಈ ಅಪ್‌ಡೇಟ್ ಯುಗ ಪ್ರಾರಂಭವಾಗುವ ಮೊದಲು ಕುಟುಂಬ ಎಂದಾಕ್ಷಣ ಎಲ್ಲರಲ್ಲಿ ಸಂತಸ ಸಡಗರ ತುಂಬಿ ತುಳುಕುತಿತ್ತು. ಮನೆಯಲ್ಲಿ ಶಾಂತಿ ಸಮಾಧಾನ ತುಂಬಿ ತುಳುಕುತಿತ್ತು, ಮನೆಯ ಮಂದಿಗಳೆಲ್ಲರೂ ಸೇರಿ ಮಾತುಕತೆ ನಡೆಸುತಿದ್ದರು, ಮಕ್ಕಳು ಒಟ್ಟಾಗಿ ಸೇರಿ ಆಟವಾಡುತ್ತಿದ್ದರು, ಯುವಕ ಯುವತಿಯರು ಹಿರಿಯರ ನೆರವಿಗೆ ಬರುತಿದ್ದರು, ಹೀಗೆ ಒಂದು ಉತ್ತಮ ಬಾಂಧವ್ಯವನ್ನೇ ಹೊಂದಿದ್ದರು. ಆದರೇ ಈ ಆಧುನೀಕೀಕರಣದಿಂದ ಎಲ್ಲವೂ ನಾಶವಾಗುತ್ತಿದೆ. ಆಟಿಕೆಯನ್ನು ಹಿಡಿಯುತ್ತಿದ್ದ ಮಕ್ಕಳ ಕೈಗಳಲ್ಲಿ ಮೊಬೈಲ್, ಈ

ಮೊಬೈಲ್‌ನಲ್ಲಿ ಸದಾ ವಿಡಿಯೋಗೇಮ್ ಆಡುತ್ತ ಬೇಡವಾದ ಅಪ್ಲಿಕೇಷನ್‌ಗಳನ್ನು ತೆಗೆದು ಅದರಿಂದ ಪ್ರಾಣವನ್ನೇ ಕಳೆದುಕೊಳ್ಳುತ್ತಿದ್ದಾರೆ. ಉದಾ: ಬ್ಲೂವೇಲ್ ಎಂಬ ಗೇಮ್ 2017ರಲ್ಲಿ ಭಾರತದಲ್ಲಿ ಕಾಣಿಸಿಕೊಂಡಿತು. ಅದರಿಂದ ಕೆಲವರಾದರೂ ಪ್ರಾಣ ಕಳೆದುಕೊಂಡಿದ್ದಾರೆ. ಯುವಕರ ಕೈಗಳಲ್ಲಿ ಐಪ್ಯಾಡ್, ಲ್ಯಾಪ್‌ಟಾಪ್, ಇತ್ಯಾದಿ. ಇದರಲ್ಲಿ ಏನು ಮಾಡುತಿದ್ದಾರೆ? ಏನು ನೋಡುತಿದ್ದಾರೆ? ಎಂಬುವುದು ಯಾರಿಗೂ ತಿಳಿದಿಲ್ಲ. ಕುಟುಂಬಗಳಲ್ಲಿ ಇಂದು ತಂದೆ, ತಾಯಿ ಮಕ್ಕಳು ಈ ಅಪ್‌ಡೇಟ್ ಯುಗದಿಂದಾಗಿ ತಮ್ಮದೇ ಅದ ಲೋಕದಲ್ಲಿ ಮುಳುಗಿ ಹೋಗಿದ್ದಾರೆ. ಜೊತೆಯಾಗಿ ಕುಳಿತು ಕುಟುಂಬದ ಸಂತಸ, ನೋವುಗಳನ್ನು ಹಂಚಿಕೊಂಡು ಊಟ ಮಾಡುವಂತಹ ಕುಟುಂಬಗಳು ಇಂದು ಟಿವಿ ಮಾಧ್ಯಮಗಳ ಪ್ರಭಾವದಿಂದ ಒಂಟಿತನವನ್ನು ಅನುಭವಿಸುವ ಸ್ಥಿತಿಗೆ ತಲುಪಿವೆ. ಕುಟುಂಬ ಒಂದಾದರೂ ಮನೆಯಲ್ಲಿ 2 ಅಥವಾ 3 ಟಿವಿಗಳು, 4 ಅಥವಾ 5 ಮೊಬೈಲ್‌ಗಳು ಅವಿಭಜಿತ ಏಕ ಕುಟುಂಬವನ್ನು ವಿಭಜಿಸುತ್ತಿವೆ. ಅಪ್‌ಡೇಟ್ ಒಳ್ಳೆಯದಾದರೂ ಅದು ಮಾನವನ ಪ್ರೀತಿಮಯ ಕುಟುಂಬದ ಮೇಲೆ ತನ್ನದೇ ಆದ ಪ್ರಭಾವವನ್ನು ಬೀರಿದೆ. ತಂತ್ರಜ್ಞಾನ ಎಷ್ಟು ಅಪ್‌ಡೇಟ್ ಆಗುತ್ತಿದೆಯೊ ಅಷ್ಟೇ ವೇಗವಾಗಿ ಕೆಲವು ಪ್ರಾಣಿ ಪಕ್ಷಿಗಳ ಸಂತತಿ ನಾಶವಾಗುತ್ತಿದೆ. ಎಷ್ಟೋ ಪ್ರಾಣಿ ಪಕ್ಷಿಗಳು ಅಳಿದು ಹೋಗಿವೆ, ಕೆಲವು ಅಳಿವಿನ ಅಂಚಿನಲ್ಲಿದೆ

ಹೀಗೆ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವ ಮಾನವ ಬೆಳವಣಿಗೆಯ ಜೊತೆ ತನ್ನ ಅಂತ್ಯಕ್ಕೆ ತಯಾರಿ ನಡೆಸುತಿದ್ದಾನೆಯೇ ಎಂಬುದರ ಬಗ್ಗೆ ಗಂಭೀರವಾದ ಆತ್ಮಾವಲೋಕನ ಅತೀ ಮುಖ್ಯ. ತಂತ್ರಜ್ಞಾನದ ಬಳಕೆ ಹೆಚ್ಚುತ್ತಿರುವುದರಿಂದ ಕೆಲವರ ಆರೋಗ್ಯದ ಮೇಲೆ ಅದು ಅತೀವ ಕೆಟ್ಟ ಪರಿಣಾಮವನ್ನು ಬೀರಿದೆ. ಕೆಲವರ ಮನಸ್ಸು ಮುರಿದಿದೆ, ಕುಟುಂಬಗಳಲ್ಲಿ ಶಾಂತಿ ನೆಮ್ಮದಿ ಕಣ್ಮರೆಯಾಗಿದೆ. ಪರಿಸ್ಥಿತಿ ಹೀಗೆಯೇ ಮುಂದುವರಿದರೆ ನಮ್ಮ ಮುಂದಿನ ಪೀಳಿಗೆಯು ಅಪ್‌ಡೇಟ್ ಪೀಳಿಗೆಯಾಗಿ ಜನರು ಬಳಸಿಕೊಳ್ಳುವಂತಹ ವಸ್ತುವಾಗಿ ಪರಿಣಮಿಸುವ ಕಾಲವು ದೂರವಿಲ್ಲ. ಮಾನವನನ್ನು ಪ್ರೀತಿಸಿ ವಸ್ತುಗಳನ್ನು ಬಳಸಬೇಕಾದ ಈ ಪೀಳಿಗೆ ಸಂಪೂರ್ಣವಾಗಿ ವಸ್ತುಗಳನ್ನು ಪ್ರೀತಿಸಿ ಮಾನವನನ್ನು ಬಳಸುವ ಸ್ಥಿತಿಗೆ ಬಂದು ತಲುಪುವ ಮುನ್ನ ಎಚ್ಚೆತ್ತುಕೊಳ್ಳೋಣ. ಅಪ್‌ಡೇಟ್ ಯುಗ ಜನರ ಬೆಳವಣಿಗೆಗೆ, ಪ್ರಪಂಚದ ಏಳಿಗೆಗೆ ಪೂರಕವಾಗಲಿ, ಮಾರಕವಾಗದಿರಲಿ.

---

# ಮಹಿಳೆಯರು ನಾವು ಮಹಿಳೆಯರು



✍ **ಸುರೇಖ (ದಿವ್ಯ ಸ್ವಸಹಾಯ ಸಂಘ)**
**ಮಾಲೂರು.**

ಮಹಿಳೆಯರು ನಾವು ಮಹಿಳೆಯರು
ನಾವು ಎಂದೆಂದಿಗೂ ಪ್ರಬಲೆಯರು
ನಮಗಿದೆ ಸಹಾಯಕ್ಕೆ ಎಸ್.ಎಮ್.ಎಸ್.ಎಸ್.ಎಸ್.ನಂತಹ ಚಿಗುರು
ಇದರಿಂದ ಆಗುವೆವು ನಾವು ಸಂರಕ್ಷಿತರು.

ಮುನ್ನಡೆಯುತ್ತಿದೆ ಚೈತನ್ಯದ ಚಿಲುಮೆಯ ಸಿಂಧು
ಇದರಿಂದ ಹೊರಹೊಮ್ಮಿದೆ ಸ್ತ್ರೀಬಂಧು
ಅದಾಗಿದೆ ಮಹಿಳೆಯ ಸಹಾಯ ಬಂಧು
ಇದಕ್ಕೆ ನಾವೆಲ್ಲಾ ಸಂತೋಷದಲ್ಲಿದ್ದೇವೆ ಇಂದು.

ಮೂವತ್ತನೇ ವರ್ಷಕ್ಕೆ ನಮ್ಮ ಸಂಸ್ಥೆ ತಲುಪಿದೆ
ಸಮಾನತೆಯನ್ನು ಸಮಾಜದ ಮಹಿಳೆಯರಿಗೆ ನೀಡಿದೆ.
ಸಮೃದ್ಧಿ ಬದುಕನ್ನು ರೂಪಿಸಲು ಕರೆ ನೀಡಿದೆ
ನ್ಯಾಯ ನೀತಿಯನ್ನು ಪಾಲಿಸುತ್ತಾ ಯಶಸ್ಸಿನತ್ತ ಸಾಗಿದೆ.

# ನೀರಿಗಾಗಿ ನಾರಿ ಹಿಡಿದಳು ಹೋರಾಟದ ದಾರಿ
## (ಹೋರಾಟದ ಫಲ)



✍ ಕಾರ್ಮೆಲ್
ಕಾರ್ಯಕರ್ತೆ

**ಹಿನ್ನೆಲೆ:**

ಶಿವಮೊಗ್ಗ ತಾಲ್ಲೂಕಿನ ಕೋಟೆಗಂಗೂರು ಪಂಚಾಯತಿ ವ್ಯಾಪ್ತಿಗೆ ಬರುವ ದೇವಕ್ಯಾತಿಕೊಪ್ಪದ ಜಕತಮ್ಮನ ಬಡಾವಣೆಯಲ್ಲಿ ಎರಡು ವರ್ಷಗಳಿಂದ ಅತೀವ ಕುಡಿಯುವ ನೀರಿನ ಸಮಸ್ಯೆಯುಂಟಾಗಿ



ಗ್ರಾಮಸ್ಥರು, ಮಕ್ಕಳು, ವಯೋವೃದ್ದರು, ಕೆಲವು ಗುಂಡಿಗಳಲ್ಲಿ ನಿಂತಿರುವ ನೀರನ್ನು ತಂದು ದಿನನಿತ್ಯದ ಅವಶ್ಯಕತೆಗಳಿಗೆ ಬಳಸಬೇಕಾದ ಪರಿಸ್ಥಿತಿ ಎದುರಾಗಿತ್ತು ಕಾರಣ ಗ್ರಾಮದಲ್ಲಿರುವ ಏಕೈಕ ಬೋರ್‌ವೆಲ್ ಸುಮಾರು ನೂರು ಕುಟುಂಬಗಳಿಗೆ ಕುಡಿಯುವ ನೀರನ್ನು ಪೂರೈಸುವ ಸ್ಥಿತಿಯಲ್ಲಿರಲಿಲ್ಲ. ಎಷ್ಟೇ ಬೋರ್‌ವೆಲ್‌ಗಳನ್ನು ಕೊರೆದರೂ ಹತ್ತು ಕೊಡಗಳಿಗಿಂತ ಹೆಚ್ಚು ಶುದ್ಧ ನೀರು ಸಿಗುತ್ತಿರಲಿಲ್ಲ. ಬೋರ್‌ವೆಲ್‌ಗಳಿಂದ ಬರುವ ಮಲಿನವಾದ ನೀರನ್ನು ಗ್ರಾಮಸ್ಥರು, ಮಕ್ಕಳು ಕುಡಿದು ಅನೇಕ ಕಾಯಿಲೆಗಳಿಗೆ ಸಿಲುಕಿ ಸಾವಿಗೀಡಾದ ಪ್ರಕರಣಗಳೂ ಇವೆ. 60 ವಯಸ್ಸಿನ ಮಹಿಳೆಯೊಬ್ಬಳು ಕೋರೆಯಲ್ಲಿ ತುಂಬಿದ್ದ ನೀರನ್ನು ತರಲು ಹೋಗಿ ಕಾಲುಜಾರಿ ಕೋರೆಯೊಳಗೆ ಬಿದ್ದು ದೊಡ್ಡ ಅನಾಹುತವೇ ನಡೆದು ಹೋಗಿತ್ತು. ಇದರಿಂದ ಬೇಸತ್ತ ಗ್ರಾಮಸ್ಥರು ಗ್ರಾಮ ಪಂಚಾಯತಿಗೆ ಭೇಟಿಮಾಡಿ ದೂರು ಕೊಟ್ಟು ಕಂಗಾಲಾಗಿದ್ದರು. ಅನೇಕ ಮಹಿಳೆಯರು ಮಕ್ಕಳು ಕಾಲರಾ ರೋಗಕ್ಕೆ ತುತ್ತಾಗುವಂತಹ ಸನ್ನಿವೇಶ ಕೂಡ ಎದುರಾಗಿತ್ತು. ಕೆಲವರಂತೂ ಚರ್ಮರೋಗಕ್ಕೆ ತುತ್ತಾದರು.

**ಹೋರಾಟಕ್ಕೆ ಪೂರ್ವಸಿದ್ದತೆ**


ಎಸ್.ಎಮ್.ಎಸ್.ಎಸ್.ಸಂಸ್ಥೆಯ ಮಾರ್ಗದರ್ಶನದಲ್ಲಿ ರಚನೆಯಾಗಿದ್ದ ವಿನಯ ಸ್ವ-ಸಹಾಯ ಸಂಘದ ಸದಸ್ಯರು ತಮ್ಮ ವಾರ್ಡಿನ ಮೂಲಭೂತ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರ ಕುರಿತು ಗಮನ ಹರಿಸಿದರು. ಅಲ್ಲದೆ ಮೂಲಭೂತ ಸೌಕರ್ಯಗಳನ್ನು ಪಡೆಯುವುದು ತಮ್ಮ ಹಕ್ಕು ಎಂಬುವುದನ್ನು ಮನಗಂಡು ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲೇಬೇಕೆಂಬ ನಿರ್ಣಯವನ್ನು ಕೈಗೊಂಡರು. ಗುಂಪಾಗಿ ಗ್ರಾಮ ಪಂಚಾಯತಿ ಕಚೇರಿಗೆ ಭೇಟಿ ನೀಡಿದ ಸಂಘದ ಸದಸ್ಯರು ಕಾರ್ಯದರ್ಶಿ ಮತ್ತು ಅಧ್ಯಕ್ಷರೊಂದಿಗೆ ಸಮಸ್ಯೆಯನ್ನು ಪ್ರಸ್ತಾಪಿಸಿದರು. ಸಮಸ್ಯೆ ಬಗೆಹರಿಸಲು ಪಂಚಾಯತಿಯವರು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕಾಣುವುದಿಲ್ಲ ಎಂದು ಅರಿತ ಮಹಿಳೆಯರು ಧಿಕ್ಕಾರ ಕೂಗುತ್ತ ದಿನಾಂಕ 25.10.2008ರಂದು "ನೀರಿಗಾಗಿ ನಾರಿ ಹಿಡಿದಳು ಹೋರಾಟದ ದಾರಿ" ಎನ್ನುತ ಶಿವಮೊಗ್ಗದ ಜಿಲ್ಲಾಧಿಕಾರಿಗಳ ಕಚೇರಿ ಹಾಗೂ ಜಿಲ್ಲಾ ಪಂಚಾಯತ್ ಎದುರು ಖಾಲಿ ಕೊಡ ಹಿಡಿದು ನೀರಿನ ಸೌಕರ್ಯ ಒದಗಿಸುವಂತೆ ಆಗ್ರಹಿಸಿ ಧರಣಿ ಹೂಡಿದರು.

ಈ ಹೋರಾಟದ ಫಲವಾಗಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಸಮಸ್ಯೆಯನ್ನು ಗಂಭೀರವಾಗಿ



ತೆಗೆದುಕೊಂಡು ತಾತ್ಕಾಲಿಕವಾಗಿ ನೀರನ್ನು ಪೂರೈಸುತ್ತೇವೆ ಎಂದು ಅಂದೇ ಗ್ರಾಮಕ್ಕೆ ನೀರು ಒದಗಿಸಿದರು. ಮತ್ತೆ

ಆ ವರ್ಷದ ಸರ್ಕಾರಿ ಯೋಜನೆಯಲ್ಲಿ ಮಿನಿ ನೀರಿನ ತೊಟ್ಟಿಯನ್ನು ನಿರ್ಮಿಸುವ ಯೋಜನೆಯನ್ನು ಕೈಗೊಂಡರು.



**ಮೂಲಭೂತ ಸೌಕರ್ಯಕ್ಕೆ ಆಗ್ರಹಿಸಿ ಧರಣಿ**

ಶಿವಮೊಗ್ಗ,ಅ.25: ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ಸಮೀಪದ ದೇವಕಾತಿಕೊಪ್ಪ ಗ್ರಾಮಸ್ಥರು ಇಂದು ಬೆಳಗ್ಗೆ ಜಿಲ್ಲಾಧಿಕಾರಿಗಳ ಕಛೇರಿ ಎದುರು ಧರಣಿ ನಡೆಸಿ ಮನವಿ ಸಲ್ಲಿಸಿದರು.

ಸದರಿ ಗ್ರಾಮದಲ್ಲಿ ಹಲವಾರು ಸಮಸ್ಯೆಗಳಿದ್ದು, ದಿನನಿತ್ಯ ಭಯದ ವಾತಾವರಣದಲ್ಲಿ ಜೀವನ ನಡೆಸಬೇಕಾಗಿದೆ ಎಂದು ಗ್ರಾಮಸ್ಥರು ತಮ್ಮ ಅಳಲನ್ನು ತೋಡಿಕೊಂಡರು.

ಗ್ರಾಮದ ಜಕತಮ್ಮ ಬಡಾವಣೆಯಲ್ಲಿನ ಎರಡೂ ರಸ್ತೆಗಳೂ ಸಂಪೂರ್ಣ ಹಾಳಾಗಿದ್ದು, ರಸ್ತೆಯ - ಇಕ್ಕೆಲಗಳಲ್ಲಿ ಗಿಡಗಂಟೆಗಳು ಹೆಮ್ಮರಗಳಾಗಿ ಬೆಳೆದು ನಿಂತಿವೆ. ಅಲ್ಲದೇ ರಸ್ತೆಗಾಗಿ ಮೀಸಲಿಟ್ಟಿರುವ ಜಾಗವನ್ನು ಕೆಲವರು ಅತಿಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ರಸ್ತೆಯ ಇಕ್ಕೆಲಗಳಲ್ಲಿ ಬೆಳೆದಿರುವ ಪೊದೆಗಳಲ್ಲಿ ವಿಷಸರ್ಪಗಳು ವಾಸಿಸುತ್ತಿದ್ದು, ಹಲವಾರು ಜನರು ಸಾವನ್ನಪ್ಪಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು.

ಸದರಿ ಗರಾಮವು ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದ್ದು, ಕೂಡಲೇ ಅಲ್ಲಿ ಅಂಗನವಾಡಿ, ಹಾಗೂ ಶಾಲೆಯನ್ನು ನಿರ್ಮಿಸಬೇಕು. ಬಡವರಿಗೆ ಉಚಿತ ನಿವೇಶನಗಳನ್ನು ನೀಡಬೇಕು ಎಂದು ತಮ್ಮ ಬೇಡಿಕೆಗಳ ಮನವಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಗ್ರಾಮಸ್ಥರಾದ ವೆಂಕಟೇಶ್, ವೀರಪ್ಪ, ಗೌರಮ್ಮ, ಕವಿತ, ವಿಶ್ವನಾಥ,ಶಂಕರ, ಇತರರಿದ್ದರು.

ಆದರೆ ತಾತ್ಕಾಲಿಕವಾಗಿ ನೀರನ ವ್ಯವಸ್ಥೆ ಕಲ್ಪಿಸಿದ್ದರಿಂದ ದಿನಗಳು ಉರುಳಿದಂತೆ ಪ್ರತಿ ವರ್ಷವೂ ನೀರಿನ ಸಮಸ್ಯೆ ಮತ್ತೆ ಮತ್ತೆ ಕಾಡತೊಡಗಿತು. ಪುನ: ಇಲಾಖೆಗೆ ಭೇಟಿ ನೀಡಿ ಅರ್ಜಿಯನ್ನು ಸಲ್ಲಿಸಿದ ಫಲವಾಗಿ ಎರಡು ನೀರಿನ ತೊಟ್ಟಿಗಳು ಗ್ರಾಮಕ್ಕೆ ಬಂದವು. ತೊಟ್ಟಿಗಳು ಬಂದವಾದರೂ ಪಂಚಾಯತಿ ಚುನಾವಣೆಗಳು ಎದುರಾಗಿ ಸರ್ಕಾರ ಬದಲಾದುದರಿಂದ ಸಮಸ್ಯೆಯು ಇನ್ನಷ್ಟು ಉಲ್ಬಣಗೊಂಡಿತು. ಆದರೆ ಸಂಘದ ಮಹಿಳೆಯರು 'ಒಲಿದರೆ ನಾರಿ ಮುನಿದರೆ ಮಾರಿ' ಎಂಬ ಮಾತನ್ನು ಸರ್ಕಾರದ ಅಧಿಕಾರಿಗಳಿಗೆ ತೋರಿಸಿ ಕೊಟ್ಟರು.

ಎಸ್.ಎಮ್.ಎಸ್.ಎಸ್.ಸಂಸ್ಥೆಯ ಮಾರ್ಗದರ್ಶನದಲ್ಲಿ ರಚನೆ ಮಾಡಿದ ಸಂಘ ಹಾಗೂ ಸಾಧನ ಮಹಾಸಂಘಕ್ಕೆ ಸೇರಿದ ಸದಸ್ಯರೆಲ್ಲರ ಮುಖಾಂತರ 'ಸ್ವಚ್ಛ ನೀರು ನಮ್ಮ ಮೂಲಭೂತ ಹಕ್ಕು' ಎಂಬುವುದನ್ನು ಗ್ರಾಮ ಪಂಚಾಯತಿ ಹಾಗೂ ತಾಲ್ಲೂಕು ಪಂಚಾಯತಿಗೆ ಅರ್ಜಿ ಸಲ್ಲಿಸಿ ತಾಲ್ಲೂಕಿನ ಶಾಸಕರನ್ನು ಭೇಟಿ ಮಾಡಿ ಆ ಗ್ರಾಮದ ಹಿನ್ನೆಲೆಯನ್ನು ವಿವರಿಸಿ, ಅವರೊಂದಿಗೆ ಚರ್ಚಿಸಿ ಆಗುವ ವಿಳಂಬದ ಬಗ್ಗೆ ಕಾರಣ ಕೇಳಿ ಹೋರಾಟ ಮಾಡುವ ಬಗ್ಗೆ ಎಚ್ಚರಿಕೆಯನ್ನು ನೀಡಲಾಯಿತು. ಒತ್ತಡಕ್ಕೆ ಮಣಿದ ತಾಲ್ಲೂಕಿನ ಶಾಸಕರು ಸಂಬಂಧಪಟ್ಟ ಗ್ರಾಮ ಪಂಚಾಯತ್ ಕಾರ್ಯದರ್ಶಿ ಮತ್ತು ಅಧ್ಯಕ್ಷರನ್ನು ತರಾಟೆಗೆ ತೆಗೆದುಕೊಂಡು ಗ್ರಾಮಕ್ಕೆ ಭೇಟಿ ನೀಡಿ ನೀರಿನ ತೊಟ್ಟಿಯನ್ನು ಪರಿಶೀಲನೆ ಮಾಡಿ ಕಾಳಸಂತೆಯಲ್ಲಿ ಮಾರಾಟವಾದ ಯಂತ್ರವನ್ನು ಜೋಡಿಸಿ ತೊಟ್ಟಿಯನ್ನು ಸ್ವಚ್ಚಗೊಳಿಸಿ ನೀರು



ಪೂರೈಸುವ ವ್ಯವಸ್ಥೆಯನ್ನು ಮಾಡಿಸಿದರು. ಇದೆಲ್ಲಾ ನಡೆದದ್ದು ಒಂದೇ ಒಂದು ವಾರದಲ್ಲಿ. ಇದರಿಂದಾಗಿ ಸುಮಾರು ಎರಡು ವರ್ಷಗಳಿಂದ ಪಾಳು ಬಿದ್ದಿದ್ದ ನೀರಿನ ತೊಟ್ಟಿಯು ಮದುಮಗಳಂತೆ ಶೃಂಗಾರವಾಯಿತು. ಗ್ರಾಮದಲ್ಲೆಲ್ಲಾ ಗಂಗೆ ಮೈದುಂಬಿ ಹರಿದಳು. 300 ಜನರಿಗೆ ರೋಗಾಣು ಮುಕ್ತ ಸ್ವಚ್ಛ ನೀರು ಸರಬರಾಜಾಗಲು ಪ್ರಾರಂಭವಾಯಿತು.


ನೀರು ನಮ್ಮ ಮೂಲಭೂತ ಹಕ್ಕು ಎಂದು ಪ್ರತಿಪಾದಿಸಿ ಅದನ್ನು ಪಡೆದುಕೊಂಡ ವಿನಯ ಸ್ವ–ಸಹಾಯ ಸಂಘವನ್ನು ಇಡೀ ಸಮುದಾಯ ಮಾತ್ರವಲ್ಲ ಗ್ರಾಮ ಪಂಚಾಯತಿ ಅಧಿಕಾರಿಗಳು, ತಾಲ್ಲೂಕು ಪಂಚಾಯತಿಯ ಅಧಿಕಾರಿಗಳು, ಜಿಲ್ಲಾ ಪಂಚಾಯತಿ ಅಧಿಕಾರಿಗಳು ಗುರುತಿಸಿಕೊಂಡರು. ಸಂಘದ ಮಹಿಳೆಯರು ತಮ್ಮ ಗ್ರಾಮಕ್ಕೆ ಬಂದ ನೀರಿನ ಸೌಕರ್ಯಕ್ಕಾಗಿ ಗ್ರಾಮಸ್ಥರು ಹಾಗೂ ಊರಿನ ಸಮುದಾಯದ ಜನರೊಂದಿಗೆ ಸೇರಿ ದಿನಾಂಕ 14.03.2011ರಂದು ಪಂಚಾಯತಿ ಸದಸ್ಯರೊಡನೆ ಸಂಸ್ಥೆಯ ಸಿಬ್ಬಂದಿ ವರ್ಗದೊಂದಿಗೆ ಬೆಳಿಗ್ಗೆ 11:00 ಗಂಟೆಗೆ ಗಂಗಾಪೂಜಾ ಕಾರ್ಯಕ್ರಮವನ್ನು ಏರ್ಪಡಿಸಿ ಗಂಗೆಯು ನಮ್ಮ ಗ್ರಾಮಕ್ಕೆ ಬಂದಿದ್ದಾಳೆಂದು ಸಂಪ್ರದಾಯದ ಪ್ರಕಾರ ಅವರ ಪದ್ಧತಿಯಂತೆ 5 ಮಹಿಳೆಯರು ತುಂಬಿದ ಕೊಡದಲ್ಲಿ ನೀರನ್ನು ತೆಗೆದುಕೊಂಡು ನೀರಿನ ಬ್ಯಾಂಕ್‌ಗೆ ಬಂದು ಇನ್ನು ಮುಂದೆ ಗಂಗೆ ಸದಾ ತುಂಬಿ ಹರಿಯಲಿ ಎಂದು ಪೂಜೆ ಸಲ್ಲಿಸಿದರು. ಇದನ್ನು ಪತ್ರಿಕೆಗಳಲ್ಲಿ ಹಾಗೂ ಟಿವಿ ಚಾನಲ್‌ಗಳಲ್ಲಿ ಪ್ರಕಟಿಸಲಾಯಿತು. ಸಂಘಟಿತ ಹೋರಾಟದಿಂದ ಜಯಗಳಿಸಲು ಸಾಧ್ಯ ಎಂಬುದನ್ನು ಅರಿತ ಮಹಿಳೆಯರು ಇನ್ನು ಮುಂದೆಯೂ ಇಂತಹ ಹಲವಾರು ಸಮಸ್ಯೆಗಳನ್ನು ಕೈಗೊಳ್ಳಲು ಮುಂದಾಗಿದ್ದಾರೆ.

# ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ



✍ ಬ್ರದರ್ ನಿಶಾಂತ್ ಅಂತೋಣಿ ಡಿಕಾಸ್ಟ
ಶಿವಮೊಗ್ಗ ಧರ್ಮಕ್ಷೇತ್ರ

ವಿಶ್ವ ಪರಿಸರ ದಿನವನ್ನು ವಿಶ್ವದಾದ್ಯಂತ ನಾವು ಜೂನ್ 5ರಂದು ಆಚರಿಸುತ್ತೇವೆ. ಅಂದು ಎಲ್ಲೆಡೆಯೂ ಗಿಡಗಳನ್ನು ನೆಟ್ಟು, ನೀರನ್ನು ಹಾಕಿ ಪರಿಸರದ ಬಗ್ಗೆ ಮಾಹಿತಿಯನ್ನು ಕೊಡುತ್ತೇವೆ. ಹಾಗಾದರೆ ಪರಿಸರ ಎಂದರೆ ಏನು? ಮನುಷ್ಯ ಹಾಗೂ ಇತರ ಜೀವಿಗಳು ಬದುಕುವ ಮತ್ತು ಕಾರ್ಯನಿರ್ವಹಿಸುವ ಸುತ್ತಮುತ್ತ ಅಥವಾ ಪರಿವೇಷ್ಟೆಯೇ ಪರಿಸರ (Environment). ಈ Environment ಶಬ್ದವು ಫ್ರೆಂಚ್ ಭಾಷೆಯ "ಎನ್‌ವಿರೋನ್ಮರ್"(Environmer) ಎಂಬ ಶಬ್ದದಿಂದ ರೂಪಿತವಾಗಿದೆ. 'ಎನ್‌ವಿರೋನ್ಮರ್' ಎಂದರೆ ಸುತ್ತಮುತ್ತ ಅಥವಾ ಪರಿವೇಷ್ಟಿಸು ಎಂದರ್ಥ. ಈ ಜಗತ್ತು ಸುಮಾರು 3500 ಮಿಲಿಯನ್ ವರ್ಷಗಳ ಹಿಂದೆಯೇ ಸೃಷ್ಟಿಯಾದದ್ದು. ಅದು ಎಷ್ಟು ಪ್ರಾಚೀನವಾಗಿದೆಯೋ ಅಷ್ಟೇ ಪ್ರಾಚೀನವಾದದ್ದು ನಮ್ಮ ಪರಿಸರ. ಇದು ರೂಪುಗೊಂಡು ಅದೆಷ್ಟೋ ಯುಗಗಳೇ ಕಳೆದಿವೆ. ಸಮಸ್ತ ಜೀವಿಗಳಿಗೂ ನೆಲೆಯಾದ ಈ ಪ್ರಥ್ವಿಯು ಚರಾಚರ (Living and Nonliving) ವಸ್ತುಗಳನ್ನೊಳಗೊಂಡಿದೆ. ಈ ಭೂಮಿಯಲ್ಲಿರುವ ಪರಿಸರ ಎಲ್ಲಾ ಜೀವ ಜಂತುಗಳಿಗೆ ಸೇರಿದ್ದು. ಆದರೆ ಬುದ್ಧಿಜೀವಿ ಎನಿಸಿಕೊಂಡಿರುವ ಮಾನವ ಪ್ರಕೃತಿಯ ಎಲ್ಲಾ ಸೃಷ್ಟಿಯೂ ತನಗೊಬ್ಬನಿಗೇ ಸದಾ ಮಿಸಲೇನೋ ಎಂಬ ಭ್ರಾಮಕ ಮನ: ಸ್ಥಿತಿಯಲ್ಲಿ ಪ್ರಕೃತಿಯ ಮೇಲೆ ಅಧಿಪತ್ಯವನ್ನು ಸ್ಥಾಪಿಸಿ, ತನ್ನೆಲ್ಲಾ ಸ್ವಾರ್ಥಕ್ಕಾಗಿ ನೈಸರ್ಗಿಕ ಸಂಪನ್ಮೂಲಗಳನ್ನು ಸೂರೆಗೈಯುತ್ತಿರುದೇ ಇಂದಿನ ಎಲ್ಲಾ ಪರಿಸರ ಸಮಸ್ಯೆಗಳಿಗೆ ಮೂಲಕಾರಣ. ಇತ್ತೀಚಿನ ದಿನಗಳಲ್ಲಿ ಪರಿಸರ ಪ್ರಜ್ಞೆಯನ್ನು ಕುರಿತು ಎಲ್ಲೆಡೆ ಚರ್ಚೆಗಳು ನಡೆಸಲಾಗುತ್ತಿದೆ. ಬೇರೆ ಜೀವಿಗಳ ಬಗ್ಗೆ ಚಿಂತಿಸದ ಮನುಷ್ಯ, ತನ್ನ ಪರಿಸರಕ್ಕೆ ತಾನೇ ಸಮಸ್ಯೆಯನ್ನು ಮಾಡುತ್ತಾ ಇದ್ದಾನೆ. **'ನಾವು ಧರ್ಮವನ್ನು ರಕ್ಷಿಸಿದರೇ ಧರ್ಮವು ನಮ್ಮನ್ನು ರಕ್ಷಿಸುತ್ತದೆ'** ಎಂಬುವುದು ಎಷ್ಟು ಸತ್ಯವೋ ಹಾಗೇ **'ನಾವು ಪರಿಸರವನ್ನು ರಕ್ಷಿಸಿದರೇ ನಮ್ಮನ್ನು ಪರಿಸರ ಸಂರಕ್ಷಿಸುತ್ತದೆ'** ಎಂಬುದು ಅಷ್ಟೇ ಸತ್ಯ. ನಮ್ಮ ಈ ಸಮಾಜವು ಪರಿಸರವನ್ನು ಅವಲಂಭಿಸಿದೆ. ಆದ್ದರಿಂದ ನಮ್ಮ ಈ ಸಮಾಜಕ್ಕೆ ಇರುವ ಮುಖ್ಯವಾದ ಸಮಸ್ಯೆ ಎಂದರೇ ಹೇಗೆ ಈ ಪರಿಸರದಲ್ಲಿ ಜೀವಿಸುವುದು? ಎಂಬುವುದೇ ದೊಡ್ಡ ಸವಾಲು. ಏಕೆಂದರೆ ಕೆಲವು ದಿನಗಳ ಹಿಂದೆ ವಾರ್ತೆಗಳಲ್ಲಿ, ವೃತ್ತಪತ್ರಿಕೆಗಳಲ್ಲಿ, ವಾಟ್ಸಪ್, ಫೇಸ್‌ಬುಕ್‌ಗಳಲ್ಲಿ ನಾವು



ನೋಡಿರಬಹುದು ಹೆಚ್ಚಾದ ಮಳೆಯಿಂದ ಕೇರಳದಲ್ಲಿ ಸುನಾಮಿ, ನೆರೆಬಂದು ಜನರು ತತ್ತರಿಸಿ ಹೋಗಿದ್ದಾರೆ. ಹನ್ನೆರಡರಿಂದ ಹದಿನೈದು ಊರುಗಳು ನಾಶವಾಗಿದೆ, ಜನರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ, ಹೊಲ-ಗದ್ದೆಗಳು ಹಾಳಾಗಿದೆ. ಇನ್ನೊಂದೆಡೆ ನಮ್ಮ ರಾಜ್ಯದ ಕೊಡಗು ಜಿಲ್ಲೆಯಲ್ಲಿ ನದಿಯ ನೀರು ತುಂಬಿ ಉಕ್ಕಿ ಹರಿದು ಮನೆ-ಮಠಗಳು ಹಾಳಾಗಿದೆ, ಬೆಟ್ಟಗಳು ಕುಸಿದು ಬಿದ್ದಿವೆ, ಆಸ್ತಿ-ಪಾಸ್ತಿ ಹಾನಿಯಾಗಿದೆ, ಜನ-ಜಾನುವಾರುಗಳು ನೀರಿನಲ್ಲಿ ಜೀವಂತ ಸಮಾಧಿಯಾಗಿವೆ. ಹಿಮಾಚಲ ಪ್ರದೇಶದಲ್ಲಿ ಭೂಮಿಯ ತಾಪಮಾನ ಹೆಚ್ಚಾಗಿ ಜ್ವಾಲಾಮುಖಿಯಾಗಿ ಹತ್ತಿರದ ಮನೆಗಳಲ್ಲಿದ್ದ ಜನರು ಸತ್ತಿದ್ದಾರೆ. ಪರಿಸರದಿಂದ ಆಗುತ್ತಿರುವ ಈ ಹಾನಿಯನ್ನೇ ನೈಸರ್ಗಿಕ ವಿಕೋಪಗಳು (natural calamities) ಎನ್ನುತ್ತಾರೆ. ನಮಗೆ ಪರಿಸರದಿಂದ ಹಾನಿಯಾಗುತ್ತಿದೆ ಎಂಬುವುದು ಎಷ್ಟು ಸತ್ಯವೋ, ಮನುಷ್ಯನೇ ಈ ಪರಿಸರ ನಾಶಕ್ಕೆ ಕಾರಣ ಎಂಬುವುದು ಅಷ್ಟೇ ಕಟುಸತ್ಯ. ಹೇಗೆ ನಮ್ಮ ಪರಿಸರ ಹಾಳಾಗುತ್ತಿದೆ? ಹೇಗೆ ಪ್ರವಾಹ, ಭೂಕಂಪ, ಸೈಕ್ಲೋನ್, ಜ್ವಾಲಾಮುಖಿಗಳು ಆಗುತ್ತಿವೆ? ಎಂಬುವುದನ್ನು ನಾವು ಚಿಂತಿಸಬೇಕಾಗಿದೆ. ಯಾವಾಗ ನಮ್ಮ ಪರಿಸರದಲ್ಲಿ ನೈಸರ್ಗಿಕ ಬದಲಾವಣೆಗಳು ಕಾಣುತ್ತವೆಯೋ, ಯಾವಾಗ

ನಮ್ಮ ಪರಿಸರದಲ್ಲಿ ಅಸಮತೋಲನ ಉದ್ಭವವಾಗುತ್ತದೆಯೋ ಆಗ ಇಂತಹ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ.

### 1. ಪ್ರವಾಹಗಳು

ನದಿ ಅಥವಾ ಸಮುದ್ರ ತೀರದಲ್ಲಿ ನೀರಿನ ಮಟ್ಟವು ಸಹಜ ಸ್ಥಿತಿಗಿಂತ ಹೆಚ್ಚಾಗಿ, ಯಾವಾಗ ಅಸಾಧಾರಣ ಮಟ್ಟಕ್ಕೇರುತ್ತದೆಯೋ ಆಗ ಪ್ರವಾಹಗಳು ಕಾಣಿಸಿಕೊಳ್ಳುತ್ತವೆ.

**ಕಾರಣಗಳು**

- ಹೆಚ್ಚು ಸಮಯದವರೆಗೆ ಎಡೆಬಿಡದೆ ಅಧಿಕ ಮಳೆ ಬೀಳುವುದರಿಂದ ನೀರಿನ ಪ್ರಮಾಣ ಹೆಚ್ಚಾಗಿ ಪ್ರವಾಹಗಳು ಸಂಭವಿಸುತ್ತದೆ.
- ವಿಶಾಲವಾದ ಜಲನಯನ ಪ್ರದೇಶದಲ್ಲಿ ವಾಡಿಕೆಯಷ್ಟೇ ಮಳೆ ಬಿದ್ದರೂ ನದಿಗಳು ಭರ್ತಿಯಾಗಿ ಪ್ರವಾಹಕ್ಕೆ ಕಾರಣವಾಗುತ್ತದೆ.
- ಮಾನವನ ಕೃತ್ಯಗಳಿಂದ ನದಿಗೆ ಅಡ್ಡವಾಗಿ ವಸ್ತುಗಳನ್ನು, ಕಟ್ಟೆಗಳನ್ನು ಕಟ್ಟುವುದರಿಂದ ನೀರಿನ ಮಟ್ಟವು ಹೆಚ್ಚಾಗಿ ನೀರು ಸರಾಗವಾಗಿ ಹರಿದು ಹೋಗದೆ ಪ್ರವಾಹ ಸಂಭವಿಸುತ್ತದೆ. ಒಳಕಾಲುವೆ ಇಲ್ಲದಿದ್ದರೂ ಪ್ರವಾಹದ ಸಮಸ್ಯೆಗಳು ಪ್ರಾರಂಭವಾಗುತ್ತದೆ.

**ಪರಿಣಾಮಗಳು**

- ಜನ, ಪ್ರಾಣಿಗಳು ಸಾವು ನೋವುಗಳನ್ನು ಅನುಭವಿಸುತ್ತದೆ.
- ಅಪಾರ ಆಸ್ತಿ–ಪಾಸ್ತಿ ಹಾನಿಯಾಗುತ್ತದೆ.
- ಸಾರಿಗೆ ಸಂಪರ್ಕಗಳು ಮಾಧ್ಯಮಗಳು ಅಸ್ತವ್ಯಸ್ತಗೊಳ್ಳುತ್ತದೆ.
- ನಿತ್ಯ ಜನಜೀವನಕ್ಕೆ ತೊಂದರೆ ಉಂಟಾಗುತ್ತದೆ.
- ಜನರ ಮನೆಗಳು ಮುಳುಗಿ ಸಮಸ್ಯೆ ಎದುರಾಗುತ್ತವೆ.
- ಮಣ್ಣಿನ ಸವೆತದಿಂದ ಫಲವತ್ತತೆ ಕಡಿಮೆಯಾಗುತ್ತದೆ.
- ಸತ್ತ ಜೀವಿಗಳು ಕೊಳೆಯುವುದರಿಂದ ಸಾಂಕ್ರಾಮಿಕ ರೋಗಗಳು ಹರಡುತ್ತದೆ.

### 2. ಭೂಕಂಪ

ಭೂಮಿ ಒಳಗಿನ ಕ್ಷೋಭಗಳಿಂದ ಭೂ ಚಿಪ್ಪಿನಲ್ಲಿ ಕಂಪನಗಳು, ಅಲುಗಾಟ ಕಂಡು ಬಂದರೆ ಅದು ಭೂಕಂಪಕ್ಕೆ ದಾರಿ ಮಾಡಿಕೊಡುತ್ತದೆ. ಈ ಭೂಕಂಪವೂ ಅನೇಕ ಕಾರಣಗಳಿಂದ ಸಂಭವಿಸುತ್ತದೆ. ಜ್ವಾಲಾಮುಖಿ ಸ್ಫೋಟನೆ, ಶಿಲಾಸ್ತರಭಂಗ, ಮಡಿಕೆ ಮತ್ತು ಸ್ಥಾನಪಲ್ಲಟ, ಭೂ ಅಂತರಾಳದಲ್ಲಿ ಕುಸಿತ, ಭೂಕುಸಿತ, ಅಂತರ್ಗುಹೆಗಳ ಮೇಲ್ಛಾವಣಿಗಳ ಕುಸಿತ, ಜಲಾಶಯದ ನೀರಿನ ಭಾರದಿಂದ ಭೂಕಂಪ ಉಂಟಾಗುತ್ತದೆ.

ಇದರ ಪರಿಣಾಮವಾಗಿ ಅನೇಕ ಸಮಸ್ಯೆಗಳು ಹಾನಿಗಳು ಉಂಟಾಗುತ್ತವೆ. ನಗರ, ಪಟ್ಟಣಗಳು ನಾಶವಾಗುತ್ತವೆ, ಮಾನವ ನಿರ್ಮಿತ ಕಟ್ಟಡಗಳು ಕುಸಿಯುತ್ತದೆ, ಸೇತುವೆ, ಅಣೆಕಟ್ಟು, ರಸ್ತೆ, ರೈಲು ಮಾರ್ಗಗಳು ಹಾನಿಯಾಗುತ್ತವೆ, ವಿದ್ಯುತ್ ಸ್ಥಾವರಗಳು ನಾಶವಾಗುತ್ತದೆ, ಟೆಲಿಫೋನ್ ಸಂಪರ್ಕಗಳು ಸ್ಥಗಿತಗೊಳ್ಳುತ್ತದೆ, ಕಾರ್ಖಾನೆಗಳಿಗೆ ಹಾನಿ, ಜನ–ಜಾನುವಾರು, ಆಸ್ತಿ–ಪಾಸ್ತಿ ಎಲಾವೂ ನಾಶವಾಗಿ ಸಾವು ನೋವುಗಳು ಸಂಭವಿಸುತ್ತವೆ.

### 3. ಸೈಕ್ಲೋನ್

ಸುತ್ತಲಿನ ಅಧಿಕ ಒತ್ತಡವುಳ್ಳ ಪ್ರದೇಶಗಳಿಂದ ಕಡಿಮೆ ಒತ್ತಡವುಳ್ಳ ಪ್ರದೇಶದ ಕಡೆಗೆ ವೃತ್ತಾಕಾರದಲ್ಲಿ ಬೀಸುವ ಮಾರುತವೇ ಸೈಕ್ಲೋನ್. ಈ ಪದವನ್ನು ಕಲ್ಕತ್ತಾದ ಮೆರೈನ್ ಕೋರ್ಟಿನ ಅಧ್ಯಕ್ಷ ಹೆನ್ರಿ ಪೆಡ್ಡಿಂಗ್ಟನ್‌ನು 1848ರಲ್ಲಿ ಪರಿಚಯಿಸಿದನು. ಈ ಸೈಕ್ಲೋನ್‌ಗಳು ಹೆಚ್ಚು ಅಪಾಯಾಕಾರಿ. ಇವು ಸಮುದ್ರದ ಭಾಗಗಳಲ್ಲಿ ಹೆಚ್ಚು, ಇದರಿಂದ ಆಗುವ ಪರಿಣಾಮಗಳು ಹೆಚ್ಚು. ಸಮುದ್ರದಲ್ಲಿ ಅಲೆಗಳು ಹೆಚ್ಚಾಗುತ್ತವೆ, ಅವು ಹೆಚ್ಚುಕಾಲ ಹಾಗೇ ಇದ್ದರೇ ಅನಾಹುತಗಳು ಸಂಭವಿಸುತ್ತವೆ. ಸಾವು ನೋವುಗಳು ಜಾಸ್ತಿ, ಸಾರಿಗೆ ಸಂಪರ್ಕಗಳು ಹಾಳಾಗುತ್ತವೆ, ಕಟ್ಟಡಗಳು ನೆಲಸಮವಾಗುತ್ತವೆ, ನದಿಗಳಲ್ಲಿ ಪ್ರವಾಹಗಳು ಉಂಟಾಗುತ್ತವೆ. ಬೆಳೆ, ಸಸ್ಯ, ಪ್ರಾಣಿ ವರ್ಗಗಳಿಗೆ ಹಾನಿಯಾಗುತ್ತದೆ, ರೋಗಗಳು ಹರಡುತ್ತವೆ.

ಹೀಗೆ ನೈಸರ್ಗಿಕ ವಿಕೋಪದಿಂದ ನಮಗೆ ಅನೇಕ ಹಾನಿಗಳು ಉಂಟಾಗುತ್ತಿದೆ. ಅದರೇ ಇವೆಲ್ಲವೂ ಸಂಭವಿಸಲು ಮಾನವನ ಹಲವಾರು ಕೃತ್ಯಗಳೇ ಕಾರಣ ಅವುಗಳಲ್ಲಿ ಮುಖ್ಯವಾದದ್ದು ಅರಣ್ಯನಾಶ ಮತ್ತು ಹೆಚ್ಚಾಗುತ್ತಿರುವ ಜನಸಂಖ್ಯೆ.

**ಅರಣ್ಯನಾಶ**

ಕಾಡುಗಳನ್ನು ಬರಿದು ಮಾಡುವ ಪ್ರಕ್ರಿಯೆಯನ್ನು ಅರಣ್ಯನಾಶ ಎನ್ನುತ್ತಾರೆ. ಅಂದರೇ ಒಂದು ಪ್ರದೇಶವನ್ನಾವರಿಸಿರುವ ವೃಕ್ಷಗಳನ್ನು ಕತ್ತರಿಸುವ, ಸುಡುವ, ಮತ್ತು ಉರುಳಿಸುವ ಕಾರ್ಯಗಳಿಂದ ಕಾಡು ಬರಿದಾಗುವುದೇ ಅರಣ್ಯನಾಶ. ಮನುಷ್ಯನು ತನ್ನ ಹಲವು ಅಗತ್ಯಗಳ ಪೂರೈಕೆಗಾಗಿ ಅರಣ್ಯನಾಶವನ್ನು ದಿನದಿಂದ ದಿನಕ್ಕೆ ಮುಂದುವರೆಸುತಿದ್ದಾನೆ. ಮನುಷ್ಯ ತನ್ನ ಅವಿವೇಕತನ, ನಿರ್ಲಕ್ಷ್ಯತೆ, ಸ್ವಾರ್ಥ, ಸಾಧನೆ, ಲಾಭಗಳಿಗಾಗಿ ಅರಣ್ಯಗಳನ್ನು ನಾಶ ಮಾಡುತಿದ್ದಾನೆ. ಜನಸಂಖ್ಯಾ ಬೆಳವಣಿಗೆಯ ತೀವ್ರಗತಿಯೊಂದಿಗೆ ಅರಣ್ಯನಾಶದ ಪ್ರಮಾಣವೂ ಅತಿಯಾಗುತ್ತಾ ಬಂದಿದೆ. ಬ್ರಿಟಿಷ್ ಪರಿಸರ ತಜ್ಞ ನಾರ್ಮನ್ ಮೈಯರ್ಸ್ ಅವರ್ ಹೇಳಿಕೆಯ ಪ್ರಕಾರ ಅರಣ್ಯ ಪ್ರದೇಶದಲ್ಲಿ 5% ಭಾಗ ದನಗಳು, ಮೇಯುವುದರಿಂದ, 19% ಮರ ಕಡಿಯುವುದರಿಂದ, 22% ತಾಳೆ ಎಣ್ಣೆ ಬೆಳೆಗಳಿಗಾಗಿ ವಿಸ್ತರಣೆ ಹಾಗೂ 54% ಭಾಗ ಬೇಸಾಯ ಕ್ರಮದಿಂದ ನಾಶವಾಗುತ್ತಿದೆ. ವಿಶ್ವ ಆಹಾರ ಮತ್ತು ಕೃಷಿ ಸಂಸ್ಥೆ ಅಂದಾಜಿನಂತೆ. ಕಳೆದು 20 ವರ್ಷಗಳಲ್ಲಿ 13 ಮಿಲಿಯನ್ ಹೆಕ್ಟೇರ್‌ಗಳಷ್ಟು ಅರಣ್ಯ ನಾಶವಾಗುತ್ತಿದೆ. ಹೀಗೆ ಅರಣ್ಯ ನಾಶವಾಗುತ್ತಿದ್ದರೆ 2025ರ ಒಳಗೆ ಇಡೀ ಭೂಮಿ ನಾಶವಾಗುವ ಸಾಧ್ಯತೆ ಇದೆ. ಇದಕ್ಕೆ

ಕಾರಣಗಳು:

**ಕೃಷಿಕ್ಷೇತ್ರದ ವಿಸ್ತರಣೆ**

ಜನಸಂಖ್ಯೆ ಪ್ರಪಂಚದಲ್ಲಿ ಹೆಚ್ಚಾದಷ್ಟು ಆಹಾರದ ಧವಸ ಧಾನ್ಯಗಳು ಕಚ್ಚಾವಸ್ತುಗಳು ಹೆಚ್ಚಾಗಿ ಬೇಕಾಗಿದೆ. ಆದ್ದರಿಂದ ಕೃಷಿಕ್ಷೇತ್ರದ ವಿಸ್ತರಣೆ ಹೆಚ್ಚಾಗುತ್ತಿದೆ. ಈ ವಿಸ್ತರಣೆಗಾಗಿ ಅರಣ್ಯಗಳು ನಾಶವಾಗುತ್ತದೆ. ಅದರಲ್ಲೂ ವಾಣಿಜ್ಯ ಬೇಸಾಯ, ನೆಡುತೋಟ ಬೇಸಾಯ ಅಭಿವೃದ್ದಿಗೆ ಹೆಚ್ಚು ಕಾಡು ನಾಶವಾಗುತ್ತದೆ. ಉದಾ: ಕಾಫಿ, ಕೋಕೋ, ರಬ್ಬರ್ ಬೇಸಾಯ.

**ಉರುವಲಿಗಾಗಿ ಬೇಡಿಕೆ**

ಪ್ರಪಂಚದ ಅನೇಕ ಜನರಿಗೆ ಸೌದೆ ಮತ್ತು ಇದ್ದಿಲುಗಳಿಗಾಗಿ ಸಾಕಷ್ಟು ಮರಗಳನ್ನು ಕಡಿಯಲಾಗುತ್ತದೆ. ಇದು ಹಿಂದುಳಿದ ಮತ್ತು ಪ್ರಗತಿ ಶೀಲ ರಾಷ್ಟ್ರಗಳಲ್ಲಿ ಹೆಚ್ಚು. ಭಾರತದಲ್ಲೇ ಪ್ರತಿ ವರ್ಷ 300 – 500 ಮಿಲಿಯನ್ ಟನ್‌ಗಳಷ್ಟು ಸೌದೆಗಾಗಿ ಬೇಡಿಕೆ ಇದೆ ಎಂದು ಅಂದಾಜು ಮಾಡಲಾಗಿದೆ. ಜನಸಂಖ್ಯೆ ಹೆಚ್ಚಾದಂತೆ ಸೌದೆ ಬೇಡಿಕೆಯನ್ನು ಪೂರೈಸಲು ಅರಣ್ಯನಾಶ ನಿರಂತರ ನಡೆಯುತ್ತಿದೆ. ಪ್ರಪಂಚದಲ್ಲಿ 3000 ಮಿಲಿಯನ್ ಜನರು ಸೌದೆ ಬಳಸುತ್ತಿರುವುದು ತಿಳಿದು ಬಂದಿದೆ.

**ಗಣಿಗಾರಿಕೆ ಮತ್ತು ತೈಲ ಉತ್ಪಾದನೆ**

ಖನಿಜ ಮತ್ತು ಪೆಟ್ರೋಲಿಯಂ ವಸ್ತುಗಳನ್ನು ಉತ್ಪಾದಿಸುವ ಸಲುವಾಗಿ ಅರಣ್ಯಗಳು ಹೆಚ್ಚು ನಷ್ಟವನ್ನು ಅನುಭವಿಸುತ್ತದೆ. ಹಾಗೇ ಕೆಲವು ಖನಿಜದ ಅದಿರುಗಳನ್ನು ಕರಗಿಸುವುದಕ್ಕೆ ಕೆಲವು ದೇಶಗಳಲ್ಲಿ ಮರಗಳನ್ನು ಬಳಸುತ್ತಿದ್ದು ಇದರಿಂದ ಅರಣ್ಯವು ನಾಶವಾಗುತ್ತಿದೆ. ಉದಾ: ಬ್ರೆಜಿಲ್‌ನ ರಾರಾಜಾಸ್, ಜಾಂಬಿಯಾದ ತಾಮ್ರದ ವಲಯ.

**ಸಂಪನ್ಮೂಲ ಸೌಲಭ್ಯಗಳು ಅಭಿವೃದ್ದಿಗೆ**

ಸಾರಿಗೆ ಸಂಪನ್ಮೂಲ ಮಾಧ್ಯಮಗಳು ಅಭಿವೃದ್ಧಿಯಾಗಿ, ಅರಣ್ಯಗಳು ನಾಶವಾಗುತ್ತದೆ. ಉದಾ: ರಸ್ತೆ, ರೈಲು ಮಾರ್ಗಗಳ ನಿರ್ಮಾಣ, ವಿದ್ಯುಚ್ಛಕ್ತಿ ಪ್ರಸರಣ, ಟೆಲಿಫೋನ್ ವ್ಯವಸ್ಥೆ, ಹೆದ್ದಾರಿ ನಿರ್ಮಾಣಕ್ಕಾಗಿ ಇತ್ಯಾದಿ.

**ಪರಿಣಾಮ**

1. ಅರಣ್ಯದಲ್ಲಿ ಅನೇಕ ವಿವಿಧ ಪ್ರಾಣಿ ಪಕ್ಷಿಗಳು ಜೀವಿಸುತ್ತದೆ. ಆದರೇ ಅರಣ್ಯನಾಶದಿಂದ ಎಣಿಸಲಾಗದಷ್ಟು ಜೀವಿಗಳು ಕಣ್ಮರೆಯಾಗಿತ್ತಿದೆ. ಕೆಲವು ಅಳಿವಿನ ಅಂಚಿನಲ್ಲಿದೆ, ಕೆಲವು ಅಳಿದು ಹೋಗಿವೆ.
2. ಅರಣ್ಯನಾಶದಿಂದ ತಮ್ಮ ನೆಲೆಗಳನ್ನು ಕಳೆದುಕೊಂಡು ಅನೇಕ ಸಸ್ಯ ಮತ್ತು ಪ್ರಾಣಿಗಳು ತಮ್ಮ ಅಸ್ಥಿತ್ವವನ್ನು ಕಳೆದುಕೊಂಡಿದೆ. ಇದರಿಂದ ಜೈವಿಕ ವೈವಿಧ್ಯವು ಹಾಳಾಗಿದೆ.
3. ಅರಣ್ಯನಾಶದಿಂದ ಜಲಾವರ್ತದಲ್ಲಿ ಏರುಪೇರು ಉಂಟಾಗಿ ಮಳೆಗಾಲದಲ್ಲಿ ವ್ಯತ್ಯಾಸವಾಗಿ ಜಲಪ್ರವಾಹದಿಂದ ಪ್ರಳಯಗಳು ಆಗುತ್ತಿದೆ.
4. ಅರಣ್ಯನಾಶದಿಂದ ಇಂಗಾಲದ ಡೈ ಆಕ್ಸೈಡ್ ಮತ್ತು ಆಮ್ಲಜನಕ ಅನಿಲಗಳ ಕ್ರಿಯೆ ಸರಿಯಾಗಿ ನಡೆಯದೇ ಅಸಮತೋಲನವಾಗುತ್ತಿದೆ. ಭೂಮಿಯ ತಾಪಮಾನ ಹೆಚ್ಚಾಗುತ್ತಿದೆ.
5. ಪುರಾತನ ಕಾಲದಿಂದಲೂ ಬುಡಕಟ್ಟು ಜನಾಂಗದವರು, ಕಾಡು ಜನರು ಅರಣ್ಯದಲ್ಲೇ ವಾಸಿಸುತ್ತಾ ಆ ಜೀವನಕ್ಕೆ ಹೊಂದಿಕೊಂಡಿದ್ದಾರೆ. ಅರಣ್ಯನಾಶದಿಂದ ಅವರ ಸಾಂಪ್ರದಾಯಿಕ ಜೀವನ ಶೈಲಿ ನಾಶವಾಗಿದೆ.

**ಜನಸಂಖ್ಯೆ ಬೆಳವಣಿಗೆ**

2011ನೇ ಜನಗಣತಿಯ ಪ್ರಕಾರ ನಮ್ಮ ದೇಶದಲ್ಲಿ 121 ಕೋಟಿಜನರು ವಾಸಿಸುತಿದ್ದಾರೆ. ಪ್ರಸ್ತುತವಾಗಿ 141 ಕೋಟಿ ಜನಸಂಖ್ಯೆಗೆ ಏರಿದೆ. ಜನಸಂಖ್ಯಾ ಬೆಳವಣಿಗೆಯು ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುವಂತೆಯೇ ದೇಶದಿಂದ ದೇಶಕ್ಕೂ ವ್ಯತ್ಯಾಸವಾಗುತ್ತದೆ. ಕೆಲವು ದೇಶದಲ್ಲಿ ನಿರಂತರವಾಗಿ ಜನಸಂಖ್ಯೆ ಹೆಚ್ಚುತಿರುವುದರಿಂದ ಅನೇಕ ರೀತಿಯ ಸಮಸ್ಯೆಗಳು ಪ್ರಾರಂಭವಾಗುತ್ತಿದೆ. ಹಾಗೇ ಆಹಾರ ಪದಾರ್ಥವು ಹೆಚ್ಚು ಬೇಕಾಗಿದೆ. ಅದನ್ನು ಬೆಳೆಸಲು ಮತ್ತೆ ಕಾಡುಗಳನ್ನು ನಾಶಮಾಡಬೇಕಾಗಿದೆ. ಉದಾ: ಜನರಿಗೆ ವ್ಯವಸಾಯ ಮಾಡಲು 18% ಜಾಗ ಬೇಕಾದರೇ ಜನರು 45%–50% ಕಾಡನ್ನು ನಾಶಮಾಡಿ 18% ಭೂಮಿಯಲ್ಲಿ ಬೆಳೆಯನ್ನು ಬೆಳೆಸುತಿದ್ದಾರೆ. ಉಳಿದ ಭೂಮಿಯ ಗತಿ?.

ತೀವ್ರಗತಿಯಲ್ಲಿ ಬೆಳೆಯುತ್ತಿರುವ ಈ ಜನಸಂಖ್ಯೆಯ ಹೆಚ್ಚಳದಿಂದ ಹಲವು ಸಮಸ್ಯೆಗಳು ತಲೆ ಎತ್ತುತ್ತಿದೆ. ಮಿತಿಮೀರಿದ ಸಂಪನ್ಮೂಲಗಳ ಶೋಷಣೆಯಿಂದ ಪರಿಸರದ ಅವನತಿ ತೀವ್ರಗೊಳ್ಳುತ್ತಿದೆ. ಜನಸಂಖ್ಯೆ ಬೆಳೆದಷ್ಟು ಅರಣ್ಯನಾಶವಾಗುತ್ತಿದೆ, ಮಣ್ಣಿನ ಸವೆತ ಮತ್ತು ನಿಸ್ಸಾರಗೊಳ್ಳುತ್ತಿದೆ. ಹಾಗೇ ಹಳ್ಳಿಯ ಜನರು ತಮ್ಮ ಹೊಲಗದ್ದೆಗಳನ್ನು ಬಿಟ್ಟು ನಗರದ ಕಡೆಗೆ ವಲಸೆ ಬರುತ್ತಿದ್ದಾರೆ. ಕೆಲಸಕ್ಕಾಗಿ ಅವರು ಪಟ್ಟಣದ ಕಡೆಗೆ ಧಾವಿಸುವಾಗ ಹೊಲಗದ್ದೆಗಳು ನಾಶ. ಪಟ್ಟಣದಲ್ಲಿ ಕಟ್ಟಡಗಳು ಹೆಚ್ಚಾಗಿ ಮತ್ತೆ ಮರಗಿಡಗಳು ನಾಶವಾಗುತ್ತಿದೆ. ಮರಗಿಡಗಳನ್ನು ಕತ್ತರಿಸಿ ಶಾಪಿಂಗ್ ಮಾಲ್, ಸಿನಿಮಾ ಹಾಲ್, ದೊಡ್ಡ ಕಟ್ಟಡಗಳು ನಿರ್ಮಾಣವಾಗುತ್ತಿದೆ. ಈ ನಿರ್ಮಾಣಕ್ಕಾಗಿ ಮರಳನ್ನು ಕಲ್ಲುಗಳನ್ನು ಸಮುದ್ರದ ದಂಡೆಯಿಂದ, ನದಿಗಳಿಂದ ಬೆಟ್ಟಗುಡ್ಡಗಳನ್ನು ಕಡಿದು ತರಲಾಗುತ್ತಿದೆ. ಕಟ್ಟಡ ನಿರ್ಮಾಣದ ಜೊತೆಗೆ ನಾವು ನಮ್ಮ ಸಾವಿಗೂ ತಯಾರಿಮಾಡುತಿದ್ದೇವೆ. ಯಾವಾಗ ಭೂಮಿಯ ತಾಪಮಾನ ಹೆಚ್ಚಾಗಿ ಭೂಕಂಪ ಸಂಭವಿಸುತ್ತದೆಯೋ,

ಮರಳು ಸಾಗಣಿಕೆ ಮಾಡಿ ಯಾವಾಗ ಸಮುದ್ರದ ಅಲೆಗಳು ಹೆಚ್ಚಾಗಿ ಊರುಗಳನ್ನು ನಾಶಮಾಡುತ್ತದೆಯೋ, ಜ್ವಾಲಾಮುಖಿ ಯಾವಾಗ ಸಂಭವಿಸುತ್ತದೆಯೋ ತಿಳಿದಿಲ್ಲ. ಇವೆಲ್ಲವೂ ಸಂಭವಿಸಿದರೇ ಭೂಮಿನಾಶವಾಗುವುದರಲ್ಲಿ ಎರಡು ಮಾತಿಲ್ಲ.

**ಹೇಗೆ ನಾವು ನಮ್ಮ ಪರಿಸರವನ್ನು ಸಂರಕ್ಷಿಸಬಹುದು, ಹೇಗೆ ಸಂಭವಿಸುವ ಅನಾಹುತವನ್ನು ತಡೆಗಟ್ಟಿ ನಿಯಂತ್ರಿಸಬಹುದು. ಇದಕ್ಕೆ ಕೆಲವು ಸೂಕ್ತಮಾರ್ಗಗಳೆಂದರೇ,**

1. ಅರಣ್ಯಗಳ ಪರಮವೈರಿ ಎಂದೇ ಹೇಳುವ ಕಾಡ್ಗಿಚ್ಚುಗಳನ್ನು ನಿಯಂತ್ರಿಸಬೇಕು.
2. ಕ್ರಿಮಿಕೀಟ ಮತ್ತು ರೋಗಗಳ ನಿಯಂತ್ರಣಕ್ಕೆ ವೈಜ್ಞಾನಿಕ ಪರಿಹಾರವನ್ನು ಪಡೆಯಬೇಕು.
3. ಬಲಿತ ಮರಗಳನ್ನು ಗುರುತಿಸಿ ಕಡಿದು ಆ ಭಾಗದಲ್ಲಿ ಹೊಸದಾಗಿ ಮರ ಬೆಳೆಸಬೇಕು.
4. ರಾಷ್ಟ್ರೀಯ ಉದ್ಯಾನವನ, ವನ್ಯಜೀವಿಗಳ ಧಾಮ, ಪಕ್ಷಿಧಾಮವನ್ನು ಅಭಿವೃದ್ಧಿಗೊಳಿಸಿ ಪ್ರಾಣಿಗಳನ್ನು ಅಲ್ಲಿ ಬಿಡುವ ವ್ಯವಸ್ಥೆ ಮಾಡಬೇಕು.
5. ಅರಣ್ಯಸಂರಕ್ಷಣೆ ಮತ್ತು ನಿರ್ವಹಣೆಗಾಗಿ ಉತ್ತಮ ತರಬೇತಿ ನೀಡುವುದು ಮತ್ತು ಸಂಶೋಧನೆ ಕಾರ್ಯ ಕೈಗೊಳ್ಳುವುದು.
6. ಸ್ವಯಂ ಸೇವಾ ಸಂಘ ಸಂಸ್ಥೆಗಳನ್ನು ಅರಣ್ಯ ರಕ್ಷಣೆ ಮತ್ತು ನಿರ್ವಹಣೆ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಉತ್ತೇಜನ ನೀಡಬೇಕು.
7. ರಸ್ತೆ ರೈಲು ಮಾರ್ಗಗಳ ಬದಿಯಲ್ಲಿ, ಕಾಲುವೆ ದಂಡೆಗಳು, ಗೋಮಾಳ, ಕೆರೆಗಳ ಒಳಾಂಗಣ ಶಾಲೆ–ಕಾಲೇಜುಗಳ ಆವರಣದಲ್ಲಿ ಗಿಡಮರಗಳನ್ನು ಬೆಳೆಸುವುದು.
8. ಪ್ರವಾಹ ಮುನ್ಸೂಚನೆ ಮತ್ತು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವುದು.
9. ಜಲಾಶಯ ಪ್ರದೇಶಗಳಲ್ಲಿ ಅರಣ್ಯಗಳನ್ನು ಬೆಳೆಸಿದರೆ ಪ್ರವಾಹಗಳನ್ನು ತಡೆಯುತ್ತದೆ.
10. ನದಿಗಳಿಂದ ಕಾಲುವೆ ತೋಡಿ ಅದರಿಂದ ನದಿಯ ಪ್ರವಾಹದ ನೀರನ್ನು ಅದರ ದಿಕ್ಕನ್ನು ಬದಲಾಯಿಸಿ ಅಗತ್ಯವಿರುವೆಡೆಗೆ ನದಿಗೆ ವರ್ಗಾಯಿಸಲು ವ್ಯವಸ್ಥೆ ಮಾಡಿದರೆ ಪ್ರವಾಹಗಳನ್ನು ತಡೆಯಬಹುದು.
11. ನದಿಯನ್ನು ಆಳಗೊಳಿಸಿ, ಅಗಲೀಕರಣಗೋಳಿಸಿ, ನೇರಗೊಳಿಸಿ ನೀರು ಹರಿಯಲು ಮಾರ್ಗ ಮಾಡಿದರೇ ಪ್ರವಾಹ ಕಡಿಮೆಯಾಗುತ್ತದೆ.
12. ಅಣೆಕಟ್ಟು ನಿರ್ಮಿಸಿ, ಕಾಲುವೆಗಳಲ್ಲಿ ನೀರನ್ನು ಹರಿಯಲು ಬಿಟ್ಟು ಪ್ರವಾಹ ಮಟ್ಟವನ್ನು ತಡೆಯಬಹುದು. ಜೋತೆಗೆ ಕೃಷಿ, ಜಲಶಕ್ತಿ ಉತ್ಪಾದನೆ ಅಭಿವೃದ್ಧಿಗ್ಗೊಳಿಸಬಹುದು.
13. ಭೂಕಂಪಗಳು ಸಂಭವಿಸುವಾಗ ತಂತ್ರಜ್ಞಾನಗಳನ್ನು ಬಳಸಿ ಬಿದಿರು, ಕಟ್ಟಿಗೆ, ತಗಡುಗಳಿಂದ ಮನೆಯನ್ನು ನಿರ್ಮಿಸಿದರೆ ಹಾನಿಯ ಪ್ರಮಾಣ ಕಡಿನೆ.
14. ಬೆಂಕಿ ಹತ್ತುವ ಬೀಡಿ, ಸಿಗರೇಟ್, ಬೆಂಕಿಕಡ್ಡಿಗಳು ಭೂಕಂಪದ ಸಂದರ್ಭದಲ್ಲಿ ದೂರವಿಡಬೇಕು.
15. ಪರಿಸರ ಸಂರಕ್ಷಣೆಯ ಬಗ್ಗೆ ಮಾಹಿತಿಯನ್ನು ನೀಡಿ, ಜಾತಗಳನ್ನು ಮಾಡುತ್ತಾ ಜನರಲ್ಲಿ ಜಾಗೃತಿಮೂಡಿಸಬೇಕು.
16. ಬಾಂಬ್‌ಗಳನ್ನು ಬಳಸಿ ಊರನ್ನು, ದೇಶವನ್ನು ಧ್ವಂಸ ಗೊಳಿಸುವುದನ್ನು, ಯುದ್ಧಗಳನ್ನು ಕಡಿಮೆಗೊಳಿಸಬೇಕು.

ಹೀಗೆ ನಾವು ಸೂಕ್ತ ನಿರ್ಧಾರವನ್ನು ಕೈಗೊಂಡರೇ ನಮ್ಮಈ ಪರಿಸರವನ್ನು ಹಾಗೂ ನಮ್ಮನ್ನು ನಾವು ರಕ್ಷಿಸಿಕೊಳ್ಳಬಹುದು. ಪರಿಸರ ಇನ್ನೊಬ್ಬರ ಸೊತ್ತು ಎನ್ನುವ ಬದಲು ಮೊದಲು ನಮ್ಮ ಸೊತ್ತು ಎಂಬುವುದನ್ನು ಮನಗಾಣಬೇಕು.

---




**ಎರಗಿ ಉಮೇಶ**

**ತಾಲ್ಲೂಕು ಪಂಚಾಯತಿ ಸದಸ್ಯರು**

**ಹಾಗೂ**

**ನ್ಯಾಯ ಸಮಿತಿಯ ಅಧ್ಯಕ್ಷರು, ಹೊಸನಗರ**

# ಸಂಸ್ಥೆಯಿಂದ ಯಶಸ್ಸಿನ ಬದುಕು



✍ ಸ್ಟ್ಯಾನ್ಲಿ ಫೆರ್ನಾಂಡಿಸ್
ಜೋಗ

ಶ್ರೀಯುತ ಸ್ಟ್ಯಾನ್ಲಿ ಫೆರ್ನಾಂಡಿಸ್ ಆದ ನಾನು ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ವಿಶ್ವವಿಖ್ಯಾತಿ ಪ್ರವಾಸಿ ತಾಣವೆಂದೇ ಹೆಸರಾಗಿರುವ ಜೋಗದಲ್ಲಿ ಬಿ.ವಿ.ಫೆರ್ನಾಂಡಿಸ್ ಹಾಗೂ ಸಿಸಿಲಿಯ ದಂಪತಿಗಳ ದ್ವಿತೀಯ ಪುತ್ರನಾಗಿ ಜನಿಸಿದೆ. ನನ್ನ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಶಿರಸಿಯ ಆವೇ ಮರಿಯಾ ಕಾನ್ವೆಂಟ್‌ನಲ್ಲಿ ಹಾಗೂ ಪದವಿಪೂರ್ವ ಶಿಕ್ಷಣವನ್ನು ಸಾಗರದ ಎಸ್.ಪಿ.ಎಸ್. ಕಾಲೇಜಿನಲ್ಲಿ ಪೂರೈಸಿದೆ. ಪದವಿ ಶಿಕ್ಷಣವನ್ನು ಪಡೆಯುತ್ತಿರುವಾಗ ನನ್ನ ಕುಟುಂಬಕ್ಕೆ ಆಧಾರಸ್ತಂಭವಾಗಿದ್ದ ನನ್ನ ಅಣ್ಣ ಮರಣಹೊಂದಿದರು. ಆಗ ನನ್ನ ಕುಟುಂಬದ ಸಂಪೂರ್ಣ ಜವಾಬ್ದಾರಿಯನ್ನು ನಾನೇ ನಿರ್ವಹಿಸಬೇಕಾಯಿತು. ಜೋಗ ಧರ್ಮಕೇಂದ್ರದ ಪ್ರತಿಯೊಂದು ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಧರ್ಮಕೇಂದ್ರದ ಯುವ ಸಂಘಟನೆಯಲ್ಲಿ ನನ್ನನ್ನು ತೊಡಗಿಸಿಕೊಂಡು ಯುವ ಸಂಘಟನೆಯ ಅಧ್ಯಕ್ಷನಾಗಿ, ಶಿವಮೊಗ್ಗ ಧರ್ಮಕ್ಷೇತ್ರದ ಯುವ ಸಂಘಟನೆಯ ಉಪಾಧ್ಯಕ್ಷನಾಗಿಯೂ, ಹಾಗೂ ಪಾಲನಾ ಪರಿಷತ್ತಿನ ಸದಸ್ಯನಾಗಿಯೂ ಕಾರ್ಯನಿರ್ವಹಿಸಿದ್ದೆ.

ನಾನು ಹಾಡು, ಬೀದಿನಾಟಕ, ಕಿರುನಾಟಕ, ಕವನಗಳನ್ನು ರಚಿಸುತ್ತಿದ್ದೆ. ನನ್ನ ಪ್ರತಿಭೆಗಳನ್ನು ಹಾಗೂ ನನ್ನ ಕುಟುಂಬದ ಪರಿಸ್ಥಿತಿಯನ್ನು ಗಮನಿಸಿದ ಎಸ್.ಎಮ್.ಎಸ್.ಎಸ್.ಸಂಸ್ಥೆಯ ಪ್ರಥಮ ನಿರ್ದೇಶಕರಾದ ವಂ. ಫಾ. ಮಾರ್ಕ್ ಡಿ'ಸಿಲ್ವರವರು ನನ್ನನ್ನು ಸಂಸ್ಥೆಯ ಸಮಾಜಸೇವಾ ಕಾರ್ಯಕರ್ತನಾಗಿ ಕಾರ್ಯನಿರ್ವಹಿಸಲು ಅವಕಾಶ ನೀಡಿದರು. 1993ರಲ್ಲಿ ನಾನು ಜೋಗ, ಕೋಗಾರ್, ಕಾರ್ಗಲ್ ಹಾಗೂ ಸಾಗರ ಪ್ರದೇಶಗಳಲ್ಲಿ ಸಮಾಜಸೇವಾ ಕಾರ್ಯಕರ್ತನಾಗಿ ಕಾರ್ಯನಿರ್ವಹಿಸಿದ್ದೆ. ನಂತರ ನನ್ನ ಪ್ರತಿಭೆಗಳನ್ನು ಗುರುತಿಸಿದ ತೃತೀಯ ನಿರ್ದೇಶಕರಾದ ವಂ. ಫಾ. ಗಿಲ್ಬರ್ಟ್ ಲೋಬೊರವರು ತರಬೇತಿ ಸಂಯೋಜಕರಾಗಿ ಸಂಸ್ಥೆ ಮಟ್ಟದಲ್ಲಿ ಜವಾಬ್ದಾರಿ ನೀಡಿದರು. ಪ್ರಾರಂಭದಲ್ಲಿ ನಾನು ತಳಮಟ್ಟದ ತರಬೇತಿ ನೀಡಲು ಸಶಕ್ತನಾಗಿದ್ದು ತದನಂತರ ಸಂಸ್ಥೆಯು ನನಗೆ ನನ್ನ ಸಾಮರ್ಥ್ಯ ಹಾಗೂ ಕೌಶಲ್ಯಾಭಿವೃದ್ಧಿಗಾಗಿ ರಾಜ್ಯ ಮತ್ತು ರಾಷ್ಟ್ರಮಟ್ಟದ ತರಬೇತಿ ಕಾರ್ಯಾಗಾರಗಳಲ್ಲಿ ಭಾಗವಹಿಸುವಂತೆ ಅವಕಾಶ ನೀಡಿರುವುದರ ಪರಿಣಾಮವಾಗಿ....

- ಮಹಿಳಾ ಅಭಿವೃದ್ಧಿಗೆ ಪೂರಕವಾಗಿ 3 ತಿಂಗಳ INSA INDIA ತರಬೇತಿ
- CHDTP ಕಮ್ಯೂನಿಟಿ ಹೆಲ್ತ್ & ಡೆವೆಲಪ್‌ಮೆಂಟ್ ತರಬೇತಿಯನ್ನು ಬೆಂಗಳೂರು ಮತ್ತು ತಮಿಳುನಾಡಿನಲ್ಲಿ ಪಡೆದೆನು.
- ಹೈದರಾಬಾದಿನ ವಿಜಯವಾಡದಲ್ಲಿ 3 ತಿಂಗಳ ಡೆವೆಲಪ್‌ಮೆಂಟ್ ಡೈನಾಮಿಕ್ ಕೋರ್ಸ್ ಮುಗಿಸಿದೆನು.
- ವ್ಯಕ್ತಿತ್ವ ವಿಕಸನ, ಪಂಚಾಯತ್ ರಾಜ್, ಹೆಚ್.ಐ.ವಿ./ಏಡ್ಸ್, ಲಿಂಗ ಸಂವೇದನ, ಬೀದಿನಾಟಕ, ಅಪ್ತಸಮಾಲೋಚನೆ, ನಾಯಕತ್ವ ಮತ್ತು ಸಂವಹನಾ ಕೌಶಲ್ಯ, ಮಾನವ ಮತ್ತು ಮಹಿಳಾ ಹಕ್ಕುಗಳು ಹಾಗೂ ಜಲಾನಯನ ಕಾರ್ಯಕ್ರಮಗಳು ಮಹಾರಾಷ್ಟ್ರದ ಪುಣೆಯಲ್ಲಿ ತರಬೇತಿ ಮುಗಿಸಿದೆನು.
- ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪಡೆದುಕೊಂಡೆನು.
- ಸಂಸ್ಥೆಯ ನಿರ್ದೇಶಕರಾದ ವಂ. ಫಾ. ಗಿಲ್ಬರ್ಟ್ ಲೋಬೊರವರು ನನಗೆ ಉನ್ನತ ಶಿಕ್ಷಣಕ್ಕೆ ಪ್ರೋತ್ಸಾಹಿಸಿ ಸಮಾಜ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಶಿಕ್ಷಣಕ್ಕೆ ಸಹಕಾರ ನೀಡಿದರು.

ಇಷ್ಟೆಲ್ಲಾ ಸಹಕಾರ ಹಾಗೂ ಪ್ರೋತ್ಸಾಹ ನೀಡಿದ ಎಸ್.ಎಮ್.ಎಸ್.ಎಸ್.ಸಂಸ್ಥೆಯಿಂದ ಇಂದು ನಾನು ಉಜ್ವಲ ಭವಿಷ್ಯವನ್ನು ರೂಪಿಸಿಕೊಂಡಿದ್ದೇನೆ. ಸಂಸ್ಥೆಯಲ್ಲಿ ಸಂಯೋಜಕರಾಗಿ, ಆಪ್ತಸಮಾಲೋಚಕರಾಗಿ ಮಹಿಳಾ ಅಭಿವೃದ್ಧಿ, ಸಮುದಾಯ ಅಭಿವೃದ್ಧಿ, HIV/AIDS ಪ್ರಾಜೆಕ್ಟ್, SPED ಸಂಯೋಜಕರಾಗಿ, ICDP ಶಿಬಿರಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಹಾಗೂ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ವಿವಿಧ ಪಂಚಾಯತಿಗಳಲ್ಲಿ ತರಬೇತಿ ನೀಡಿ ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಿದ್ದೆ. ನನ್ನ ಮಗ ಸುದೀಪನಿಗೆ ICDP ಯೋಜನೆಯ ಸಹಾಯದಿಂದ ಶಿಕ್ಷಣಕ್ಕೆ ನೆರವು ಲಭಿಸಿತು. ನನ್ನ ಮಗ ಪ್ರಸ್ತುತ

ತಾಂತ್ರಿಕ ಶಿಕ್ಷಣವನ್ನು ಪೂರೈಸಿದ್ದಾನೆ. ನನ್ನ ಎರಡನೆಯ ಮಗ ದ್ವಿತೀಯ ಪದವಿಪೂರ್ವ ಶಿಕ್ಷಣ ಪಡೆಯುತ್ತಿದ್ದಾನೆ. ನನ್ನ ಪತ್ನಿ ಸ್ಟೆಲ್ಲಾರವರು ಸಹ ಮೂರು ವರ್ಷ ಜೋಗ, ಕೋಗಾರ್, ಕಾರ್ಗಲ್ ಪ್ರದೇಶಗಳಲ್ಲಿ ಸ್ವ-ಸಹಾಯ ಸಂಘದ ಪ್ರೇರಕಿಯಾಗಿ ಕಾರ್ಯ ನಿರ್ವಹಿಸಿರುತ್ತಾರೆ. ನನ್ನನ್ನು ತಳಮಟ್ಟದಿಂದ ಗುರುತಿಸಿ ಸಾಮರ್ಥ್ಯ ಅಭಿವೃದ್ಧಿಪಡಿಸಿ ಸಮಾಜದಲ್ಲಿ ಗೌರವ ಮನ್ನಣೆ ಸ್ಥಾನಮಾನ ಲಭಿಸುವಂತೆ ಮಾಡಿದ ಎಸ್.ಎಮ್.ಎಸ್. ಎಸ್.ಸಂಸ್ಥೆಯನ್ನು ಎಂದಿಗೂ ಮರೆಯಲು ಸಾದ್ಯವಿಲ್ಲ. ಪ್ರಸ್ತುತ ನಾನು ಉಡುಪಿಯ ಸಂಪದ ಸಂಸ್ಥೆಯ ಮಾರ್ಗದರ್ಶನದಲ್ಲಿ ಸಂಯೋಜಕರಾಗಿ ಸೇವೆ ಸಲ್ಲಿಸುತ್ತಿದ್ದೇನೆ. ನನಗೆ ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಲು ಪ್ರೋತ್ಸಾಹಿಸಿದ ಎಸ್.ಎಮ್. ಎಸ್.ಎಸ್.ಸಂಸ್ಥೆಗೆ ಆಭಾರಿಯಾಗಿರುತ್ತೇನೆ.

# ಸಂಸ್ಥೆಯ ಚಿತ್ತ ಯಶಸ್ಸಿನತ್ತ



✍ ಕ್ಲಾರ ಸಿಕ್ವೇರಾ
ಕಾರ್ಯಕರ್ತೆ

ನಾಲ್ಕು ಸಾವಿರ ವರ್ಷ ಇತಿಹಾಸವಿರುವ ಭಾರತ ದೇಶದ ಕರ್ನಾಟಕ ರಾಜ್ಯದ ಶಿವಮೊಗ್ಗ ಜಿಲ್ಲೆಯ ಒಂದು ನಗರ "ಸಾಗರ". ಸಾಗರ ತಾಲ್ಲೂಕಿನ ಜನರು ಕಲಾ ರಸಿಕರು ಮತ್ತು ಸಾಹಿತ್ಯ ಆರಾಧಕರು. ಮಳೆ ಹೆಚ್ಚಾಗಿ ಬೀಳುವ ಸಾಗರ ತಾಲ್ಲೂಕು ಸಹಜವಾಗಿ ದಟ್ಟವಾದ ಕಾಡು ಮತ್ತು ವಿವಿಧ ರೀತಿಯ ಪ್ರಾಣಿ ಸಂಕುಲಗಳಿಗೆ ತವರೂರಾಗಿದೆ. ಪ್ರಕೃತಿ ಪ್ರಿಯರಿಗೆ ಸಾಗರ ಒಂದು ಸ್ವರ್ಗದ ಮಲೆನಾಡು ಎಂದು ಹೆಸರುವಾಸಿಯಾಗಿರುವ ಸಾಗರವನ್ನು ಶ್ರೀಗಂಧದ ಗುಡಿ ಎಂದು ಕರೆಯಲಾಗಿದೆ. ಇಂತಹ ನಿಸರ್ಗದತ್ತ ಊರಿಗೆ ಶಿವಮೊಗ್ಗದ ಎಸ್.ಎಮ್.ಎಸ್. ಎಸ್.ಸಂಸ್ಥೆಯು ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಯೋಜನೆಯನ್ನು ರೂಪಿಸಿದರು.

ಪ್ರಾರಂಭದ ಹಂತದಲ್ಲಿ ಎರಡು ಮಹಿಳಾ ಕಾರ್ಯಕರ್ತೆಯರೊಂದಿಗೆ ಸಾಗರದ ಗ್ರಾಮ ಪಂಚಾಯತಿ ವ್ಯಾಪ್ತಿಯನ್ನು ಕೇಂದ್ರಿಕರಿಸಿ ಮಹಿಳಾಭಿವೃದ್ಧಿ, ಸಾಮಾಜಿಕ ಸಮಸ್ಯೆ ಮತು ಆರ್ಥಿಕ ಪರಿಸ್ಥಿತಿಯನ್ನು ಅವಲೋಕನೆ ಮಾಡಿ ಸೂಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಹಿಳೆಯರನ್ನು ಸಂಘಟಿಸಿ ಮಹಿಳಾ ಸಶಕ್ತೀಕರಣಕ್ಕೆ ಪೂರಕವಾದ ಕಾರ್ಯತಂತ್ರಗಳನ್ನು ರೂಪಿಸಿ ಈ ಯೋಜನೆಯ ಸಂಪೂರ್ಣ ಮಾಹಿತಿಯನ್ನು ಮಹಿಳೆಯರಿಗೆ ನೀಡಲಾಯಿತು. ಈ ಹಂತದಲ್ಲಿ ಹಲವಾರು ರೀತಿಯ ಅಡೆತಡೆಗಳು ಬಂದರೂ ಧೃತಿಗೆಡದೆ ರೂಪಿಸಿದ ಯೋಜನೆ ಪ್ರಕಾರ ಕಾರ್ಯಾನುಷ್ಠಾನದಲ್ಲಿ ನಿರತರಾದೆವು.

ಅಂದು ಆರಂಭಗೊಂಡ ಮಹಿಳಾ ಸ್ವ-ಸಹಾಯ ಸಂಘಗಳು ಇಂದು ಆರ್ಥಿಕಾಭಿವೃದ್ಧಿಗೆ ಸೀಮಿತವಾಗಿರದೆ ಸದಸ್ಯರ ಕುಟುಂಬಾಭಿವೃದ್ಧಿ, ಸಮುದಾಯದ ಅಭಿವೃದ್ಧಿ ಹಾಗೂ ಮಹಿಳೆಯರ ಸುಸ್ಥಿರ ಬೆಳವಣಿಗೆಗೆ ದೃಢವಾದ ಯೋಜನಾ ಕಾರ್ಯತಂತ್ರಗಳ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಪ್ರಗತಿ ಸಾಧಿಸಿದ ಎಸ್.ಎಮ್.ಎಸ್.ಎಸ್.ಸಂಸ್ಥೆಯ ಸೇವೆ ಶ್ಲಾಘನೀಯ.

ಕಳೆದ 20 ವರ್ಷಗಳಿಂದ ಎಸ್.ಎಮ್.ಎಸ್.ಎಸ್.ಸಂಸ್ಥೆಯ ಸಮಾಜಸೇವಾ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸಿದ ಪ್ರತಿಕ್ಷಣವನ್ನು ನೆನಪಿಗೆ ತಂದಾಗ ನನ್ನಲ್ಲಿ ಸಾರ್ಥಕತೆ ಹಾಗೂ ಹರ್ಷೋತ್ಸವದ ಮನೋಭಾವ ಮೂಡಿ ಬರುತ್ತದೆ. ಸಂಸ್ಥೆಯ ಯೋಜನೆಯನ್ನು ನನ್ನ ಮೂಲಕ ಗ್ರಾಮೀಣ ಪ್ರದೇಶದ ಮಹಿಳೆಯರು ಸರ್ವತೋಮುಖ ಅಭಿವೃದ್ಧಿ ಸಾಧಿಸುವ ಈ ಹಾದಿಯಲ್ಲಿ ನನ್ನ ವ್ಯಕ್ತಿತ್ವ ವಿಕಸನ, ಉತ್ತಮ ಕಲಿಕೆ, ಸಕಾರಾತ್ಮಕ ಬದಲಾವಣೆಗೆ ಸಹಕಾರವಾಗಿದೆ.

ಈ ಸಂಸ್ಥೆ ಇನ್ನೂ ಹಲವಾರು ಯೋಜನೆಗಳೊಂದಿಗೆ ತನ್ನ ಕಾರ್ಯವ್ಯಾಪ್ತಿಯನ್ನು ವಿಸ್ತರಿಸಿ ಸರ್ವರ ಅಭಿವೃದ್ಧಿಗೆ ಸಾಕ್ಷಿಯಾಗಲಿ ಎಂಬುದೇ ನನ್ನ ಆಶಯ ಹಾಗೂ ಹಾರೈಕೆ.

# ಸಾಧನೆಯ ಮೆಟ್ಟಿಲನ್ನೇರುತ್ತಾ........



✍ ಜಯಲಕ್ಷ್ಮೀ ಸುಬ್ರಮಣ್ಯ
ಕಾರ್ಯಕರ್ತೆ

ಜಯಲಕ್ಷ್ಮೀ ಆದ ನಾನು ತೀರ್ಥಹಳ್ಳಿ ತಾಲ್ಲೂಕಿನ ಅಕ್ಲಾಪುರ ಗ್ರಾಮದ ಹಿತ್ತಲಸರ ಎಂಬ ಪುಟ್ಟ ಹಳ್ಳಿಯಲ್ಲಿ 28-04-1971ರಂದು ಗಣಪತಿ ಪ್ರಭು ಮತ್ತು ನಾಗರತ್ನ ದಂಪತಿಗಳಿಗೆ ಹಿರಿಯ ಮಗಳಾಗಿ ಜನಿಸಿದೆ. ನನ್ನ ಪ್ರಾಥಮಿಕ ಶಿಕ್ಷಣವನ್ನು ಅಕ್ಲಾಪುರದ ಹಿರಿಯ ಪ್ರಾಥಮಿಕ ಶಾಲೆಯಲ್ಲಿಯೂ, ಪ್ರೌಢ ಶಿಕ್ಷಣವನ್ನು ಕೋಣಂದೂರಿನ ಸರ್ಕಾರಿ ಶಾಲೆಯಲ್ಲಿಯೂ ಸಂಪೂರ್ಣಗೊಳಿಸಿದೆ. 1999ರಲ್ಲಿ ತೀರ್ಥಹಳ್ಳಿ ತಾಲ್ಲೂಕು ಹೊದಲ ಗ್ರಾಮ ಪಂಚಾಯತಿಯ ಕಿತ್ತನಗದ್ದೆ ಗ್ರಾಮದ ಬಡ ಕುಟುಂಬದ ಶ್ರೀನಿವಾಸ್ ಹಾಗೂ ಸುಂದರಮ್ಮ ದಂಪತಿಗಳ ದ್ವಿತೀಯ ಪುತ್ರ ಸುಬ್ರಮಣ್ಯರವರೊಂದಿಗೆ ನನ್ನ ವಿವಾಹವಾಯಿತು. ನನಗೆ ಎರಡು ಗಂಡು ಮಕ್ಕಳು. ಮನೆಯ ಪರಿಸ್ಥಿತಿ ತುಂಬಾ ಕ್ಲಿಷ್ಟಕರವಾದಾಗ ಕಸ್ತೂರ್ಬಾ ಆಸ್ಪತ್ರೆ ಮಣಿಪಾಲ್ ಇದರ ನೇತೃತ್ವದಲ್ಲಿ 3 ವರ್ಷ ಆರೋಗ್ಯ ಸೇವಕಿಯಾಗಿ ಕಾರ್ಯನಿರ್ವಹಿಸಿ ಪ್ರಮಾಣ ಪತ್ರ ಪಡೆದುಕೊಂಡೆ. ನಂತರ 2000ನೇ ಸಾಲಿನಲ್ಲಿ ಅಕ್ಷರ ತುಂಗಾ ಅಭಿಯಾನದಲ್ಲಿ 17 ಮಕ್ಕಳಿಗೆ ಅಕ್ಷರ ಅಭ್ಯಾಸ ಮಾಡಿಸಿ ಅವರಿಂದ ಪ್ರಮಾಣಪತ್ರ ಪಡೆದಿರುತ್ತೇನೆ.

1999ರಲ್ಲಿ ಎಸ್.ಎಮ್.ಎಸ್.ಎಸ್.ಸಂಸ್ಥೆ ನಡೆಸುತ್ತಿರುವ ಸ್ವ-ಸಹಾಯ ಸಂಘದ ಸದಸ್ಯೆಯಾದ 5ನೇ ತಿಂಗಳಿನಲ್ಲಿಯೇ ತೀರ್ಥಹಳ್ಳಿಯ ಲೂರ್ದುಮಾತೆ ದೇವಾಲಯದ ಧರ್ಮಗುರುಗಳಾದ ವಂ. ಪೌಲ್ ಡಿ'ಕುನ್ಹಾರವರು ನನ್ನ ಕಷ್ಟವನ್ನು ಅರಿತು ಎಸ್.ಎಮ್.ಎಸ್.ಎಸ್.ಸಂಸ್ಥೆಯಲ್ಲಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುವಂತೆ ತಿಳಿಸಿದಾಗ ನನಗಾದ ಸಂತೋಷಕ್ಕೆ ಪಾರವೇ ಇಲ್ಲದಂತಾಯಿತು. ಸಂಸ್ಥೆಯಲ್ಲಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಾ ನನ್ನ ಕುಟುಂಬವನ್ನು ಮುನ್ನಡೆಸುತ್ತಾ ನನ್ನ ಇಬ್ಬರು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಕಲ್ಪಿಸಿದೆ. ನನ್ನ ಎರಡನೇ ಮಗನಿಗೆ ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯಡಿಯಲ್ಲಿ 5ನೇ ತರಗತಿಯಿಂದ ದ್ವಿತೀಯ ಪಿ.ಯು.ಸಿ.ಯವರೆಗೆ ಸಂಸ್ಥೆಯಿಂದ ಸಹಾಯ ಪಡೆದುಕೊಂಡೆ. ದೇವಂಗಿ, ಹೊದಲ, ಮೇಳಿಗೆ, ಹಾರಗೊಳಿಗೆ ಪಂಚಾಯತಿಯಲ್ಲಿ 25 ಸಂಘಗಳನ್ನು ರಚನೆ ಮಾಡಿ ಕಾರ್ಯಕರ್ತೆಯಾಗಿ ಕಾರ್ಯನಿರ್ವಹಿಸುತ್ತಾ ಬಂದೆ. 2015ರಲ್ಲಿ ಸಂಸ್ಥೆಯಲ್ಲಿ 15 ವರ್ಷಗಳ ಸೇವೆ ಸಲ್ಲಿಸಿದ್ದಕ್ಕಾಗಿ ಸನ್ಮಾನವನ್ನು ಸ್ವೀಕರಿಸಿದೆ. 2017ರಲ್ಲಿ ಕಿತ್ತನಗದ್ದೆಯ ಸಮುದಾಯದವರು ನನ್ನ ಸೇವೆಯನ್ನು ಗುರುತಿಸಿ ಸನ್ಮಾನ ಮಾಡಿದರು. ದೇವಂಗಿ ಗ್ರಾಮ ಪಂಚಾಯತಿಯ ಸಂಘದವರು ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ನನ್ನ ಸೇವೆಯನ್ನು ಪರಿಗಣಿಸಿ ನನ್ನನ್ನು ಸನ್ಮಾನಿಸಿದರು. ನನ್ನ ಈ ಪುಟ್ಟ ಸೇವೆಯನ್ನು 18 ವರ್ಷಗಳಿಂದ ಸಲ್ಲಿಸುತ್ತಾ ಬಂದಿದ್ದೇನೆ. ನನಗೆ ಈ ಸೇವೆಯನ್ನು ಮಾಡಲು ಅವಕಾಶ ಕಲ್ಪಿಸಿಕೊಟ್ಟ ಎಸ್.ಎಮ್.ಎಸ್.ಎಸ್.ಸಂಸ್ಥೆಗೆ ನಾನೆಂದಿಗೂ ಚಿರಋಣಿಯಾಗಿರುತ್ತೇನೆ. ಈ ಸಂಸ್ಥೆ ನನಗೆ ಹಾಗೂ ನನ್ನ ಕುಟುಂಬಕ್ಕೆ ಆಸರೆಯಾಗಿದೆ. ಸಂಸ್ಥೆಯ ಮೂಲಕ ನಾನು ಕಾರ್ಯನಿರ್ವಹಿಸುತ್ತಿರುವ ಪ್ರತೀ ಹಳ್ಳಿಗಳಲ್ಲಿ, ಗ್ರಾಮ ಪಂಚಾಯತಿಗಳಲ್ಲಿ, ಸಮುದಾಯದ ಜನರಲ್ಲಿ ಹಾಗೂ ವಿವಿಧ ಇಲಾಖೆಗಳೊಂದಿಗೆ ಗುರುತಿಸಿಕೊಂಡಿದ್ದೇನೆ. ನನ್ನ ಕುಟುಂಬಕ್ಕೆ ಆಧಾರವಾಗಿರುವ ನನ್ನ ಸಂಸ್ಥೆಗೆ ನನ್ನ ಕುಟುಂಬದ ಪರವಾಗಿ ಪ್ರೀತಿಪೂರ್ವಕ ಧನ್ಯವಾದಗಳನ್ನು ಅರ್ಪಿಸುತ್ತೇನೆ.

---

**ಬಾಲ ಯೇಸು ಸ್ವ-ಸಹಾಯ ಸಂಘ, ಕಥೆಡ್ರಲ್**
**ಶಿವಮೊಗ್ಗ**

**ಮರಿಯಾ ಸ್ವ-ಸಹಾಯ ಸಂಘ, ಚಿಕ್ಕಲ್**
**ಶಿವಮೊಗ್ಗ**

# ಸಿಹಿ ಕನ್ನಡ



✍ ಕವಿತಾ ಪಿ. ಬೋಸ್ಲೆ
ಸಂಯೋಜಕಿ

ಬದುಕಿಗೊಂದು ಗುರುತು ಕೊಟ್ಟ ಭಾಷೆ ಕನ್ನಡ
ಭಾವಕ್ಕೊಂದು ಬರಹ ಕೊಟ್ಟ ಭಾಷೆ ಕನ್ನಡ
ಅವ್ವ ಹೇಳಿಕೊಟ್ಟ ಮೊದಲ ಭಾಷೆ ಕನ್ನಡ
ಎಲ್ಲರೊಡನೆ ಬೆರೆತು ನಗಲು ಸಂಪರ್ಕವಾದ ಭಾಷೆ ಕನ್ನಡ
ಶಾಲೆಯಲ್ಲಿ ನೋವು ನಲಿವು ಕಲಿತ ಭಾಷೆ ಕನ್ನಡ
ಅತಿ ಹೆಚ್ಚು ಅಂಕ ಕೊಟ್ಟ ಭಾಷೆ ಕನ್ನಡ
ಕನ್ನಡಿಗನೆಂಬ ಹೆಮ್ಮೆ ಕೊಟ್ಟ ಭಾಷೆ ಕನ್ನಡ
ಕವಿತೆ ಬರೆಯಲು ಸ್ಪೂರ್ತಿ ಕೊಟ್ಟ ಭಾಷೆ ಕನ್ನಡ
ಇದೇ ಕನ್ನಡ ನನ್ನ ಕನ್ನಡ
ನನ್ನ ನಿಮ್ಮೆಲ್ಲರ ಸಿಹಿ ಕನ್ನಡ
ಕರುನಾಡ ಕನ್ನಡ.

---

# ಎಲ್ಲವೂ ನಿಮ್ಮ ಹೆಸರಿನಲ್ಲಾದರೆ...

ದೇಹ ನನ್ನದು ಹರಿಶಿಣ ನಿಮ್ಮ ಹೆಸರಿನಲ್ಲಿ
ಕೈ ನನ್ನದು ಮದರಂಗಿ ನಿಮ್ಮ ಹೆಸರಿನಲ್ಲಿ
ಬೈತಲೆ ನನ್ನದು ಸಿಂಧೂರ ನಿಮ್ಮ ಹೆಸರಿನಲ್ಲಿ
ಹಣತೆ ನನ್ನದು ಕುಂಕುಮ ನಿಮ್ಮ ಹೆಸರಿನಲ್ಲಿ
ಮೂಗು ನನ್ನದು ಮೂಗುತಿ ನಿಮ್ಮ ಹೆಸರಿನಲ್ಲಿ
ಕೊರಳು ನನ್ನದು ಮಾಂಗಲ್ಯ ನಿಮ್ಮ ಹೆಸರಿನಲ್ಲಿ
ಕೈ ನನ್ನದು ಬಳೆ ನಿಮ್ಮ ಹೆಸರಿನಲ್ಲಿ
ಕಾಲು ನನ್ನದು ಕಾಲ್ಗೆಜ್ಜೆ ನಿಮ್ಮ ಹೆಸರಿನಲ್ಲಿ
ಬೆರಳು ನನ್ನದು ಉಂಗುರ ನಿಮ್ಮ ಹೆಸರಿನಲ್ಲಿ
ದೊಡ್ಡವರ ಪಾದಗಳಿಗೆ ನಮಸ್ಕಾರ ನಾನು ಮಾಡುವೆ
ಆದರೆ ಶುಭ ಆರೈಕೆ ಧೀರ್ಘಸುಮಂಗಲಿ ಆಗಿರು ಅಂಥ ಹೇಳುವುದು ನಿಮ್ಮ ಹೆಸರಿನಲ್ಲಿ
ಭೀಮನ ಅಮವಾಸ್ಯೆ ವೃತ ಮಾಡುವುದು ನಾನು ಆಯುಷ್ಯ ವರದಾನ ನಿಮಗೆ
ಮಗು ನನ್ನದು, ಹಾಲು ನನ್ನದು, ರಕ್ತ ನನ್ನದು, ಆದರೂ ಮಗು ಸಹ ನಿಮ್ಮ ಹೆಸರಿನಲ್ಲಿ
ಹೀಗೆ ಎಲ್ಲವೂ ನಿಮ್ಮ ಹೆಸರಿನೊಂದಿಗೆ ಬೆರೆತುಕೊಂಡಿದೆ
